ಹುಬ್ಬಳ್ಳಿ
ಬುಧವಾರ, 8 ಏಪ್ರಿಲ್ 2026
ಸಂಪುಟ 16, ಸಂಚಿಕೆ 14, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಎಲ್‌ಇಟಿ ಉಗ್ರ ಸೇರಿ ಐವರ ಸೆರೆ | 02
ಪ್ರಜ್ಞಾಹೀನ ಸ್ಥಿತಿಯಲ್ಲಿ ಮೊಜ್ತಬಾ? | 02
ವಲಸೆ ಕಾರ್ಮಿಕರಿಗೆ ಎಲ್‌ಪಿಜಿ ಹಂಚಿಕೆ ದ್ವಿಗುಣ | 02

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಮೂಲ

ದಿನದ ಮಾತು

ತನ್ನನ್ನು ನೋಡಿ ನಗಬಲ್ಲವನು ಬೇರೆಯವರನ್ನು ನೋಡಿ ನಗುವುದಿಲ್ಲ.
▲ ಲಾಮೋತ್ಸೆ

ಔರ್ಧ್ವದೈಹಿಕಕ್ರಿಯೆಗಳ ವಿಧಾನ, ಉದ್ದೇಶ ಮತ್ತು ಅರ್ಥ

ಪದ ಸಂಚಲನ
◆ ಡಾ. ವಿಶ್ವನಾಥ ಸುಂಕಸಾಳ

◆ ಪುಟ ೬

ಕಿರುಸುದ್ದಿ

ಪಂಚಮಸಾಲಿ ಸಮಾಜದ ಬೇಡಿಕೆ ಆದ್ಯತೆ ಮೇಲೆ ಈಡೇರಿಕೆ: ಸಿಎಂ

◆ **ಬಾಗಲಕೋಟೆ:** ಪಂಚಮಸಾಲಿ ಸಮಾಜದ ಎಲ್ಲ ಬೇಡಿಕೆಗಳನ್ನು ಆದ್ಯತೆ ಮೇಲೆ ಈಡೇರಿಸಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು. ನಗರದ ಖಾಸಗಿ ಹೋಟೆಲ್‌ನಲ್ಲಿ ಮಂಗಳವಾರ ನಡೆದ ಪಂಚಮಸಾಲಿ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಸಮಾಜ ಬಂಧುಗಳು ಪಕ್ಷಕ್ಕೆ ನಿರಂತರ ಬೆಂಬಲ ನೀಡುತ್ತಿದ್ದು, ಪ್ರಸಕ್ತ ಚುನಾವಣೆಯಲ್ಲೂ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಅವರನ್ನು ಬೆಂಬಲಿಸಬೇಕು ಎಂದು ಕೋರಿದರು.

◆ ಪುಟ ೫

ತಿಮ್ಮಾಪುರ ವಿರುದ್ಧ ಮಾನನಷ್ಟ ಮೊಕದ್ದಮೆ: ಕಾರಜೋಳ

◆ **ಬಾಗಲಕೋಟೆ:** ಬಿಟಿಡಿಎ ವ್ಯಾಪ್ತಿಯಲ್ಲಿ 30 ಎಕರೆ ಜಮೀನು ತೆಗೆದುಕೊಂಡು ಅದನ್ನು ಭೂಸ್ವಾಧೀನ ಮಾಡಿಕೊಂಡು ಪರಿಹಾರ ನೀಡಬೇಕು ಎಂದು ಬಿಟಿಡಿಎಗೆ ಅರ್ಜಿಯನ್ನು ನೀಡಿದ್ದರೆ ಹಾಗೂ ನಾನು 30 ಎಕರೆ ಜಮೀನು ಖರೀದಿ ಮಾಡಿದ್ದು ದಾಖಲೆ ತೋರಿಸಿ ಸಾಬೀತುಪಡಿಸದಿದ್ದರೆ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ವಿರುದ್ಧ ನೂರು ಕೋಟಿ ರೂ. ಮಾನನಷ್ಟ ಮೊಕದ್ದಮೆ ಹೂಡುವೆ ಎಂದು ಚಿತ್ರದುರ್ಗದ ಸಂಸದ ಗೋವಿಂದ ಕಾರಜೋಳ ಹೇಳಿದರು.

◆ ಪುಟ ೪

ಗುಂಡೇಟಿನಿಂದ ಚಿರತೆ ಸಾವು: ತನಿಖೆಗೆ ಸಚಿವ ಖಂಡ್ರೆ ಆದೇಶ

◆ **ಮೈಸೂರು:** ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಗುಳ್ಳೆದಹಳ್ಳ ರಾಜ್ಯ ಅರಣ್ಯದಿಂದ 2 ಕಿ.ಮೀ ದೂರದಲ್ಲಿರುವ ಕೊಪ್ಪ ವಿಭಾಗದಲ್ಲಿ ಗುಂಡೇಟಿನಿಂದ ಚಿರತೆ ಸಾವಿಗೀಡಾಗಿರುವ ಘಟನೆ ನಡೆದಿದೆ. 2 ವರ್ಷ ವಯಸ್ಸಿನ ಹೆಣ್ಣು ಚಿರತೆಯೊಂದು ಗುಂಡೇಟಿನಿಂದ ಮೃತಪಟ್ಟಿರುವುದು ಕಂಡು ಬಂದಿದೆ. ಚಿರತೆಯ ದೇಹದೊಳಗೆ 3 ಗುಂಡು ಪತ್ತೆಯಾಗಿವೆ. ಈ ಘಟನೆ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವಂತೆ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅವರು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

◆ ಪುಟ ೪

ಅಲ್ ಫಲಾ: 39ಕೋಟಿ ರೂ. ಠೇವಣಿಗಳ ಮುಟ್ಟುಗೋಲು

◆ ಪುಟ ೭

ನುಸುಳುಕೋರರ ಬೇಟೆಗೆ ಉರಗಗಳ ನಿಯೋಜನೆ?

◆ ಪುಟ ೭

ಖಾರ್ಗ್ ದ್ವೀಪದ 50 ಕಡೆ ದಾಳಿ | ನಾಗರಿಕತೆ ಅಳಿಸುವೆ: ಟ್ರಂಪ್

ಇರಾನ್‌ನಲ್ಲಿ ಆತಂಕ





◆ **ವಾಷಿಂಗ್ಟನ್:** ರಾತ್ರಿ ಬೆಳಗಾಗುವುದರೊಳಗೆ ನಾಗರಿಕತೆಯೊಂದು ಸಂಪೂರ್ಣ ಅಳಿಸಿಹೋಗುತ್ತದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ವಿರುದ್ಧ ಹೊಸ ಬೆದರಿಕೆಯೊಡ್ಡಿದ್ದಾರೆ. ಕದನ ವಿರಾಮ ಒಪ್ಪಂದ ಮಾಡಿಕೊಳ್ಳಲು ತಾವು ಇರಾನ್‌ಗೆ ನೀಡಿದ್ದ ಅಂತಿಮ ಗಡುವು ಮುಗಿಯುವುದಕ್ಕೆ ಗಂಟೆಗಳ ಮುನ್ನ ಟ್ರಂಪ್ ಇರಾನ್‌ನ ಆಡಳಿತಕ್ಕೆ ಹೊಸ ಬೆದರಿಕೆ ಹಾಕಿದ್ದಾರೆ.

ಮಂಗಳವಾರ ರಾತ್ರಿ ಒಂದು ನಾಗರಿಕತೆಯೇ ಅಳಿಸಿ ಹೋಗುತ್ತೆ. ಮತ್ತದನ್ನು ಪುನಃ ಕರೆತರಲು ಸಾಧ್ಯವಿಲ್ಲ. ಈ ರೀತಿ ಆಗುವುದು ನನಗೂ ಇಷ್ಟವಿಲ್ಲ. ಆದರೆ ಆಗುವುದು ಬಹುತೇಕ ನಿಶ್ಚಿತ ಎಂದು ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ನಾವೀಗ ಇರಾನ್‌ನಲ್ಲಿ ಸಂಪೂರ್ಣ ಆಡಳಿತ ಬದಲಾವಣೆ ಕಂಡಿದ್ದೇವೆ. ಈಗ ವ್ಯತ್ಯಸ್ತ, ಬುದ್ಧಿವಂತ ಮತ್ತು ಕಡಿಮೆ ಮೂಲಭೂತವಾದಿ ಮನಸ್ಸುಗಳಿವೆ. ಇದರಿಂದ ಬಹುಶಃ ಏನಾದರೂ ಕ್ರಾಂತಿಕಾರಿ ಬದಲಾವಣೆ ಸಾಧ್ಯವಿದೆ. ಯಾರಿಗೆಗೊತ್ತು? ಇಂದು (ಮಂಗಳವಾರ) ರಾತ್ರಿ ಎಲ್ಲವೂ ತಿಳಿಯಲಿದೆ. ಇದು ಜಗತ್ತಿನ ಇತಿಹಾಸದಲ್ಲಿ ದೀರ್ಘಕಾಲ ನೆನಪಿನಲ್ಲಿಡುವ ಕ್ಷಣಗಳಾಗಿವೆ. 47 ವರ್ಷಗಳ ದಬ್ಬಾಳಿಕೆ, ಭ್ರಷ್ಟಾಚಾರ, ಸಾವು ಕೊನೆಗೂ ಕೊನೆಗೊಳ್ಳಲಿದೆ. ಇರಾನ್ ಶ್ರೇಷ್ಠ ನಾಗರಿಕರಿಗೆ ದೇವರು ಆಶೀರ್ವದಿಸಲಿ ಎಂದು ಟ್ರಂಪ್ ಟ್ರುತ್ ಸೋಷಿಯಲ್‌ನಲ್ಲಿ ಬರೆದಿದ್ದಾರೆ.



ಟ್ರಂಪ್ ಗಡುವು: ಮಂಗಳವಾರ ರಾತ್ರಿ 8 ಗಂಟೆಯೊಳಗೆ (ಅಂದರೆ ಭಾರತೀಯ ಕಾಲಮಾನ ಬುಧವಾರ ಮುಂಜಾನೆ 5.30ರೊಳಗೆ) ಕದನ ವಿರಾಮ ಒಪ್ಪಂದ ಮಾಡಿಕೊಳ್ಳಿ ಎಂದು ಟ್ರಂಪ್ ಇರಾನ್ ಆಡಳಿತಕ್ಕೆ ಅವಕಾಶ ನೀಡಿದ್ದರು. ಆದರೆ ಇರಾನ್ ತಮ್ಮ ಕದನವಿರಾಮ ಯೋಜನೆ ತಿರಸ್ಕರಿಸಿದ್ದರಿಂದ ಅಧ್ಯಕ್ಷ ಟ್ರಂಪ್ ಅತ್ಯಂತ ಹತಾಶೆಗೆ ಒಳಗಾಗಿದ್ದರು. ➡ ಪುಟ ೪

ಇರಾನ್‌ನ ತೈಲ ರಫ್ತು ಕೇಂದ್ರ ಖಾರ್ಗ್

ಇರಾನ್‌ನ ಸುಮಾರು ಶೇ.90ರಷ್ಟು ಕಚ್ಚಾ ತೈಲ ರಫ್ತನ್ನು ಖಾರ್ಗ್ ದ್ವೀಪದಲ್ಲಿನ ತೈಲ ಘಟಕಗಳು ನಿರ್ವಹಿಸುತ್ತವೆ. ಇಲ್ಲಿ 30 ದಶಲಕ್ಷ ಬ್ಯಾರೆಲ್‌ಗಳಷ್ಟು ತೈಲ ಸಂಗ್ರಹಿಸುವ ವ್ಯವಸ್ಥೆಯಿದೆ. ಇರಾನ್ ಕರಾವಳಿಯಿಂದ 26 ಕಿ.ಮೀ. ಮತ್ತು ಹಾರ್ಮುಜ್‌ನಿಂದ 483 ಕಿ.ಮೀ. ದೂರದಲ್ಲಿದೆ. ದ್ವೀಪಕ್ಕೆ ಸಾಮಾನ್ಯರಿಗೆ ಪ್ರವೇಶ ಇಲ್ಲದಿರುವ ಕಾರಣಕ್ಕೆ ಇದನ್ನು ಸ್ಥಳೀಯರು ನಿಷೇಧಿತ ದ್ವೀಪವೆಂದು ಕರೆಯುತ್ತಾರೆ.



> ಇರಾನಿಯನ್ನರು ನಾವು ಒಪ್ಪಿಕೊಳ್ಳುವಂತಹ ಕದನವಿರಾಮ ಪ್ರಸ್ತಾವ ಮಾಡುವವರೆಗೆ ಅಥವಾ ಪ್ರಸ್ತಾವ ಮಾಡದಿದ್ದರೂ ಇಂಧನ ಮೂಲಸೌಕರ್ಯಗಳ ಮೇಲೆ ದಾಳಿಯಲ್ಲದೆ ಅಣ್ವಸ್ತ್ರ ಪ್ರಯೋಗ ನಡೆಸುವುದಿಲ್ಲ. ನಮ್ಮ ಸೇನಾ ಕಾರ್ಯತಂತ್ರ ಬದಲಾಗಿಲ್ಲ. ಕೆಲವು ಸೇನಾ ನೆಲೆಗಳ ಮೇಲೆ ದಾಳಿ ನಡೆಸಲಿದ್ದೇವೆ.
>
> ■ **ಜೆಡಿ ವ್ಯಾನ್ಸ್**, ಅಮೆರಿಕದ ಉಪಾಧ್ಯಕ್ಷ

1.4 ಕೋಟಿ ಇರಾನಿಯರು ರಾಷ್ಟ್ರಕ್ಕಾಗಿ ಪ್ರಾಣತ್ಯಾಗಕ್ಕೆ ಸಿದ್ಧ: ಇರಾನ್ ಅಧ್ಯಕ್ಷ



◆ **ಟೆಹ್ರಾನ್:** ಇರಾನ್‌ನ 1.4 ಕೋಟಿ ಪ್ರಜೆಗಳು ರಾಷ್ಟ್ರಕ್ಕಾಗಿ ಪ್ರಾಣಾರ್ಪಣೆಗೂ ಸಿದ್ಧರಿದ್ದಾರೆ ಎಂದು ಇರಾನ್ ಅಧ್ಯಕ್ಷ ಮಸೌದ್ ಪೆಝೆಷ್ಕಿಯನ್ ಮಂಗಳವಾರ ಘೋಷಿಸಿದ್ದಾರೆ. ತನ್ಮೂಲಕ ಇರಾನ್-ಅಮೆರಿಕ ನಡುವಣ ಉದ್ವಿಗ್ನತೆ ಮತ್ತಷ್ಟು ತಾರಕಕ್ಕೇರುವ ಲಕ್ಷಣಗಳು ನಿಚ್ಚಳವಾಗಿವೆ. ನಿರ್ಣಾಯಕ ಹಾರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸದಿದ್ದಲ್ಲಿ ದಾಳಿ ನಡೆಸುವುದಾಗಿ ಎಚ್ಚರಿಸಿ, ಅಮೆರಿಕ ಅಧ್ಯಕ್ಷ ಟ್ರಂಪ್ ವಿಧಿಸಿರುವ ಅಂತಿಮ ಗಡುವು ಮುಕ್ತಾಯಕ್ಕೆ ಕೆಲ ತಾಸು ಮುನ್ನ, ಇರಾನ್ ಅಧ್ಯಕ್ಷ ಪೆಝೆಷ್ಕಿಯನ್ ಈ ರೀತಿ ಘೋಷಣೆ ಮಾಡಿದ್ದಾರೆ. ◆ ವಿವರ ಪುಟ ೭

ಎಫ್-15 ರಕ್ಷಣಾ ಕಾರ್ಯಾಚರಣೆ ಮಾಹಿತಿ ಸೋರಿಕೆ

◆ **ವಾಷಿಂಗ್ಟನ್:** ಇರಾನ್‌ನಲ್ಲಿ ನಡೆದ ಎಫ್-15 ಯುದ್ಧ ವಿಮಾನದ ಸಿಬ್ಬಂದಿಯ ರಹಸ್ಯ ರಕ್ಷಣಾ ಕಾರ್ಯಾಚರಣೆ ವಿವರಗಳನ್ನು ಸೋರಿಕೆ ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಅಮೆರಿಕ ಅಧ್ಯಕ್ಷ ಟ್ರಂಪ್ ಘೋಷಿಸಿದ್ದಾರೆ. ಒಬ್ಬ ಸಿಬ್ಬಂದಿಯನ್ನು ರಕ್ಷಿಸಿದ ನಂತರ ಎರಡನೇ ವ್ಯಕ್ತಿ ನಾಪತ್ತೆಯಾಗಿರುವ ಸುದ್ದಿಯನ್ನು ಮಾಧ್ಯಮಗಳು ಬಹಿರಂಗಪಡಿಸಿದ್ದರಿಂದ ಇರಾನ್ ಪಡೆಗಳು ಎಚ್ಚೆತ್ತುಕೊಂಡವು ಎಂದು ಟ್ರಂಪ್ ತಿಳಿಸಿದ್ದಾರೆ.

◆ ವಿವರ ಪುಟ ೭

ಲೆಕ್ಕಾಚಾರದಲ್ಲಿ ಮುಳುಗಿದ ನಾಯಕರು

ಉಪಸಮರ: ಇಂದು ಮನೆ ಮನೆ ಪ್ರಚಾರ



ದಾವಣಗೆರೆಯಲ್ಲಿ ಕಾಂಗ್ರೆಸ್ ಪ್ರಚಾರ



ಬಾಗಲಕೋಟೆಯಲ್ಲಿ ಬಿಜೆಪಿ ಮತಬೇಟೆ

◆ **ಬೆಂಗಳೂರು:** ಉಪ ಚುನಾವಣೆಯ ಬಹಿರಂಗ ಪ್ರಚಾರಕ್ಕೆ ತೆರೆ ಬಿದ್ದಿದ್ದು, ಇಷ್ಟು ದಿನ ಅಬ್ಬರ ಪ್ರಚಾರದ ಮೂಲಕ ಮತದಾರರನ್ನು ಸೆಳೆಯಲು ಯತ್ನಸಿದ ನಾಯಕರೆಲ್ಲ ಕ್ಷೇತ್ರ ತೊರೆದಿದ್ದು, ಕೊನೆಯ ಯತ್ನವಾಗಿ ಮನೆ ಮನೆ ಪ್ರಚಾರದಲ್ಲಿ ತೊಡಗಲಿದ್ದಾರೆ.

ಮತದಾನ ಕೊನೆಗೊಳ್ಳುವ 48 ತಾಸಿನ ಮೊದಲು ಮತಕ್ಷೇತ್ರದವರಲ್ಲದೇ ಇರುವವರೆಲ್ಲರೂ ಕ್ಷೇತ್ರ ತೊರೆಯಬೇಕಾಗಿದೆ. ಇನ್ನೇನಿದ್ದರೂ ಮನೆ-ಮನೆ ಪ್ರಚಾರಕ್ಕೆ ಮಾತ್ರ ಅವಕಾಶ ಇರುವುದರಿಂದ ಮತದಾರರ ಮನವೊಲಿಕೆಗೆ ಕೊನೆ ಕಸರತ್ತು ನಡೆಯಲಿದೆ. ಉಭಯ ಪಕ್ಷಗಳ ಸ್ಥಳೀಯ ನಾಯಕರು ಇದಕ್ಕಾಗಿ ತಂತ್ರ ರೂಪಿಸಿದ್ದಾರೆ.



ಇಷ್ಟು ದಿನ ರಾಜ್ಯಮಟ್ಟದ ನಾಯಕರಿಂದ ತುಂಬಿದ್ದ ಎರಡು ಕ್ಷೇತ್ರಗಳು ರಂಗೇರಿದ್ದವು. ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಪ್ರತಿಪಕ್ಷ ನಾಯಕ ಆರ್. ಅಶೋಕ ಸೇರಿದಂತೆ ಪ್ರಮುಖರು ಗೆಲುವಿನ ತಂತ್ರ ರೂಪಿಸಿದ್ದು, ಮತದಾರರ ಮೇಲೆ ಎಷ್ಟು ಪರಿಣಾಮ ಬೀರಲಿದೆ ಎಂಬುವುದು ಫಲಿತಾಂಶದ ದಿನದಂದು ತಿಳಿಯಲಿದೆ.

2 ಕ್ಷೇತ್ರಗಳಲ್ಲಿ 603 ಮತಗಟ್ಟೆ

ಬಾಗಲಕೋಟೆ ಕ್ಷೇತ್ರದಲ್ಲಿ ಒಟ್ಟು 2,59,260 ಮತದಾರರಿದ್ದರೆ, ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಒಟ್ಟು 2,31,683 ಮತದಾರರು ಮತ ಚಲಾಯಿಸಲು ಅರ್ಹರಿದ್ದಾರೆ. ಬಾಗಲಕೋಟೆಯಲ್ಲಿ 319 ಮತ್ತು ದಾವಣಗೆರೆ ದಕ್ಷಿಣದಲ್ಲಿ 284 ಸೇರಿದಂತೆ ಒಟ್ಟು 603 ಮತದಾನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಚುನಾವಣಾ ಆಯೋಗವು ಅಗತ್ಯ ಸಿದ್ಧತೆ ಮಾಡಿಕೊಂಡಿದ್ದು, ಸೂಕ್ತ ಬಂದೋಬಸ್ತ್ ಒದಗಿಸಲಾಗಿದೆ.

ಭಾರೀ ಮೊತ್ತದ ಆದಾಯ, ಆಸ್ತಿ, ಬ್ಯಾಂಕ್ ದಾಖಲೆ ಪತ್ರ ಪತ್ತೆ

ರಾಜ್ಯದ ಹಲವೆಡೆ ಲೋಕಾ ದಾಳಿ

◆ **ಬೆಂಗಳೂರು/ಮೈಸೂರು:** ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಲೋಕಾಯುಕ್ತ ಅಧಿಕಾರಿಗಳು ಮಂಗಳವಾರ ರಾಜ್ಯದ ಹಲವೆಡೆ ಏಕಕಾಲಕ್ಕೆ ದಾಳಿ ನಡೆಸಿದ್ದಾರೆ.

ಮಂಡ್ಯ, ಮೈಸೂರು, ಕೊಡಗು, ಮಂಗಳೂರು, ಬೀದರ್, ಬೆಳಗಾವಿ, ಬಳ್ಳಾರಿ, ಶಿವಮೊಗ್ಗ, ಚಿತ್ರದುರ್ಗ ಸೇರಿದಂತೆ ವಿವಿಧ ಜಿಲ್ಲೆ ಹಾಗೂ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಕನಿಷ್ಠ ಎಂಟು ಅಧಿಕಾರಿಗಳ ಮನೆ ಮತ್ತು ಕಚೇರಿಗಳ ಮೇಲೆ ಮಂಗಳವಾರ ಬೆಳಗ್ಗೆ ದಾಳಿ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಕೊಡಗು ಜಿಲ್ಲೆಯ ಹಾರಂಗಿ ಅಣೆಕಟ್ಟು ಉಪವಿಭಾಗದಲ್ಲಿ ನಿಯೋಜಿಸಲಾದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಇಇ) ಐ ಕೆ ಪುಟ್ಟಸ್ವಾಮಿ ಅವರ ನಿವಾಸ ಹಾಗೂ ಕಚೇರಿ ಮೇಲೆ ದಾಳಿ ನಡೆಸಲಾಗಿದೆ. ಚಿತ್ರದುರ್ಗ ನಿರ್ಮಿತಿ ಕೇಂದ್ರದ ಅಸಿಸ್ಟೆಂಟ್ ಅಕೌಂಟೆಂಟ್ ಸುಶೀಲಮ್ಮ ಮನೆ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ➡ ಪುಟ ೪

ಮಂಡ್ಯ, ಮೈಸೂರು, ಕೊಡಗು, ಮಂಗಳೂರು, ಬೀದರ್, ಬೆಳಗಾವಿ, ಬಳ್ಳಾರಿ, ಶಿವಮೊಗ್ಗ, ಚಿತ್ರದುರ್ಗದಲ್ಲಿ ಏಕಕಾಲಕ್ಕೆ ಕಾರ್ಯಾಚರಣೆ

ಒಂದು ಕೆಜಿ ಚಿನ್ನಾಭರಣ ಪತ್ತೆ

ಚಿತ್ರದುರ್ಗ ನಿರ್ಮಿತಿ ಕೇಂದ್ರದ ಅಸಿಸ್ಟೆಂಟ್ ಅಕೌಂಟೆಂಟ್ ಸುಶೀಲಮ್ಮ ಮನೆಯಲ್ಲಿ ಒಂದು ಕೆಜಿ ಚಿನ್ನಾಭರಣಗಳು ಪತ್ತೆಯಾಗಿವೆ. ಬ್ಯಾಂಕ್‌ನಲ್ಲಿ ಎರಡು ಕೋಟಿ ರೂಪಾಯಿ ಠೇವಣಿ ಪತ್ತೆಯಾಗಿದೆ. ಅಕ್ರಮ ಆಸ್ತಿ ಸಂಪಾದನೆ ಆರೋಪದ ಮೇಲೆ ಡಿವೈಎಸ್ಪಿ ಬಿ.ಎಸ್. ಪಾಟೀಲ್ ಮತ್ತು ಭರತ್ ರೆಡ್ಡಿ ನೇತೃತ್ವದಲ್ಲಿ ದಾಳಿ ನಡೆಸಲಾಗಿದೆ. ಅಜಯ್ ಸಿಂಗ್ ನಗರದಲ್ಲೇ ಅಕ್ಕಪಕ್ಕದಲ್ಲಿ ಮೂರು ಮನೆಗಳನ್ನು ಹೊಂದಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಪಾಕ್ ರಕ್ಷಣಾ ಸಚಿವ ಖವಾಜಾ ಆಸಿಫ್‌ಗೆ ರಾಜನಾಥ್ ಎದಿರೇಟು

ತಂಟೆಗೆ ಬಂದರೆ ಪಾಕಿಸ್ತಾನ ಛಿದ್ರ

◆ **ಹೊಸದಿಲ್ಲಿ:** ಪಶ್ಚಿಮ ಬಂಗಾಳದ ಮೇಲೇನಾದರೂ ದಾಳಿ ಮಾಡಿದಲ್ಲಿ ಪಾಕಿಸ್ತಾನವನ್ನು ತುಂಡುತುಂಡಾಗಿ ಕತ್ತರಿಸಲಾಗುವುದು ಎಂದು ಭಾರತದ ರಕ್ಷಣಾ ಸಚಿವ ರಾಜನಾಥ ಸಿಂಗ್ ಗುಡುಗಿದ್ದಾರೆ.



ಭವಿಷ್ಯದಲ್ಲಿ ಭಾರತವೇನಾದರೂ ದುಸ್ಸಾಹಸಕ್ಕೆ ಮುಂದಾದಲ್ಲಿ ಕೋಲ್ಕತ್ತಾ ಮೇಲೆ ದಾಳಿ ನಡೆಸಲಾಗುವುದೆಂಬ ಪಾಕ್ ರಕ್ಷಣಾ ಸಚಿವ ಖವಾಜಾ ಆಸಿಫ್ ಬೆದರಿಕೆಗೆ ಪ್ರತಿಯಾಗಿ, ಸಚಿವ ಸಿಂಗ್ ಸಿಡಿಲಿನಂತಹ ಪ್ರತ್ಯುತ್ತರ ನೀಡಿದ್ದಾರೆ. ಪ್ರಚೋದನಾಕಾರಿ ವಾಕ್ಚಾತುರ್ಯ ಮೆರೆದಲ್ಲಿ ಪರಿಣಾಮ ನೆಟ್ಟಗಿರದೆಂದು ಸಚಿವ ಸಿಂಗ್ ಎಚ್ಚರಿಸಿದ್ದಾರೆ.

ಐದು ದಶಕಗಳಿಗೂ ಹಿಂದೆ ಪಾಕ್ ವಿಭಜನೆಯಿಂದಾಗಿದ್ದ ದುಷ್ಪರಿಣಾಮಗಳು, ಅನಾಹುತಗಳನ್ನು ನೆನಪಿಸಿರುವ ಸಚಿವ ಸಿಂಗ್, ಉಭಯ ರಾಷ್ಟ್ರಗಳ ನಡುವೆ ಉದ್ವಿಗ್ನತೆಯನ್ನು ಹೆಚ್ಚಿಸುವಂತಹ ಹೇಳಿಕೆ ನೀಡದಿರಿ. ಪಾಕ್ ರಕ್ಷಣಾ ಸಚಿವರು ಪ್ರಚೋದನಾತ್ಮಕ ಹೇಳಿಕೆ ನೀಡಕೂಡದಿತ್ತು. ➡ ಪುಟ ೪

ಅಭೂತಪೂರ್ವ ಪ್ರತ್ಯುತ್ತರ ಆಹ್ವಾನಿಸಿದಂತೆ

ಪ್ರಸ್ತುತ ಜಾಗತಿಕ ಸನ್ನಿವೇಶದಲ್ಲಿ ಪಾಕ್ ಯಾವುದೇ ದುಸ್ಸಾಹಸಕ್ಕೆ ಮುಂದಾದಲ್ಲಿ ಅಭೂತಪೂರ್ವ ಮತ್ತು ನಿರ್ಣಾಯಕ ಪ್ರತ್ಯುತ್ತರವನ್ನು ಕೈಬೀಸಿ ಕರೆದಂತಾದೀತು ಎಂದು ಸಚಿವ ರಾಜನಾಥ್ ಸಿಂಗ್ ಪಾಕ್‌ಗೆ ಎಚ್ಚರಿಕೆ ನೀಡಿದ್ದರು. ಬೆನ್ನಲ್ಲೇ ಪಾಕ್ ಸಚಿವ ಆಸಿಫ್ ತೀರಾ ಪ್ರಚೋದನಾತ್ಮಕ ಹೇಳಿಕೆ ನೀಡಿದ್ದರು. ಕಳೆದ ವರ್ಷ ಏ.22ರ ಪಾಕ್ ಪ್ರಚೋದಿತ ಪಹಲ್ಗಾಮ್ ಭಯೋತ್ಪಾದಕ ದಾಳಿ ಮತ್ತು ಇದಕ್ಕೆ ಪ್ರತಿಯಾಗಿ ಭಾರತ ಪಾಕ್ ವಿರುದ್ಧ ನಾಲ್ಕು ದಿನಗಳ ಕಾಲ ಸಂಘರ್ಷ ನಡೆಸಿತ್ತು. ➡ ಪುಟ ೪

ಶಬರಿಮಲೆ: ಮಹಿಳೆಯರಿಗೆ ಪ್ರವೇಶ ನಿರಾಕರಣೆ

ಧಾರ್ಮಿಕ ಆಚರಣೆ ಹಿನ್ನೆಲೆ: ಕೇಂದ್ರ

◆ **ಹೊಸದಿಲ್ಲಿ:** ಶಬರಿಮಲೆ ದೇವಸ್ಥಾನದಲ್ಲಿ ಮಹಿಳೆಯರಿಗೆ ಪ್ರವೇಶ ನಿರಾಕರಿಸಿರುವುದು ಅಶುದ್ಧತೆ ಅಥವಾ ಕೀಳರಿಮೆಯಿಂದಲ್ಲ, ಬದಲಿಗೆ ಧಾರ್ಮಿಕ ಆಚರಣೆ ಹಾಗೂ ನಂಬಿಕೆಯಿಂದಾಗಿ. ನಮ್ಮ ಸಂಸ್ಕೃತಿ ಮಹಿಳೆಯರಿಗೆ ಸಮಾನತೆ ನೀಡಿದ್ದು ಅವರನ್ನು ಸದಾ ಉನ್ನತ ಸ್ಥಾನದಲ್ಲಿಟ್ಟು ಗೌರವಿಸುತ್ತದೆ. ಇದನ್ನು ಲಿಂಗ ತಾರತಮ್ಯ ಅಥವಾ 'ಪಿತೃ ಪ್ರಧಾನ' ಎಂಬ ಪಾಶ್ಚಾತ್ಯ ನೆಲೆಯಲ್ಲಿ ನೋಡಬಾರದೆಂದು ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ನ್ನು ಕೋರಿದೆ. ಕೇರಳದ ಪ್ರಸಿದ್ಧ ಶಬರಿಮಲೆ ದೇವಸ್ಥಾನಕ್ಕೆ ಎಲ್ಲಾ ವಯಸ್ಸಿನ ಮಹಿಳೆಯರಿಗೆ ಪ್ರವೇಶವನ್ನು ಅನುಮತಿಸುವ ತನ್ನ 2018 ರ ತೀರ್ಪಿನ ವಿರುದ್ಧ ಸಲ್ಲಿಸಲಾದ ಪರಿಶೀಲನಾ ಅರ್ಜಿಗಳನ್ನು ಸುಪ್ರೀಂಕೋರ್ಟ್ ವಿಚಾರಣೆಗೆ ಎತ್ತಿಕೊಳ್ಳುವ ಹಿನ್ನೆಲೆ ಕೇಂದ್ರ ಸರ್ಕಾರವು, ಈ ಪದ್ಧತಿ ಲಿಂಗ ತಾರತಮ್ಯದ ಅಂಶಗಳ ಆಧಾರಿತವಾದುದಲ್ಲ. ➡ ಪುಟ ೪



ಹೂಲಿ ಪಂಚಾಯಿತಿಯಲ್ಲಿ ಕುಮಾರಿ ಸಮೃದ್ಧಿ ಸದ್ದು

ಹೆಣ್ಣು ಮಗು ಹೆಸರಲ್ಲಿ ಠೇವಣಿ!

▶ ಬಾಳಗೌಡ ಪಾಟೀಲ

◆ **ಬೆಳಗಾವಿ:** ಲಿಂಗ ಸಮಾನತೆ ಮತ್ತು ಹೆಣ್ಣು ಮಕ್ಕಳ ಭವಿಷ್ಯ ಭದ್ರತೆಗೆ ಗ್ರಾಮ ಮಟ್ಟದಲ್ಲೇ ಹೊಸ ಚಿಂತನೆಗೆ ದಾರಿ ಮಾಡಿಕೊಟ್ಟಿರುವ ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಹೂಲಿ ಗ್ರಾಮ ಪಂಚಾಯಿತಿ ಜಾರಿಗೊಳಿಸಿರುವ 'ಕುಮಾರಿ ಸಮೃದ್ಧಿ' ಯೋಜನೆ ರಾಜ್ಯದ ಗಮನ ಸೆಳೆಯುತ್ತಿದೆ. ಹೆಣ್ಣು ಮಗು ಜನಿಸಿದ ಕ್ಷಣದಿಂದಲೇ ಆಕೆಯ ಹೆಸರಿನಲ್ಲಿ ರೂ.5,500 ಸ್ಥಿರ ಠೇವಣಿ ಇಡುವ ಮೂಲಕ ಸಮಾಜದಲ್ಲಿ ಸಕಾರಾತ್ಮಕ ಸಂದೇಶ ರವಾನಿಸಲಾಗುತ್ತಿದೆ.

ದಿಗಂತ ವಿಶೇಷ

ಲಿಂಗ ತಾರತಮ್ಯಕ್ಕೆ ಕಡಿವಾಣ: ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಕಾಣಿಸಿಕೊಳ್ಳುವ ಹೆಣ್ಣು-ಗಂಡು ಭೇದ ಭಾವ ಕಡಿಮೆ ಮಾಡುವುದು ಈ ಯೋಜನೆಯ ಪ್ರಮುಖ ಗುರಿಯಾಗಿದೆ. ಹೆಣ್ಣು ಮಗು ಹುಟ್ಟಿದಾಗ ಕುಟುಂಬದಲ್ಲಿ ಸಂತೋಷದ ಜತೆಗೆ ಆರ್ಥಿಕ ಭದ್ರತೆಯ ಭರವಸೆ ನೀಡುವುದು ಇದರ ವಿಶೇಷತೆ.

ಹೆಣ್ಣು ಮಗು ಕುಟುಂಬಕ್ಕೆ ಭಾರವಲ್ಲ, ಭವಿಷ್ಯದ ಶಕ್ತಿ. ಈ ಯೋಜನೆ ಅದನ್ನು ಸಮಾಜಕ್ಕೆ ತೋರಿಸುವ ಪ್ರಯತ್ನ ಎಂದು ಪಂಚಾಯಿತಿ ಸದಸ್ಯರು ತಿಳಿಸಿದ್ದಾರೆ. ➡ ಪುಟ ೪



ರಾಜ್ಯಕ್ಕೆ ಮಾದರಿ ಏಕೆ?

ಸಾಮಾನ್ಯವಾಗಿ ರಸ್ತೆ, ನೀರು, ವಿದ್ಯುತ್ ಮುಂತಾದ ಮೂಲ ಸೌಲಭ್ಯಗಳಿಗೆ ಸೀಮಿತವಾಗಿರುವ ಪಂಚಾಯತಿಗಳು, ಸಾಮಾಜಿಕ ಬದಲಾವಣೆಯತ್ತ ಹೆಜ್ಜೆ ಇಡುವುದು ವಿರಳ. ಆದರೆ, ಹೂಲಿ ಪಂಚಾಯಿತಿ ಈ ಗಡಿ ದಾಟಿ, ಹೆಣ್ಣು ಮಕ್ಕಳ ಸಬಲೀಕರಣಕ್ಕೆ ಆದ್ಯತೆ ನೀಡಿರುವುದು ವಿಶೇಷ.

ಮತಪಟ್ಟಿಯಿಂದ 91 ಲಕ್ಷ ಮತದಾರರ ಹೆಸರು ಡಿಲೀಟ್

ಪಶ್ಚಿಮ ಬಂಗಾಳ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ



◆ **ಕೋಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆಯಲ್ಲಿ ನ್ಯಾಯಾಂಗ ಪರಾಮರ್ಶೆ ಬಳಿಕ 91 ಲಕ್ಷ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ಚುನಾವಣಾ ಆಯೋಗದ ಡೇಟಾ ಹೇಳಿದೆ. ಮತದಾರರ ಯಾದಿ ವಿಶೇಷ ಪರಿಷ್ಕರಣೆ ಪ್ರಕ್ರಿಯೆ ನಂತರ ರಾಜ್ಯದ ಅಂತಿಮ ಪರಿಷ್ಕೃತ ಮತದಾರರ ಪಟ್ಟಿಯನ್ನು ಆಯೋಗ ಅಧಿಕೃತವಾಗಿ ಇನ್ನಷ್ಟೇ ಪ್ರಕಟಿಸಬೇಕಿದೆ.

◆ ವಿವರ ಪುಟ ೭

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,50,000** (2,50,000) ಅಪರಂಜಿ ಚಿನ್ನ: **1,49,840** (1,50,660) ಆಭರಣ ಚಿನ್ನ: **1,37,350** (1,38,100) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ **74,616** (509↑) ಎನ್‌ಎಸ್‌ಇ **23,123** (155↑)

$1 = ₹93.11

ಕಿರುಸುದ್ದಿ

ಡಾ.ಜಿನದತ್ತಗೆ ಮಹಾತ್ಮಾ ಫುಲೆ ಸಮತಾ ಪ್ರಶಸ್ತಿ



ಧಾರವಾಡ: ಮಹಾತ್ಮಾ ಫುಲೆ ಸಮತಾ ಪ್ರಶಸ್ತಿ: ಸಮಾನತೆಯ ಅರಿವಿನ ಹಬ್ಬ-ಅಂಬೇಡ್ಕರ ಹಬ್ಬ: 2026ರ ಸವಿ ನೆನಪಿನಲ್ಲಿ ದಲಿತ ವಿದ್ಯಾರ್ಥಿ ಪರಿಷತ್ತು, ಜ್ಯೋತಿಬಾ ಫುಲೆ ಅವರ 199ನೇ ಜಯಂತಿ ಪ್ರಯುಕ್ತ ಕೊಡಮಾಡುವ ರಾಜ್ಯ ಮಟ್ಟದ ಮಹಾತ್ಮಾ ಫುಲೆ ಸಮತಾ ಪ್ರಶಸ್ತಿಗೆ ಧಾರವಾಡದ ಸಾಹಿತಿ, ಪ್ರಾಧ್ಯಾಪಕ ಡಾ.ಜಿನದತ್ತ ಅ.ಹಡಗಲಿ ಅವರು ಆಯ್ಕೆಯಾಗಿದ್ದಾರೆ. ಏ.11 ರಂದು ವಿಜಯಪುರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ದಲಿತ ವಿದ್ಯಾರ್ಥಿ ಪರಿಷತ್ತು ರಾಜ್ಯಾಧ್ಯಕ್ಷ ಶ್ರೀನಾಥ ಪೂಜಾರಿ ತಿಳಿಸಿದ್ದಾರೆ.

ಅನಿರ್ದಿಷ್ಟಾವಧಿ ಧರಣಿ ಇಂದು

ಧಾರವಾಡ: ಏ.8 ರಂದು ಖಾಲಿಯಿರುವ ಹುದ್ದೆಗಳ ಭರ್ತಿ ಮಾಡಬೇಕು ಹಾಗೂ ಕೆಪಿಎಸ್‌ಸಿಯಲ್ಲಿ ನಡೆದ ಅಕ್ರಮಗಳ ಕುರಿತು ಸಿಬಿಐ ತನಿಖೆ ನಡೆಸಬೇಕು ಎಂದು ಆಗ್ರಹಿಸಿ ಧಾರವಾಡ ಜಿಲ್ಲಾಧಿಕಾರಿ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ನಡೆಸಲಾಗುವುದು ಎಂದು ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿ ಸಂಘಟನೆ ರಾಜ್ಯಾಧ್ಯಕ್ಷ ಕಾಂತಕುಮಾರ ತಿಳಿಸಿದರು.

ನಗರದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ಒದಗಿಸುವಲ್ಲಿ ಸರ್ಕಾರ ವಿಫಲವಾಗಿದೆ. ಕೆಪಿಎಸ್‌ಸಿಯಲ್ಲಿನ ಅಕ್ರಮಗಳನ್ನು ಸಿಬಿಐ ತನಿಖೆಗೆ ವಹಿಸಬೇಕು. ಭ್ರಷ್ಟಾಚಾರದಲ್ಲಿ ತೊಡಗಿರುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಈ ಕುರಿತು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಎಂದು ಆಗ್ರಹಿಸಿದರು. ರಾಜ್ಯದಲ್ಲಿ ಖಾಲಿಯಿರುವ ಹುದ್ದೆಗಳ ಭರ್ತಿಗೆ ಸರ್ಕಾರ ನಿರ್ಲಕ್ಷ್ಯ ಮಾಡುತ್ತಿದೆ. ಈಗಾಗಲೇ ಧಾರವಾಡ ಜಿಲ್ಲೆ ಸೇರಿದಂತೆ ವಿವಿಧ ಕಡೆಗಳಲ್ಲಿ ಹೋರಾಟಗಳು ನಡೆಯುತ್ತಲೇ ಇದೆ. ಉದ್ಯೋಗಾಕಾಂಕ್ಷಿಗಳ ನ್ಯಾಯಯುತ ಬೇಡಿಕೆ ಈಡೇರಿಕೆಗೆ ಸರ್ಕಾರ ಮುಂದಾಗುತ್ತಿಲ್ಲ ಎಂದರು.

ಇಂದು ಉತ್ಸವ

ಹುಬ್ಬಳ್ಳಿ: ನಗರದ ಗ್ಲೋಬಲ್ ಬಿಸಿನೆಸ್ ಸ್ಕೂಲ್‌ನಲ್ಲಿ ರಾಷ್ಟ್ರೀಯ ಮಟ್ಟದ ಪದವಿ ವಿದ್ಯಾರ್ಥಿಗಳ ಸಂಸ್ಕೃತಿ ಮತ್ತು ನಿರ್ವಹಣಾ ಉತ್ಸವ-2026ನ್ನು ಏ. 8 ಮತ್ತು 9 ರಂದು ಹಮ್ಮಿಕೊಳ್ಳಲಾಗಿದೆ ಎಂದು ಜಿಬಿಎಸ್ ನಿರ್ದೇಶಕ ಡಾ.ಸುಮನ್ ಕುಮಾರ್ ತಿಳಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏ.8ರಂದು ಬೆಳಗ್ಗೆ 10 ಗಂಟೆಗೆ ಉದ್ಘಾಟನೆ ನಡೆಯಲಿದ್ದು, ಮುಖ್ಯ ಅತಿಥಿಯಾಗಿ ಟಾಲೆಟ್ರೀಯ ಸಿಇಒ ಜಗದೀಶ ನಾಯಕ, ನಿಡೆಕ್ ಇಂಡ್ರಸ್ಟ್ರೀಯಲ್ ಆಟೋಮೇಷನ್ ಇಂಡಿಯಾ ಪ್ರೈ.ಲಿ. ನಿರ್ದೇಶಕ ಉಮೇಶ ವೈ.. ಜೈನ್ ಸೊಸೈಟಿ ಅಧ್ಯಕ್ಷ ರಮೇಶ ಕೊಠಾರಿ, ಗ್ಲೋಬಲ್ ಬಿಸಿನೆಸ್ ಸ್ಕೂಲ್ ಅಧ್ಯಕ್ಷ ಡಾ.ಎಂ.ಎಸ್.ಸುಭಾಸ್, ವಿಕ್ಕಿ ಜೈನ್ ಆಗಮಿಸುವರು ಎಂದರು. ಉತ್ಸವದಲ್ಲಿ ಗೋವಾ, ಆಂಧ್ರ ಪ್ರದೇಶ, ಉತ್ತರ ಕರ್ನಾಟಕ, ಕೊಲ್ಹಾಪುರ, ಬೆಂಗಳೂರು ಸೇರಿದಂತೆ ವಿವಿಧ ಭಾಗಗಳಿಂದ 40 ಕ್ಕೂ ಹೆಚ್ಚು ತಂಡಗಳಿಂದ 450 ಮಕ್ಕಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಏ. 9ರಂದು ಸಂಜೆ 4 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ. ಫೋಟೋಗ್ರಫಿ ಮತ್ತು ಸಿನೆಮಾಟೋಗ್ರಫಿ, ಚಿತ್ರಕಲೆ, ಕ್ವಿಜ್, ಬಿಸಿನೆಸ್ ಪ್ಲಾನ್ ಸೇರಿದಂತೆ ವಿವಿಧ ಸ್ಪರ್ಧೆ ನಡೆಯಲಿದೆ ಎಂದರು. ಸಹ ಪ್ರಾಧ್ಯಾಪಕರಾದ ಡಾ.ತೇಜಸ್ವಿನಿ ಪಾಟೀಲ, ಡಾ.ಹರ್ಷಲ್ ಬೋರ್ಗಾಂವ್, ಪ್ರೊ. ಸ್ಮೃತಿ ಎಸ್. ಇದ್ದರು.

ಫ್ರೂಟ್ಸ್ ಐಡಿ ನಮೂದು ಕಡ್ಡಾಯ

ಧಾರವಾಡ: ರಸಗೊಬ್ಬರ ಖರೀದಿಗೂ ಕೂಡಾ ಫ್ರೂಟ್ಸ್ ಐಡಿ ಅವಶ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ಹೊಸ ತಂತ್ರಾಂಶ ಅಭಿವೃದ್ಧಿಪಡಿಸಿದ್ದು, ತಂತ್ರಾಂಶದಲ್ಲಿ ಕಡ್ಡಾಯವಾಗಿ ಫ್ರೂಟ್ಸ್ ಐಡಿ ವಿವರ ದಾಖಲಿಸಿ ರಸಗೊಬ್ಬರ ಖರೀದಿ ಮಾಡಬೇಕೆಂಬ ನಿಯಮ ರೂಪಿಸಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮುಂಗಾರು ಹಂಗಾಮಿನಲ್ಲಿ ಅರ್ಹ ರೈತರಿಗೆ ಸಕಾಲದಲ್ಲಿ ಯೂರಿಯಾ ಗೊಬ್ಬರ ಪೂರೈಸಬೇಕಾಗಿರುತ್ತದೆ. ಅಲ್ಲದೇ ಈಗಾಗಲೇ ಆಧಾರ್ ಸಂಖ್ಯೆ ಆಧಾರಿತ ರಸಗೊಬ್ಬರ ವಿತರಣೆ ವ್ಯವಸ್ಥೆ ಚಾಲ್ತಿಯಲ್ಲಿದ್ದು, ರೈತರ ಜಮೀನಿನ ವಿಸ್ತೀರ್ಣ ಹಾಗೂ ಬೆಳೆಯ ಆಧಾರದ ಮೇಲೆ ರಸಗೊಬ್ಬರ ವಿತರಣೆ ಮಾಡಲಾಗುತ್ತದೆ. ಇದರಿಂದಾಗಿ ಕೃಷಿ ಹೊರತಾಗಿ ಇತರೆ ಉದ್ದೇಶಕ್ಕೆ ರಸಗೊಬ್ಬರ ಬಳಸುವುದಕ್ಕೆ ಕಡಿವಾಣ ಹಾಕಲಾಗುತ್ತದೆ.

ಈಗಾಗಲೇ ಜಿಲ್ಲೆಯಲ್ಲಿ 2,42,729 ನಷ್ಟು ರೈತರು ತಮ್ಮ ಫ್ರೂಟ್ಸ್ ಐಡಿಗಳನ್ನು ನೋಂದಣಿ ಮಾಡಿಕೊಂಡಿದ್ದು, ಇಲಾಖೆಯ ಸೌಲಭ್ಯಗಳಾದ ಬಿತ್ತನೆ ಬೀಜ, ಬೆಳೆ ವಿಮೆ, ಬೆಂಬಲ ಬೆಲೆ ಯೋಜನೆ, ಕೃಷಿ ಪರಿಕರಗಳು, ಕೃಷಿ ಯಂತ್ರೋಪಕರಣಗಳನ್ನು ಪಡೆಯುತ್ತಿದ್ದಾರೆ. ಇನ್ನು ಮುಂದೆ ರಸಗೊಬ್ಬರ ಖರೀದಿಗೆ ಫ್ರೂಟ್ಸ್ ಐಡಿ ಅವಶ್ಯವಿದ್ದು, ಜಿಲ್ಲೆಯ ಎಲ್ಲಾ ರೈತರು ತಮ್ಮ ಸರ್ವೇ ನಂಬರ್‌ಗಳನ್ನು ಫ್ರೂಟ್ಸ್ ಐಡಿಗೆ ಸೇರಿಸಿಕೊಳ್ಳುವುದು. ಫ್ರೂಟ್ಸ್ ಐಡಿ ನೋಂದಣಿ ಮಾಡಿಕೊಳ್ಳದ ರೈತರು ಆಧಾರ್ ಸಂಖ್ಯೆ, ಬ್ಯಾಂಕ್ ಖಾತೆ ಮತ್ತು ಉತಾರ ಪ್ರತಿಯನ್ನು ತೆಗೆದುಕೊಂಡು ಹತ್ತಿರದ ರೈತ ಸಂಪರ್ಕ ಕೇಂದ್ರ, ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಭೇಟಿ ನೀಡಿ, ಫ್ರೂಟ್ಸ್ ಐಡಿಗೆ ನೋಂದಣಿ ಮಾಡಿಕೊಳ್ಳಬೇಕು. ಸಬ್ಸಿಡಿ ದರದಲ್ಲಿ ದೊರೆಯುವ ಯೂರಿಯಾ ದುರ್ಬಳಕೆ ಆಗಬಾರದು ಮತ್ತು ಯೂರಿಯಾ ಅನಾವಶ್ಯಕ ಬಳಕೆಯನ್ನು ತಡೆಗಟ್ಟಲು ಸರ್ಕಾರ ಹೊಸ ವ್ಯವಸ್ಥೆ ಜಾರಿ ತಂದಿದೆ. ಇದನ್ನು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುವುದು ಎಂದರು.



ಹುಬ್ಬಳ್ಳಿ: ದಿ ಇಂಡಿಯನ್ ಎಕ್ಸ್‌ಪ್ರೆಸ್ ಪ್ರಕಟಿಸಿರುವ ಐಇ 100-2026 ಅತ್ಯಂತ ಪ್ರಭಾವಶಾಲಿ ಭಾರತೀಯರ ಪಟ್ಟಿಯಲ್ಲಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಸ್ಥಾನ ಪಡೆದಿದ್ದು, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಪದಾಧಿಕಾರಿಗಳು ಅವರಿಗೆ ಸನ್ಮಾನಿಸಿ ಅಭಿನಂದನೆ ಸಲ್ಲಿಸಿದರು. ಸಂಸ್ಥೆಯ ಅಧ್ಯಕ್ಷ ಜಿ.ಕೆ.ಆದಪ್ಪಗೌಡರ, ಉಪಾಧ್ಯಕ್ಷರಾದ ಸಿದ್ದೇಶ್ವರ ಜಿ. ಕಮ್ಮಾರ, ವೀರಣ್ಣ ಕಲ್ಲೂರ, ಗೌರವ ಕಾರ್ಯದರ್ಶಿ ಉದಯ ರೇವಣಕರ, ಗೌರವ ಕಾರ್ಯದರ್ಶಿ ಪ್ರಕಾಶ ಶೃಂಗೇರಿ ಹಾಗೂ ಇನ್‌ಕಾಮೆಕ್ಸ್ 2026 ಚೇರಮನ್ನರಾದ ಎಂ.ವಿ.ಕರಮರಿ, ಇನ್‌ಕಾಮೆಕ್ಸ 2026 ಕಾರ್ಯದರ್ಶಿ ಶಶಿಧರ ಶೆಟ್ಟರ ಹಾಗೂ ಸದಸ್ಯ ಸತೀಶ ಮುನವಳ್ಳಿ ಇದ್ದರು.

ವ್ಯಾಪಾರಕ್ಕೆ ಮುಕ್ತ ಮಾಡಿಕೊಡಲು ನಿರ್ಲಕ್ಷ್ಯ: ಆರೋಪ

ಹುಬ್ಬಳ್ಳಿ: ನಗರದ ಗಣೇಶ ಪೇಟನಲ್ಲಿ ಕಳೆದ ಒಂದು ವರ್ಷದ ಹಿಂದೆ ನಿರ್ಮಿಸಲಾದ ಮೀನು ಮಾರುಕಟ್ಟೆಯಲ್ಲಿ ಕಟ್ಟಡ ಇನ್ನೂ ವ್ಯಾಪಾರಕ್ಕೆ ಮುಕ್ತ ಮಾಡಿಲ್ಲ, ಮಹಾನಗರ ಪಾಲಿಕೆ ನಿರ್ಲಕ್ಷ್ಯ ವಹಿಸಿದೆ ಎಂದು ಕರ್ನಾಟಕ ಹಿಂದುಳಿದ ಅಲ್ಪಸಂಖ್ಯಾತರ ವಿಕಾಸ ಅಭಿವೃದ್ಧಿ ಸಮಿತಿ ಅಧ್ಯಕ್ಷ ಸೈಯದ್ ತನ್ವೀರ್ ಕಿತ್ತೂರ ಹೇಳಿದರು. ನಗರದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದಿನ ಮೀನು ಮಾರುಕಟ್ಟೆಯಲ್ಲಿ 56 ಮಳಿಗೆಗಳಿದ್ದವು. ಆದರೆ ನೂತನವಾಗಿ ನಿರ್ಮಿಸಲಾದ ಮೀನು ಮಾರುಕಟ್ಟೆಯಲ್ಲಿ 36 ಮಳಿಗೆಗಳು ಮಾತ್ರ ಇವೆ. ಅವುಗಳ ಮಹಾನಗರ ಪಾಲಿಕೆ ಸರಿಯಾಗಿ ಹಸ್ತಾಂತರ ಮಾಡಿಲ್ಲ ಎಂದು ಆರೋಪಿಸಿದರು. ಹಳೇ ಮೀನು ಮಾರುಕಟ್ಟೆಯಲ್ಲಿ ಈ ಮೊದಲು ಮಳಿಗೆಗಳನ್ನು ಹೊಂದಿದವರಿಗೆ ಮಳಿಗೆಗಳನ್ನು ನೀಡಿಲ್ಲ, ಹೊಸಬರಿಗೆ ಮಳಿಗೆಗಳನ್ನು ನೀಡಲಾಗಿದೆ. ಒಂದೇ ಕುಟುಂಬದವರಿಗೆ ಮೂರು ಮಳಿಗೆಗಳನ್ನು ಹಸ್ತಾಂತರಿಸಿದ್ದಾರೆ. ಮೀನು ಮಾರುಕಟ್ಟೆಯಲ್ಲಿನ ಮಳಿಗೆಗಳ ಹರಾಜು ಮಾಡುವಾಗ ಟೆಂಡರ್ ಕರೆದಿದ್ದಾರೆ. ಈ ಬಗ್ಗೆ ಮೀನು ಮಾರುಕಟ್ಟೆಯಲ್ಲಿ ಯಾವುದೇ ನಾಮಫಲಕಗಳನ್ನು ಅಳವಡಿಸಿಲ್ಲ, ಇದರಿಂದಾಗಿ ಸಾಕಷ್ಟು ಮೀನು ಮಾರಾಟಗಾರರಿಗೆ ಹರಾಜು ಪ್ರಕ್ರಿಯೆ ನಡೆದಿದೆ ಎಂಬುದು ತಿಳಿದಿಲ್ಲ, ರಸ್ತೆ ಮೇಲೆ ಕೂತು ಮೀನು ಮಾರಾಟ ಮಾಡುವವರಿಗೆ ಪೊಲೀಸ್ ಸಿಬ್ಬಂದಿ ದಿನನಿತ್ಯ ವ್ಯಾಪಾರಕ್ಕೆ ಅಡ್ಡಿಪಡಿಸುತ್ತಿದ್ದಾರೆ. ಈ ಬಗ್ಗೆ ನಾವು ಪಾಲಿಕೆ ಸದಸ್ಯರಿಗೆ, ಪಾಲಿಕೆ ಆಯುಕ್ತರಿಗೆ, ಮುಖ್ಯಮಂತ್ರಿಗೆ ಮನವಿ ಮಾಡಿದ್ದೇವೆ. ಮಹಾನಗರ ಪಾಲಿಕೆಯಿಂದ ಯಾವುದೇ ಉತ್ತರ ನಮಗೆ ದೊರಕದ ಕಾರಣ ನಾವು ಶೀಘ್ರದಲ್ಲಿಯೇ ಕಾನೂನು ಹೋರಾಟ ಮಾಡುತ್ತೇವೆ ಎಂದರು.

ಇಲಿಯಾಜ್ ಖೈರತಿ, ಇಮ್ತಿಯಾಜ್ ಚೌದರಿ, ಮಹ್ಮದ್ ಗೌಸ್ ಇದ್ದರು.



ಧಾರವಾಡ: ಜೆ.ಎಸ್.ಎಸ್. ಶ್ರೀ ಮಂಜುನಾಥೇಶ್ವರ ಸೆಂಟ್ರಲ್ ಸ್ಕೂಲ್ ಧಾರವಾಡದಲ್ಲಿ ನಡೆಯುತ್ತಿರುವ ಭಾರತ ಜನಗಣತಿ-2027 ರ ಅಂಗವಾಗಿ ಮೇಲ್ವಿಚಾರಕರು ಮತ್ತು ಗಣತಿದಾರರಿಗೆ ಮನೆಪಟ್ಟಿ ಕಾರ್ಯಾಚರಣೆ ತರಬೇತಿ ಕಾರ್ಯಕ್ರಮಕ್ಕೆ ಎಡಿಸಿ ಗೀತಾ ಸಿ.ಡಿ. ಅವರು ಆಗಮಿಸಿ ತರಬೇತಿಗೆ ಚಾಲನೆ ನೀಡಿದರು. ಧಾರವಾಡ ತಹಶೀಲ್ದಾರ್ ಡಾ.ಡಿ.ಎಚ್.ಹೂಗಾರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ರಾಮಕೃಷ್ಣ ಸದಲಗಿ ಉಪಸ್ಥಿತರಿದ್ದರು.

ಕಾರ್ಯಾಗಾರ ಕೇಂದ್ರಕ್ಕೆ ಭೇಟಿ | ಜಿಲ್ಲಾಧಿಕಾರಿ ಸ್ನೇಹಲ್ ಆರ್. ಮಾಹಿತಿ

ಜಿಲ್ಲೆಯಲ್ಲಿ ಏ.16ರಿಂದ ಗಣತಿ

ಹುಬ್ಬಳ್ಳಿ: ಜಿಲ್ಲೆಯಲ್ಲಿ ಏ.16ರಿಂದ ಗಣತಿ ಕಾರ್ಯ ಆರಂಭವಾಗಲಿದ್ದು, ಪ್ರತಿ ಗಣತಿದಾರರಿಗೆ 200 ಮನೆಗಳನ್ನು ನೀಡಲಾಗಿದೆ. ಇದು 10 ದಿನದಲ್ಲಿ ಮುಗಿಯಲಿದ್ದು, 30 ದಿನ ಕಾಲಾವಕಾಶ ನೀಡಲಾಗಿದೆ. ನಿಗದಿತ ಅವಧಿಯಲ್ಲಿ ಗಣತಿ ಪೂರ್ಣಗೊಳಿಸಿ ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ತಿಳಿಸಿದರು.

ಮಂಗಳವಾರ ಹುಬ್ಬಳ್ಳಿ ನಗರದ ಲ್ಯಾಮಿಂಗ್ಟನ್ ಶಾಲೆಯ ಜನಗಣತಿಯ ಗಣತಿದಾರರ ತರಬೇತಿ ಕಾರ್ಯಾಗಾರ ಕೇಂದ್ರಕ್ಕೆ ಭೇಟಿ ನೀಡಿ, ತರಬೇತಿದಾರರನ್ನು ಉದ್ದೇಶಿಸಿ, ಮಾತನಾಡಿದರು. ಮನೆಮನೆ ಗಣತಿ ಕಾರ್ಯದಲ್ಲಿ ಪ್ರತಿ ದಿನ 10 ಮನೆಗಳ ಗಣತಿ ಕಾರ್ಯ ಪೂರ್ಣಗೊಳಿಸಿದರೆ, 30 ದಿನಗಳಲ್ಲಿ ಗಣತಿದಾರರಿಗೆ ನೀಡಲಾದ ಗುರಿಯನ್ನು ತಲುಪಬಹುದು. ಗಣತಿಗೆ ಹೋದ ಮನೆಗಳಲ್ಲಿ ಯಾರಾದರೂ ಸಹ ಮಾಹಿತಿಯನ್ನು ನೀಡಬಹುದಾಗಿದೆ. ಮನೆಗಳ ಗಣತಿ ಕಾರ್ಯದ ಕುರಿತು ಜನರಿಗೆ ಅರಿವು ಮೂಡಿಸಿ. ಇದರಿಂದ ಗಣತಿದಾರರಿಗೆ ಸಾಕಷ್ಟು ಅನುಕೂಲವಾಗಲಿದೆ ಎಂದರು.

ಗಣತಿಯ ಮೊದಲ ವಾರದಲ್ಲಿ ಚುರುಕಾಗಿ ಕಾರ್ಯನಿರ್ವಹಿಸಿ ಆದಷ್ಟು ಬೇಗನೆ ಗಣತಿ ಕಾರ್ಯವನ್ನು ಮುಕ್ತಾಯಗೊಳಿಸಬೇಕು. ಜನರು ಮನೆಯಲ್ಲಿ ಸಿಗುವ ವೇಳೆಯಲ್ಲಿ ಗಣತಿ ಮಾಡುವುದು ಸೂಕ್ತ. ಮನೆಯ ಮ್ಯಾಪಿಂಗ್ ಕೂಡ ಬಹಳ ಮುಖ್ಯವಾಗಿರುತ್ತದೆ ಎಂದು ತಿಳಿಸಿದರು.

> ಬೇರೆ ಸ್ಥಳಗಳಿಗೆ ತೆರಳಿದ ಜನರ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕು. ಬೇರೆ ಊರುಗಳಿಗೆ ತೆರಳಿದ ಜನರ ಮಾಹಿತಿಯು ಪುನರಾವರ್ತನೆ ಆಗದಂತೆ ಎಚ್ಚರ ವಹಿಸಬೇಕಾಗುತ್ತದೆ. ಈ ಕುರಿತು ಜನರಲ್ಲಿ ಜಾಗೃತಿ ಮೂಡಿಸಬೇಕಿದೆ. ವಿವಿಧ ಭಾಷೆಗಳಲ್ಲಿ ಸಹ ಮಾಹಿತಿಯನ್ನು ಸಂಗ್ರಹಿಸಬಹುದು.
> ■ ಸ್ನೇಹಲ್ ಆರ್., ಡಿಸಿ

ಜನರಿಂದ ದೂರುಗಳು ಬರದಂತೆ ಗಣತಿ ಕಾರ್ಯ ನಿರ್ವಹಿಸಬೇಕು. ಜಿಲ್ಲೆಯಲ್ಲಿ ಯಾವುದೇ ರೀತಿಯ ಸಮಸ್ಯೆಗಳು ಆಗದಂತೆ ಎಚ್ಚರ ವಹಿಸಬೇಕು. ತರಬೇತಿಯಲ್ಲಿ ಎಲ್ಲ ಸಂಶಯಗಳನ್ನು ಪರಿಹರಿಸಿಕೊಳ್ಳಿ. ಅನಾವಶ್ಯಕವಾಗಿ ಸಮಯವನ್ನು ಹಾಳು ಮಾಡಬೇಡಿ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ, ಉಪವಿಭಾಗಾಧಿಕಾರಿ ಶಾಲಂ ಹುಸೇನ್, ಶಹರ ತಹಶೀಲ್ದಾರ್ ಮಹೇಶ ಭಗವಂತ ಗಸ್ತೆ, ಗ್ರಾಮೀಣ ತಹಶೀಲ್ದಾರ ಜೆ.ಬಿ.ಮಜ್ಜಗಿ, ಹುಬ್ಬಳ್ಳಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಡಾ.ರಾಮಚಂದ್ರ ಹೊಸಮನಿ, ಶಹರ ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಎಂ.ಫಡ್ನೇಶಿ, ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ಉಮೇಶ ಬೊಮ್ಮಕ್ಕನವರ ಇದ್ದರು.



ಸೈನಿಕರಂತೆ ಕಾರ್ಯನಿರ್ವಹಿಸಿ

ಕುಟುಂಬಸ್ಥರ ಗಣತಿ ಮಾಡುವುದು ತುಂಬಾ ಅವಶ್ಯಕ. ಮನೆ ಮನೆಗೆ ಭೇಟಿ ನೀಡಿ ಗಣತಿ ಕಾರ್ಯನಿರ್ವಹಿಸಬೇಕು. ಜನಗಣತಿ ಮಾಡುವ ಕಾರ್ಯ ಹೆಮ್ಮೆಯ ಸಂಗತಿಯಾಗಿದೆ. ಕೇಂದ್ರ ಸರ್ಕಾರದಿಂದ ಎಲ್ಲ ರಾಜ್ಯಗಳಲ್ಲಿ ಗಣತಿ ಕಾರ್ಯ ಏಕಕಾಲಕ್ಕೆ ಪ್ರಾರಂಭವಾಗಲಿದೆ. ಸೈನಿಕರಂತೆ ಎಲ್ಲರೂ ಕಾರ್ಯನಿರ್ವಹಣೆ ಮಾಡಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ ತಿಳಿಸಿದರು.

- ಅಳ್ನಾವರ 6, ಧಾರವಾಡ 61, ನವಲಗುಂದ 29, ಅಣ್ಣಿಗೇರಿ 15, ಹುಬ್ಬಳ್ಳಿ 42, ಹುಬ್ಬಳ್ಳಿ ಶಹರ 2, ಕಲಘಟಗಿ 44, ಕುಂದಗೋಳ 46, ಅಳ್ನಾವರ ಪಟ್ಟಣ ಪಂಚಾಯತ್ 6, ಕಲಘಟಗಿ ಪಟ್ಟಣ ಪಂಚಾಯತ್ 7, ಒಟ್ಟು 230
- 28 ಮೀಸಲು ಒಳಗೊಂಡಂತೆ ಒಟ್ಟಾರೆ 258 ಮೇಲ್ವಿಚಾರಕರು
- ಜಿಲ್ಲೆಯ 1,755 ಸಿಬ್ಬಂದಿಗೆ ಗಣತಿ ತರಬೇತಿ
- ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಸುಮಾರು 1,755 ಸಿಬ್ಬಂದಿಗೆ ಗಣತಿ ಕಾರ್ಯದ ತರಬೇತಿ

ಬಿಜೆಪಿ ಮುಖಂಡ ವೆಂಕಟೇಶ ಕಾಟವೆ ಹೇಳಿಕೆ

ಆರೋಪಗಳು ರಾಜಕೀಯ ಪ್ರೇರಿತ

ಹುಬ್ಬಳ್ಳಿ: ವಿದ್ಯಾನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಜತ್ ಉಳ್ಳಾಗಡ್ಡಿಮಠ ಅವರು ಮಾಡಿದ ಆರೋಪಗಳು ಸಂಪೂರ್ಣ ರಾಜಕೀಯ ಪ್ರೇರಿತವಾಗಿದ್ದು, ನಿಜಸ್ಥಿತಿಯನ್ನು ಮುಸುಕಾಗಿಸಲು ಮಾಡಿದ ವಿಫಲ ಯತ್ನವಾಗಿದೆ ಎಂದು ಬಿಜೆಪಿ ಯುವ ಮುಖಂಡ ವೆಂಕಟೇಶ ಕಾಟವೆ ಆರೋಪಿಸಿದ್ದಾರೆ.



ಆರೋಪ ನಿರಾಧಾರ

ಮಹೇಶ್ ಟೆಂಗಿನಕಾಯಿ ಹಾಗೂ ಪ್ರಮೋದ ಮುತಾಲಿಕ್ ಅವರ ವಿರುದ್ಧ ಮಾಡಲಾಗಿರುವ ಆರೋಪಗಳು ಸಂಪೂರ್ಣ ನಿರಾಧಾರ. ಹಿಂದು ಸಮಾಜದ ಸುರಕ್ಷತೆ ಮತ್ತು ಗೌರವ ಕಾಪಾಡುವಲ್ಲಿ ಅವರ ಪಾತ್ರ ಮಹತ್ವದ್ದು. ಅದನ್ನು ದುರ್ಬಲಗೊಳಿಸಲು ಕಾಂಗ್ರೆಸ್ ಮಾಡುತ್ತಿರುವ ಪ್ರಯತ್ನಗಳು ಜನರಿಗೆ ಸ್ಪಷ್ಟವಾಗಿ ಗೋಚರಿಸುತ್ತಿವೆ ಎಂದು ವೆಂಕಟೇಶ ಕಾಟವೆ ದೂರಿದರು.

ಸಮಾಜದಲ್ಲಿ ನಡೆಯುತ್ತಿರುವ ಸಂವೇದನಾಶೀಲ ಘಟನೆಗಳನ್ನು 'ನಕಲಿ' ಎಂದು ತಳ್ಳಿಹಾಕುವುದು ಕಾಂಗ್ರೆಸ್ ಪಕ್ಷದ ಹಳೆಯ ಚಾಳಿ. ಜನರ ಭದ್ರತೆ, ಯುವತಿಯರ ಗೌರವದ ಪ್ರಶ್ನೆ ಬಂದಾಗಲೂ ರಾಜಕೀಯಲಾಭದಕಣ್ಣಿನಿಂದನೋಡುವುದು ಕಾಂಗ್ರೆಸ್‌ನ ದ್ವಂದ್ವ ನಿಲುವನ್ನು ತೋರಿಸುತ್ತದೆ ಎಂದು ಕಾಟವೆ ಹೇಳಿದ್ದಾರೆ. ಕಾಂಗ್ರೆಸ್ ನಾಯಕರಿಗೆ ಯಾವಾಗಲೂ ಸತ್ಯ ಅಸಹ್ಯ. ಜನರಲ್ಲಿ ಜಾಗೃತಿ ಮೂಡಿಸುವ ಯಾವುದೇ ಪ್ರಯತ್ನವನ್ನು 'ಟೂಲ್ ಕಿಟ್' ಎಂದು ಕರೆಯುವುದು ಅವರ ಅಸಹಾಯಕತೆಯ ಸಂಕೇತ. ಹುಬ್ಬಳ್ಳಿ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ಘಟನೆಗಳ ಬಗ್ಗೆ ಜನರು ತಾವು ತೀರ್ಮಾನಿಸುತ್ತಿದ್ದಾರೆ. ಅವರಿಗೆ ಬುದ್ಧಿ ಹೇಳಬೇಕಾದ ಅವಶ್ಯಕತೆ ಕಾಂಗ್ರೆಸ್‌ಗೆ ಇಲ್ಲ ಎಂದು ಆರೋಪಿಸಿದರು.

ಉಪಚುನಾವಣೆಗಳ ನೆಪದಲ್ಲಿ ಭಯ ಹುಟ್ಟುಹಾಕುವುದು ಕಾಂಗ್ರೆಸ್‌ನ ರಾಜಕೀಯ ತಂತ್ರ. ಆದರೆ ಜನರು ಈಗ ಎಚ್ಚರಗೊಂಡಿದ್ದಾರೆ. ನಿಜವಾದ ಸಮಸ್ಯೆಗಳಿಂದ ಗಮನ ಬೇರೆಡೆ ಸೆಳೆಯುತ್ತಿರುವುದು ಯಾರು ಎಂಬುದನ್ನು ರಾಜ್ಯದ ಜನತೆ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ ಎಂದು ಕಾಟವೆ ಹೇಳಿದರು.

ಕಾಂಗ್ರೆಸ್ ಪಕ್ಷವು ಅಲ್ಪಸಂಖ್ಯಾತರ ಹಿತದ ಹೆಸರಿನಲ್ಲಿ ನಡೆಸುತ್ತಿರುವುದು ನಿಜವಾದ ಕಲ್ಯಾಣರಾಜಕೀಯವಲ್ಲ, ಸ್ಪಷ್ಟವಾದ ಮತಬ್ಯಾಂಕ್ ರಾಜಕಾರಣವೇ ಆಗಿದೆ. ಸಮಾಜದ ಎಲ್ಲ ವರ್ಗಗಳ ಸಮಗ್ರ ಅಭಿವೃದ್ಧಿಯನ್ನು ಕಡೆಗಣಿಸಿ, ಕೆಲವೊಂದು ಸಮುದಾಯಗಳನ್ನು ಮಾತ್ರ ಓಲೈಸುವ ಈ ನೀತಿ ಪ್ರಜಾಪ್ರಭುತ್ವದ ಆಶಯಕ್ಕೆ ವಿರುದ್ಧವಾಗಿದೆ. ಜನರ ನಿಜವಾದ ಸಮಸ್ಯೆಗಳಿಗೆ ಪರಿಹಾರ ನೀಡುವ ಬದಲು, ಮತಗಳ ಲಾಭಕ್ಕಾಗಿ ವಿಭಜನಾ ರಾಜಕಾರಣ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರಕ್ಕೆ ಜನರು ತಕ್ಕ ಉತ್ತರ ನೀಡುವ ದಿನ ದೂರದಲ್ಲಿಲ್ಲ. ಹುಬ್ಬಳ್ಳಿಯ ಶಾಂತಿ ಮತ್ತು ಸಾಮರಸ್ಯವನ್ನು ಕಾಪಾಡಲು ಬಿಜೆಪಿ ಬದ್ಧವಾಗಿದೆ. ಆದರೆ ಸತ್ಯವನ್ನು ಹೇಳುವುದನ್ನು ಯಾವುದೇ ಶಕ್ತಿಯೂ ತಡೆಯಲು ಸಾಧ್ಯವಿಲ್ಲ ಎಂದರು.


ರಸಗೊಬ್ಬರ ಖರೀದಿಗೆ ಎಫ್.ಐ.ಡಿ ಕಡ್ಡಾಯ

ನವಲಗುಂದ: ರಸಗೊಬ್ಬರ ಖರೀದಿಗೆ ಇನ್ನು ಮುಂದೆ ರೈತರು ಕಡ್ಡಾಯವಾಗಿ ಎಫ್.ಐ.ಡಿ ಹೊಂದಿರಬೇಕು. ತಮ್ಮ ಜಮೀನನ್ನು ಸಹ ಎಫ್.ಐ.ಡಿಗೆ ಲಿಂಕ್ ಹೊಂದಿರಬೇಕು. ಇದೇ ಆಧಾರದಲ್ಲಿ ರಸಗೊಬ್ಬರವನ್ನು ರೈತ ಮಿತ್ರ ಪೋರ್ಟಲ್ ಮೂಲಕ ವಿತರಣೆ ಮಾಡಲಾಗುತ್ತದೆ ಎಂದು ಜಿಲ್ಲಾ ಜಂಟಿ ನಿರ್ದೇಶಕ ಮಂಜುನಾಥ ಅಂತರವಳ್ಳಿ ಹೇಳಿದರು.

ಮಂಗಳವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ 2026-27ನೇ ಸಾಲಿನ ಮುಂಗಾರು ಹಂಗಾಮಿನ ಪೂರ್ವ ಸಿದ್ಧತೆ ಮತ್ತು ರಸಗೊಬ್ಬರಗಳ ವಿತರಣೆ ಕುರಿತಾಗಿ ನವಲಗುಂದ ಮತ್ತು ಅಣ್ಣಿಗೇರಿ ತಾಲೂಕಿನ ಕೃಷಿ ಪರಿಕರ ಮಾರಾಟಗಾರರಿಗೆ ಜಂಟಿ ಕೃಷಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು. ರೈತರಿಗೆ ರಸಗೊಬ್ಬರವನ್ನು ವಿತರಿಸುವಾಗ ರೈತರ ಜಮೀನಿನ ಕ್ಷೇತ್ರ, ಹಾಗೂ ರೈತರು ಬೆಳೆದ ಬೆಳೆಗೆ ಅನುಸಾರವಾಗಿ ರಸಗೊಬ್ಬರವನ್ನು ಪೋರ್ಟಲ್ ಮುಖಾಂತರ ವಿತರಿಸಲಾಗುವುದು ಎಂದರು.

ರೈತರು ಈಗಾಗಲೇ ಎಫ್.ಐ.ಡಿ ಹೊಂದಿದಲ್ಲಿ ಎಲ್ಲಾ ಜಮೀನಿನ ವಿವರಗಳು ಜೋಡನೆಯಾಗಿದೆಯೇ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಬೇಕು ಅಥವಾ ಎಫ್.ಐ.ಡಿ ಹೊಂದಿರದೇ ಇದ್ದಲ್ಲಿ ತಮ್ಮ ಎಲ್ಲ ಪಹಣಿ ಹಾಗೂ ಆಧಾರ್ ಕಾರ್ಡ್ ಹಾಗೂ ಆಧಾರ್ ಕಾರ್ಡ್‌ಗೆ ನೋಂದಾಯಿಸಿದ ಫೋನ್ ನಂಬರ್‌ನ ಫೋನ್ ತಗೆದುಕೊಂಡು ಹತ್ತಿರದ ರೈತ ಸಂಪರ್ಕ ಕೇಂದ್ರ ಹಾಗೂ ಗ್ರಾಮ ಒನ್ ಮತ್ತು ಕರ್ನಾಟಕ ಒನ್ ಗಳಲ್ಲಿ ನೊಂದಾಯಿಸಿಕೊಳ್ಳಬೇಕು. ರಸಗೊಬ್ಬರ ಮಾರಾಟಗಾರರು ಕಡ್ಡಾಯವಾಗಿ ರಸಗೊಬ್ಬರವನ್ನು ರೈತ ಮಿತ್ರ ಪೋರ್ಟಲ್ ಮೂಲಕ ರೈತರ ಎಫ್.ಐ.ಡಿ ನಮೂದಿಸಿ ರೈತರ ಜಮೀನಿನ ಕ್ಷೇತ್ರ ಹಾಗೂ ಬೆಳೆಗೆ ಅನುಸಾರವಾಗಿ ಮಾರಾಟ ಮಾಡಬೇಕು ಹಾಗೂ ತಮ್ಮ ಎಲ್ಲ ಓ ಫಾರ್ಮ್ ನವಿಕರಿಸಿಕೊಳ್ಳಬೇಕು. ಒಂದು ವೇಳೆ ಮಾರಾಟಗಾರರು ಓ ಫಾರ್ಮ್‌ಗಳ ನೋಂದಣಿ ಇಲ್ಲದೇ ಮಾರಾಟ ಮಾಡಿದಲ್ಲಿ ಹಾಗೂ ಗರಿಷ್ಠ ಮಾರಾಟ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದು ಕಂಡು ಬಂದಲ್ಲಿ ಪರವಾನಗಿಯನ್ನು ಅಮಾನತ್ತು ಅಥವಾ ರದ್ದುಪಡಿಸಲಾಗುವುದು ಎಂದರು.

ಈ ವೇಳೆ ಉಪ ಕೃಷಿ ನಿರ್ದೇಶಕ ಸಂದೀಪ ಆರ್.ಜಿ., ನವಲಗುಂದ ಸಹಾಯಕ ಕೃಷಿ ನಿರ್ದೇಶಕ ರವೀಂದ್ರಗೌಡ ಪಾಟೀಲ, ಸಹಾಯಕ ಕೃಷಿ (ಜಾಗೃತದಳ) ರಾಘವೇಂದ್ರ ಬಮ್ಮಿಗಟ್ಟಿ, ಸೇರಿದಂತೆ ಕೃಷಿ ಅಧಿಕಾರಿಗಳು, ಸಿಬ್ಬಂದಿ, ನವಲಗುಂದ-ಅಣ್ಣಿಗೇರಿ ತಾಲೂಕಿನ ಕೃಷಿ ಪರಿಕರಗಳ ಮಾರಾಟಗಾರರು ಇದ್ದರು.



ಸಂತ್ರಸ್ತೆ ಮನೆಗೆ ಸಂಸದ ಜಗದೀಶ ಶೆಟ್ಟರ ಭೇಟಿ: ಕುಟುಂಬಸ್ಥರಿಗೆ ಧೈರ್ಯ, ಸಾಂತ್ವನ

ಹುಬ್ಬಳ್ಳಿ: ಇತ್ತೀಚೆಗೆ ನಡೆದ 'ಲವ್ ಜಿಹಾದ್' ಯತ್ನದ ಆರೋಪದ ಪ್ರಕರಣದ ಸಂತ್ರಸ್ತೆಯ ಮನೆಗೆ ಸಂಸದ ಜಗದೀಶ ಶೆಟ್ಟರ ಭೇಟಿ ನೀಡಿ, ಕುಟುಂಬಸ್ಥರಿಗೆ ಧೈರ್ಯ ತುಂಬಿ, ಸಾಂತ್ವನ ಹೇಳಿದರು.

ಬಳಿಕ ಮಾತನಾಡಿದ ಅವರು, ಹಿಂದು ಸಮಾಜದ ಗೌರವಕ್ಕೆ ಧಕ್ಕೆ ತರುವಂತಹ ಕಾರ್ಯಗಳು ಮತ್ತೊಮ್ಮೆ ಆಗದಂತೆ ತಡೆಯಲು ನಾವು ನಮ್ಮ ಧರ್ಮದಕುರಿತು ಯುವ ಜನತೆಯಲ್ಲಿ ಭಕ್ತಿ ಭಾವನೆ ಬೆಳೆಸುವುದು ಅಗತ್ಯ. ರಾಜ್ಯದಲ್ಲಿ ಜಿಮ್‌ಗಳಲ್ಲಿ ಇಂತಹ ಪ್ರಕರಣಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ತರಬೇತುದಾರರ ನಡವಳಿಕೆಯ ಕುರಿತು ನಿಗಾವಹಿಸಿ, ಜಿಮ್ ತೆರೆಯಲು ಪರವಾನಗೆ ನೀಡಲು ಕೆಲವು ಕಠಿಣ ಶರತ್ತುಗಳನ್ನು ಹಾಕಬೇಕು ಎಂದು ಆಗ್ರಹಿಸಿದರು.



ರಾಜ್ಯ ಕಾಂಗ್ರೆಸ್ ಸರ್ಕಾರದ ಅಲ್ಪಸಂಖ್ಯಾತರ ಓಲೈಕೆ ನಡೆಯಿಂದಲೇ ಇಂದು ರಾಜ್ಯದಲ್ಲಿ ಹಿಂದು ಹೆಣ್ಣು ಮಕ್ಕಳ ಸುರಕ್ಷತೆಗೆ ಧಕ್ಕೆಯಾಗುವಂತೆ ಮಾಡಿ, ಲವ್ ಜಿಹಾದ್‌ನಂತಹ ಪ್ರಕರಣಗಳು ಹೆಚ್ಚಾಗಲು ನೇರ ಕಾರಣವಾಗಿದೆ. ರಾಜ್ಯದಲ್ಲಿ ಹೆಣ್ಣು ಮಕ್ಕಳ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಇಂತಹ ಪ್ರಕರಣಗಳಲ್ಲಿ ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡಿ, ರಾಜ್ಯದಲ್ಲಿ ಇಂತಹ ಪ್ರಕರಣಗಳು ಮತ್ತೆ ತಲೆಯೆತ್ತದಂತೆ ಎಚ್ಚರ ವಹಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಹುಡಾ ಮಾಜಿ ಅಧ್ಯಕ್ಷ ನಾಗೇಶ ಕಲಬುರ್ಗಿ, ಬಿಜೆಪಿ ಯುವ ಮುಖಂಡ ಸಂಕಲ್ಪ ಶೆಟ್ಟರ್ ಹಾಗೂ ಎಸ್.ಎಸ್.ಕೆ ಸಮಾಜದ ಪ್ರಮುಖ ಗೋವಿಂದ ಮಿಸ್ಕೀನ, ರಾಜೇಶ್ ಮಗಜಿಕೊಂಡಿ, ವಿಠ್ಠಲ್ ಲದವಾ, ಭಾಸ್ಕರ್ ಜಿತೂರಿ, ಪಾಲಿಕೆ ಸದಸ್ಯೆ ಸರಸ್ವತಿ ವಿನಾಯಕ ದೋಂಗಡಿ, ರಾಜು ಜರತಾರಘರ ಇದ್ದರು.

ಉದ್ಯಮಿಗೆ 5 ಲಕ್ಷ ರೂ. ವಂಚನೆ

ಹುಬ್ಬಳ್ಳಿ: ಉದ್ಯಮಿಯೊಬ್ಬರಿಗೆ ಆನ್‌ಲೈನ್‌ನಲ್ಲಿ ಪರಿಚಯವಾದ ಅಪರಿಚಿತ ವ್ಯಕ್ತಿ ತಮ್ಮ ಫ್ರ್ಯಾಂಚೈಸಿ ಪಡೆದರೆ ಹೆಚ್ಚಿನ ಲಾಭ ಪಡೆಯಬಹುದು ಎಂದು ನಂಬಿಸಿ 5 ಲಕ್ಷ ವರ್ಗಾಯಿಸಿಕೊಂಡು ವಂಚಿಸಿರುವ ಪ್ರಕರಣ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಈಶ್ವರ ನಗರದ ಅಂಕೋಲೆಕರ್ ಲೇಔಟ್‌ನ ಬಸಯ್ಯ ಭಿಕ್ಷಾವತಿಮಠ ಎಂಬ ಉದ್ಯಮಿಗೆ ಅಪರಿಚಿತ ವ್ಯಕ್ತಿ ವಂಚಿಸಿದ್ದಾನೆ. ಬಸಯ್ಯ ಅವರಿಗೆ ಫೇಸ್‌ಬುಕ್‌ನಲ್ಲಿ ಪರಿಚಿತವಾದ ವ್ಯಕ್ತಿ ಅನ್ಮುಲ್ ಪಾಂಡೆ ಬೆಲ್ಲಿಸ್ಸಿಮೊ ವ್ಯಾನ್ಸ್ ಆರ್ಗಾನಿಕ್ಸ್ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯ ಸಿಬ್ಬಂದಿ ಎಂದು ಹೇಳಿಕೊಂಡು ತಮ್ಮಲ್ಲಿ ಚಿಕ್ಕಮಕ್ಕಳ ಪ್ಯಾಂಪರ್ಸ್, ಪ್ಯಾಡ್ ಹಾಗೂ ಇನ್ನಿತರ ವಸ್ತುಗಳನ್ನು ತಯಾರಿಸಲಾಗುತ್ತಿದೆ ಎಂದು ತಿಳಿಸಿದ್ದಾನೆ. ಸದ್ಯ ಕರ್ನಾಟಕದಲ್ಲಿ ವ್ಯಾಪಾರ ವಿಸ್ತರಿಸಲು ಬಯಸಿದ್ದು, ಫ್ರ್ಯಾಂಚೈಸಿ ಪಡೆದರೆ ಹೆಚ್ಚಿನ ಲಾಭ ಪಡೆಯಬಹುದು ಎಂದು ಸಲಹೆ ನೀಡಿ ನಂಬಿಸಿ, 10 ಲಕ್ಷ ಠೇವಣಿ ಇಡಲು ತಿಳಿಸಿದ್ದಾನೆ. ಆದರೆ ಬಸಯ್ಯ ಅವರು 5 ಲಕ್ಷ ಮಾತ್ರ ನೀಡಿದ್ದಾರೆ. ಒಂದು ವರ್ಷವಾದರು ಹಣವೂ ನೀಡದೆ ವಸ್ತುಗಳ ಕೊಡದೇ ವಂಚಿಸಿದ್ದಾನೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

4 ಲಕ್ಷ ರೂ. ಮೌಲ್ಯದ ತೆಂಗಿನಕಾಯಿ ಕಳುವು

ಹುಬ್ಬಳ್ಳಿ: ತೆಂಗಿನ ತೋಟಕ್ಕೆ ನುಗ್ಗಿ 4 ಲಕ್ಷ ರೂ. ಮೌಲ್ಯದ ತೆಂಗಿನಕಾಯಿ ಕಳವು ಮಾಡಿದ ಘಟನೆ ತಾಲೂಕಿನ ಸುಳ್ಳ ಗ್ರಾಮದಲ್ಲಿ ನಡೆದಿದ್ದು, ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಉಸ್ಮಾನ ಗಂಜು ಎಂಬುವರು ಸೇರಿದಂತೆ ಹಲವರ ಮೇಲೆದೂರು ದಾಖಲಾಗಿದೆ. ಶ್ರೀದೇವಿ ಕುಲಕರ್ಣಿ ಎಂಬುವವರ ತೋಟದಲ್ಲಿ ಉಸ್ಮಾನ ಹಾಗೂ ಅವರ ಸಹಚರರು ಸೇರಿ 4 ಲಕ್ಷ ರೂ. ಮೌಲ್ಯದ ತೆಂಗಿನಕಾಯಿಗಳನ್ನು ಕಿತ್ತು ಕಳ್ಳತನ ಮಾಡಿದ್ದು, ವಿಚಾರಿಸಿದಕ್ಕೆ ಜೀವ ಬೆದರಿಕೆ ಹಾಕಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಪಾದಚಾರಿ ಸಾವು

ಹುಬ್ಬಳ್ಳಿ: ವರೂರು ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಸ್ ಅಪಘಾತದಲ್ಲಿ ರಸ್ತೆ ದಾಟುತ್ತಿದ್ದ ಸವಣೂರು ತಾಲೂಕಿನ ಗೋವಿಂದಪ್ಪ ವೆಂಕಪ್ಪ ನರ್ತಿ(64) ಎಂಬುವರು ಮೃತಪಟ್ಟ ಘಟನೆ ನಡೆದಿದೆ.

ಏ.5ರಂದು ಹುಬ್ಬಳ್ಳಿ ಕಡೆಯಿಂದ ಹಾವೇರಿ ಕಡೆಗೆ ಸಾಗುತ್ತಿದ್ದ ಬಸ್ ಡಿಕ್ಕಿ ಹೊಡೆದಿದೆ ಎನ್ನಲಾಗಿದೆ. ಈ ಕುರಿತು ಹುಬ್ಬಳ್ಳಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರೋಗ್ಯ ಜಾಗೃತಿಗಾಗಿ ಮ್ಯಾರಥಾನ್



ಹುಬ್ಬಳ್ಳಿ: ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ಇಲ್ಲಿಯ ನವನಗರ ಎಬಿಸಿ ಫಿಟ್ನೆಸ್ ಹಾಗೂ ಜಿಮ್‌ನಲ್ಲಿ ಹೆಲ್ತಿ ಹುಬ್ಬಳ್ಳಿ ಹ್ಯಾಪಿ ಹುಬ್ಬಳ್ಳಿ ಎಂಬ ಧ್ಯೇಯವಾಕ್ಯದಡಿ ಆರೋಗ್ಯ ಜಾಗೃತಿಗಾಗಿ ಮ್ಯಾರಥಾನ್ ಮಾಡಲಾಯಿತು.

ಸ್ಥಳೀಯರು ಹಾಗೂ ಜಿಮ್‌ನ ಸದಸ್ಯರು ಉತ್ಸಾಹದಿಂದ ಭಾಗವಹಿಸಿದ್ದರು. ಇದೇ ವೇಳೆ ನಗರದ ಸ್ವಚ್ಛತೆಗೆ ಶ್ರಮ ಪಡುವ ಪಾಲಿಕೆ ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು. ವಿಶ್ವ ಆರೋಗ್ಯ ದಿನ ಅಂಗವಾಗಿ ಜಿಮ್ ವತಿಯಿಂದ ವಿವಿಧ ಸ್ಪರ್ಧೆಗಳ ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ ಭಾಗವಹಿಸಿದ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಜಿಮ್ ಮಾಲೀಕ ಸುನೀಲ ಜಂಗಾನಿ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಜನರು ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದು, ಆರೋಗ್ಯಕರ ಜೀವನ ಶೈಲಿ ರೂಪಿಸಲು ಜಿಮ್‌ಗಳು ಸಹಕಾರಿಯಾಗಿವೆ. ಜಿಮ್‌ಗಳು ಕೇವಲ ವ್ಯಾಯಾಮ ಸ್ಥಳವಲ್ಲ, ಬದಲಿಗೆ ಫಿಟ್ನೆಸ್ ಜೊತೆಗೆ ಮನಸ್ಸಿಗೆ ನೆಮ್ಮದಿ ನೀಡುವ ಸ್ಥಳವಾಗಿವೆ ಎಂದು ತಿಳಿಸಿದರು. ಜಿಮ್ ಮಾಲೀಕ್ ಆಕಾಶ ಸೊಗಲದ, ಶಿವುಕುಮಾರ ಬೆಲೂರ, ಸಂತೋಷ ಬೆಡಗೇರಿ, ಉಮೇಶ ರಣದೇವಿ, ಪೂರ್ಣಿಮಾ ಇದ್ದರು.

ದೇಶದ ಪ್ರಗತಿಗೆ ಜನಗಣತಿ ಪೂರಕ

ಅಳ್ನಾವರ: ಭಾರತದ ಜನಗಣತಿ 2027ರ ಮೊದಲನೇ ಹಂತದಲ್ಲಿ ಮನೆಪಟ್ಟಿ ಹಾಗೂ ಮನೆಗಣತಿ ಕಾರ್ಯಕ್ಕೆ ಯೋಜನಗೊಂಡ ಮೇಲ್ವಿಚಾರಕರು ಹಾಗೂ ಗಣತಿದಾರರಿಗೆ ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿರುವ ಮೂರು ದಿನಗಳ ತರಬೇತಿ ಕಾರ್ಯಾಗಾರಕ್ಕೆ ಪ.ಪಂ ಮುಖ್ಯಾಧಿಕಾರಿ ಪ್ರಕಾಶ ಮಗದುಮ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಜನಗಣತಿ ದೇಶದ ಸಮಗ್ರ ಬೆಳವಣಿಗೆಗೆ ಪೂರಕವಾಗಿದ್ದು ಇದರಿಂದ ಜನರ ಜೀವನದ ಸ್ಥಿತಿಗತಿ ಹಾಗೂ ಮುಂದಿನ ಯೋಜನೆ ಮತ್ತು ನೀತಿಗಳನ್ನು ರೂಪಿಸಲು ಭವಿಷ್ಯದ ದೃಷ್ಟಿಯಿಂದ ಮಹತ್ವ ಎನಿಸಿದೆ ಎಂದರು.

ಜನಗಣತಿ ಹೆಚ್ಚುವರಿ ಚಾರ್ಜ್ ಅಧಿಕಾರಿ ಎಂ.ಎಸ್. ಬೆಂತೂರ ಮಾತನಾಡಿ, ದೇಶದ ಪ್ರಗತಿಗೆ ಪ್ರತಿಯೊಬ್ಬರೂ ನಿಖರ ಮಾಹಿತಿ ನೀಡಿ ಜನಗಣತಿ ಯಶಸ್ಸಿಗೆ ಕೈಜೋಡಿಸಬೇಕು. ಇದರ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಮಾಡಬೇಕು ಹಾಗೂ ಗಣತಿ ಕಾರ್ಯಕ್ಕೆ ನಿಯೋಜನಗೊಂಡ ಸಿಬ್ಬಂದಿ ಕಾರ್ಯ ಬಹು ಮುಖ್ಯವಾಗಿದೆ ಎಂದರು.

ಸಂಪನ್ಮೂಲ ಕ್ಷೇತ್ರ ಅಧಿಕಾರಿ ದೇವೇಂದ್ರ ತಳವಾರ್, ಪ್ರವೀಣ ದೊಡ್ಡಮನಿ, ತಾಂತ್ರಿಕ ಸಿಬ್ಬಂದಿ ಸಂಭಾಜಿ, ಡಾ.ಉಮಾ ಪೂಜಾರ, ಗಣತಿ ಕಾರ್ಯಕ್ಕೆ ನಿಯೋಜನೆಗೊಂಡ ಮೇಲ್ವಿಚಾರಕರು ಹಾಗೂ ಗಣತಿದಾರರು ಹಾಜರಿದ್ದರು.



ಯೋಗದಿಂದ ಆರೋಗ್ಯ ವೃದ್ಧಿ



ಧಾರವಾಡ: ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಕಚೇರಿಯಲ್ಲಿ ಉಚಿತ ಯೋಗ ಶಿಬಿರದ ಉದ್ಘಾಟನಾ ಕಾರ್ಯಕ್ರಮವನ್ನು ಮಂಗಳವಾರ ಹಮ್ಮಿಕೊಳ್ಳಲಾಗಿತ್ತು.

ಶಿಬಿರವನ್ನು ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷ ಅಡವೇಶ್ ಇಟಗಿ ಉದ್ಘಾಟಿಸಿ ಮಾತನಾಡಿ, ಬೇಸಿಗೆ ಇರುವುದರಿಂದ ಮಕ್ಕಳು ಒಳಾಂಗಣ ಆಟಗಳನ್ನು ಆಡಬೇಕು. ಸರಿಯಾಗಿ ಪೌಷ್ಟಿಕ ಆಹಾರವನ್ನು ಸೇವಿಸಬೇಕು. ಜಾಸ್ತಿ ನೀರನ್ನು ಕುಡಿಯಬೇಕು. ಗಿಡ ಹತ್ತುವುದು, ಕೆರೆಗಳಿಂದ ದೂರ ಇರುವುದು, ಮೊಬೈಲ್ ಬಳಕೆ ಮಾಡದೇ ಇರುವುದು, ಮಕ್ಕಳು ಸುರಕ್ಷತೆಯನ್ನು ಕಾಪಾಡಿಕೊಳ್ಳಬೇಕು. ಯೋಗ ಮಾಡುವುದರಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯ ವೃದ್ಧಿಯಾಗುತ್ತದೆ ಎಂದರು.

ಆಪ್ತ ಕಾರ್ಯದರ್ಶಿ ಅನ್ನಪೂರ್ಣ ಸಂಗಳದ ಮಾತನಾಡಿ, ಯೋಗ ಶಿಬಿರದ ಕುರಿತು ಮಕ್ಕಳಿಗೆ ಮಾರ್ಗದರ್ಶನ ನೀಡಿದರು. ಶಿಬರದಲ್ಲಿ ಹುಬ್ಬಳ್ಳಿ, ಧಾರವಾಡದ ಮಕ್ಕಳು ಭಾಗವಹಿಸಿದ್ದರು.

ಗ್ರೇಡ್ ವ್ಯವಸ್ಥೆ ರದ್ದುಪಡಿಸಿ: ಉಮೇಶ



ಧಾರವಾಡ: ಹಿಂದಿ ಭಾರತ ದೇಶದ ಅತ್ಯಂತ ಪ್ರಮುಖ ಸಂಪರ್ಕ ಭಾಷೆಯಾಗಿದೆ. ರಾಜ್ಯ ಸರ್ಕಾರ ಹಿಂದಿ ಹಾಗೂ ಇತರ ಪ್ರಾದೇಶಿಕ ಭಾಷೆಗಳಿಗೆ ಗ್ರೇಡ್ ವ್ಯವಸ್ಥೆಯನ್ನು ರದ್ದುಪಡಿಸಿ, ಹಿಂದಿನಂತೆ ಅಂಕ ಪದ್ಧತಿ ಮುಂದುವರಿಸಬೇಕು ಎಂದು ಪ್ರಾಚಾರ್ಯ ಹಾಗೂ ಹಿಂದಿ ಸಲಹಾ ಸಮಿತಿ ಸದಸ್ಯ ಉಮೇಶ ಪುರೋಹಿತ್ ಆಗ್ರಹಿಸಿದ್ದಾರೆ.

ಈ ಕುರಿತು ಪ್ರಕಟಣೆಯಲ್ಲಿ ತಿಳಿಸಿದ ಅವರು, ದೇಶದ ಶೇ.43ಕ್ಕಿಂತ ಹೆಚ್ಚು ಜನರು ಹಿಂದಿಯನ್ನು ಮಾತನಾಡುತ್ತಾರೆ. ಶಿಕ್ಷಣ, ಆಡಳಿತ, ಸಿನಿಮಾ (ಬಾಲಿವುಡ್), ಮಾಧ್ಯಮ ಮತ್ತು ಡಿಜಿಟಲ್ ಸಂವಹನ ಕ್ಷೇತ್ರಗಳಲ್ಲಿ ಹಿಂದಿ ಪ್ರಮುಖ ಪಾತ್ರ ವಹಿಸುತ್ತಿದೆ. ರಾಜ್ಯದಲ್ಲಿ ಹಲವು ದಶಕಗಳಿಂದ ಶಾಲೆಗಳಲ್ಲಿ ತ್ರಿಭಾಷಾ ಸೂತ್ರ ಜಾರಿಯಲ್ಲಿದೆ. ವಿದ್ಯಾರ್ಥಿಗಳಿಗೆ ಹಿಂದಿ ಮತ್ತು ಇತರ ಪ್ರಾದೇಶಿಕ ಭಾಷೆಗಳನ್ನು ಕಲಿಯುವ ಅವಕಾಶವಿದೆ ಎಂದಿದ್ದಾರೆ.

ಸರ್ಕಾರ ಹಿಂದಿ ಮತ್ತು ಇತರ ಪ್ರಾದೇಶಿಕ ಭಾಷೆಗಳ ಪರೀಕ್ಷೆಗಳಲ್ಲಿ ಅಂಕಗಳ ಬದಲು ಗ್ರೇಡ್ ವ್ಯವಸ್ಥೆ ಜಾರಿಗೊಳಿಸುವ ನಿರ್ಧಾರ ಕೈಗೊಂಡಿದೆ. ಈ ಕ್ರಮದಿಂದ ವಿದ್ಯಾರ್ಥಿಗಳಲ್ಲಿ ಅಸಮಾಧಾನ ಉಂಟಾಗಿದೆ. ಉನ್ನತ ಶಿಕ್ಷಣಕ್ಕಾಗಿ ಇತರ ರಾಜ್ಯಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ಈ ಗ್ರೇಡ್ ವ್ಯವಸ್ಥೆ ಅನುಕೂಲಕರವಾಗುವುದಿಲ್ಲ, ಇದು ಹಿಂದಿ ಮತ್ತು ಇತರ ಭಾಷೆಗಳ ಹಿತಕ್ಕೂ ವಿರುದ್ಧವಾಗಿದೆ. ಇದರಿಂದ ಅನೇಕ ಹಿಂದಿ ಶಿಕ್ಷಕರು ಉದ್ಯೋಗ ಕಳೆದುಕೊಳ್ಳುವ ಸಾಧ್ಯತೆಯಿದೆ ಎಂದು ತಿಳಿಸಿದ್ದಾರೆ.

ಕಿರುಸುದ್ದಿ

ಎಲ್‌ಪಿಜಿ ಇಡೀ ದೇಶಕ್ಕೆ ಹಂಚಿಕೆ: ಜೋಶಿ

ಹುಬ್ಬಳ್ಳಿ: ವಿದೇಶದಿಂದ ಬರುವ ಹಡುಗುಗಳು ದೇಶದ ಯಾವುದೇ ಬಂದರಿಗೆ ಬಂದರೂ ಎಲ್‌ಪಿಜಿ ಸೇರಿದಂತೆ ಅದರಲ್ಲಿರುವ ವಸ್ತುಗಳ ಇಡೀ ದೇಶಕ್ಕೆ ಹಂಚಿಕೆ ಮಾಡಲಾಗುತ್ತಿದೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರಿಗೆ ಈ ಬಗ್ಗೆ ಸ್ವಲ್ಪವೂ ಮಾಹಿತಿ ಇಲ್ಲ ಅನಿಸುತ್ತದೆ. ಆದ್ದರಿಂದ ಅಸಂಬದ್ಧ ಹೇಳಿಕೆ ನೀಡಿದ್ದಾರೆ ಎಂದು ಕೇಂದ್ರ ಸಚಿವ



ಪ್ರಹ್ಲಾದ ಜೋಶಿ ಕಿಡಿಕಾರಿದರು. ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಹುಶಃ ಸಿಎಂ ಸ್ಥಾನ ಮೇಲೆ ಕಣ್ಣಿಟ್ಟಿರುವ ಡಿ.ಕೆ. ಶಿವಕುಮಾರ ಅವರು, ರಾಹುಲ್ ಗಾಂಧಿ ಮೆಚ್ಚಿಸಲು ಕೇಂದ್ರ ಸರ್ಕಾರವನ್ನು ಟೀಕಿಸುತ್ತಿದ್ದಾರೆ. ಏನೇ ಮಾಡಿದರೂ ಅವರು ಸಿಎಂ ಆಗಲ್ಲ ಎಂದು ವ್ಯಂಗ್ಯವಾಡಿದರು.

ಎಲ್‌ಪಿಜಿ ಪೂರೈಕೆಯೂ ಯುದ್ಧದಿಂದ ಸಮಸ್ಯೆಯಾಗಿದೆ. ರಾಜ್ಯದಲ್ಲಿರುವ 372 ಎಲ್‌ಪಿಜಿ ಬಂಕ್‌ಗಳಲ್ಲಿ ಸರ್ಕಾರದ ಅಧೀನದಲ್ಲಿ ಕೇವಲ 72 ಬಂಕ್‌ಗಳಿವೆ. ಉಳಿದ ಬಂಕ್‌ಗಳಲ್ಲಿ ಹೆಚ್ಚುವರಿ ದರಕ್ಕೆ ಎಲ್‌ಪಿಜಿ ಮಾರಾಟವಾಗುತ್ತಿದ್ದು, ಆಟೋ ಚಾಲಕರು ನಾಲ್ಕು-ಐದು ತಾಸು ಸಾಲಿನಲ್ಲಿ ನಿಂತು ಎಲ್‌ಪಿಜಿ ತುಂಬಿಸುತ್ತಿದ್ದಾರೆ. ಈ ಸಮಸ್ಯೆಗೆ ಪರಿಹಾರವಾಗಿ ಪೆಟ್ರೋಲ್ ಬಳಸಲು ಹೇಳಿಕೆ ನೀಡಿದ್ದ ಎಂದು ಹೇಳಿದರು.

ರೈಲಿನಿಂದ ಕೆಳಗೆ ಬಿದ್ದು ಯುವಕ ಸಾವು

ಭಟ್ಕಳ: ಚಲಿಸುತ್ತಿರುವ ರೈಲಿನಿಂದ ಕೆಳಗೆ ಬಿದ್ದು ಯುವಕನೋರ್ವ ಮೃತಪಟ್ಟ ಘಟನೆ ತಾಲೂಕಿನ ಬೆಳಕೆ ರೈಲ್ವೆ ಗೇಟ್ ಬಳಿಯಲ್ಲಿ ಸಂಭವಿಸಿದೆ. ಮೃತನನ್ನು ಕುಮಟಾ ನುಶಿಕೋಟೆ ನಿವಾಸಿ ಚಂದ್ರಕಾಂತ ನಾಗೇಶ ಗೌಡ (32) ಎಂದು ಗುರುತಿಸಲಾಗಿದೆ. ಈತನು ಮಡಗಾಂವ ಮಂಗಳೂರು ಸೆಂಟ್ರಲ್ ಪ್ಯಾಸೆಂಜರ್ ರೈಲಿನಲ್ಲಿ ಮಂಗಳೂರು ಕಡೆ ಪ್ರಯಾಣಿಸುತ್ತಿದ್ದಾಗ, ಭಟ್ಕಳ ತಾಲೂಕಿನ ಬೆಳಕೆ ರೈಲು ಗೇಟ್ ಸಮೀಪ ಆಕಸ್ಮಿಕವಾಗಿ ನಿಯಂತ್ರಣ ತಪ್ಪಿ ರೈಲಿನಿಂದ ಕೆಳಗೆ ಬಿದ್ದ ಪರಿಣಾಮ ಗಂಭೀರ ಗಾಯಗೊಂಡ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತರ ಸಂಬಂಧಿ ಕೃಷ್ಣ ಚೈತ್ರರಾಮ್ ಗೌಡ ಅವರು ಭಟ್ಕಳ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ನಡೆಸಿದ್ದಾರೆ.

30 ಎಕರೆ ಅರಣ್ಯ ಪ್ರದೇಶ ಬೆಂಕಿಗಾಹುತಿ

ಕೂಡ್ಲಿಗಿ: ತಾಲೂಕಿನ ಸಿದ್ದಾಪುರ ಹಾಗೂ ಕಾನಹೊಸಹಳ್ಳಿ ಬಳಿ ಅರಣ್ಯ ಪ್ರದೇಶಕ್ಕೆ ಮಂಗಳವಾರ 30 ಎಕರೆ ಅರಣ್ಯ ಪ್ರದೇಶ ಬೆಂಕಿಗೆ ಆಹುತಿಯಾಗಿರುವ ಘಟನೆ ನಡೆದಿದೆ. ಕುರಿಗಾಹಿಗಳು ಹೊಸ ಚಿಗುರಿಗಾಗಿ ಅಥವಾ ಕೆಲ ರಸ್ತೆಯಲ್ಲಿ ಓಡಾಡುವ ಕಿಡಿಗೇಡಿಗಳು



ಉದ್ದೇಶಪೂರ್ವಕವಾಗಿ ಬೆಂಕಿ ಹಚ್ಚಿರುವ ಸಾಧ್ಯತೆ ಇದೆ. ಸಿಬ್ಬಂದಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗುವುದು. ಮುಂದಿನ ದಿನಗಳಲ್ಲಿ ಘಟನೆ ಮರುಕಳಿಸದಂತೆ ಅಗತ್ಯ ಕ್ರಮ ಜರುಗಿಸಲಾಗುವುದು ಎಂದು ಗುಡೆಕೋಟೆ ವಲಯ ಅರಣ್ಯ ಅಧಿಕಾರಿ ಜಗದೀಶ್ ಮೇದಾ ತಿಳಿಸಿದರು. ಕಾಡಿನಲ್ಲಿ ಹುಲ್ಲು ಹೆಚ್ಚಾಗಿರುವ ಪರಿಣಾಮ ಬೆಂಕಿಯ ಜ್ವಾಲೆ ಎತ್ತರಕ್ಕೆ ವ್ಯಾಪಿಸಿದ್ದು, ಬೆಂಕಿ ನಿಯಂತ್ರಣಕ್ಕೆ ಸಿಗದೇ ಅರಣ್ಯವನ್ನು ಆಪೋಶನ ತೆಗೆದುಕೊಳ್ಳುತ್ತಿದೆ. ಈಚೆಗೆ ಬೆಂಕಿ ಅವಘಡ ಸ್ವಲ್ಪ ಹೆಚ್ಚಾಗಿದೆ.

ಮತದಾರರ ಸೆಳೆಯಲು ಮೀಸಲಾತಿ ಗಿಮಿಕ್: ನಿರಾಣಿ

ಬಾಗಲಕೋಟೆ: ಮೂರು ವರ್ಷದಿಂದ ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಈಗ ಉಪಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ಪಂಚಮಸಾಲಿ ಸಮಾಜವನ್ನು 2ಎ ಮೀಸಲಾತಿಗೆ ಸೇರ್ಪಡೆ ಮಾಡುತ್ತೇನೆ ಎನ್ನುವುದು ಚುನಾವಣೆಯ ಗಿಮಿಕ್ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಮುರಗೇಶ ನಿರಾಣಿ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಳಗಾವಿ ಅಧಿವೇಶನ ನಡೆಯುವ ಸಂದರ್ಭದಲ್ಲಿ ದೊಡ್ಡ ಮಟ್ಟದ ಹೋರಾಟವನ್ನು ಪಂಚಮಸಾಲಿ ಸಮಾಜದವರು ಮಾಡಿದಾಗ ಆಗ ಪೊಲೀಸರನ್ನು ಬಿಟ್ಟು ಲಾಠಿ ಚಾರ್ಜ್ ಮಾಡಿದ್ದನ್ನು ಸಮಾಜದವರು ಮರೆತಿಲ್ಲ. ಬಾಗಲಕೋಟೆಯಲ್ಲಿ ವೀರಣ್ಣ ಚರಂತಿಮಠವರು ಗೆಲ್ಲುತ್ತಾರೆಂಬ ಸೋಲಿನ ಭೀತಿಯಿಂದ ಚುನಾವಣೆಯ ಗಿಮಿಕ್ ಶುರು ಮಾಡಿದ್ದಾರೆ ಎಂದರು.

ಹಿಂದೆ ಬಸವರಾಜ ಬೊಮ್ಮಾಯಿ ಸರ್ಕಾರವಿದ್ದ ಸಂದರ್ಭದಲ್ಲಿ ಯಾವ ವರ್ಗದ ಜನರಿಗೆ ಅನ್ಯಾಯವಾಗದ ರೀತಿಯಲ್ಲಿ ಒಕ್ಕಲಿಗರಿಗೆ ಮತ್ತು ಪಂಚಮಸಾಲಿ ಸಮಾಜಕ್ಕೆ 2ಡಿ, 2ಸಿಯ ಮೀಸಲಾತಿಯನ್ನು ಕಲ್ಪಿಸಲಾಗಿತ್ತು. ಆದರೆ, ಈಗಿನ ಸರ್ಕಾರದಲ್ಲಿ ಮಂತ್ರಿಯಾಗಿರುವ ಸಮಾಜದ ನಾಯಕಿ ಲಕ್ಷ್ಮೀ ಹೆಬ್ಬಾಳಕರ ಅವರು ಮೂರು ತಿಂಗಳಲ್ಲಿ ಮೀಸಲಾತಿಯನ್ನು ಸಮಾಜಕ್ಕೆ ನೀಡಿದರೆ ಅವರಿಗೆ ಒಂದು ಕೆ.ಜಿ.ಚಿನ್ನದ ಆಭರಣ, ಚನ್ನಮ್ಮನ ಹೆಸರಿನಲ್ಲಿ ಪ್ರಶಸ್ತಿ ನೀಡಿ ಗೌರವಿಸುತ್ತೇವೆ ಅವರ ಜತೆಗೆ ಮುಖ್ಯಮಂತ್ರಿಯವರನ್ನು ಕೂಡ ಸನ್ಮಾನಿಸುತ್ತೇವೆ ಎಂದರು.

ನಮ್ಮ ಬಿಜೆಪಿ ಸರ್ಕಾರದ ಅವಧಿಯಲ್ಲಿ ಬಾದಾಮಿ ತಾಲೂಕಿನ ಹಲಕುರ್ಕಿ ಬಳಿ 2000 ಎಕರೆ ಜಮೀನಿನಲ್ಲಿ ಕೈಗಾರಿಕೆ ಮತ್ತು ಏರ್ ಸ್ಟ್ರಿಪ್ ಮಾಡಲು ಪ್ರಯತ್ನ ಮಾಡಲಾಗಿತ್ತು. ರೈತರು ಕೂಡ ಒಪ್ಪಿದ್ದರು ಅದನ್ನು ಕಾಂಗ್ರೆಸ್ ಸರ್ಕಾರ ತಪ್ಪಿಸಿದೆ. ಈಗ ಏರ್‌ಸ್ಟ್ರಿಪ್ ಮಾಡಲು ಹೊರಟಿರುವುದು ಮತ್ತು ಬಾಗಲಕೋಟೆಯಲ್ಲಿ ಗಾಂಧಿ ಭವನ ಮಾಡಲು ಹೊರಟಿರುವುದು ಎಲ್ಲ ಚುನಾವಣೆಯ ಆಶ್ವಾಸನೆಗಳು ಮಾತ್ರ ಜನ ಕೂಡ ಬುದ್ಧವಂತರಾಗಿದ್ದಾರೆ ಎಂದು ಹೇಳಿದರು.



ನಕಲಿ ಹಿಂದುತ್ವ ಜನರಿಗೆ ಅರ್ಥವಾಗುತ್ತದೆ

ಬಾಗಲಕೋಟೆ: ಸನಾತನ ಧರ್ಮ ಮತ್ತು ದೇಶದ ರಕ್ಷಣೆಗೆ ಬಿಜೆಪಿ ಸಿದ್ಧವಾಗಿದ್ದು ಬಾಗಲಕೋಟೆಯ ಸರ್ವಾಂಗೀಣ ಅಭಿವೃದ್ಧಿಗೆ ಚರಂತಿಮಠರನ್ನು ಗೆಲ್ಲಿಸಬೇಕು. ಕಾಂಗ್ರೆಸ್ ಆಡಳಿತದಲ್ಲಿ ಕೋಮು ಗಲಭೆ, ಕೊಲೆ, ಲವ್ ಜಿಹಾದ್, ಅತ್ಯಾಚಾರದಂತಹ ಘಟನೆಗಳು ನಡೆಯುತ್ತವೆ. ಇದು ಜನರಿಗೂ ಅರಿವಾಗಿದೆ ಎಂದು ಶಾಸಕ ಸಿದ್ದು ಸವದಿ ಹೇಳಿದರು. ಕಾಂಗ್ರೆಸ್ ಪಕ್ಷದವರು ಮತದಾರರಿಗೆ ಬೆದರಿಕೆ ಮತ್ತು ದಬ್ಬಾಳಿಕೆ ಮಾಡುತ್ತಿದ್ದು ಪೊಲೀಸರು ಅದರ ಕಡೆ ಗಮನ ನೀಡಬೇಕು. ಅಜಾನ ಸಮಯಕ್ಕೆ ಸಭೆಯನ್ನು ನಿಲ್ಲಿಸುವ ಕಾಂಗ್ರೆಸ್ ಪಕ್ಷದ ನಕಲಿ ಹಿಂದುತ್ವ ಜನರಿಗೆ ಅರ್ಥವಾಗುತ್ತದೆ. ಬಾಗಲಕೋಟೆಯಲ್ಲಿ ಬಿಜೆಪಿ ಅಲೆಯಲ್ಲ ಸುನಾಮಿ ಶುರುವಾಗಿದೆ 25 ಸಾವಿರ ಮತಗಳ ಅಂತರದಿಂದ ಚರಂತಿಮಠರ ಗೆಲುವು ಖಚಿತ ಎಂದರು.

2028ರಲ್ಲಿ ಕಾಂಗ್ರೆಸ್ ನಿರ್ನಾಮ: ಶ್ರೀರಾಮುಲು

ಬಾಗಲಕೋಟೆ: ರಾಜ್ಯದಲ್ಲಿ ಕಾಂಗ್ರೆಸ್ ಅನ್ನು ಬೇರು ಸಮೇತ ಕಿತ್ತು ಹಾಕಲು ಜನ ತೀರ್ಮಾನಿಸಿದ್ದಾರೆ. 2028ರಲ್ಲಿ ಕಾಂಗ್ರೆಸ್ ನಿರ್ನಾಮವಾಗಲಿದೆ. ಬಾಗಲಕೋಟೆ ಮತ್ತು ದಾವಣಗೆರೆಯಲ್ಲಿ ಬಿಜೆಪಿ ಅಭ್ಯರ್ಥಿಗಳೇ ಗೆಲುವು ಸಾಧಿಸಲಿದ್ದಾರೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎರಡೂ ಉಪ ಚುನಾವಣೆಯಲ್ಲಿ ಬಿಜೆಪಿ ಗೆಲ್ಲಿಸಲು ಜನರೇ ತೀರ್ಮಾನ ಮಾಡಿದ್ದಾರೆ. ಇಂತಹ ಅವಕಾಶವನ್ನು ಜನರು ತಪ್ಪಿಸಿಕೊಳ್ಳಬಾರದು. ಒಂದು ವೇಳೆ ಕಾಂಗ್ರೆಸ್ ಗೆದ್ದರೆ ಮತ್ತೆ ಇವರ ನಾಟಕ ಎರಡು ವರ್ಷ ಮುಂದುವರಿಯುತ್ತದೆ. ಡಿನ್ನರ್ ಮತ್ತು ಲಂಚ್ ನಲ್ಲೇ ಸರ್ಕಾರ ಕಳೆಯುತ್ತಾರೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಳೆದ ಹತ್ತು ದಿನದಿಂದ ಪ್ರಚಾರ ಮಾಡ್ತಾ ಇದ್ದಾರೆ. ಅಭಿವೃದ್ಧಿ ನೋಡಿ ಮತ ಹಾಕಿ ಅಂತಾರೆ, ಗ್ಯಾರಂಟಿ ನೋಡಿ ಮತ ಹಾಕಿ ಅಂತಾರೆ. ಆದರೆ, ಜನ ಅಭಿವೃದ್ಧಿ ನೋಡಿ ಮತ ಹಾಕಲ್ಲ. ಏಕೆಂದರೆ ಏನೂ ಅಭಿವೃದ್ಧಿ ಮಾಡಿಲ್ಲ. ಎಲ್ಲದರ ದರ ಏರಿಕೆ ಮಾಡಿ ಬಡವರು ಬದುಕಲು ಆಗುತ್ತಿಲ್ಲ. ಇನ್ನು ಗ್ಯಾರಂಟಿಗಳನ್ನು ಸರಿಯಾಗಿ ಕೊಟ್ಟಿಲ್ಲ. ಹಾಗಾಗಿ ಗ್ಯಾರಂಟಿ ನೋಡಿಯೂ ಮತ ಹಾಕಲ್ಲ. ಇದೆಲ್ಲ ಆದ ನಂತರ ಜಾತಿ ನೋಡಿ ಮತ ಕೊಡಿ ಅಂತ ಹೊಸ ರಾಗ ತೆಗೆದಿದ್ದಾರೆ ಎಂದರು.

ಇಷ್ಟು ವರ್ಷದಲ್ಲಿ ಸರ್ಕಾರದ ಸಾಧನೆ ಏನೂ ಇಲ್ಲ. ಚುನಾವಣೆ ಬಂದಾಗ ಮಾತ್ರ ಗೃಹಲಕ್ಷ್ಮಿ ನೆನಪಾಗಿ ಖಾತೆಗೆ ಹಣ ಹಾಕುತ್ತಾರೆ. ಗೃಹಲಕ್ಷ್ಮಿಯಲ್ಲೂ ಐದು ಸಾವಿರ ಕೋಟಿ ಭ್ರಷ್ಟಾಚಾರ ಆಗಿದೆ ಎಂದರು.

ಅಕ್ಕಿ ಕೊಟ್ಟಿದ್ದೇವೆ ಅಂತಾರೆ. ಆದರೆ, ಸಿದ್ದರಾಮಯ್ಯ ಅವರೇ ನೀವು ನೀವು ಅಕ್ಕಿ ಕೊಟ್ಟಿಲ್ಲ, ನರೇಂದ್ರ ಮೋದಿ ಸರ್ಕಾರ ಕೊಟ್ಟಿದ್ದು. ಚೀಲಕ್ಕೆ ದಾರ ಕೊಟ್ಟು ಅಕ್ಕಿ ನಮ್ಮದೇ ಅಂತಿದ್ದಾರೆ. ರಾಜ್ಯ ಸರ್ಕಾರದ್ದು ಒಂದು ಕೆಜಿ ಇಲ್ಲ ಎಂದು ವಿವರಿಸಿದರು.

ಬಿಜೆಪಿ ಜಾತಿವಾದಿಗಳ ಪಕ್ಷ ಅಂತ ಸಿದ್ದರಾಮಯ್ಯ ಹೇಳುತ್ತಾರೆ. ಇವರು ಜಾತಿಗಳನ್ನು ರಾಜಕೀಯಕ್ಕೆ ಬಳಸುತ್ತಾರೆ. ಸಿದ್ದರಾಮಯ್ಯ ಅವರು ದಲಿತರ ವಿರೋಧಿ. ವಾಲ್ಮೀಕಿ ನಿಗಮದಲ್ಲಿ ಭ್ರಷ್ಟಾಚಾರ ನಡೆಸಿದರು. ಬಿಜೆಪಿ ದಲಿತರಿಗೆ ನೆರವು ನೀಡಿತ್ತು. ದಲಿತರನ್ನು ಕಂಡರೆ ಕಾಂಗ್ರೆಸ್‌ನವರಿಗೆ ಉರಿ ಎಂದರು.



ಲವ್ ಜಿಹಾದ್‌ಗೆ ಯತ್ನಿಸಿದ ಆರೋಪಿಗಳನ್ನು ಬಂಧಿಸಿ

ಹುಬ್ಬಳ್ಳಿ: ಹಿಂದು ಯುವತಿಯರ ಮೇಲೆ ಲೈಂಗಿಕ ದೌರ್ಜನ್ಯ ವೆಸಗಿ, ಲವ್ ಜಿಹಾದ್‌ಗೆ ಯತ್ನಿಸಿರುವ ಆರೋಪಿಗಳನ್ನು ಕಠಿಣ ಶಿಕ್ಷೆಗೆ ಒಳಪಡಿಸಬೇಕು ಎಂದು ಆಗ್ರಹಿಸಿ ಶ್ರೀರಾಮ ಸೇನೆ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮಂಗಳವಾರ ನವನಗರದ ಪೊಲೀಸ್ ಆಯುಕ್ತರ ಕಚೇರಿ ಎದುರು ಶ್ರೀರಾಮ ಸೇನೆ ಅಧ್ಯಕ್ಷ ಪ್ರಮೋದ ಮುತಾಲಿಕ್ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಲವ್ ಜಿಹಾದಿಗಳು ಹಾಗೂ ಆರೋಪಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಹಿಂದು ಕಾರ್ಯಕರ್ತರ ಮೇಲೆ ಹಾಕಿರುವ ಕೇಸ್ ಹಿಂಪಡೆಯಬೇಕು ಎಂದು ಆಗ್ರಹಿಸಿದರು. ಈ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಶ್ರೀರಾಮಸೇನೆ ಸಂಸ್ಥಾಪಕ ಅಧ್ಯಕ್ಷ ಪ್ರಮೋದ ಮುತಾಲಿಕ್, ನಮ್ಮ ಪೊಲೀಸರು ದಕ್ಷರಿದ್ದು, ಪ್ರಾಮಾಣಿಕ ತನಿಖೆ ನಡೆಸುತ್ತಾರೆ. ಆದರೆ, ಕಾಂಗ್ರೆಸ್ ಸರ್ಕಾರ ಅವರ ಕೈ ಕಟ್ಟಿ ಹಾಕುತ್ತಿದೆ. ಹೀಗಾಗಿ ಪ್ರಕರಣವನ್ನು ಎನ್‌ಐಎಗೆ ನೀಡಬೇಕು ಎಂದು ಒತ್ತಾಯಿಸಿದರು.

ಹಿಂದು ಯುವತಿ ರಕ್ಷಣೆಗೆ ನಿಂತ ಹಿಂದುಪರ ಕಾರ್ಯಕರ್ತರ ಮೇಲೆ ಹಾಕಿರುವ ಪ್ರಕರಣಗಳನ್ನು ಕೈಬಿಡಬೇಕು. ಇಲ್ಲಿದ್ದರೆ ಹುಬ್ಬಳ್ಳಿ ಬಂದ್ ಮಾಡಲಾಗುವುದು. ಆರೋಪಿ ಸಹೋದರಿ, ಅವಳ ಗಂಡನನ್ನು ಬಂಧಿಸಬೇಕು. ಎಲ್ಲಾ ಜಿಮ್‌ಗಳನ್ನು ಪರಿಶೀಲಿ ಕ್ರಮಬದ್ಧ ಹಾಗೂ ಮಹಿಳೆಯರಿಗೆ ಪ್ರತ್ಯೇಕ ಸಮಯ, ಟ್ರೈನರ್ ನೀಡಬೇಕು ಎಂದು ಆಗ್ರಹಿಸಿದರು. ಸಂತ್ರಸ್ತ ಕುಟುಂಬಗಳಿಗೆ ರಕ್ಷಣೆ ನೀಡಬೇಕು. ಹೋಟೆಲ್ ಉದ್ಯಮಿಯನ್ನು ಬಂಧಿಸಬೇಕು. ಮಹಿಳೆಯರ ಮೇಲೆ ಅತ್ಯಾಚಾರ, ಅಪಹರಣ, ಕೊಲೆ, ಲವ್ ಜಿಹಾದ್, ಅಶ್ಲೀಲ ವಿಡಿಯೋ ಇತ್ಯಾದಿಗಳ ಬಗ್ಗೆ ಸರ್ಕಾರ ಪ್ರತ್ಯೇಕ ಪೊಲೀಸ್ ತಂಡ ಹಾಗೂ ಠಾಣೆ ರಚನೆ ಮಾಡಬೇಕು. ಮಹಿಳಾ ಸಾಂತ್ವನ ಕೇಂದ್ರಗಳು ನಿಯಮಬದ್ಧವಾಗಿ ನಡೆಯುತ್ತಿಲ್ಲ, ಹೀಗಾಗಿ ತನಿಖೆಯಾಗಬೇಕು ಎಂದು ಒತ್ತಾಯಿಸಿದರು. ಈ ವೇಳೆ ಸತ್ಯಪ್ರಮೋದೇಂದ್ರ ಸರಸ್ವತಿ ಸ್ವಾಮೀಜಿ, ಹಿಂದುಪರ ಸಂಘಟನೆ ಮುಖಂಡರಾದ ಪ್ರವೀಣ ಮಾಳದಕರ್, ಅಣ್ಣಪ್ಪ ದಿವಟಗಿ, ಬಸವರಾಜ ಗೌಡರ, ಗುರನಗೌಡ ಪಾಟೀಲ, ಬಸವರಾಜ ದುರ್ಗದ ಸೇರಿದಂತೆ ಇತರರು ಇದ್ದರು.

ತೋಳದಾಳಿ: 12 ಕುರಿಗಳ ಸಾವು

ಕುರುಗೋಡು: ಸಮೀಪದ ಶಿರಿಗೇರಿ ವ್ಯಾಪ್ತಿಯ ಸಮೀಪದ ದಾಸಪುರ ಗ್ರಾಮದಲ್ಲಿ ಬಸವರಾಜ ಎನ್ನುವವರ ಕುರಿಗಳ ಹಿಂಡಿನ ಮೇಲೆ ಬೆಳ್ಳಂ ಬೆಳಿಗ್ಗೆ ತೋಳ ದಾಳಿಮಾಡಿ 12 ಕುರಿಗಳು ಸಾವನ್ನಪ್ಪಿವೆ. ಇರುವ 28 ಕುರಿಗಳಲ್ಲಿ ನಾಲ್ಕು ಐದು ಕುರಿಗಳು ಮಾತ್ರ ಬದುಕಿದ್ದು, 12 ಕುರಿ ಸತ್ತಿವೆ. ಇದರಲ್ಲಿ ಉಳಿದ ಕುರಿಗಳು ಗಾಯಗೊಂಡಿವೆ ಎಂದು ಕುರಿಗಳ ಸಾಗಣೆದಾರ ಬಸವರಾಜ ಮಾಹಿತಿ ನೀಡಿದರು. ಘಟನೆಯ ಕುರಿತು ಮಾಹಿತಿ ಪಡೆದ ಸ್ಥಳಕ್ಕೆ ಪಶು ವೈದ್ಯಕೀಯ ಇಲಾಖೆಯ ಪಶು ವೈದ್ಯಾಧಿಕಾರಿ ಡಾ.ಕುಬೇರ ಹಾಗೂ ಕಿರಿಯ ಪಶು ವೈದ್ಯಾಧಿಕಾರಿ ವಿಜಯಕಾಂತ್ ಇವರು ಪೊಲೀಸ್ ಇಲಾಖೆಯ ಎಚ್‌ಸಿ ಶರಣಪ್ಪ ಹಾಗೂ ಸಿಬ್ಬಂದಿಯವರೊಂದಿಗೆ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ಮಾಡಿ ಮಾಹಿತಿ ಪಡೆದುಕೊಂಡರು ಎಂದು ತಿಳಿದು ಬಂದಿದೆ.

ಕಾಂಗ್ರೆಸ್ಸಿಗೆ ತಕ್ಕ ಪಾಠ ಕಲಿಸಲು ಮಾದಿಗ ಸಮುದಾಯ ಪಣ

ಬೀಳಗಿ: ರಾಜ್ಯದಲ್ಲಿ ದಶಕಗಳ ಕಾಲದ ಬೇಡಿಕೆಯಾದ ಪರಿಶಿಷ್ಟ ಜಾತಿ ಒಳ ಮೀಸಲಾತಿಯನ್ನು ಜಾರಿಗೆ ತರಲು ವಿಳಂಬ ನೀತಿ ಅನುಸರಿಸುತ್ತಿರುವ ಕಾಂಗ್ರೆಸ್ ಸರ್ಕಾರಕ್ಕೆ ಈ ಉಪ ಚುನಾವಣೆಗಳಲ್ಲಿ ತಕ್ಕ ಪಾಠ ಕಲಿಸಬೇಕು ಎಂದು ಮಾದಿಗ ಮೀಸಲಾತಿ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಶಿವರಾಯ ಅಕ್ಕರಕಿ ಹೇಳಿದರು.



ಪಟ್ಟಣದ ಮಾರುತೇಶ್ವರ ದೇವಸ್ಥಾನದಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಅವರು, ದಲಿತ ಸಮುದಾಯಗಳ ಹಿತರಕ್ಷಣೆ ಮಾಡುವುದಾಗಿ ಭರವಸೆ ನೀಡಿದ್ದ ಸರ್ಕಾರ, ಈಗ ಒಳ ಮೀಸಲಾತಿ ವಿಚಾರದಲ್ಲಿ ದ್ವಂದ್ವ ನಿಲುವುಗಳಿಂದ ಮಾದಿಗ ಸಮುದಾಯಕ್ಕೆ ವಂಚಿಸುತ್ತಿದೆ. 2017ರ ಸುಪ್ರೀಂ ಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಒಳ ಮೀಸಲಾತಿ ಜಾರಿಗೆ ಸ್ಪಷ್ಟ ಅವಕಾಶವಿದ್ದರೂ, ರಾಜ್ಯ ಸರ್ಕಾರವು ಕಾನೂನು ಪ್ರಕ್ರಿಯೆಗಳ ನೆಪವೊಡ್ಡಿ ಕಾಲಹರಣ ಮಾಡುತ್ತಿದೆ ಎಂದು ಆರೋಪಿಸಿದರು. ದಶಕಗಳ ಕಾಲ ನಡೆದ ಹೋರಾಟದ ಫಲವಾಗಿ ಸಲ್ಲಿಕೆಯಾದ ನ್ಯಾ.ಎ.ಜೆ. ಸದಾಶಿವ ಆಯೋಗದ ವರದಿಯನ್ನು ಜಾರಿಗೆ ತರಲು ಸರ್ಕಾರ ಮೀನಮೇಷ ಎಣಿಸುತ್ತಿದೆ. ಮಾದಿಗ ಮತ್ತು ತತ್ಸಮಾನ ಉಪಜಾತಿಗಳನ್ನು ಕಡೆಗಣಿಸಿರುವ ಕಾಂಗ್ರೆಸ್ ಪಕ್ಷಕ್ಕೆ ಉಪಚುನಾವಣೆಯಲ್ಲಿ ಮತ ನೀಡುವುದಿಲ್ಲ, ಸಂವಿಧಾನದ 341 (3) ತಿದ್ದುಪಡಿಯ ಮೂಲಕ ಶೈಕ್ಷಣಿಕ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಸಮಾನ ಹಂಚಿಕೆಯಾಗಬೇಕು ಎಂಬುದು ಪ್ರಬಲ ಬೇಡಿಕೆಯಾಗಿದೆ ಎಂದರು.

ಮಾದಿಗ ಮೀಸಲಾತಿ ಹೋರಾಟ ಸಮಿತಿ ರಾಜ್ಯ ವಿಭಾಗಿಯ ಕಾರ್ಯಾದರ್ಶಿ ಸೋಮು ಚೂರಿ ಮಾತನಾಡಿ, ನಮ್ಮ ಹೋರಾಟವು ಕೇವಲ ಮೀಸಲಾತಿಗಷ್ಟೇ ಸೀಮಿತವಾಗಿರದೆ, ಸಮುದಾಯದ ಆತ್ಮಗೌರವದ ಸಂಕೇತವಾಗಿದೆ. ಒಳ ಮೀಸಲಾತಿ ಜಾರಿಯಾಗುವವರೆಗೂ ನಮ್ಮ ಹೋರಾಟ ನಿಲ್ಲದು ಎಂದು ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಿದ್ದು ಮಾದರ, ಶ್ರೀನಿವಾಸ ಕೊಪ್ಪರ, ಚಂದ್ರಶೇಖರ ಮತ್ತಿತರಿದ್ದರು.

ಶಿಕ್ಷಕಿ ಕೊಲೆ ಪ್ರಕರಣ: ಆರೋಪಿ ಬಂಧನ

ಕಲಬುರಗಿ: ಜಿಲ್ಲೆಯ ಕಮಲಾಪುರ ತಾಲೂಕಿನ ಕಲ್ಮೂಡ ಗ್ರಾಮದ ಬಳಿ ಅರೆಬೆಂದ ಸ್ಥಿತಿಯಲ್ಲಿ ಪತ್ತೆಯಾಗಿದ್ದ ಮಹಿಳೆಯ ಶವದ ರಹಸ್ಯವನ್ನು ಭೇದಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಹಣದ ವ್ಯವಹಾರದ ಹಿನ್ನೆಲೆ ಶಾಲಾ ಶಿಕ್ಷಕಿಯೊಬ್ಬರನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿ, ನಂತರ ಮೃತದೇಹ ಸುಟ್ಟು ಹಾಕಿದ್ದ ಭೀಕರ ಪ್ರಕರಣ ಬೆಳಕಿಗೆ ಬಂದಿದ್ದು, ಈ ಸಂಬಂಧ ಆರೋಪಿ ಆನಂದ ಎಂಬಾತನನ್ನು ಬಂಧಿಸಲಾಗಿದೆ.

ಘಟನೆಯ ವಿವರ: ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ವಂದರಖೇಡ ಗ್ರಾಮದ ಶಾಲೆಯಲ್ಲಿ ಶಿಕ್ಷಕಿಯಾಗಿದ್ದ ಜ್ಯೋತಿ ಕವಾಳೆ ಹಿರೇಮಠ (57) ಕೊಲೆಯಾದ ದುರ್ದೈವಿಯಾಗಿದ್ದು, ಕಲಬುರಗಿ ಮೂಲದ ಇವರು ವಾರಕ್ಕೊಮ್ಮೆ ತಮ್ಮ ಊರಿಗೆ ಬಂದು ಹೋಗುವ ಅಭ್ಯಾಸ ಹೊಂದಿದ್ದರು. ಈ ವೇಳೆ ಪರಿಚಯಸ್ಥನಾಗಿದ್ದ ಆರೋಪಿ ಆನಂದ ಎಂಬಾತ ಜ್ಯೋತಿ ಅವರಿಂದ ಹಂತ ಹಂತವಾಗಿ ಸುಮಾರು 14 ಲಕ್ಷ ರೂ.ಹಣವನ್ನು ಸಾಲವಾಗಿ ಪಡೆದಿದ್ದ ಎನ್ನಲಾಗಿದೆ.

ಕೊಲೆಗೆ ಕಾರಣವಾದ ರೂ.14 ಲಕ್ಷ: ಕಳೆದ ಕೆಲವು ದಿನಗಳಿಂದ ಶಿಕ್ಷಕಿ ಜ್ಯೋತಿ ಅವರು ತಾನು ನೀಡಿದ್ದ 14 ಲಕ್ಷ ರೂಪಾಯಿ ಹಣವನ್ನು ವಾಪಸ್ ನೀಡುವಂತೆ ಆನಂದಗೆ ಒತ್ತಾಯಿಸುತ್ತಿದ್ದರು. ಹಣ ನೀಡಲು ಮನಸ್ಸಿಲ್ಲದ ಆರೋಪಿಯು, ಜ್ಯೋತಿ ಅವರನ್ನು ಶಾಶ್ವತವಾಗಿ ಮುಗಿಸಲು ಸಂಚು ರೂಪಿಸಿದ್ದನು. ಕಲಬುರಗಿಯಿಂದ ಬೀದರ್‌ಗೆ ವಾಪಸ್ ತೆರಳುತ್ತಿದ್ದ ಮಾರ್ಗಮಧ್ಯೆ ಶಿಕ್ಷಕಿಯನ್ನು ತಡೆದ ಆರೋಪಿ, ಮಾರಕಾಸ್ತ್ರಗಳಿಂದ ಬರ್ಬರವಾಗಿ ಕೊಚ್ಚಿ ಕೊಲೆ ಮಾಡಿದ್ದಾನೆ.

ಶಿಕ್ಷಕಿ ಚಲನವಲನ ಮೇಲೆ ಕಣ್ಣು

ಶಿಕ್ಷಕಿ ಜ್ಯೋತಿ ಅವರು ಕಲಬುರಗಿಯಿಂದ ಬೀದರ್‌ಗೆ ಪ್ರಯಾಣಿಸುವ ಸಮಯವನ್ನೇ ಕಾದು ಕುಳಿತಿದ್ದ ಆರೋಪಿ, ಅತ್ಯಂತ ಯೋಜಿತವಾಗಿ ಈ ಕೃತ್ಯ ಎಸಗಿದ್ದಾನೆ. ಇಡೀ ದೇಹ ಸುಟ್ಟು ಹೋಗಿದ್ದರೂ ಪೊಲೀಸರ ತಾಂತ್ರಿಕ ತನಿಖೆಯ ಮುಂದೆ ಆರೋಪಿಯ ಆಟ ನಡೆಯದೆ ಇದೀಗ ಸೆರೆಮನೆಗೆ ಸೇರಿದ್ದಾನೆ.





ಬಳಿಕ ಕಮಲಾಪುರ ತಾಲೂಕಿನ ಕಲ್ಮೂಡ ಗ್ರಾಮದ ನಿರ್ಜನ ಪ್ರದೇಶಕ್ಕೆ ಮೃತದೇಹವನ್ನು ಸಾಗಿಸಿ, ಸಾಕ್ಷ್ಯ ನಾಶಪಡಿಸುವ ಉದ್ದೇಶದಿಂದ ಬೆಂಕಿ ಹಚ್ಚಿ ಸುಟ್ಟು ಹಾಕಿದ್ದಾನೆ.

ಪೊಲೀಸರ ಚಾಣಾಕ್ಷ ತನಿಖೆ: ಕಲ್ಮೂಡ ಬಳಿ ಕೇವಲ ಕಾಲುಗಳು ಮಾತ್ರ ಉಳಿದು ಮಿಕ್ಕ ಭಾಗ ಸುಟ್ಟು ಕರಕಲಾಗಿದ್ದ ಸ್ಥಿತಿಯಲ್ಲಿ ಅರೆಬೆಂದ ಮೃತದೇಹ ಪತ್ತೆಯಾಗಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾ ಪೊಲೀಸ್ ಅಧೀಕ್ಷಕರು ಶ್ವಾನದಳ ಮತ್ತು ಬೆರಳಚ್ಚು ತಜ್ಞರೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ತನಿಖೆ ಆರಂಭಿಸಿದ್ದರು. ಕಮಲಾಪುರ ಠಾಣೆಯಲ್ಲಿ ದಾಖಲಾಗಿದ್ದ ಅಪರಿಚಿತ ಶವದ ಪ್ರಕರಣವನ್ನು ಬೆನ್ನತ್ತಿದ ಪೊಲೀಸರು, ನಾಪತ್ತೆಯಾದವರ ಮಾಹಿತಿ ಮತ್ತು ಮೊಬೈಲ್ ಕರೆಗಳ ಆಧಾರದ ಮೇಲೆ ತನಿಖೆ ನಡೆಸಿ ಆರೋಪಿಯನ್ನು ಹೆಡೆಮುರಿ ಕಟ್ಟಿದ್ದಾರೆ.

ಸದ್ಯ ಆರೋಪಿ ಆನಂದ್ ಪೊಲೀಸ್ ವಶದಲ್ಲಿದ್ದು, ಕೃತ್ಯಕ್ಕೆ ಬಳಸಿದ ಮಾರಕಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಹಣದ ವ್ಯಾಮೋಹಕ್ಕೆ ಅಮಾಯಕ ಶಿಕ್ಷಕಿಯೊಬ್ಬರು ಬಲಿಯಾಗಿರುವುದು ಜಿಲ್ಲೆಯಲ್ಲಿ ಸಂಚಲನ ಮೂಡಿಸಿದೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಕಡ್ಲಿ (ಕೆಂಪು)	1,511	5,359
ಕಡ್ಲಿ (ಬಿಳಿ)	5,409	5,590
ಉದ್ದು	5,811	7,029
ಹೆಸರು	1,312	1,312
ಹುರಳಿ	2,614	2,614
ಜೋಳ	1,429	4,201
ಅಲಸಂಧಿ	2,101	5,413
ಗೋವಿನಜೋಳ	1,741	1,741
ಸಾಸವಿ	5,129	5,229
ಕುಸುಬೆ	5,375	5,375
ಸೋಯಾಬಿನ್	5,210	5,579
ತೊಗರಿ	3,429	4,129
ಗೋಧಿ	1,610	4,102
ಶೇಂಗಾ	3,510	5,310

ಗಾಂಜಾ ಸೇವನೆ: ಯುವಕನ ಬಂಧನ

ಶಿರಸಿ: ಗಾಂಜಾ ಮಾದಕ ವಸ್ತು ಸೇವನೆ ಮಾಡಿದ್ದ ವ್ಯಕ್ತಿಯೋರ್ವನನ್ನು ವೈದ್ಯಕೀಯ ಪರೀಕ್ಷೆಯ ವರದಿಯ ಆಧಾರದ ಮೇಲೆ ಶಿರಸಿ ನಗರ ಠಾಣೆಯ ಪೊಲೀಸರು ಬಂಧಿಸಿ ಪ್ರಕರಣ ದಾಖಲಿಸಿದ ಘಟನೆ ನಡೆದಿದೆ.

ನಗರದ ಕಸ್ತೂರಬಾ ನಗರದ ನಿವಾಸಿ, 23 ವರ್ಷದ ಚಾಲಕ ಸಾಹಿಲ್ ಸಮೀರ್ ಖಾನ್ ಬಂಧಿತ ಆರೋಪಿಯಾಗಿದ್ದಾನೆ. ಶಿರಸಿ ನಗರದ ಕ್ಯಾಪ್ಟನ್ ಕ್ಯಾಂಪಸ್ ಕಡೆಗೆ ಹೋಗುವ ಕಚ್ಚಾ ರಸ್ತೆಯಲ್ಲಿ ಈತ ಅನುಮಾನಾಸ್ಪದವಾಗಿ ಓಡಾಡುತ್ತಿದ್ದಾಗ ಪೊಲೀಸರು ವಶಕ್ಕೆ ಪಡೆದಿದ್ದರು. ಈ ವೇಳೆ ಆತ ಗಾಂಜಾ ಸೇವಿಸಿರುವ ಸಂಶಯದ ಮೇಲೆ ನಗರದ ಪಂಡಿತ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ, ಗಾಂಜಾ ಸೇವಿಸಿರುವುದು ದೃಢಪಟ್ಟಿದೆ. ಈ ಹಿನ್ನಲೆಯಲ್ಲಿ ಶಿರಸಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಈ ಯಶಸ್ವಿ ಕಾರ್ಯಾಚರಣೆಯು ಉತ್ತರ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್ ಐಪಿಎಸ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಜಿ.ಕೃಷ್ಣಮೂರ್ತಿ, ಶಿರಸಿ ಉಪವಿಭಾಗದ ಡಿಎಸ್‌ಪಿ ಗೀತಾ ಪಾಟೀಲ್ ಹಾಗೂ ವೃತ್ತ ನಿರೀಕ್ಷಕ ಶಶಿಕಾಂತ ವರ್ಮಾ ಅವರ ಮಾರ್ಗದರ್ಶನದಲ್ಲಿ ನಡೆದಿದೆ. ಶಿರಸಿ ನಗರ ಠಾಣೆಯ ಪಿಎಸ್‌ಐ ನರಸಿಂಹಲು ಅವರ ನೇತೃತ್ವದ ತಂಡದಲ್ಲಿ ಸಿಬ್ಬಂದಿಯಾದ ಹನುಮಂತ್ ಕಬಾಡಿ, ರಾಮಯ್ಯ ಪೂಜಾರಿ, ಹನುಮಂತ ಮಾಕಾಪುರ್, ಸದ್ದಾಂ ಹುಸೇನ್, ಸುನಿಲ್ ಮತ್ತು ರಾಜಶೇಖರ್ ಪಾಲ್ಗೊಂಡಿದ್ದರು. ಮಾದಕ ವಸ್ತುಗಳ ನಿಯಂತ್ರಣದ ನಿಟ್ಟಿನಲ್ಲಿ ಪೊಲೀಸರು ತಮ್ಮ ಕಾರ್ಯಾಚರಣೆಯನ್ನು ತೀವ್ರಗೊಳಿಸಿದ್ದಾರೆ.

ಗ್ಯಾಸ್ ಏಜೆನ್ಸಿ ಸಿಬ್ಬಂದಿಗೆ ಧರ್ಮದೇಟು

ಬೆಳಗಾವಿ: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಬಿಸಿಯಿಂದ ಮೊದಲೇ ಜನತೆಗೆ ತಲೆ ಕೆಟ್ಟಿದೆ. ಅದರ ನಡುವೆ ಇಲ್ಲೊಬ್ಬ ಗ್ಯಾಸ್ ಏಜೆನ್ಸಿ ಸಿಬ್ಬಂದಿ ಮದ್ಯ ಸೇವಿಸಿ ಕಚೇರಿಯಲ್ಲೇ ಮಲಗಿದ ಹಿನ್ನೆಲೆ ಸಾರ್ವಜನಿಕರು ಧರ್ಮದೇಟು ನೀಡಿರುವ ಘಟನೆ ನಡೆದಿದೆ. ಜಿಲ್ಲೆಯ ಖಾನಾಪೂರ ತಾಲೂಕಿನ ಕೇರವಾಡ ಗುಂಡೆನಟ್ಟಿ ಗ್ರಾಮದಲ್ಲಿ ಇರುವ ಗ್ಯಾಸ್ ಸಿಲಿಂಡರ್ ಕಚೇರಿಯಲ್ಲಿ ಸಾರಾಯಿ ಕುಡಿದು ಕಚೇರಿಯಲ್ಲೇ ಸಿಬ್ಬಂದಿ ಮಲಗಿದ್ದು, ಜನ ಪರದಾಟ ನಡೆಸಿದ್ದಾರೆ. ಈ ವೇಳೆ ಸಾರ್ವಜನಿಕರು ಧರ್ಮದೇಟು ನೀಡಿದ್ದಾರೆ. ಕಳೆದ ಮೂರ್ನಾಲ್ಕು ದಿನಗಳಿಂದ ಗ್ಯಾಸ್ ಇಲ್ಲ ಎಂದು ಜನರನ್ನು ವಾಪಸ್ ಕಳುಹಿಸುತ್ತಿದ್ದಾನೆ. ಕೇಳಿದರೆ ಉಡಾಫೆ ಉತ್ತರ ಕೊಡುತ್ತಿದ್ದಾನೆ ಎಂದು ಗ್ರಾಮಸ್ಥರ ಆಕ್ರೋಶ ಹೊರ ಹಾಕಿ ಗ್ಯಾಸ್ ಏಜೆನ್ಸಿಯ ವಿರುದ್ಧ ಅಸಮಾಧಾನ ಹೊರ ಹಾಕಿದರು. ನಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ಸಿಲಿಂಡರ್ ಗ್ಯಾಸ್ ತೆಗೆದುಕೊಳ್ಳುವುದಕ್ಕೆ ಬಂದರೆ ಇಲ್ಲಿರುವ ಗ್ಯಾಸ್ ಏಜೆನ್ಸಿ ಸಿಬ್ಬಂದಿಯೊಬ್ಬ ಮದ್ಯ ಸೇವಿಸಿ ಮಲಗಿದ್ದಾನೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿ ಮೊದಲು ಆ ಸಿಬ್ಬಂದಿಯನ್ನು ಕೆಲಸದಿಂದ ತೆಗೆದು ಹಾಕಿ ಎಂದು ಪಟ್ಟು ಹಿಡಿದರು.

ರಾಜ್ಯದ ಹಲವೆಡೆ ಲೋಕಾ ದಾಳಿ

ಪುಟ ೧➔ ಸುಶೀಲಮ್ಮರ ಮದೇಹಳ್ಳಿ ರಸ್ತೆ ನಿವಾಸ ಹಾಗೂ ಹಿರಿಯೂರಿನ ಯಾರದಕಟ್ಟೆ ತೋಟದ ಮನೆ ಮೇಲೆ ದಾಳಿ ನಡೆಸಿದ್ದಾರೆ.

ಅಕ್ರಮ ಆಸ್ತಿ ಗಳಿಕೆ ಹಿನ್ನೆಲೆಯಲ್ಲಿ ಲೋಕಾಯುಕ್ತ ವಾಸುದೇವ್ ರಾಮ್ ಹಾಗೂ ಮೃತ್ಯುಂಜಯ ನೇತೃತ್ವದಲ್ಲಿ ಆಸಿಸ್ಟೆಂಟ್ ಅಕೌಂಟೆಂಟ್ ಮನೆ ಮೇಲೆ ದಾಳಿ ನಡೆಸಿ ದಾಖಲೆ ಪರಿಶೀಲಿಸುತ್ತಿದ್ದಾರೆ.

ಬಳ್ಳಾರಿಯಲ್ಲೂ ಲೋಕಾಯುಕ್ತ ಅಧಿಕಾರಿಗಳು ದಾಳಿ ಮಾಡಿದ್ದಾರೆ. ಮೀನುಗಾರಿಕ ಇಲಾಖೆ ಸಹಾಯಕ ನಿರ್ದೇಶಕ ಶಿವಣ್ಣ ಮನೆ ಮತ್ತು ಕಚೇರಿ ಮೇಲೆ ದಾಳಿ ಮಾಡಲಾಗಿದೆ. ಬಳ್ಳಾರಿ ನಗರದ ಸಿದ್ಧಾರ್ಥ ನಗರದಲ್ಲಿರುವ ಮನೆ ಸೇರಿದಂತೆ ಒಟ್ಟು ನಾಲ್ಕು ಕಡೆ ದಾಳಿ ನಡೆದಿದೆ. ಆದಾಯಕ್ಕಿಂತ ಹೆಚ್ಚಿನ ಆಸ್ತಿ ಗಳಿಕೆ ಬಗ್ಗೆ ಆರೋಪ ಕೇಳಿ ಬಂದಿದ್ದ ಹಿನ್ನೆಲೆಯಲ್ಲಿ ದಾಳಿ ಮಾಡಲಾಗಿದೆ. ಶಿವಣ್ಣ ನಿವಾಸದಲ್ಲಿ ಲೋಕಾಯುಕ್ತ ಅಧಿಕಾರಿಗಳು ದಾಖಲೆಗಳ ಪರಿಶೀಲನೆ ಮಾಡ್ತಿದ್ದಾರೆ.

ಶಿವಮೊಗ್ಗದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಶೋಭಾ ಅವರ ಕಚೇರಿ ಹಾಗೂ ನಿವಾಸದ ಮೇಲೆ ಲೋಕಾಯುಕ್ತ ಅಧಿಕಾರಿಗಳ ದಾಳಿ ನಡೆದಿದೆ.

ಶಿಕಾರಿಪುರ ಬಳಿ ತರಲಘಟ್ಟ ನಿವಾಸ, ಸಾಗರ ತಾಲೂಕಿನ ಆನಂದಪುರ ಬಳಿ ಆಚಾಪುರ ಶಾಲೆ-ಕಚೇರಿ ಹಾಗೂ ಚಾಲುಕ್ಯ ನಗರದ ರಾಘವೇಂದ್ರ, ಅವರ ನಿವಾಸ ಸೇರಿ 3-4 ಸ್ಥಳಗಳಲ್ಲಿ ಲೋಕಾಯುಕ್ತ ಅಧಿಕಾರಿಗಳು ಏಕಕಾಲದಲ್ಲಿ ದಾಳಿ ನಡೆಸಿದ್ದಾರೆ. ಆದಾಯಕ್ಕಿಂತ ಹೆಚ್ಚಿನ ಸಂಪತ್ತು ಗಳಿಸಿದ ದೂರಿನ ಮೇರೆಗೆ ದಾಖಲೆಗಳ ಪರಿಶೀಲನೆ ಮುಂದುವರೆದಿದೆ. ಕಚೇರಿ ಹಾಗೂ ನಿವಾಸಗಳಲ್ಲಿ ಆದಾಯ-ಆಸ್ತಿ ವಿವರಗಳು, ಬ್ಯಾಂಕ್ ದಾಖಲೆಗಳು, ಖರೀದಿ-ಮಾರಾಟ ಪತ್ರಗಳನ್ನು ಅಧಿಕಾರಿಗಳು ತೀವ್ರವಾಗಿ ಪರಿಶೀಲಿಸುತ್ತಿವೆ. ಶೋಭಾ ಅವರ ವಿರುದ್ಧ ಬಂದ ದೂರುಗಳ ಹಿನ್ನೆಲೆಯಲ್ಲಿ ಈ ಪರಿಶೀಲನೆ ಇನ್ನೂ ಗಂಭೀರವಾಗಿ ನಡೆಯುತ್ತಿದೆ.

ಇನ್ನು ಬೆಳಗಾವಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಎಇಇ ಅಜಯ್ ಸಿಂಗ್ ರಜಪೂತ್ ಮನೆ ಮೇಲೆ ಲೋಕಾಯುಕ್ತ ಅಧಿಕಾರಿಗಳ ದಾಳಿ ನಡೆಸಿದ್ದಾರೆ. ಬೆಳಗಾವಿ ಆಂಜನೇಯ ನಗರ, ಅಥಣಿ ಹಾಗೂ ಹುಕ್ಕೇರಿ ಸೇರಿದಂತೆ ಮೂರು ಸ್ಥಳಗಳಲ್ಲಿಯೂ ಏಕಕಾಲದಲ್ಲಿ ದಾಳಿ ನಡೆದಿದೆ.

ಲೋಕಾಯುಕ್ತ ಪೊಲೀಸರು ಮಂಡ್ಯ ಲೋಕೋಪಯೋಗಿ ಇಲಾಖೆಯ ಎಇಇ ರೇವಣ್ಣ ವಿರುದ್ಧ ಆದಾಯಕ್ಕೂ ಮೀರಿ ಆಸ್ತಿ ಗಳಿಕೆ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ದಾಳಿ ನಡೆಸಿದ್ದಾರೆ. ಮೈಸೂರಿನ ಕಚೇರಿ ಹಾಗೂ ಮಂಡ್ಯದ ಎರಡು ನಿವಾಸಗಳಲ್ಲಿ ಲೋಕಾಯುಕ್ತ ಎಸ್‌ಪಿ ಟಿ.ಜೆ. ಉದೇಶ್ ಮಾರ್ಗದರ್ಶನದಲ್ಲಿ ಡಿಎಸ್‌ಪಿ ಶೈಲೇಂದ್ರ ಮತ್ತು ವೆಂಕಟೇಶ್ ನೇತೃತ್ವದಲ್ಲಿ ಇನ್‌ಸ್ಪೆಕ್ಟರ್ ಶಶಿಕುಮಾರ್ ಸೇರಿದಂತೆ ಅಧಿಕಾರಿಗಳ ತಂಡ ಕಾರ್ಯಾಚರಣೆ ನಡೆಸಿದೆ. ಸದ್ಯ ಅಧಿಕಾರಿಗಳು ಆಸ್ತಿ ವಿವರಗಳನ್ನು ಪರಿಶೀಲನೆ ನಡೆಸುತ್ತಿದ್ದಾರೆ.

ಕೋಟ್ಯಂತರ ಮೌಲ್ಯದ ಆಸ್ತಿ ಪತ್ತೆ: ಮಂಗಳೂರು: ಅಕ್ರಮ ಆಸ್ತಿ ಗಳಿಕೆ ಆರೋಪ ಸಂಬಂಧ ಲೋಕಾಯುಕ್ತ ಪೊಲೀಸರು ಏಕಕಾಲದಲ್ಲಿ ಮಂಗಳೂರಿನ ಪ್ರಾದೇಶಿಕ ಉಪ ಡ್ರಗ್ ಕಂಟ್ರೋಲರ್ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಹಾಯಕ ಡ್ರಗ್ ಕಂಟ್ರೋಲರ್ ಬಾಬು ಬಿ.ಎನ್ ಅವರ ಮನೆ ಹಾಗೂ ವಿವಿಧ ಸ್ಥಳಗಳಲ್ಲಿ ದಾಳಿ ನಡೆಸಿದ್ದು ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿ ಪತ್ತೆಯಾಗಿದೆ.

ಪೊಲೀಸ್ ವರಿಷ್ಠಾಧಿಕಾರಿ ಬಿ.ಪಿ. ದಿನೇಶ್ ಕುಮಾರ್ ಅವರ ಮೇಲ್ವಿಚಾರಣೆಯಲ್ಲಿ, ಆರು ಲೋಕಾಯುಕ್ತ ತಂಡಗಳು ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ಪಟ್ಟಣ, ಬೆಂಗಳೂರು ನಗರ ಮತ್ತು ಮಂಗಳೂರಿನಲ್ಲಿರುವ ಆರೋಪಿಗಳಿಗೆ ಸಂಬಂಧಿಸಿದ ಆಸ್ತಿಗಳ ಮೇಲೆ ದಾಳಿ ನಡೆಸಿವೆ. ದಾಳಿಯಲ್ಲಿ ಬಾಬು ಬಿ.ಎನ್. ಅವರಿಗೆ ಸಂಬಂಧಿಸಿದ ವಸತಿ ಮನೆಗಳು, ವಾಣಿಜ್ಯ ಸಂಸ್ಥೆಗಳು, ಫ್ಲಾಟ್‌ಗಳು ಮತ್ತು ಕಚೇರಿಗಳು ಸೇರಿವೆ.

ಶೋಧ ವೇಳೆ ಆದಾಯಕ್ಕಿಂತ ಹೆಚ್ಚುವರಿಯಾಗಿ ಸುಮಾರು 3.37 ಕೋಟಿ ರೂ. ಮೌಲ್ಯದ ಚರಾಸ್ತಿ ಮತ್ತು ಸ್ಥಿರ ಆಸ್ತಿಗಳನ್ನು ಪತ್ತೆಹಚ್ಚಿದ್ದಾರೆ ಎಂದು ಹೇಳಲಾಗುತ್ತದೆ. ಬೆಂಗಳೂರಿನ ನಿವಾಸದಲ್ಲಿ, ಚಿನ್ನ ಮತ್ತು ಬೆಳ್ಳಿ ಆಭರಣಗಳ ಜೊತೆಗೆ 23.64 ಲಕ್ಷ ರೂ. ನಗದು ಸಹ ಪತ್ತೆಯಾಗಿದೆ. ಭ್ರಷ್ಟಾಚಾರ ತಡೆ ಕಾಯ್ದೆಯ ವಿವಿಧ ನಿಬಂಧನೆಗಳ ಅಡಿಯಲ್ಲಿ ಲೋಕಾಯುಕ್ತ ಪೊಲೀಸರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಗ್ಯಾರಂಟಿ ತಡೆಗೆ ಪ್ರಯತ್ನ: ಡಿಸಿಎಂ

ದಾವಣಗೆರೆ: ನಮ್ಮ ಗ್ಯಾರಂಟಿ ಕಾರ್ಯಕ್ರಮಗಳನ್ನು ಟೀಕೆ ಮಾಡಿದವರೆ ಇಂದು ಚುನಾವಣೆಗಳಲ್ಲಿ ಅವುಗಳನ್ನು ಅಳವಡಿಸಿಕೊಂಡಿದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚುನಾವಣೆ ನಡೆಯುತ್ತಿರುವ ವೇಳೆಯಲ್ಲಿ ಗ್ಯಾರಂಟಿಗಳಿಗೆಹಣಬಿಡುಗಡೆಮಾಡದಂತೆ ಚುನಾವಣಾ ಆಯೋಗಕ್ಕೆ ಬಿಜೆಪಿ ಪತ್ರ ಬರೆದಿದೆ, ದೂರು ನೀಡಿದೆ. ಇದರೊಂದಿಗೆ ಬಿಜೆಪಿ ಮುಖವಾಡ ಕಳಚಿದೆ ಎಂದರು. ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಲು ದೊಡ್ಡ ಷಡ್ಯಂತ್ರ ಮಾಡುತ್ತಿದ್ದಾರೆ. ನಾವು ಕಾನೂನಿನಡಿಕೆಲಸಮಾಡುತ್ತಿದ್ದೇವೆ. ಕಳೆದತಿಂಗಳಿನದ್ದು, ಈ ತಿಂಗಳಿನಲ್ಲಿ ಹಣ ನೀಡಬಾರದೆಂದುಕೋರ್ಟ್‌ಗೆ ಹಾಕಿದ್ದು ಖಂಡನೀಯ. ಇದು ರೆಗ್ಯುಲರ್ ಸ್ಕೀಂ ಆಗಿದ್ದು, ಎಲ್ಲರಿಗೂ ಹಣ ತಲುಪಿದೆ. ಜನರಲ್ಲಿ ಆತಂಕ ಮೂಡಿಸಿ, ಭಯದ ವಾತಾವರಣ ಉಂಟು ಮಾಡುವ ಕೆಲಸವನ್ನು ಬಿಜೆಪಿಯವರು ಮಾಡುತ್ತಿದ್ದಾರೆ ಎಂದು ಅವರು ಆರೋಪಿಸಿದರು. ಚುನಾವಣಾ ಆಯೋಗಕ್ಕೆ ಬಿಜೆಪಿ ನೀಡಿದ ದೂರಿನ ಪ್ರತಿಯನ್ನು ಬಿಡುಗಡೆ ಮಾಡಿದ ಡಿಸಿಎಂ ಡಿ.ಕೆ.ಶಿವಕುಮಾರ, ಚುನಾವಣಾ ಆಯೋಗಕ್ಕೆ ನಾವು ಉತ್ತರ ಕೊಟ್ಟಿದ್ದೇವೆ. ಕೋರ್ಟ್‌ಗೂ ಹಾಕಿದ್ದರು, ಅಲ್ಲಿ ನೋಟೀಸ್ ಆರ್ಡರ್ ಮಾಡಿದ್ದಾರೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬರುವುದಿಲ್ಲ. ಇಲ್ಲಿ ಕೆಲಸವೂ ನಿಲ್ಲುವುದಿಲ್ಲ. 58 ಸಾವಿರ ಫಲಾನುಭವಿಗಳ ಕುಟುಬಗಳು ಗ್ಯಾರಂಟಿಗೆ ಅಡ್ಡಿ ಪಡಿಸುತ್ತಿರುವ ಬಿಜೆಪಿಗೆ ಉಪ ಚುನಾವಣೆಯಲ್ಲಿ ತಕ್ಕ ಉತ್ತರ ನೀಡಬೇಕು ಎಂದು ಕರೆ ನೀಡಿದರು. ಸುಮಾರು 1 ಕೋಟಿಗೂ ಅಧಿಕ ಫಲಾನುಭವಿಗಳು ಬಿಜೆಪಿ ವರ್ತನೆಯನ್ನು ಅರಿಯಬೇಕು. ಬಿಜೆಪಿಯ ನಿಜವಾದ ಮುಖವಾಡ ಜನರಿಗೆ ತಿಳಿಸಬೇಕು. ಕೇಂದ್ರ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣದಲ್ಲಿ ಅತಿ ಹೆಚ್ಚು ಮತದಾನ ಮಾಡುವ ಮೂಲಕ ಬಿಜೆಪಿ ತಕ್ಕ ಪಾಠ ಕಲಿಸಬೇಕು. ಇಲ್ಲಿ ದಕ್ಷಿಣದಲ್ಲಿ ಸಮರ್ಥ ಶಾಮನೂರು ಹಾಗೂ ಬಾಗಲಕೋಟೆಯಲ್ಲಿ ಉಮೇಶ ಮೇಟಿಗೆ ಗೆಲ್ಲಿಸಬೇಕು ಎಂದು ಡಿ.ಕೆ.ಶಿವಕುಮಾರ ಮನವಿ ಮಾಡಿದರು.

ಬಿಜೆಪಿಗೆ ಉಪ ಚುನಾವಣೆಯಲ್ಲಿ ತಕ್ಕ ಉತ್ತರ: ಡಿ.ಕೆ. ಶಿವಕುಮಾರ್

ತೆಲಂಗಾಣ ಸಚಿವ, ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮಹಮ್ಮದ್ ಅಜರುದ್ದೀನ್, ಜಿಲ್ಲಾ ಉಸ್ತುವಾರಿ ಸಚಿವ ಮಲ್ಲಿಕಾರ್ಜುನ ಇದ್ದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ನಾನು, ಮೋದಿ ಸೇರಿದರೆ ಅಸಾಧ್ಯವಾದ ಯಾವುದನ್ನೂ ಸಾಧಿಸುವೆವು
– ಟ್ರಂಪ್

-ಅಸಾಧ್ಯವಾದುದನ್ನು ಸಾಧಿಸುವುದಕ್ಕಿಂತಲೂ ಸಾಧುವಾದದನ್ನು ಸಾಧಿಸುವ ಕಡೆ ಗಮನವಿರಲಿ ಎಂಬುದು ನಮ್ಮದೊಂದು ಕಿವಿಮಾತು!

ದಿನ ಭವಿಷ್ಯ

ಮೇಷ
ವೃತ್ತಿಯಲ್ಲಿ ಏರುಪೇರಿನ ಪರಿಸ್ಥಿತಿ. ಪ್ರಯತ್ನ ವಿಫಲವಾದರೂ ಕೈಬಿಡಬೇಡಿ. ಕುಟುಂಬದಲ್ಲಿ ಆರೋಗ್ಯ ಸಮಸ್ಯೆ. ಖರ್ಚು ಹೆಚ್ಚಳ.

ವೃಷಭ
ಸಹನೆ ಕೆಡಿಸುವ ಬೆಳವಣಿಗೆ. ಆದರೂ ತಾಳ್ಮೆಯಿಂದ ವರ್ತಿಸಿ. ನಿಮ್ಮ ಕಾರ್ಯಕ್ಕೆ ಕೆಲವರ ಅಡ್ಡಿ. ಕೌಟುಂಬಿಕ ಬಿಕ್ಕಟ್ಟು ಬೆಳೆಸದಿರಿ. ಪರಿಹರಿಸಿ.

ಮಿಥುನ
ವೃತ್ತಿಯಲ್ಲಿ ಉತ್ತೇಜನಕಾರಿ ಪರಿಸ್ಥಿತಿ. ಬಂಧುಗಳ ಜತೆ ವಿನಯದಿಂದ ವರ್ತಿಸಿ. ಶೇರು ಹೂಡಿಕೆ ಇಂದು ಬೇಡ, ಕಾದು ನೋಡಿ.

ಕಟಕ
ನಿಮ್ಮ ನಿರೀಕ್ಷೆ ಇಂದು ಸಾಕಾರವಾಗದು. ನಿರಾಶೆ ಉಂಟಾದೀತು. ಅತಿ ಒತ್ತಡ ಆರೋಗ್ಯದ ಮೇಲೆ ಪರಿಣಾಮ. ಇತರರಿಗಾಗಿ ಹಣ ವ್ಯಯಿಸುವ ಪ್ರಸಂಗ.

ಸಿಂಹ
ಸುಲಭ ಕೆಲಸವೂ ಕಠಿಣವಾದೀತು. ಒತ್ತಡ ಹೆಚ್ಚಳ. ಮನೆಯವರ ಜತೆ ಸಹನೆಯಿಂದ ವರ್ತಿಸಿ. ಧನವ್ಯಯ ನಿಯಂತ್ರಣ. ಇದರಿಂದ ತುಸು ನಿರಾಳತೆ.

ಕನ್ಯಾ
ಇತರರ ಜತೆ ವ್ಯವಹಾರದಲ್ಲಿ ನಿಮ್ಮ ನಿಲುವನ್ನು ಸ್ಪಷ್ಟಪಡಿಸಿ. ನಿಮ್ಮ ಬಗ್ಗೆ ತಪ್ಪಭಿಪ್ರಾಯ ಮೂಡದಂತೆ ಎಚ್ಚರ ವಹಿಸಿ. ಧನಪ್ರಾಪ್ತಿ.

ತುಲಾ
ಮಾನಸಿಕ ಮತ್ತು ಭಾವನಾತ್ಮಕ ದೃಢತೆ ಕಾಯ್ದುಕೊಳ್ಳಿ. ಏಕೆಂದರೆ ಅಂತಹ ಪರಿಸ್ಥಿತಿ ಇಂದು ನಿರ್ಮಾಣವಾದೀತು. ವೃತ್ತಿಯಲ್ಲಿ ಉನ್ನತಿ.

ವೃಶ್ಚಿಕ
ಎಲ್ಲರ ಗಮನ ಸೆಳೆಯುವ ನಿರ್ವಹಣೆ. ಆದರೂ ಮನದೊಳಗೆ ಅತೃಪ್ತಿ. ಇತರರ ಜತೆ ಹೋಲಿಕೆ ಮಾಡಿಕೊಳ್ಳಬೇಡಿ. ಬಂಧುಗಳ ಸಹಕಾರ.

ಧನು
ವ್ಯವಹಾರ ಸುಗಮ. ಅಡ್ಡಿಗಳ ನಿವಾರಣೆ. ಮನೆಯ ಕಷ್ಟವೊಂದು ಪರಿಹಾರ ಕಾಣಲಿದೆ. ಆತ್ಮೀಯರು ನೆರವಿಗೆ ಬರುವರು.

ಮಕರ
ಕುಟುಂಬ ಸದಸ್ಯರ ಕಾಳಜಿಗೆ ಗಮನ ಕೊಡಿ. ವೃತ್ತಿ ಒತ್ತಡದಲ್ಲಿ ಅದನ್ನು ಮರೆಯಬೇಡಿ. ಟೀಕೆ ಕೇಳಿಬಂದರೂ ಅದರತ್ತ ಗಮನ ಕೊಡಬೇಡಿ.

ಕುಂಭ
ಸಣ್ಣಪುಟ್ಟ ವಾಗ್ವಾದ ನಡೆಯುವುದು ಸಹಜ. ಆದರೆ ದ್ವೇಷ ಬೇಡ. ಸಹೋದ್ಯೋಗಿಗಳ ಜತೆ ಸಹಕಾರದಿಂದ ವರ್ತಿಸಿ. ಕೌಟುಂಬಿಕ ಸಮಾಧಾನ.

ಮೀನ
ನಿಮ್ಮ ಯೋಜನೆಗೆ ಸೂಕ್ತ ಬೆಂಬಲ ಸಿಗಲಿದೆ. ವೃತ್ತಿಯಲ್ಲಿ ತೃಪ್ತಿಕರ ಬೆಳವಣಿಗೆ. ಹಣದ ಪರಿಸ್ಥಿತಿ ಸಮಾಧಾನಕರ. ಅಲರ್ಜಿ ಸಂಬಂಧಿ ಸಮಸ್ಯೆ ಸಂಭವ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 8,2,0,4

ಬಿಜೆಪಿಯವರಿಂದ ಗೊಂದಲ | ಯಾವ ವರ್ಗಕ್ಕೂ ಅನ್ಯಾಯ ಇಲ್ಲ

ಒಳಮೀಸಲಾತಿ ಜಾರಿಗೆ ಸರ್ಕಾರ ಬದ್ಧ: ಮುನಿಯಪ್ಪ

ಬಾಗಲಕೋಟೆ: ಒಳಮೀಸಲಾತಿಯನ್ನು ಜಾರಿ ಮಾಡುವಲ್ಲಿ ಯಾವುದೇ ಗೊಂದಲವಿಲ್ಲ. ಎಲ್ಲರಿಗೂ ನ್ಯಾಯ ಕೊಡಲು ಸರ್ಕಾರ ಬದ್ಧತೆ ಪ್ರದರ್ಶನ ಮಾಡಲಿದೆ. ಒಳಮೀಸಲಾತಿ ಜಾರಿಯಾಗಲಿದೆ ಎಂದು ಸಚಿವ ಮುನಿಯಪ್ಪ ಹೇಳಿದರು.

ನವನಗರದ ಪತ್ರಿಕಾಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳಮೀಸಲಾತಿ ವಿಚಾರದಲ್ಲಿ ಯಾರಿಗೆ ಎಷ್ಟು ಮೀಸಲಾತಿ ಎಂಬುದರ ಕುರಿತು ಚರ್ಚೆಯಾಗಿದೆ. ಯಾವ ವರ್ಗಕ್ಕೂ ಅನ್ಯಾಯವಾಗದ ರೀತಿ ಸರ್ಕಾರ ಕ್ರಮ ಕೈಗೊಳ್ಳಲಾಗಿದೆ. ಬಿಜೆಪಿಯವರು ಈ ಬಗ್ಗೆ ಗೊಂದಲ ಸೃಷ್ಟಿ ಮಾಡುತ್ತಿದ್ದರೆ ಅದಕ್ಕೆ ಕಿವಿಗೊಡಬಾರದು ಎಂದರು.

ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಧಿಕಾರ ವಹಿಸಿಕೊಂಡ ನಂತರ ಜನರಿಗೆ ಮಾತು ಕೊಟ್ಟಂತೆ ಐದು ಗ್ಯಾರಂಟಿಗಳನ್ನು ಅನುಷ್ಠಾನ ಮಾಡಿ ಜನರಿಗೆ ಶಕ್ತಿ ತುಂಬುವ ಕೆಲಸ ಮಾಡಿದ್ದಾರೆ. ರಾಜ್ಯದಲ್ಲಿ ಸಾಕಷ್ಟು ಜನ ಗ್ಯಾರಂಟಿಯಿಂದ ಅಭಿವೃದ್ಧಿ ಹೊಂದಿದ್ದಾರೆ. ಇದರ ಜತೆಗೆ ರಾಜ್ಯದಲ್ಲಿ ರಸ್ತೆ, ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಸರ್ಕಾರ ಆದ್ಯತೆ ನೀಡಿದೆ ಎಂದು ಹೇಳಿದರು. ಹಿಂದೆ ಸಿದ್ದರಾಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದಲ್ಲಿ ಅನ್ನಭಾಗ್ಯ ಜಾರಿ ಮಾಡಿದರು. ಈ ಅವಧಿಯಲ್ಲಿಯೂ ಕೂಡ ಅನ್ನಭಾಗ್ಯ ಮುಂದುವರಿಸಿದ್ದಾರೆ. ಹಸಿವು ಮುಕ್ತ ದೇಶವಾಗಬೇಕು ಎಂಬ ಕಲ್ಪನೆಯೊಂದಿಗೆ ಈ ಯೋಜನೆಯನ್ನು ಜಾರಿ ಮಾಡಿದ್ದು ಯುಪಿಎ ಸರ್ಕಾರ ಎಂದರು.

ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತದಲ್ಲಿ ಮುಳಗಡೆಯಾಗುವ ನೀರಾವರಿ ಭೂಮಿಗೆ 40 ಲಕ್ಷ ಒಣಬೇಸಾಯ ಭೂಮಿಗೆ 30 ಲಕ್ಷ ರೂ. ಪರಿಹಾರ ನೀಡಲು ಸರ್ಕಾರ ಕ್ರಮ ಕೈಗೊಂಡಿದೆ. ಎಲ್ಲ ರೈತರಿಗೆ ಪರಿಹಾರ ಕೊಡಲು ಸರ್ಕಾರ ಬದ್ಧವಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ರಾಜು ಮನ್ನಿಕೇರಿ, ಪ್ರಾಣೇಶ, ಸುಬ್ಬಣ್ಣ ಇದ್ದರು.



30 ವರ್ಷಗಳಿಂದ ಹೋರಾಟ

30 ವರ್ಷಗಳ ಒಳ ಮೀಸಲಾತಿ ಹೋರಾಟಕ್ಕೆ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಸೇರಿ ಏಳು ಜನ ನ್ಯಾಯಾಧೀಶರ ಒಳಗೊಂಡು ಮಹತ್ವದ ಪೀಠವು ತೀರ್ಪನ್ನು ನೀಡಿದ್ದು ಎಸ್ಸಿ ಎಸ್ಟಿ ಒಳಮೀಸಲಾತಿ ಜನಸಂಖ್ಯೆ ಆಧಾರದ ಮೇಲೆ ಅವರಿಗೆ ಆರ್ಥಿಕ, ಶೈಕ್ಷಣಿಕ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಇದು ಆಂಧ್ರಪ್ರದೇಶ, ತೆಲಂಗಾಣ, ಕರ್ನಾಟಕ ರಾಜ್ಯಗಳು ಸುಮಾರು 30 ವರ್ಷಗಳಿಂದ ಹೋರಾಟ ಮಾಡುತ್ತಿತ್ತು ಎಸ್ಸಿ ಸಮುದಾಯದ 101 ಉಪಜಾತಿಗಳು ಪರಿಶಿಷ್ಟ ಜಾತಿಯಲ್ಲಿ ಬರುತ್ತದೆ ಇವರಿಗೆ ಸಮಾನವಾಗಿ ಮೀಸಲಾತಿಯನ್ನು ಹಂಚಲು ಸುಪ್ರೀಂ ಕೋರ್ಟ್ ಈ ಮಹತ್ವದ ತೀರ್ಪನ್ನು ನೀಡಿದೆ ಎಂದು ಹೇಳಿದರು.

ಮಹಿಳೆ ಸೇರಿದಂತೆ ನಾಲ್ವರ ವಿರುದ್ಧ ಎಫ್‌ಐಆರ್ ದಾಖಲು

ವಿಜಯಪುರ: ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರಿಗೆ ಬ್ಲ್ಯಾಕ್‌ಮೇಲ್ ಮಾಡಿ ಹಣಕ್ಕಾಗಿ ಪೀಡಿಸಿರುವ ಮತ್ತು ಅವರ ಮೇಲೆ ಹಲ್ಲೆ ನಡೆಸಿರುವ ಘಟನೆಗೆ ಸಂಬಂಧಿಸಿದಂತೆ ನಗರದ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ನಾಲ್ವರ ವಿರುದ್ಧ ಪ್ರಕರಣ ದಾಖಲಾಗಿದೆ.



ಬೆಂಗಳೂರು ಮೂಲದ ತ್ರಿವೇಣಿ ಎಂಬಾಕೆ ಕಳೆದ ಎರಡೂರು ವರ್ಷಗಳ ಹಿಂದೆ 'ಆಶ್ರಿತ (ಪ್ರಗತಿ) ಫೌಂಡೇಷನ್' ಹೆಸರಿನಲ್ಲಿ ಶ್ರೀಗಳನ್ನು ಭೇಟಿಯಾಗಿದ್ದಳು. ಸಮಾಜ ಸೇವೆ ಮತ್ತು ಪಂಚಮಸಾಲಿ ಹೋರಾಟಕ್ಕೆ ಸಾಥ್ ನೀಡುವುದಾಗಿ ನಂಬಿಸಿದ್ದ ಈಕೆ, ನಂತರ ತನ್ನ ಫೌಂಡೇಷನ್‌ಗೆ ಹಣ ನೀಡುವಂತೆ ಶ್ರೀಗಳಿಗೆ ಪೀಡಿಸಲು ಶುರು ಮಾಡಿದ್ದಳು. ಶ್ರೀಗಳು ಹಣ ನೀಡಲು ನಿರಾಕರಿಸಿದಾಗ ರಾಜಕೀಯ ವ್ಯಕ್ತಿಗಳ ಪಿತೂರಿಯೊಂದಿಗೆ ಸೇರಿ ಅವರ ತೇಜೋವಧೆ ಮಾಡಲು ಸಂಚು ರೂಪಿಸಿದ್ದಾಳೆ ಎನ್ನಲಾಗಿದೆ. ಫೆಬ್ರವರಿ 11ರಂದು ಸ್ವಾಮೀಜಿಯವರು ವಿಜಯಪುರ ತಾಲೂಕಿನ ಕಗ್ಗೋಡ ಬಳಿ ತೆರಳುತ್ತಿದ್ದಾಗ, ತ್ರಿವೇಣಿ ಮತ್ತು ಆಕೆಯ ತಂಡ ವಾಹನವನ್ನು ಅಡ್ಡಗಟ್ಟಿ ಹಣಕ್ಕಾಗಿ ಬೇಡಿಕೆಯಿಟ್ಟು, ಕಾರಿನ ಗ್ಲಾಸಿಗೆ ಹೊಡೆದು ಹಲ್ಲೆ ನಡೆಸಿದ್ದಾರೆ.

ಸ್ವಾಮೀಜಿ ವಿರುದ್ಧ ಆಯೋಗಕ್ಕೆ ದೂರು

ಬೆಂಗಳೂರು: ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಅವರು ತಮಗೆ ದೈಹಿಕ, ಮಾನಸಿಕ ಹಾಗೂ ಲೈಂಗಿಕವಾಗಿ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಬೆಂಗಳೂರಿನ ಮಹಿಳೆಯೊಬ್ಬರು ರಾಜ್ಯ ಮಹಿಳಾ ಆಯೋಗಕ್ಕೆ ಮಂಗಳವಾರ ಅಧಿಕೃತವಾಗಿ ದೂರು ಸಲ್ಲಿಸಿದ್ದಾರೆ. ಸಂತ್ರಸ್ತ ಮಹಿಳೆಯು ನೀಡಿರುವ ದೂರಿನಲ್ಲಿ ಸ್ವಾಮೀಜಿ ವಿರುದ್ಧ ಗಂಭೀರವಾದ ಅಂಶಗಳನ್ನು ಉಲ್ಲೇಖಿಸಿದ್ದಾರೆ. ಸ್ವಾಮೀಜಿಯವರು ತಮ್ಮ ಖಾಸಗಿ ವಿಡಿಯೋಗಳನ್ನು ಇಟ್ಟುಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುವುದಾಗಿ ಬೆದರಿಕೆ ಹಾಕುತ್ತಿದ್ದಾರೆ ಮತ್ತು ಬ್ಲ್ಯಾಕ್‌ಮೇಲ್ ಮಾಡುವ ಮೂಲಕ ಲೈಂಗಿಕವಾಗಿ ಸಹಕರಿಸುವಂತೆ ಒತ್ತಾಯಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸ್ವಾಮೀಜಿಯವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಮತ್ತು ತಮಗೆ ಸೂಕ್ತ ರಕ್ಷಣೆ ನೀಡಬೇಕು ಎಂದು ಅವರು ಆಯೋಗವನ್ನು ಮನವಿ ಮಾಡಿದ್ದಾರೆ.

ಧಾರ್ಮಿಕ ಆಚರಣೆ ಹಿನ್ನೆಲೆ: ಕೇಂದ್ರ

ಪುಟ ೧➔ ಬದಲಿಗೆ ಧಾರ್ಮಿಕ ಆಚರಣೆ, ನಂಬಿಕೆ ಮತ್ತು ದೇವರ ನಿರ್ದಿಷ್ಟ ಪಾತ್ರದಲ್ಲಿ ಬೇರೂರಿರುವಂಥದ್ದು ಎಂದು ತಿಳಿಸಿದೆ.

ಶ್ರೀಅಯ್ಯಪ್ಪನ ನೈಷ್ಠಿಕ ಬ್ರಹ್ಮಚರ್ಯ ಹಿನ್ನೆಲೆಯಲ್ಲಿ ಬಂದ ಆಚರಣೆ: ಶಬರಿಮಲೆಯಲ್ಲಿ ಮಹಿಳೆಯರ ಮೇಲಿನ ನಿಷೇಧವು (ಎಲ್ಲ ಮಹಿಳೆಯರಿಗೆ ನಿರ್ಬಂಧವಾಗಿರದೆ 10-50 ವರ್ಷ ವಯಸ್ಸಿನವರಿಗೆ ಮಾತ್ರ) ಶ್ರೀ ಅಯ್ಯಪ್ಪನ ನೈಷ್ಠಿಕ ಬ್ರಹ್ಮಚರ್ಯೆಯ ಹಿನ್ನೆಲೆಯಲ್ಲಿ ಬಂದಿದೆ. ಅಶುದ್ಧತೆ ಅಥವಾ ಕೀಳರಿಮೆಯಿಂದಲ್ಲ ಎಂದು ವಿಚಾರಣೆಗೆ ಮುಂಚಿತವಾಗಿ ಸಲ್ಲಿಸಲಾದ ಲಿಖಿತ ಅರ್ಜಿಯಲ್ಲಿ ಕೇಂದ್ರ ಸರ್ಕಾರ ವಿವರಿಸಿದೆ.

ಹೊಸ ನಿಲುವಿನಿಂದ ಪೂಜಾ ಸ್ವರೂಪವೇ ಬದಲು: ಮಹಿಳೆಯರ ಪ್ರವೇಶ ಅನುಮತಿಸುವುದರಿಂದ ಇಲ್ಲಿನ ಪೂಜೆಯ ಸ್ವರೂಪವನ್ನೇ ಬದಲಾಯಿಸುತ್ತದೆ. ಸಂವಿಧಾನದಿಂದ ರಕ್ಷಿಸಲ್ಪಟ್ಟ ಧಾರ್ಮಿಕ ಬಹುತ್ವವನ್ನು ದುರ್ಬಲಗೊಳಿಸುತ್ತದೆ. ಭಕ್ತರು, ಅಂದರೆ ಪುರುಷರು ಮತ್ತು ಮಹಿಳೆಯರು ಇಬ್ಬರೂ ಶತಮಾನಗಳಿಂದ ಶಬರಿಮಲೆಯಲ್ಲಿ ದೇವಾಲಯದ ಸ್ಥಾಪಿತ ಸಂಪ್ರದಾಯಗಳಿಗೆ ಅನುಗುಣವಾಗಿ ಭಗವಾನ್ ಶ್ರೀ ಅಯ್ಯಪ್ಪ ಸ್ವಾಮಿಯನ್ನು ಪೂಜಿಸುತ್ತಿದ್ದಾರೆ ಎಂದು ಕೇಂದ್ರವನ್ನು ಪ್ರತಿನಿಧಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ನ್ಯಾಯಾಲಯಕ್ಕೆ ತಿಳಿಸಿದರು.

ಕೇರಳದ ಶಬರಿಮಲೆ ದೇವಸ್ಥಾನಕ್ಕೆ ಋತುಮತಿ ವಯಸ್ಸಿನ ಮಹಿಳೆಯರ ಪ್ರವೇಶದ ಮೇಲಿನ ನಿರ್ಬಂಧವನ್ನು ಎತ್ತಿಹಿಡಿಯುವಂತೆ ಕೇಂದ್ರವು ಸುಪ್ರೀಂ ಕೋರ್ಟ್‌ನ್ನು ಒತ್ತಾಯಿಸಿದೆ.

ಭಾರತೀಯ ಸಮಾಜದಲ್ಲಿದೆ ಮಹಿಳೆಯರಿಗೆ ಉನ್ನತ ಗೌರವ: ಭಾರತೀಯ ಸಮಾಜವು ಮಹಿಳೆಯರನ್ನು ಸಮಾನವಾಗಿ ಪರಿಗಣಿಸುವುದಲ್ಲದೆ, ಅವರನ್ನು ಉನ್ನತ ಸ್ಥಾನದಲ್ಲಿರಿಸುತ್ತದೆ.ಇಂದಿನ ವಿಚಾರಣೆಯಲ್ಲಿ, ಶಬರಿಮಲೆ ದೇವಸ್ಥಾನಕ್ಕೆ ಮಹಿಳೆಯರ ಪ್ರವೇಶವನ್ನು ಒತ್ತಾಯಿಸುವವರು ತಮ್ಮ ವಾದಗಳಲ್ಲಿ 'ಪಿತೃಪ್ರಭುತ್ವ'ವನ್ನು ಏಕೆ ಉಲ್ಲೇಖಿಸುತ್ತಾರೆ ಭಾರತಯಾವತ್ತೂ ಸ್ತ್ರೀಯರನ್ನು ಸಮಾನವಾಗಿ ನಡೆಸಿಕೊಂಡಿದೆ. ಅವರನ್ನು ಯಾವಾಗಲೂ ಉನ್ನತ ಸ್ಥಾನದಲ್ಲಿರಿಸಿ ಗೌರವಿಸಲಾಗಿದೆ.ಆದರೆ ಇತ್ತೀಚಿನ ದಿನಗಳಲ್ಲಿ 'ಪಿತೃಪ್ರಧಾನ ಸಮಾಜ' ಅಥವಾ ಕೆಲವು 'ಲಿಂಗ ಸ್ಟೀರಿಯೊಟೈಪ್' ಇತ್ಯಾದಿ ಪರಿಕಲ್ಪನೆ ಇರುವ ಕೆಲವು ತೀರ್ಪುಗಳು ಬಂದಿವೆ. ಅವು ಎಂದಿಗೂ ಇರಲಿಲ್ಲ, ಭಾರತೀಯ ಸಮಾಜದಲ್ಲಿ, ನಾವು ಮಹಿಳೆಯರನ್ನು ಪೂಜಿಸುತ್ತೇವೆ. ಭಾರತದ ರಾಷ್ಟ್ರಪತಿಯಿಂದ ಹಿಡಿದು ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರವರೆಗೆ, ನಾವು ನಮ್ಮ ಸ್ತ್ರೀ ದೇವತೆಗಳಿಗೆ ನಮಸ್ಕರಿಸಿ ಶ್ರದ್ಧಾ ಭಕ್ತಿ ತೋರುತ್ತೇವೆ. ಆದ್ದರಿಂದ ನಾವು 'ಪಿತೃಪ್ರಭುತ್ವ' ಮತ್ತು 'ಲಿಂಗ ಸ್ಟೀರಿಯೊಟೈಪ್'ಪರಿಕಲ್ಪನೆಗಳ ಆಧಾರದಲ್ಲಿ ಈ ವಿಚಾರವನ್ನು ನೋಡಬಾರದು. ಭಾರತಕ್ಕೆ ಈ ಕಲ್ಪನೆಯು ಪರಕೀಯವಾಗಿದೆ ಎಂದು ಮೆಹ್ತಾ ಒತ್ತಿ ಹೇಳಿದರು.

ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿದ ಹಲವು ಕಾನೂನು ಮತ್ತು ಸಾಂವಿಧಾನಿಕ ಪ್ರಶ್ನೆಗಳನ್ನು ಪರಿಶೀಲಿಸುತ್ತಿರುವ ಸುಪ್ರೀಂ ಕೋರ್ಟ್‌ನ ಒಂಬತ್ತು ನ್ಯಾಯಾಧೀಶರ ಪೀಠದ ಮುಂದೆ ಎಸ್‌ಜಿ ಮೆಹ್ತಾ ಈ ಅಂಶವನ್ನು ಅರುಹಿದ್ದಾರೆ.

ದುರದೃಷ್ಟವಶಾತ್ ನಾವು ವಾಸಿಸುತ್ತಿದ್ದ ಸಮಾಜದಲ್ಲಿ, ಹಿಂದೆ ಹಿಂದುಗಳ ಒಂದು ನಿರ್ದಿಷ್ಟ ಭಾಗವು ವಿಶಾಲ ಹಿಂದು ಪಂಗಡದ ಭಾಗವಾಗಲು ಅನುಮತಿಸದ ಸಮಾಜದಲ್ಲಿ ವಾಸಿಸುತ್ತಿದ್ದೆವು. ಅವರ ಪೂಜಾ ಹಕ್ಕನ್ನು ನಿರಾಕರಿಸಲಾಯಿತು. ಇದಕ್ಕೆ ಲಿಂಗದೊಂದಿಗೆ ಯಾವುದೇ ಸಂಬಂಧವಿರಲಿಲ್ಲ. ಕಳೆದ ದಶಕಗಳಲ್ಲಿ, ಅಭಿವೃದ್ಧಿಪಡಿಸಲಾದ ನ್ಯಾಯಶಾಸ್ತ್ರವಿದೆ, ಅಲ್ಲಿ ಪ್ರತಿ ಸಾಂವಿಧಾನಿಕ ನಿಬಂಧನೆಯನ್ನು ಲಿಂಗದ ಮಸೂರದಿಂದ ನೋಡಬೇಕಾಗುತ್ತದೆ. ಅಲ್ಲಿ ಯಾವುದೇ ತಾರತಮ್ಯಕ್ಕೆ ಸ್ಥಾನವಿಲ್ಲ(ಸಂವಿಧಾನದ) ವಿಧಿ14 ರಲ್ಲಿ – ಎಲ್ಲಾ ಲಿಂಗಗಳು ಸಮಾನರು. ವಿಧಿ 15 – ಲಿಂಗವನ್ನು ಲೆಕ್ಕಿಸದೆ, ಎಲ್ಲಾ ಮೂಲಭೂತ ಹಕ್ಕುಗಳನ್ನು ನೀಡಲಾಗಿದೆ. ಇದು (ತಾರತಮ್ಯದ ವಿರುದ್ಧದ ಹಿಂದಿನ ಕಾನೂನುಗಳು) ಆ ಯುಗದ ನಿರ್ದಿಷ್ಟ ನಿಬಂಧನೆಯಾಗಿತ್ತು, ಅದು ಸಾರ್ವಜನಿಕ ದೇವಾಲಯ ಅಥವಾ ಸಾರ್ವಜನಿಕ ಧಾರ್ಮಿಕ ಸಂಸ್ಥೆಯಾಗಿದ್ದರೆ, ಅದು ಎಲ್ಲರಿಗೂ ಮುಕ್ತವಾಗಿರಬೇಕು. ನಾವು ಅಸ್ಪೃಶ್ಯತೆ ಅಥವಾ ಒಂದು ವಿಭಾಗದೊಳಗಿನ ವಿಭಾಗ ಇತ್ಯಾದಿಗಳನ್ನು ತೊಡೆದುಹಾಕಬೇಕು. ಆದರೆ ಶಬರಿಮಲೆ ಪ್ರಕರಣ ಲಿಂಗ ತಾರತಮ್ಯದ ಹಿನ್ನೆಲೆಯದ್ದಲ್ಲ ಎಂಬುದನ್ನು ಎತ್ತಿತೋರಿದರು.

7 ಪ್ರಶ್ನೆಗಳನ್ನೆತ್ತಿದ ನ್ಯಾಯಪೀಠ

ಕೇರಳದ ಶಬರಿಮಲೆ ದೇವಸ್ಥಾನಕ್ಕೆ ಎಲ್ಲಾ ವಯೋಮಾನದ ಮಹಿಳೆಯರಿಗೆ ಪ್ರವೇಶ ನೀಡಿದ ತೀರ್ಪಿನ ಪುನರ್ ಪರಿಶೀಲನಾ ಅರ್ಜಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ 9 ನ್ಯಾಯಮೂರ್ತಿಗಳ ಸಂವಿಧಾನ ಪೀಠವು ವಿಚಾರಣೆ ಆರಂಭಿಸಿದೆ. ಸಂವಿಧಾನದ ಅನುಚ್ಛೇದ 25 ಮತ್ತು 26ರ ಅಡಿಯಲ್ಲಿ ಧಾರ್ಮಿಕ ಸ್ವಾತಂತ್ರ್ಯದ ವ್ಯಾಪ್ತಿ, ಮಿತಿ, ವ್ಯಕ್ತಿ ಹಕ್ಕುಗಳು ಮತ್ತು ಧಾರ್ಮಿಕ ಸಂಪ್ರದಾಯಗಳ ನಡುವಿನ ಸಮತೋಲನ, ನೈತಿಕತೆಯ ಅರ್ಥ, ಧಾರ್ಮಿಕ ಆಚರಣೆಗಳ ಮೇಲಿನ ನ್ಯಾಯಾಂಗ ಪರಿಶೀಲನೆ, ಹಿಂದುಗಳ ವಿಭಾಗಗಳು ಎಂಬ ಪದದ ಅರ್ಥ ಮತ್ತು ಧಾರ್ಮಿಕ ಸಂಪ್ರದಾಯಗಳ ವಿರುದ್ಧ ಭಕ್ತರಲ್ಲದವರು ಅಥವಾ ಹಿಂದು ಧರ್ಮಕ್ಕೆ ಸೇರದವರು ಪಿಐಎಲ್ ದಾಖಲಿಸುವ ಹಕ್ಕುಗಳಿಗೆ ಸಂಬಂಧಿಸಿ ನ್ಯಾಯಾಂಗ ಪೀಠವು 7 ಮುಖ್ಯ ಪ್ರಶ್ನೆಗಳನ್ನು ಎತ್ತಿದೆ.

ಇರಾನ್‌ನಲ್ಲಿ ಆತಂಕ

ಪುಟ ೧➔ ತಮ್ಮ ಕದನವಿರಾಮ ಯೋಜನೆಯನ್ನು ತಿರಸ್ಕರಿಸಿದ ಟೆಹ್ರಾನ್ ದೊಡ್ಡ ಬೆಲೆ ಕಟ್ಟಬೇಕಾಗುತ್ತದೆಂದು ಟ್ರಂಪ್ ಅವರು ಬೆದರಿಕೆಯೊಡ್ಡಿದ್ದು, ಇದಾದ 24 ಗಂಟೆಗಳೊಳಗೆ ಅಮೆರಿಕ ಖಾರ್ಗ್ ದ್ವೀಪದ 50 ಸ್ಥಳಗಳ ಮೇಲೆ ದಾಳಿ ನಡೆಸಿದೆ. ಯುದ್ಧ ಆರನೇ ವಾರ ಪ್ರವೇಶಿಸಿದ್ದು, ಸಂಘರ್ಷಕ್ಕೊಂದು ಶಾಶ್ವತ ಪರಿಹಾರ ಕಂಡುಕೊಳ್ಳಲು ಇರಾನ್ ಬಯಸುತ್ತಿದೆ. ಕಳೆದ ವಾರ ಖಾರ್ಗ್ ದ್ವೀಪವನ್ನು ವಶಪಡಿಸುವುದಾಗಿ ಟ್ರಂಪ್ ಬೆದರಿಕೆ ಹಾಕಿದ್ದರು.

ಖಾರ್ಗ್ ಮೇಲೆ ಅಮೆರಿಕ ಹೊಸ ದಾಳಿ: ಕದನವಿರಾಮ ಒಪ್ಪಂದ ಮಾಡಿಕೊಳ್ಳಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿದ್ದ ಗಡುವು ಮುಗಿಯುವ ಕೆಲವೇ ಗಂಟೆಗಳ ಮುನ್ನ ಇರಾನ್‌ನ ಕಚ್ಚಾ ತೈಲ ರಫ್ತು ಕೇಂದ್ರವಾದ ಖಾರ್ಗ್ ದ್ವೀಪದ ಮೇಲೆ ಅಮೆರಿಕ ಕಾರ್ಯತಾಂತ್ರಿಕ ದಾಳಿ ನಡೆಸಿದೆ. ಖಾರ್ಗ್ ದ್ವೀಪದ ಮೇಲಿನ ಅಮೆರಿಕ ದಾಳಿಯನ್ನು ಖಂಡಿಸಿದ ಇರಾನ್ ಇಸ್ಲಾಮಿಕ್ ರೆವೊಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ), ಸಂಯಮ ಕೊನೆಗೊಂಡಿದೆ ಎಂಬ ಪ್ರತಿಕ್ರಿಯೆ ನೀಡಿದೆ. ಅಮೆರಿಕ ಮತ್ತು ಅದರ ಮೈತ್ರಿಕೂಟದ ಗಲ್ಫ್ ರಾಷ್ಟ್ರಗಳ ಇಂಧನ ಮೂಲಸೌಕರ್ಯಗಳನ್ನು ಬೂದಿಯಾಗಿಸುವುದಾಗಿ ಎಚ್ಚರಿಕೆ ನೀಡಿದೆ. ಹಲವು ವರ್ಷಗಳವರೆಗೆ ಇಂಧನ ವ್ಯತ್ಯಯ ಉಂಟಾಗುವ ರೀತಿಯಲ್ಲಿ ಅಮೆರಿಕ ಮೈತ್ರಿ ರಾಷ್ಟ್ರಗಳ ಇಂಧನ ಮೂಲಸೌಕರ್ಯ ಧ್ವಂಸ ಮಾಡುವುದಾಗಿ ಇರಾನ್ ಎಚ್ಚರಿಕೆ ನೀಡಿದೆ.

ಅಣ್ವಸ್ತ್ರ ಬಳಸಲ್ಲ: ಶ್ವೇತಭವನ

ಇರಾನ್ ಮೇಲೆ ಪರಮಾಣು ದಾಳಿ ನಡೆಸುವ ಯಾವುದೇ ಇರಾದೆ ನಮಗಿಲ್ಲ ಎಂದು ಅಮೆರಿಕದ ಶ್ವೇತಭವನವು ಮಂಗಳವಾರ ರಾತ್ರಿ ಸ್ಪಷ್ಟಪಡಿಸಿದೆ. ಅಧ್ಯಕ್ಷ ಟ್ರಂಪ್ ನೀಡಿದ ಹೊಸ ಬೆದರಿಕೆಯ ಕುರಿತು ಬುಡಾಪೆಸ್ಟ್‌ನಲ್ಲಿ ಪ್ರತಿಕ್ರಿಯಿಸಿದ್ದ ಉಪಾಧ್ಯಕ್ಷ ವ್ಯಾನ್ಸ್, ನಮ್ಮ ಟೂಲ್‌ಕಿಟ್‌ನಲ್ಲಿ ಹಲವು ಟೂಲ್‌ಗಳಿವೆ. ಈವರೆಗೆ ಅವುಗಳನ್ನು ಬಳಸಲು ನಿರ್ಧರಿಸಿಲ್ಲ ಎಂದು ಹೇಳಿದ್ದರು.

ಹೆಣ್ಣು ಮಗು ಹೆಸರಲ್ಲಿ ಠೇವಣಿ!

ಪುಟ ೧➔ **ಆರ್ಥಿಕ ಭದ್ರತೆ:** ರೂ.5,500 ಮೊತ್ತ ಸಣ್ಣದಾಗಿ ಕಾಣಿಸಿಕೊಂಡರೂ ದೀರ್ಘಾವಧಿಯಲ್ಲಿ ಅದು ಮಗುವಿನ ಶಿಕ್ಷಣ, ಆರೋಗ್ಯ ಅಥವಾ ಇತರೆ ಅಗತ್ಯಗಳಿಗೆ ಉಪಯುಕ್ತವಾಗುತ್ತದೆ. ವಿಶೇಷವಾಗಿ ಬಡ ಕುಟುಂಬಗಳಿಗೆ ಇದು ಮಹತ್ವದ ಬೆಂಬಲವಾಗಿದೆ. ಗ್ರಾಮ ಪಂಚಾಯತಿಗಳು ಜನಜೀವನದ ಭಾಗವಾಗಬೇಕು. ಹೂಲಿ ಪಂಚಾಯಿತಿ ಅದಕ್ಕೆ ಉತ್ತಮ ಉದಾಹರಣೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಅಭಿಪ್ರಾಯಪಟ್ಟಿದ್ದಾರೆ.

ಪಾರದರ್ಶಕ ಜಾರಿಗೆ ಆದ್ಯತೆ: ಈ ಯೋಜನೆಯಲ್ಲಿ ಠೇವಣಿ ಪತ್ರಗಳನ್ನು ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯ ದಿನಾಚರಣೆಸಂದರ್ಭಗಳಲ್ಲಿ ಗ್ರಾಮಸಭೆಗಳಲ್ಲಿ ವಿತರಿಸಲಾಗುತ್ತಿದೆ. ಇದರಿಂದ ಯೋಜನೆಗೆ ಪಾರದರ್ಶಕತೆ ಮತ್ತು ಗೌರವ ಹೆಚ್ಚಾಗಿದೆ. ಸರ್ಕಾರದ ಮೇಲೆ ಮಾತ್ರ ಅವಲಂಬಿಸದೆ ಪಂಚಾಯತಿಗಳು ಸ್ವತಃ ಮುಂದಾಗಬೇಕು ಎಂಬ ಸಂದೇಶ ಇದರಿಂದ ಸಿಗುತ್ತದೆ ಎಂದು ಸ್ಥಳೀಯರು ಅಭಿಪ್ರಾಯಪಟ್ಟಿದ್ದಾರೆ.

ಈ ಯೋಜನೆ ರಾಜ್ಯದ ಇತರೆ ಪಂಚಾಯತಿಗಳಿಗೆ ಸ್ಫೂರ್ತಿಯಾಗುವ ಸಾಧ್ಯತೆ ಇದೆ. ಹೆಣ್ಣು ಮಕ್ಕಳ ಕುರಿತು ಸಮಾಜದಲ್ಲಿನ ಪೂರ್ವಾಗ್ರಹಗಳನ್ನು ನಿವಾರಿಸಿ, ಸಮಾನ ಅವಕಾಶಗಳತ್ತ ಸಾಗಲು ಇದು ಬುನಾದಿಯಾಗಲಿದೆ. ಹೂಲಿ ಪಂಚಾಯಿತಿಯ ಈ ಪ್ರಯತ್ನ ಇಡೀ ರಾಜ್ಯದ ಪಂಚಾಯತಿಗಳಿಗೆ ದಿಕ್ಕು ತೋರಿಸಲಿ.
■ ಪ್ರಿಯಾಂಕ್ ಖರ್ಗೆ, ಸಚಿವ

ಒಟ್ಟು 506 ಗ್ರಾಪಂಗಳಲ್ಲಿ ಈ ಕಾರ್ಯ ಮಾಡಬೇಕೆಂದುಕೊಂಡಿದ್ದೇವೆ. ಆಗಸ್ಟ್ 15, 2022ರಂದು ಅಧೀನ ಗ್ರಾಪಂನ ಅಧ್ಯಕ್ಷ ವಿರೂಪಾಕ್ಷ ತತೂರಗಲ್ ಅವರು ಮೊದಲನೆಯ ಹೆಣ್ಣು ಮಗುವಿಗೆ ರೂ.5,500 ಸಮೃದ್ಧಿ ಯೋಜನೆ ನೀಡಬೇಕೆಂದು ಈ ಯೋಜನೆ ಮಾಡಿದ್ದಾರೆ. ಅವತ್ತಿನಿಂದ ಪ್ರತಿ ವರ್ಷ ಮಾಡಿಕೊಂಡು ಬರುತ್ತಿದ್ದೇವೆ. ಈಗಾಗಲೇ ಒಟ್ಟು 49 ಹೆಣ್ಣು ಮಕ್ಕಳಿಗೆ ಈ ಯೋಜನೆ ಅನುಕೂಲ ಕಲ್ಪಿಸಿದೆ.
■ ಮಹಾದೇವ ಈರಪ್ಪ ಕಳ್ಳಿ, ಹೂಲಿ ಗ್ರಾಪಂ ಅಭಿವೃದ್ಧಿ ಅಧಿಕಾರಿ

ತಂಟೆಗೆ ಬಂದರೆ ಪಾಕ್ ಛಿದ್ರ

ಪುಟ ೧➔ 55 ವರ್ಷ ಹಿಂದೆ ಪಾಕಿಸ್ತಾನ ಎರಡು ಹೋಳಾಗಿ ವಿಭಜನೆಯಾದಾಗ ತಾಂಡವಿಸಿದ್ದ ದುಷ್ಪರಿಣಾಮಗಳು, ಕಹಿ ಅನುಭವಗಳು ಪಾಕ್‌ಗೆ ನೆನಪಿಲ್ಲವೇ ಎಂದು ಕುಟುಕಿದ್ದಾರೆ. ಪಾಕಿಸ್ತಾನ ಬಂಗಾಳದ ಮೇಲೆ ಕಣ್ಣಿಡಲು ಪ್ರಯತ್ನಿಸಿದಲ್ಲಿ, ಆ ರಾಷ್ಟ್ರ ಈ ಬಾರಿ ಅದೆಷ್ಟು ಹೋಳಾಗಲಿದೆ ಎಂಬುದನ್ನು ಭಗವಂತನೇ ಬಲ್ಲ ಎಂದು ಸಚಿವ ಸಿಂಗ್ ಖಡಕ್ ಎಚ್ಚರಿಕೆ ನೀಡಿದ್ದಾರೆ. ಭಾರತವೇನಾದರೂ ಫಾಲ್ಸ್ ಫ್ಲ್ಯಾಗ್ ಆಪರೇಶನ್‌ಗೆ ಮುಂದಾದಲ್ಲಿ ದೇವರಿಚ್ಛೆಯಂತೆ ನಾವು ಕೋಲ್ಕತ್ತಾ ಮೇಲೆ ದಾಳಿ ಮಾಡೇ ಸಿದ್ಧ ಎಂದು ಆಸಿಫ್ ಸಿಯಾಲ್‌ಕೋಟ್‌ನಲ್ಲಿ ಸುದ್ದಿಗಾರರಿಗೆ ತಿಳಿಸಿದ್ದರು.

ಪಾಕ್ ಜೈಲಲ್ಲಿ ಬಂಧನದಲ್ಲಿರುವ ವ್ಯಕ್ತಿಗಳನ್ನು ಭಯೋತ್ಪಾದಕರಂತೆ ಬಿಂಬಿಸಿ, ಇದೇ ಸೋಗಲ್ಲಿ ಭಾರತ ಪಾಕ್ ವಿರುದ್ಧ ನಕಲಿ ಕಾರ್ಯಾಚರಣೆ ನಡೆಸುವ ಸಾಧ್ಯತೆಗಳಿವೆ ಎಂಬ ವರದಿಗಳಿವೆ ಎಂದು ಸುದ್ದಿಗಾರರಲ್ಲಿ ಆರೋಪಿಸಿದ್ದ ಸಚಿವ ಆಸಿಫ್, ತಾನು ಮಾಡಿದ ಆರೋಪಗಳಿಗೆ ಪೂರಕ ಸಾಕ್ಷ್ಯಗಳನ್ನು ಮಾತ್ರ ನೀಡಿರಲಿಲ್ಲ. ಇಷ್ಟೇ ಅಲ್ಲ, ಯಾವುದೇ ದಾಳಿಗೂ ಪಾಕ್ ಪ್ರತಿಕ್ರಿಯೆ ತ್ವರಿತ, ಕರಾರುವಕ್ಕಾಗಿರುವುದು ಮತ್ತು ನಿರ್ಣಾಯಕವಾಗಿರುವುದು ಎಂದು ಇದಕ್ಕೂ ಮುನ್ನ ಆಸಿಫ್ ಹೇಳಿದ್ದರು.

ಅಭೂತಪೂರ್ವ ಪ್ರತ್ಯುತ್ತರ ಆಹ್ವಾನಿಸಿದಂತೆ

ಪುಟ ೧➔ ನಂತರದ ದಿನಗಳಲ್ಲೂ ಉಭಯ ರಾಷ್ಟ್ರಗಳ ನಡುವೆ ಉದ್ವಿಗ್ನತೆ ಶಮನಗೊಂಡಿಲ್ಲ. ಭಾರತದ ಸಹನೆ ಪರೀಕ್ಷಿಸುವ ದ್ರೋಹಿ ಕೃತ್ಯಗಳನ್ನು ಪಾಕಿಸ್ತಾನ ನಿಲ್ಲಿಸಿಲ್ಲ. ರಕ್ಷಣಾ ಸಚಿವ ಸಿಂಗ್ ಪಾಕ್‌ಗೆ ಎಚ್ಚರಿಕೆ ನೀಡಿರುವುದು ಇದೇ ಹಿನ್ನೆಲೆಯಿಂದ ಎಂಬುದಿಲ್ಲಿ ಉಲ್ಲೇಖಾರ್ಹ.

ತಿಮ್ಮಾಪುರ ವಿರುದ್ಧ ಮಾನನಷ್ಟ ಮೊಕದ್ದಮೆ

ಬಾಗಲಕೋಟೆ: ಬಿಟಿಡಿಎ ವ್ಯಾಪ್ತಿಯಲ್ಲಿ 30 ಎಕರೆ ಜಮೀನು ತೆಗೆದುಕೊಂಡು ಅದನ್ನು ಭೂಸ್ವಾಧೀನ ಮಾಡಿಕೊಂಡು ಪರಿಹಾರ ನೀಡಬೇಕು ಎಂದು ಬಿಟಿಡಿಎಗೆ ಅರ್ಜಿಯನ್ನು ನೀಡಿದ್ದರೆ ಹಾಗೂ ನಾನು 30 ಎಕರೆ ಜಮೀನು ಖರೀದಿ ಮಾಡಿದ್ದು ದಾಖಲೆ ತೋರಿಸಿ ಸಾಬೀತುಪಡಿಸದಿದ್ದರೆ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ವಿರುದ್ಧ ನೂರು ಕೋಟಿ ರೂ. ಮಾನನಷ್ಟ ಮೊಕದ್ದಮೆ ಹೂಡುವೆ ಎಂದು ಚಿತ್ರದುರ್ಗದ ಸಂಸದ ಗೋವಿಂದ ಕಾರಜೋಳ ಹೇಳಿದರು.



ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಬಿಟಿಡಿಎದಿಂದ ಜಮೀನು ಸ್ವಾಧೀನಪಡಿಸಿಕೊಳ್ಳಿ ಎಂದು ಯಾವತ್ತೂ ಅರ್ಜಿ ಹಾಕಿಲ್ಲ, ನಾನು ಎಲ್ಲಿಯೂ ಭೂಮಿಯನ್ನು ಖರೀದಿ ಮಾಡಿಲ್ಲ ಎಂದು ಹೇಳಿದರು.

ಜಾತಿ ಜಾತಿಗಳು, ಧರ್ಮಗಳನಡುವೆ ವಿಷಬೀಜ ಬಿತ್ತಿ ಮತಬ್ಯಾಂಕ್ ಮಾಡಿಕೊಳ್ಳುವುದೇ 79 ವರ್ಷಗಳ ಕಾಂಗ್ರೆಸ್ಸಿನ ಸಾಧನೆಯಾಗಿದೆ. ಇಂಥ ಮಹಾನ್ ಮೋಸಗಾರ ಸಿದ್ದರಾಮಯ್ಯನನ್ನು ನಂಬದಿರಿ ಎಂದು ಮತದಾರರನ್ನು ವಿನಂತಿಸಿದರು. 17 ಬಜೆಟ್ ಮಂಡಿಸುವಾಗ ರಾಜಕೀಯ ಪುನರ್ಜನ್ಮ ನೀಡಿದ ಬಾಗಲಕೋಟೆ ನೆನಪಾಗಲಿಲ್ಲವೇ ಎಂದು ಪ್ರಶ್ನಿಸಿದರು. 3 ವರ್ಷಗಳಿಂದ ಕೇವಲ ಗ್ಯಾರಂಟಿ ಎಂದು ಮೋಸ ಮಾಡಿದ್ದಾರೆ. ಬಡವರ ಮನಸ್ಸನ್ನು ಕದ್ದು ಮತಬ್ಯಾಂಕ್ ಮಾಡಿಕೊಳ್ಳುವ ಪ್ರಯತ್ನ ಇವರದು. 2018, 2023ರಲ್ಲಿ ನೀವು ಘೋಷಿಸಿದ ಯಾವುದಾದರೂ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೀರಾ ಎಂದು ಕಾಂಗ್ರೆಸ್ಸಿನವರನ್ನು ಪ್ರಶ್ನಿಸಿದರು.

ಹೆಂಡ, ಹಣದ ಹೊಳೆ ಹರಿಸಿ ಗೆಲ್ಲುವ ಪ್ರಯತ್ನ ಮಾಡಲಾಗುತ್ತಿದೆ. ಮುಖ್ಯಮಂತ್ರಿ, 20 ಸಚಿವರು, 50 ಜನ ಶಾಸಕರು ಚುನಾವಣೆ ಗೆಲ್ಲಲು ಭ್ರಷ್ಟಾಚಾರದಿಂದ ಮಾಡಿದ ಕೋಟ್ಯಂತರ ಹಣವನ್ನು ಹಂಚುತ್ತಿದ್ದಾರೆ ಎಂದು ಆರೋಪಿಸಿದರು.

ಚುನಾವಣೆಯಲ್ಲಿ ಅಧಿಕಾರಿಗಳನ್ನು ದುರುಪಯೋಗ ಮಾಡಿಕೊಂಡು, ಸರ್ಕಾರಿ ವಾಹನಗಳಲ್ಲಿ ಹಣ, ಕರಪತ್ರ ಹಂಚುತ್ತಿರುವುದು ನಾಚಿಕೆಗೇಡಿನ ಸಂಗತಿ. ಕಾಂಗ್ರೆಸ್ ಗೂಂಡಾಗಳನ್ನು ಕಳಿಸಿ ಅಲ್ಲಲ್ಲಿ ಗಲಾಟೆ ಮಾಡಿಸುತ್ತಿದ್ದಾರೆ. ಇದನ್ನು ಪ್ರತಿಯೊಬ್ಬರೂ ಮಾತನಾಡಿಕೊಳ್ಳುತ್ತಿದ್ದಾರೆ ಎಂದು ಟೀಕಿಸಿದರು. ಬಡವರು, ಕೃಷಿ ಕಾರ್ಮಿಕರ ಸಲುವಾಗಿ ಉದ್ಯೋಗ ಖಾತ್ರಿ ಜಿರಾಮ್‌ಜಿ ಯೋಜನೆಯನ್ನು ಏಕೆ ನಿಲ್ಲಿಸಿದ್ದೀರಿ ಎಂದು ಪ್ರಶ್ನಿಸಿದರು. ಬಡವರ ಬಗ್ಗೆ ಚಿಂತೆ ಇಲ್ಲ ಎಂದು ಆರೋಪಿಸಿದರು. ಇವರು ಎಸ್‌ಸಿ ಜನಾಂಗಕ್ಕೆ ವಿಶ್ವಾಸದ್ರೋಹ, ದೊಡ್ಡ ಅನ್ಯಾಯ ಮಾಡಿದ್ದಾರೆ. ಮೋದಿ ಅವರು ಎಲ್ಲ ಬಡವರಿಗಾಗಿ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಅವುಗಳನ್ನು ಬಾಗಲಕೋಟೆಯಲ್ಲಿ ಅನುಷ್ಠಾನಕ್ಕೆ ತರುತ್ತಿಲ್ಲ. ಈಗ ಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ಬಾಗಲಕೋಟೆಗೆ ಭರ್ಜರಿ ಯೋಜನೆ ಘೋಷಣೆ ಮಾಡುತ್ತಿದ್ದಾರೆ ಎಂದು ಆಕ್ಷೇಪಿಸಿದರು. ಅಭಿವೃದ್ಧಿಯ ಹರಿಕಾರ ವೀರಣ್ಣ ಚರಂತಿಮಠರನ್ನು ಗೆಲ್ಲಿಸಿ ಎಂದು ಮನವಿ ಮಾಡಿದರು.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ಧ್ವನಿ

ಖರ್ಗೆ ಬಂಧನಕ್ಕೆ ಬಿಜೆಪಿ ಆಗ್ರಹ

ಬೆಂಗಳೂರು: ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ವಿರುದ್ಧ ಮೊಕದ್ದಮೆ ದಾಖಲಿಸಿ ಅವರನ್ನು ಬಂಧಿಸಲು ಒತ್ತಾಯಿಸಿ ಬಿಜೆಪಿ ನಿಯೋಗ ಸೋಮವಾರ ಪೊಲೀಸ್ ಮಹಾನಿರ್ದೇಶಕರಿಗೆ ದೂರು ನೀಡಿದೆ.

ಬಳಿಕ ಮಾತನಾಡಿದ ಶಾಸಕ ಎಸ್.ಮುನಿರಾಜು, ಅಸ್ಸಾಂನಲ್ಲಿ ಭಾನುವಾರ ಚುನಾವಣಾ ಭಾಷಣ ಮಾಡುವಾಗ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ



ಮಲ್ಲಿಕಾರ್ಜುನ ಖರ್ಗೆ ಅವರು ನಮಾಜ್ ಮಾಡುವಾಗ ವಿಷಸರ್ಪ ಬಂದರೆ ನೀವು ನಮಾಜನ್ನು ನಿಲ್ಲಿಸಿ ಅದನ್ನು ಕೊಲ್ಲಿ; ನಮಾಜ್ ಮಾಡುವಾಗ ಬಿಜೆಪಿ, ಆರ್‌ಎಸ್‌ಎಸ್‌ನವರು ಬಂದರೆ ನಮಾಜನ್ನು ನಿಲ್ಲಿಸಿ ಅವರನ್ನು ಕೊಲ್ಲಿ; ಇದು ಕುರಾನ್‌ನಲ್ಲಿ ಉಲ್ಲೇಖ ಆಗಿದೆ ಎಂದಿದ್ದಾರೆಂದು ಆಕ್ಷೇಪಿಸಿದರು. ಇದು ಬೆಂಕಿ ಹಚ್ಚುವ ಕೆಲಸ ಎಂದು ಟೀಕಿಸಿದರು.

ಕೋಮುಗಲಭೆ ಹರಡುವ ಸಂದರ್ಭಗಳು ಬರಬಹುದು. ದೇಶದ್ರೋಹಿಗಳು, ಮೂಲಭೂತವಾದಿಗಳಿಗೆ ಬೆಂಬಲ ಸೂಚಿಸುವ ಮಾತುಗಳಿವು. ಇದರ ವಿರುದ್ಧ ಹೋರಾಟ ಮಾಡಲಾಗುತ್ತಿದೆ. ಡಿಜಿಪಿಯವರನ್ನು ಭೇಟಿ ಮಾಡಿ ದೂರು ನೀಡಿದ್ದೇವೆ ಎಂದರು. ಇದನ್ನು ಕೂಲಂಕಷವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ ಎಂದು ತಿಳಿಸಿದರು. ಇದು ದೇಶದ್ರೋಹಿ ಮಾತು. ಇದನ್ನಾಡಿದ ಖರ್ಗೆ ಅವರನ್ನು ಬಂಧಿಸಲು ಒತ್ತಾಯಿಸಿದರು. ಮಲ್ಲಿಕಾರ್ಜುನ ಖರ್ಗೆ ಅವರು ಸಂವಿಧಾನ ವಿರೋಧಿ ಮಾತನ್ನಾಡಿದ್ದು ಅವರ ವಿರುದ್ಧ ಕ್ರಮ ಕೈಗೊಳ್ಳಲು ಸಿ.ಕೆ. ರಾಮಮೂರ್ತಿ ಆಗ್ರಹಿಸಿದರು. ನಿಯೋಗದಲ್ಲಿ ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್.ಹರೀಶ್, ರಾಜ್ಯ ವಕ್ತಾರ ಎಸ್.ಪ್ರಕಾಶ್ ಮುಂತಾದ ಪ್ರಮುಖರಿದ್ದರು.



ಮತ ಪ್ರಚಾರ...

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಮಂಗಳವಾರ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಪರ ಡಿಸಿಎಂ ಡಿ.ಕೆ. ಶಿವಕುಮಾರ ಮತ ಪ್ರಚಾರ ಮಾಡಿದರು.

ಕೇಂದ್ರದಿಂದ ದಕ್ಷಿಣ ಭಾರತದ ನಿರ್ಲಕ್ಷ್ಯ: ಡಿ.ಕೆ. ಶಿವಕುಮಾರ

ಹುಬ್ಬಳ್ಳಿ: ವಿದೇಶದಿಂದ ಎರಡು ಶಿಪ್‌ಗಳು ಬಂದವು ಅವು ಏಕೆ ಗುಜರಾತ್‌ಗೆ ಹೋದವು? ಕೇಂದ್ರ ಸರ್ಕಾರಕ್ಕೆ ಉತ್ತರ ಭಾರತದ ಬಗ್ಗೆ ಹೆಚ್ಚು ಆದ್ಯತೆ ನೀಡುತ್ತದೆ. ದಕ್ಷಿಣ ಭಾರತದ ಬಗ್ಗೆ ನಿರ್ಲಕ್ಷ್ಯ ಮಾಡುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಕಿಡಿಕಾರಿದರು.



ಆಟೋ ಚಾಲಕರು ಗ್ಯಾಸ್ ಬಿಟ್ಟು ಪೆಟ್ರೋಲ್ ಬಳಸಬೇಕು ಎಂಬ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹೇಳಿಕೆಗೆ ಮಂಗಳವಾರ ಮಾಧ್ಯಮದವರೊಂದಿಗೆ ಪ್ರತಿಕ್ರಿಯಿಸಿದ ಅವರು, ಪ್ರಹ್ಲಾದ ಜೋಶಿ ಅವರು ರಾಜ್ಯದ ಜನರ ಹಿತಕ್ಕೆ ಮೊದಲು ಆದ್ಯತೆ ನೀಡಬೇಕು ಎಂದರು.

ಕೇರಳದಲ್ಲಿ ಕಳೆದ 10 ವರ್ಷದಿಂದ ಯಾವುದೇ ಅಭಿವೃದ್ಧಿ ಕಾರ್ಯಗಳು ಆಗಿಲ್ಲ. ಆದ್ದರಿಂದ ವಿಧಾನಸಭೆ ಚುನಾವಣೆಯಲ್ಲಿ ಇಂಡಿಯಾ ಮೈತ್ರಿ ಕೂಟಕ್ಕೆ ಸ್ಪಷ್ಟ ಬಹುಮತ ಸಿಗಲಿದೆ ತಿಳಿಸಿದರು. ನಾನು ಸೇರಿದಂತೆ ಹಲವು ನಾಯಕರು ಕೇರಳದಲ್ಲಿ ಚುನಾವಣಾ ಪ್ರಚಾರ ಮಾಡಿದ್ದೇವೆ. ಅಲ್ಲಿಯ ರಾಜಕೀಯ ಪಕ್ಷಗಳಿಗೆ ಶಿಸ್ತು ಇದ್ದು, ಅವರಿಂದ ನಾವು ಕಲಿಯುವುದು ಬಹಳಷ್ಟಿದೆ ಎಂದರು.

ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳನ್ನು ಪಡೆಯುತ್ತಿರುವ ಜನ ಖುಷಿ ಪಡುತ್ತಿದ್ದಾರೆ. ಈ ಹಿನ್ನೆಲೆ ಇಲ್ಲಿ ನಡೆಯುವ ಎರಡು ಉಪಚುನಾವಣೆಯಲ್ಲಿ ನಾವು ಗೆಲ್ಲುತ್ತೇವೆ ಎಂದು ತಿಳಿಸಿದರು. 2028ರ ವರೆಗೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿರುತ್ತಾರೆ ಎಂಬ ಸಚಿವ ಜಮೀರ್ ಅಹ್ಮದ ಹೇಳಿಕೆ ಪ್ರತಿಕ್ರಿಯಿಸಿದ ಅವರು, ಬೇರೆ ಅವರ ಪ್ರಶ್ನೆಗೆ ನಾನು ಉತ್ತರ ನೀಡುವುದಿಲ್ಲ, ನಮ್ಮಿಬ್ಬರ ಮಾತು ಬಿಟ್ಟರೆ ಬೇರೆ ಅವರ ಮಾತು ಗೌಣ. ನನ್ನ ತಾಳ್ಮೆಗೆ ಕಾಲವೇ ಉತ್ತರ ಹೇಳಲಿದೆ. ನಾಯಕತ್ವ ಬದಲಾವಣೆ ಬಗ್ಗೆ ನಿಮಗೇಕೆ ಸಮಸ್ಯೆ ಎಂದು ಪ್ರಶ್ನಿಸಿದರು.

ಕಿರುಸುದ್ದಿ

ಐಪಿಎಲ್ ಟಿಕೆಟ್ ಅಕ್ರಮ ಮಾರಾಟ: 11 ಮಂದಿ ಸೆರೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇತ್ತೀಚೆಗೆ ನಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಚೆನ್ನೈ ಸೂಪರ್‌ಕಿಂಗ್ಸ್ ನಡುವಿನ ಟಾಟಾ ಐಪಿಎಲ್ ಟಿ–20 ಪಂದ್ಯದ ವೇಳೆ ಟಿಕೆಟ್‌ಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ಜಾಲವನ್ನು ಸಿಸಿಬಿಯ ವಿಶೇಷ ವಿಚಾರಣಾ ದಳದ ಅಧಿಕಾರಿಗಳು ಭೇದಿಸಿದ್ದಾರೆ. ಏಪ್ರಿಲ್ 5, ರಂದು ನಡೆದ ಪಂದ್ಯದ ಸಂದರ್ಭದಲ್ಲಿ ಕಬ್ಬನ್‌ಪಾರ್ಕ್ ಮತ್ತು ಚಾಮರಾಜಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಏಕಕಾಲಕ್ಕೆ ದಾಳಿ ನಡೆಸಿದ ಅಧಿಕಾರಿಗಳು ಒಟ್ಟು 11 ವ್ಯಕ್ತಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಂಧಿತರಿಂದ ಸುಮಾರು 4.53 ಲಕ್ಷ ರೂ. ಮೌಲ್ಯದ 28 ಐಪಿಎಲ್ ಟಿಕೆಟ್‌ಗಳು, 8 ಮೊಬೈಲ್ ಫೋನ್‌ಗಳು ಮತ್ತು ಆನ್‌ಲೈನ್‌ನಲ್ಲಿ ಟಿಕೆಟ್ ಮಾರಾಟ ಮಾಡಲು ಯತ್ನಿಸಿದ ವಾಟ್ಸಪ್ ಸ್ಕ್ರೀನ್‌ಶಾಟ್ ಪ್ರತಿಗಳನ್ನು ಜಪ್ತಿಮಾಡಿದ್ದಾರೆ. ಕಬ್ಬನ್‌ಪಾರ್ಕ್ ಠಾಣಾ ವ್ಯಾಪ್ತಿಯಲ್ಲಿ 10 ಮಂದಿಯನ್ನು ಬಂಧಿಸಿ ಅವರಿಂದ 18 ಟಿಕೆಟ್ ಹಾಗೂ 7 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ. ಇನ್ನು ಚಾಮರಾಜಪೇಟೆ ವ್ಯಾಪ್ತಿಯಲ್ಲಿ ಓರ್ವ ಆರೋಪಿಯನ್ನು ಬಂಧಿಸಿ ಆತನಿಂದ 10 ಟಿಕೆಟ್ ಹಾಗೂ ಒಂದು ಮೊಬೈಲ್ ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಒಟ್ಟು 7 ಪ್ರಕರಣಗಳು ದಾಖಲಾಗಿದ್ದು, ಸದ್ಯ ಆರೋಪಿಗಳ ವಿರುದ್ಧ ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದರು.

ಗುಂಡೇಟಿನಿಂದ ಚಿರತೆ ಸಾವು: ತನಿಖೆಗೆ ಆದೇಶ

ಮೈಸೂರು: ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಗುಳ್ಳೆದಹಳ್ಳ ರಾಜ್ಯ ಅರಣ್ಯದಿಂದ 2 ಕಿ.ಮೀ ದೂರದಲ್ಲಿರುವ ಕೊಪ್ಪ ವಿಭಾಗದಲ್ಲಿ ಗುಂಡೇಟಿನಿಂದ ಚಿರತೆ ಸಾವಿಗೀಡಾಗಿರುವ ಘಟನೆ ನಡೆದಿದೆ. ಎರಡು ವರ್ಷ ವಯಸ್ಸಿನ ಹೆಣ್ಣು ಚಿರತೆಯೊಂದು ಗುಂಡೇಟಿನಿಂದ ಮೃತಪಟ್ಟಿರುವುದು ಕಂಡು ಬಂದಿದೆ. ಚಿರತೆಯ ದೇಹದೊಳಗೆ ಮೂರು ಗುಂಡುಗಳು ಪತ್ತೆಯಾಗಿವೆ.



ಈ ಘಟನೆ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಅವರು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಲಿಖಿತ ಸೂಚನೆ ನೀಡಿರುವ ಅವರು, ಚಿರತೆ ಹತ್ಯೆ ಅತ್ಯಂತ ನೋವಿನ ಸಂಗತಿಯಾಗಿದ್ದು, ವನ್ಯಜೀವಿ ಅಂಗಾಂಗಕ್ಕಾಗಿ ಕಳ್ಳಬೇಟೆ ಇನ್ನೂ ನಡೆಯುತ್ತಿದೆ ಎಂಬುದಕ್ಕೆ ಪುಷ್ಟಿ ನೀಡುತ್ತಿದೆ. ಮೃತ ಚಿರತೆಯ ಮರಣೋತ್ತರ ಪರೀಕ್ಷೆ ನಡೆಸಿದ ಡಾ. ಆದರ್ಶ್ ಗುಂಡೇಟಿನಿಂದ ಚಿರತೆ ಹತ್ಯೆಯಾಗಿದೆ ಎಂದು ವರದಿ ಮಾಡಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ಸಮಗ್ರ ತನಿಖೆ ನಡೆಸಿ, ವನ್ಯಜೀವಿ ಕಳ್ಳಬೇಟೆಗಾರರನ್ನು ಪತ್ತೆ ಹಚ್ಚಿ ಕಾನೂನು ರೀತ್ಯ ಶಿಕ್ಷೆ ಕೊಡಿಸಲು ಮತ್ತು ಈ ವಲಯದಲ್ಲಿ ಗಸ್ತು ವೈಫಲ್ಯವಾಗಿದ್ದಲ್ಲಿ ಸಂಬಂಧಿತ ಗಸ್ತು ಸಿಬ್ಬಂದಿಯ ಮೇಲೆ ಶಿಸ್ತುಕ್ರಮ ಜರುಗಿಸಲು ಹಾಗೂ ಅರಣ್ಯ ಅಪರಾಧ ನಿಯಂತ್ರಣ ಕೋಶವನ್ನು ಹೆಚ್ಚು ಸಕ್ರಿಯಗೊಳಿಸಲು ಸೂಚನೆ ನೀಡಿದ್ದಾರೆ.

ಅಪ್ರಾಪ್ತರ ಗರ್ಭಧಾರಣೆಯ ಲೆಕ್ಕಪರಿಶೋಧನೆ ಕಡ್ಡಾಯ

ಬೆಂಗಳೂರು: ತಾಲೂಕು ಆರೋಗ್ಯ ಅಧಿಕಾರಿಯಿಂದ ಹದಿಹರೆಯದ ಗರ್ಭಧಾರಣೆಯ ಲೆಕ್ಕಪರಿಶೋಧನೆ ಕಡ್ಡಾಯವಾಗಿ ಅನುಷ್ಠಾನ ಆಗಬೇಕೆಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿದ್ದು, ಗುರುತಿಸಲಾದ ಎಲ್ಲಾ ಹದಿಹರೆಯದ ಗರ್ಭಧಾರಣೆಯನ್ನು ಎಲ್ಲಾ ಸರ್ಕಾರಿ ಮತ್ತು ಖಾಸಗಿ ಆರೋಗ್ಯ ಸಂಸ್ಥೆಗಳು ಕಡ್ಡಾಯವಾಗಿ ವರದಿ ಮಾಡಬೇಕಿದೆ. ಲೆಕ್ಕಪರಿಶೋಧನೆಯಲ್ಲಿ ಮದುವೆ ವಯಸ್ಸು, ಶೈಕ್ಷಣಿಕ ಸ್ಥಿತಿ, ಶಾಲಾ ಹಾಜರಾತಿ, ಸಂತಾನೋತ್ಪತ್ತಿ ಆರೋಗ್ಯದ ಬಗ್ಗೆ ಜಾಗೃತಿ, ಗರ್ಭನಿರೋಧಕ ಮತ್ತು ಸಮಾಲೋಚನೆ ಸೇವೆಗಳ ಲಭ್ಯತೆ, ಸಾಮಾಜಿಕ–ಆರ್ಥಿಕ ಮತ್ತು ಕೌಟುಂಬಿಕ ದುರ್ಬಲತೆಗಳು ಬಗ್ಗೆ ಮಾಹಿತಿ ಸಂಗ್ರಹಿಸಬೇಕಿದೆ.

ಮಾರ್ಗಸೂಚಿಗಳ ಪ್ರಕಾರ ಗರ್ಭನಿರೋಧಕ ಸೇವೆಗಳು ಮತ್ತು ಗರ್ಭಧಾರಣೆಯ ಪರೀಕ್ಷಾ ಕಿಟ್‌ಗಳನ್ನು ಒದಗಿಸುವುದು. ಶಾಲೆ ಬಿಟ್ಟವರು, ವಲಸಿಗರು ಮತ್ತು ಸಾಮಾಜಿಕವಾಗಿ ದುರ್ಬಲ ಕುಟುಂಬಗಳು ಸೇರಿದಂತೆ ದುರ್ಬಲ ಹದಿಹರೆಯದ ಹುಡುಗಿಯರ ಗುರುತಿಸುವಿಕೆ ಮತ್ತು ಮ್ಯಾಪಿಂಗ್ ಸೇರಿದಂತೆ ಹದಿಹರೆಯದ ಗರ್ಭಿಣಿ ಹುಡುಗಿಯರಿಗೆ ಸಮಾಲೋಚನೆ ನಡೆಸಬೇಕಿದೆ.

ಎಲ್ಲಾ ಪ್ರಕರಣಗಳನ್ನು ಕಟ್ಟುನಿಟ್ಟಾದ ಗೌಪ್ಯತೆಯಿಂದ ಮತ್ತು ಸಂಬಂಧಿತ ಮಕ್ಕಳ ರಕ್ಷಣಾ ಕಾನೂನುಗಳ ಅಡಿಯಲ್ಲಿ ಕಡ್ಡಾಯ ವರದಿ ಮಾಡುವ ಅವಶ್ಯಕತೆಗಳನ್ನು ಒಳಗೊಂಡಂತೆ ಅನ್ವಯವಾಗುವ ಕಾನೂನು ನಿಬಂಧನೆಗಳಿಗೆ ಅನುಸಾರವಾಗಿ ನಿರ್ವಹಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ರಾಜ್ಯದ ಮುಂದಿನ ಭವಿಷ್ಯ ತೀರ್ಮಾನ: ಪ್ರತಿಪಕ್ಷ ನಾಯಕ ಅಶೋಕ

ಬಡವ-ಶ್ರೀಮಂತರ ಸ್ಪರ್ಧೆ

ಬೆಂಗಳೂರು: ರಾಜ್ಯದ ಎರಡು ಕ್ಷೇತ್ರಗಳಲ್ಲಿ ನಡೆಯುವ ಉಪಚುನಾವಣೆಯಲ್ಲಿ ಬಡವರು ಹಾಗೂ ಶ್ರೀಮಂತರ ನಡುವೆ ಸ್ಪರ್ಧೆ ನಡೆಯಲಿದೆ. ಇದರಲ್ಲಿ ಕಾಂಗ್ರೆಸ್ ಸೋತು ಮುಂದಿನ ರಾಜ್ಯದ ಭವಿಷ್ಯ ತೀರ್ಮಾನವಾಗಲಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.



ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಾವಣಗರೆ ಹಾಗೂ ಬಾಗಲಕೋಟೆಯಲ್ಲಿ ಬಡವರು ಮತ್ತು ಶ್ರೀಮಂತರ ನಡುವೆ ಚುನಾವಣೆ ನಡೆಯುತ್ತಿದೆ. ಬಡವರನ್ನೇ ಗೆಲ್ಲಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿರುವುದರಿಂದ ಬಡ ಅಭ್ಯರ್ಥಿಗಳನ್ನು ಬಿಜೆಪಿಯಿಂದ ಕಣಕ್ಕಿಳಿಸಲಾಗಿದೆ ಎಂದರು.

ದಾವಣಗರೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆದ್ದರೆ ಮುಂದೆ ಮುಸ್ಲಿಮರಿಗೆ ಅವಕಾಶ ಸಿಗುವುದಿಲ್ಲ ಎಂದು ಗೊತ್ತಾಗಿ ಮುಸ್ಲಿಮರು ಕಾಂಗ್ರೆಸ್ ಪಕ್ಷವನ್ನು ವಿರೋಧಿಸುತ್ತಿದ್ದಾರೆ. ಸಚಿವ ಜಮೀರ್ ಅಹ್ಮದ್ ಕ್ಷೇತ್ರಕ್ಕೆ ಪ್ರಚಾರಕ್ಕೆ ಬಾರದೆ ಓಡಿದ್ದು, ಅವರ ಬಗ್ಗೆ ಭಿನ್ನಾಭಿಪ್ರಾಯವಿದೆ. ಹಿಂದುಳಿದ ವರ್ಗಗಳು ಒಂದಾಗಬೇಕೆಂದು ಹೇಳುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಂದು ಟಿಕೆಟ್ ಕೂಡ ಹಿಂದುಳಿದವರಿಗೆ ನೀಡಿಲ್ಲ ಎಂದು ತಿಳಿಸಿದರು.

ದಾವಣಗೆರೆಯಲ್ಲಿ ಸಾಮಾನ್ಯ ವ್ಯಕ್ತಿಗೆ ಬಿಜೆಪಿ ಟಿಕೆಟ್ ನೀಡಿದೆ. ಆದರೆ, ಕಾಂಗ್ರೆಸ್ ಬಲಾಢ್ಯರಿಗೆ ಟಿಕೆಟ್ ನೀಡಿದೆ. ಬಾಗಲಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿಯ ಬಗ್ಗೆ ಉತ್ತಮ ಅಭಿಪ್ರಾಯವಿದೆ. ಕಾಂಗ್ರೆಸ್ ಎರಡೂ ಕಡೆ ವಂಶಾಡಳಿತಕ್ಕೆ ಅವಕಾಶ ಕೊಟ್ಟಿದೆ. ಆದ್ದರಿಂದ ಎರಡೂ ಕಡೆ ಬಿಜೆಪಿಗೆ ಗೆಲ್ಲುವ ಅವಕಾಶವಿದೆ. ಕಾಂಗ್ರೆಸ್ ಮುಖಂಡರು ಬಾಗಲಕೋಟೆಯಲ್ಲಿ ರೌಡಿಸಂ ಮಾಡಿದ್ದು, ಆ ಬಗ್ಗೆ ದೂರು ಸಲ್ಲಿಕೆಯಾಗಿದೆ. ಸರ್ಕಾರದ ಭ್ರಷ್ಟಾಚಾರ, ಗ್ಯಾರಂಟಿಗಳ ಅಸಮರ್ಪಕ ಜಾರಿಯಿಂದಾಗಿ ಜನವಿರೋಧಿ ಅಲೆ ಉಂಟಾಗಿದೆ. ಬಜೆಟ್ ಮಂಡನೆ ಬಳಿಕ ಎಲ್ಲಕ್ಕೂ ತೆರಿಗೆ ಹೇರುವ ಕೆಲಸ ಮಾಡುತ್ತಿದ್ದಾರೆ ಎಂದರು.

ರಾಜ್ಯದಲ್ಲಿ ಆಡಳಿತ ಕುಸಿದಿದೆ. ಯಾವುದೇ ಅಭಿವೃದ್ಧಿ ಯೋಜನೆ ನೀಡುತ್ತಿಲ್ಲ. ಮುಖ್ಯಮಂತ್ರಿ ಕುರ್ಚಿಗಾಗಿ ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಕಾದಾಡುತ್ತಿದ್ದಾರೆ. ಕೇರಳ ವಿಧಾನಸಭಾ ಚುನಾವಣೆ ಗೆಲ್ಲುವ ವಿಶ್ವಾಸವಿಲ್ಲದೆ ಸಿದ್ದರಾಮಯ್ಯ ಮರಳಿ ಬಂದಿದ್ದಾರೆ. ಈ ಉಪ ಚುನಾವಣೆ ಕಾಂಗ್ರೆಸ್‌ನ ಅಸಲಿ ಮುಖವನ್ನು ಬಯಲು ಮಾಡಲಿದೆ. ಅಲ್ಪಸಂಖ್ಯಾತರನ್ನು ಮತಬ್ಯಾಂಕ್ ಮಾಡಿಕೊಳ್ಳುವ ಪ್ರಯತ್ನ ಕಾಂಗ್ರೆಸ್‌ನಿಂದ ನಡೆದಿದೆ ಎಂದರು.

ಈ ಉಪ ಚುನಾವಣೆಯು ಕಾಂಗ್ರೆಸ್ ಸರ್ಕಾರವನ್ನು ಕಿತ್ತುಹಾಕಲು ಅವಕಾಶ ಕೊಡಲಿದ್ದು, ಭವಿಷ್ಯವನ್ನು ತೀರ್ಮಾನಿಸಲಿದೆ. ಯುವಜನರು ಉದ್ಯೋಗವಿಲ್ಲದೆ ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ. ಎಲ್ಲ ಕಡೆ ಆಡಳಿತ ವಿರೋಧಿ ಅಲೆ ಕಂಡುಬಂದಿದೆ. ಸರ್ಕಾರಕ್ಕೆ ಬುದ್ಧಿ ಕಲಿಸಲು ಇದು ಜನರಿಗೆ ಸಿಕ್ಕ ಅವಕಾಶ ಎಂದರು.

ನಾಲಿಗೆ ಹರಿಬಿಟ್ಟ ಖರ್ಗೆ

ಮಂಗಳೂರಲ್ಲಿ ಕುಕ್ಕರ್ ಬಾಂಬ್ ಸ್ಫೋಟ ಮಾಡಿದವರು ಯಾರು ಎಂದು ಮಲ್ಲಿಕಾರ್ಜುನ ಖರ್ಗೆ ತಿಳಿಸಲಿ. ಇವರಿಗೆ ಭಯೋತ್ಪಾದಕರು ದೇವದೂತರಂತೆ ಕಾಣುತ್ತಾರೆ. ನಕ್ಸಲರ ವಿರುದ್ಧ ಒಂದೇ ಒಂದು ಮಾತು ಬಾಯಲ್ಲಿ ಬರುವುದಿಲ್ಲ. ಬಿಜೆಪಿ ಹಾಗೂ ಆರ್‌ಎಸ್‌ಎಸ್ ಕುರಿತು ಮಾತ್ರ ಟೀಕೆ ಮಾಡುತ್ತಾರೆ. ಈಗ ಎಲ್ಲ ರಾಜ್ಯಗಳಲ್ಲಿ ವಿಷದ ಹಾವುಗಳು ಮುಕ್ತವಾಗುತ್ತಿವೆ. ಇನ್ನು ಮೂರು ರಾಜ್ಯಗಳಲ್ಲಿರುವ ಹಾವುಗಳನ್ನು ಓಡಿಸಬೇಕಿದೆ. ಜನರು ಯಾರು ಹಾವು ಎಂದು ನಿರ್ಧಾರ ಮಾಡುತ್ತಾರೆ. ಇಂತಹ ಮಾತಿಗೆ ಮಗನೇ ಪ್ರೇರಣೆ ಎಂದು ಆರ್. ಅಶೋಕ ಹೇಳಿದರು.

ಕೇಂದ್ರ ಸರ್ಕಾರಕ್ಕೆ ಡಿ.ಕೆ. ಸುರೇಶ್ ಒತ್ತಾಯ

ಉತ್ತರದ ರಾಜ್ಯಗಳಿಗೆ ತೆರಿಗೆ ಹಂಚಿಕೆಯಾಗಲಿ

ಬೆಂಗಳೂರು: ಲೋಕಸಭಾ, ವಿಧಾನಸಭಾ ಕ್ಷೇತ್ರಗಳ ಮರು ವಿಂಗಡಣೆಯಿಂದ ದಕ್ಷಿಣ ಭಾರತದ ರಾಜ್ಯಗಳಲ್ಲಿ ಕ್ಷೇತ್ರಗಳು ಕಡಿಮೆಯಾಗುವುದರ ಜೊತೆಗೆ ಆರ್ಥಿಕ ಮುಗ್ಗಟನ್ನು ಎದುರಿಸಬೇಕಾಗುತ್ತದೆ. ನಮ್ಮ ತೆರಿಗೆ ಉತ್ತರದ ರಾಜ್ಯಗಳಿಗೆ ಹ'ಂಚಿಕೆ'ಯಾಗ'ಲಿದೆ' ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಕಳವಳ ವ್ಯಕ್ತಪಡಿಸಿದರು.



ಮಂಗಳವಾರ ತಮ್ಮ ನಿವಾಸದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕ್ಷೇತ್ರಗಳ ಮರು ವಿಂಗಣೆಯಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗಲಿದೆ. ದಕ್ಷಿಣದ ರಾಜ್ಯಗಳು ಎಚ್ಚೆತ್ತುಕೊಳ್ಳಬೇಕು. ನಾನು ಈ ಬಗ್ಗೆ ಹಿಂದೆಯೇ ಹೇಳಿದ್ದೆ ಎಂದರು. ಒಂದಲ್ಲ ಒಂದು ದಿನ ಈ ಕೂಗು ಎದ್ದೇಳಲಿದೆ ಎಂದಿದ್ದೆ, ಜನರು ಪರ್ಯಾಯ ಮಾರ್ಗಗಳನ್ನು ಆಲೋಚನೆ ಮಾಡುತ್ತಾರೆ ಎಂದು ಹೇಳಿದ್ದೆ. ಎಷ್ಟು ಸೀಟು ಹೋಗಲಿದೆ, ಬರಲಿದೆ ಎನ್ನುವುದು ಮುಖ್ಯವಲ್ಲ, ಒಟ್ಟಾರೆ ದಕ್ಷಿಣದ ಹಣವನ್ನು ಉತ್ತರದ ರಾಜ್ಯಗಳಿಗೆ ತೆಗೆದುಕೊಂಡು ಹೋಗುವಂತಹ ಹುನ್ನಾರ ಇದಾಗಿದೆ ಎಂದು ಹೇಳಿದರು. 2011ರ ಜನಗಣತಿಯ ಅನ್ವಯ ವಿಂಗಡಣೆ ಎಂದು ಕೇಂದ್ರ ಸರ್ಕಾರ ಹೇಳುತ್ತಿದೆ. ಇದು ಇನ್ನೂ ಮಾರಕ. 2011ರ ಜನಗಣತಿ ಪ್ರಕಾರ ಬೆಂಗಳೂರಿನ ಜನಸಂಖ್ಯೆ 60 ರಿಂದ 70 ಲಕ್ಷ. ಈಗ 1.40 ಕೋಟಿ ಜನಸಂಖ್ಯೆಯಿದೆ. ಕರ್ನಾಟಕದಲ್ಲಿ 7 ಕೋಟಿಗೂ ಮೀರಿ ಜನಸಂಖ್ಯೆ ಬೆಳೆಯುತ್ತಿದೆ. ಇದರ ಜೊತೆಗೆ ಆರ್ಥಿಕ ಸವಾಲು ಸೇರಿದಂತೆ ಅನೇಕ ಸವಾಲುಗಳು ಎದುರಾಗುತ್ತವೆ. ಎಲ್ಲಾ ಪಕ್ಷಗಳು ಇದರ ಬಗ್ಗೆ ಚಿಂತನೆ ಮಾಡಬೇಕು ಎಂದು ತಿಳಿಸಿದರು.

ಪ್ರಧಾನಿ ಸಂದೇಶ ನೀಡಲಿ

ಯುದ್ಧದಿಂದ ಸಾಕಷ್ಟು ಸಮಸ್ಯೆಗಳನ್ನು ನಮ್ಮ ದೇಶ ಎದುರಿಸುತ್ತಿದೆ. ಇದರ ಬಗ್ಗೆ ಕೇಂದ್ರ ಸರ್ಕಾರ ತನ್ನ ಮೌನವನ್ನು ಮುರಿದಿಲ್ಲ. ಯಾವ ವಿಚಾರದಲ್ಲಿ ಸಮಸ್ಯೆಯಿದೆ. ಮುಂದಿನ ಆರು ತಿಂಗಳು ಹೇಗೆ ಇವುಗಳನ್ನು ಎದುರಿಸಬೇಕು. ಇದಕ್ಕೆ ಯಾವ ಕ್ರಮಗಳನ್ನು ಅನುಸರಿಸಬೇಕು ಎನ್ನುವ ಸಂದೇಶವನ್ನು ಪ್ರಧಾನಿಯವರು ನೀಡಬೇಕು ಎಂದರು.

ವಿದ್ಯಾರ್ಥಿಗಳಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಕಿವಿಮಾತು

ಸಮಾಜ ಸೇವೆಗೂ ಜ್ಞಾನ ದಾರಿಯಾಗಲಿ

ಬೆಂಗಳೂರು: ವಿದ್ಯಾರ್ಥಿಗಳು ತಮ್ಮ ಜ್ಞಾನವನ್ನು ಸಮಾಜ ಮತ್ತು ರಾಷ್ಟ್ರದ ಕಲ್ಯಾಣಕ್ಕಾಗಿ ಬಳಸಬೇಕು ಎಂದು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಕರೆ ನೀಡಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವತಿಯಿಂದ ಮಂಗಳವಾರ ಜ್ಞಾನಜ್ಯೋತಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾದ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ನೀವು ಸಂಪಾದಿಸಿರುವ ಜ್ಞಾನವು ವೈಯಕ್ತಿಕ ಪ್ರಗತಿಗೆ ಮಾತ್ರ ಸೀಮಿತವಾಗಿಸದೇ ಸಮಾಜ ಸೇವೆಗೂ ದಾರಿಯಾಗಬೇಕು. ಜ್ಞಾನವು ಜನರ ಹಿತಕ್ಕಾಗಿ ಬಳಸಿದಾಗ ಮಾತ್ರ ಅದರ ನಿಜವಾದ ಮೌಲ್ಯ ಹೊರಹೊಮ್ಮುತ್ತದೆ. ಜ್ಞಾನವು ವಿನಮ್ರತೆ ತರುತ್ತದೆ. ವಿನಮ್ರತೆ ಯೋಗ್ಯತೆಯನ್ನು, ಯೋಗ್ಯತೆ ಸಮೃದ್ಧಿಯನ್ನು ಮತ್ತು ಸಮೃದ್ಧಿ ಸದಾಚಾರವನ್ನು ತರುತ್ತದೆ ಎಂದರು.

ಸಂಸ್ಕೃತವು ಕೇವಲ ಒಂದು ಭಾಷೆಯಲ್ಲ, ಅದು ಭಾರತದ ಆತ್ಮವಾಗಿದೆ. ನಮ್ಮ ನಾಗರಿಕತೆ, ಸಂಸ್ಕೃತಿ ಮತ್ತು ತತ್ತ್ವಶಾಸ್ತ್ರದ ಮೂಲಾಧಾರವಾಗಿದೆ. ವೇದ, ಉಪನಿಷತ್ತು ಮತ್ತು ಮಹಾಕಾವ್ಯಗಳು ಸಂಸ್ಕೃತದಲ್ಲೇ ಹುಟ್ಟಿಕೊಂಡಿವೆ. ಕೃತಕ ಬುದ್ಧಿಮತ್ತೆ ಮತ್ತು ದತ್ತಾಂಶ ವಿಜ್ಞಾನದ ಕ್ಷೇತ್ರದಲ್ಲಿ ಸಂಸ್ಕೃತದ ರಚನಾತ್ಮಕ ಸ್ಪಷ್ಟತೆಗೆ ಉಪಯುಕ್ತವಾಗಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಸ್ವಾವಲಂಬಿ ಭಾರತ ಮತ್ತು ಅಭಿವೃದ್ಧಿ ಹೊಂದಿದ ಭಾರತ ನಿರ್ಮಾಣದಲ್ಲಿ ಯುವಕರ ಪಾತ್ರ ಅತ್ಯಂತ ಮುಖ್ಯವಾಗಿದೆ. ಪ್ರಾಚೀನ ಜ್ಞಾನ ಮತ್ತು ಆಧುನಿಕ ವಿಜ್ಞಾನವನ್ನು ಸಂಯೋಜಿಸಿ, ನವೀನತೆ ಮತ್ತು ಸಂಶೋಧನೆಯಲ್ಲಿ ತೊಡಗಿಕೊಳ್ಳಬೇಕು. ಇಡೀ ಜಗತ್ತು ಮಾನಸಿಕ ಒತ್ತಡ, ಪರಿಸರ ಬಿಕ್ಕಟ್ಟು, ಸಾಮಾಜಿಕ ಅಸಮತೋಲನ ಮತ್ತು ಮೌಲ್ಯಹೀನತೆಯಂತಹ ಸವಾಲುಗಳನ್ನು ಎದುರಿಸುತ್ತಿರುವಾಗ, ಭಾರತೀಯ ಜ್ಞಾನ ಪರಂಪರೆ, ಸಂಸ್ಕೃತ ಸಾಹಿತ್ಯ ಮತ್ತು ಸಂಸ್ಕೃತದ ವಸುಧೈವ ಕುಟುಂಬಕಂ ಹಾಗೂ ಸರ್ವೇ ಭವಂತು ಸುಖಿನಃ ಎಂಬ ಶಾಶ್ವತ ತತ್ತ್ವಗಳು ಮಾನವೀಯತೆಗೆ ಹೊಸ ದಿಕ್ಕನ್ನು ನೀಡುತ್ತಿವೆ ಎಂದು ತಿಳಿಸಿದರು.

ಮುಂಬರುವ ವರ್ಷಗಳಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು



ಪ್ರಾಚೀನ ಜ್ಞಾನ ಮತ್ತು ಆಧುನಿಕ ವಿಜ್ಞಾನದ ನಡುವೆ ಸೇತುವೆಯನ್ನು ನಿರ್ಮಿಸಲು ಶ್ರಮಿಸುತ್ತದೆ ಎಂದು ನನಗೆ ವಿಶ್ವಾಸವಿದೆ. ನಮ್ಮ ಧರ್ಮಗ್ರಂಥಗಳಲ್ಲಿ ಲಭ್ಯವಿರುವ ಯೋಗ, ಆಯುರ್ವೇದ, ಧ್ಯಾನ, ಪರಿಸರ ಸಮತೋಲನ, ಕುಟುಂಬ ವ್ಯವಸ್ಥೆ ಮತ್ತು ನೈತಿಕ ಜೀವನದ ತತ್ವಗಳು ಸಾವಿರಾರು ವರ್ಷಗಳ ಹಿಂದೆ ಎಷ್ಟು ಪ್ರಸ್ತುತವಾಗಿದ್ದವೋ ಇಂದಿಗೂ ಅಷ್ಟೇ ಪ್ರಸ್ತುತವಾಗಿವೆ ಎಂದರು.

ಸಂಸದ ಡಾ.ಸಿ.ಎನ್.ಮಂಜುನಾಥ್ ಮಾತನಾಡಿ, ಸಂಸ್ಕೃತ ಕೇವಲ ಒಂದು ಭಾಷೆ ಅಲ್ಲ, ಬದಲಾಗಿ ಅದು ನಮ್ಮ ನೈತಿಕ ಮೌಲ್ಯ, ಸಿದ್ಧಾಂತ, ಸಾಂಸ್ಕೃತಿಕ ಪರಂಪರೆಯ ಅಭಿವ್ಯಕ್ತಿಯಾಗಿದೆ. ಸಂಸ್ಕೃತ ಭಾಷೆಯಲ್ಲಿ ವಿಪುಲವಾದ ಜ್ಞಾನ ಸಂಪತ್ತು ಅಡಗಿದೆ ಎಂದರು. ಭಿಕ್ಷು ಆನಂದ ಥೇರೊ, ಡಾ.ಪುಷ್ಪಾ ದೀಕ್ಷಿತ್, ಡಾ.ವ್ಯಾಸನಕೆರೆ ಪ್ರಭಂಜನಾಚಾರ್ಯ, ಪ್ರೊ. ಶಿಂಗಪ್ಪ ಎಚ್.ಎಂ., ಪ್ರೊ.ಸುಕಾಂತ್ ಕುಮಾರ್ ಸೇನಾಪತಿ ಅವರಿಗೆ ಗೌರವ ಪದವಿ, 42 ವಿದ್ಯಾರ್ಥಿಗಳಿಗೆ ನಗದು ಬಹುಮಾನ, 53 ವಿದ್ಯಾರ್ಥಿಗಳಿಗೆ ಸ್ವರ್ಣ ಪದಕ, 36 ಪಿಎಚ್.ಡಿ ಪದವಿ ಹಾಗೂ 917 ವಿದ್ಯಾರ್ಥಿಗಳಿಗೆ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ವಿವಿ ಕುಲಪತಿ ಪ್ರೊ. ಅಹಲ್ಯಾ ಎಸ್. ಉಪಸ್ಥಿತರಿದ್ದರು.

ಪಂಚಮಸಾಲಿ ಸಮಾಜದ ಬೇಡಿಕೆ ಆದ್ಯತೆ ಮೇಲೆ ಈಡೇರಿಕೆ: ಸಿಎಂ

ಬಾಗಲಕೋಟೆ: ಪಂಚಮಸಾಲಿ ಸಮಾಜದ ಎಲ್ಲ ಬೇಡಿಕೆಗಳನ್ನು ಆದ್ಯತೆ ಮೇಲೆ ಈಡೇರಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಮಂಗಳವಾರ ನಡೆದ ಪಂಚಮಸಾಲಿ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಸಮಾಜ ಬಂಧುಗಳು ಪಕ್ಷಕ್ಕೆ ನಿರಂತರ ಬೆಂಬಲ ನೀಡುತ್ತಿದ್ದು, ಪ್ರಸಕ್ತ ಚುನಾವಣೆಯಲ್ಲೂ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಅವರನ್ನು ಬೆಂಬಲಿಸಬೇಕು ಎಂದು ಕೋರಿದರು. ದಿ.ಎಚ್.ವೈ.ಮೇಟಿ ಅವರು ಜಿಲ್ಲೆಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದಾರೆ. ಅಭಿವೃದ್ಧಿ ಬಗ್ಗೆ ಅವರು ಇನ್ನೂ ಸಾಕಷ್ಟು ಕನಸುಗಳನ್ನು ಕಂಡಿದ್ದರು. ಆ ಕನಸುಗಳು ಸಾಕಾರಗೊಳ್ಳಲು ಮತ್ತೊಮ್ಮೆ ಕಾಂಗ್ರೆಸ್‌ಗೆ ಮತ ನೀಡಬೇಕು. ನಿಮ್ಮ ಸಮಾಜದ ಬೇಡಿಕೆಗಳನ್ನು



ಈಡೇರಿಸಲಾಗುವುದು ಎಂದರು.

ಸಮಾಜದ ಪರವಾಗಿ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ವೀಣಾ ಕಾಶಪ್ಪನವರ ಮಾತನಾಡಿ, ಸಮಾಜದ ಎಲ್ಲ ಬಂಧುಗಳು ಪಕ್ಷದ ಬೆಂಬಲಕ್ಕೆ ನಿಂತಿದ್ದಾರೆ. ಸಿಎಂ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಎಲ್ಲ ಭರವಸೆಗಳನ್ನು ಈಡೇರಿಸಲಿದೆ ಎಂಬ ವಿಶ್ವಾಸವಿದೆ. ಮತ್ತೊಮ್ಮೆ ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸೋಣ ಎಂದರು.

ಏ.9ಕ್ಕೆ ದ್ವಿತೀಯ ಪಿಯು ಫಲಿತಾಂಶ?

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆ–1ರ ಫಲಿತಾಂಶ ಏ.9ಕ್ಕೆ ಪ್ರಕಟಿಸೋಣ, ಸಿದ್ಧರಾಗಿರಿ ಎಂದು ಶಾಲಾ ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳು ಪರೀಕ್ಷಾ ಮಂಡಳಿಯ ಉನ್ನತ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ, ಪರೀಕ್ಷೆ ಫಲಿತಾಂಶ ಪ್ರಕಟದ ಬಗ್ಗೆ ಯಾವುದೇ ಅಧಿಕೃತ ಮಾಹಿತಿ ಬಂದಿಲ್ಲ, ಏ.9ಕ್ಕೆ ಉಪ ಚುನಾವಣೆಯ ಮತದಾನ ನಡೆಯಲಿದ್ದು, ನಂತರ ಸಂಜೆ 6 ನಂತರ ಪಿಯು ಫಲಿತಾಂಶ ಪ್ರಕಟಿಸುವ ಬಗ್ಗೆ ಚಿಂತನೆ ನಡೆದಿದೆ ಎಂದು ತಿಳಿದು ಬಂದಿದೆ. ಶಾಲಾ ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳು ಏ.9ಕ್ಕೆ ಫಲಿತಾಂಶ ಪ್ರಕಟಿಸೋಣ, ಸಿದ್ಧರಾಗಿರಿ ಎಂಬ ಮೌಖಿಕ ಸೂಚನೆ ನೀಡಿದ್ದಾರೆ. ಆದರೆ, ಅಂದು ಎಷ್ಟು ಗಂಟೆಗೆ ಫಲಿತಾಂಶ ಪ್ರಕಟವಾಗಲಿದೆ ಎಂಬ ಬಗ್ಗೆ ಯಾವುದೇ ಸ್ಪಷ್ಟ ಮಾಹಿತಿ ನೀಡಿಲ್ಲ ಎಂದು ಪರೀಕ್ಷಾ ಮಂಡಳಿಯ ಉನ್ನತ ಅಧಿಕಾರಿಗಳು ತಿಳಿಸಿದ್ದಾರೆ.

ಮಾನವ ಕಳ್ಳ ಸಾಗಣೆ ಅನುಮಾನ | ಪ್ರತಿ ದಿನವೂ ಎರಡು, ಮೂರು ಪ್ರಕರಣ ದಾಖಲು

ಹುಬ್ಬಳ್ಳಿಯಲ್ಲಿ ಹೆಚ್ಚಿದ ಯುವತಿಯರ ನಾಪತ್ತೆ ಪ್ರಕರಣ

ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ಒಂದು ಕಡೆ ಹುಬ್ಬಳ್ಳಿ–ಧಾರವಾಡ ಮಹಾನಗರದ ಜಿಮ್‌ಗಳಲ್ಲಿ ಲವ್ ಜಿಹಾದ್ ಯತ್ನ ಆರೋಪ ಪದೇ ಪದೆ ಕೇಳಿ ಬರುತ್ತಿದ್ದು, ಇನ್ನೊಂದು ಕಡೆ ಅಪ್ರಾಪ್ತ ಬಾಲಕಿಯರು ಹಾಗೂ ಯುವತಿಯರ ನಾಪತ್ತೆ ಪ್ರಕರಣ ಹೆಚ್ಚುತ್ತಿವೆ.

2023ರಿಂದ ಈವರೆಗೆ ಅವಳಿನಗರದಲ್ಲಿ 694 ಯುವತಿಯರು ನಾಪತ್ತೆಯಾಗಿದ್ದು, ಬಹುತೇಕರು ಮದುವೆಯಾಗಿಯೇ ಪತ್ತೆಯಾಗಿದ್ದಾರೆ. ಅದರಲ್ಲಿ ಇನ್ನೂ 34 ಯುವತಿಯರು ಪತ್ತೆಯಾಗದಿರುವುದು ಮಾನವ ಕಳ್ಳ ಸಾಗಾಣಿಕೆ ಎಂಬ ಅನುಮಾನ ಸಾರ್ವಜನಿಕರಲ್ಲಿ ದಟ್ಟವಾಗಿ ಮೂಡುವಂತಾಗಿದೆ.

ಪೊಲೀಸರಿಗೆ ಹಾಗೂ ಪಾಲಕರು ಹುಡುಕಾಟದಲ್ಲಿದ್ದು, ವರ್ಷಗಳು ಕಳೆದರು ಇನ್ನೂ ಪತ್ತೆಯಾಗಿಲ್ಲ, ಪೊಲೀಸ್ ಇಲಾಖೆ ಏನು ಮಾಡುತ್ತಿದೆ ಎಂಬುವುದು ಸಾರ್ವಜನಿಕರ ಪ್ರಶ್ನೆಯಾಗಿದೆ.

ಸ್ನೇಹಿತರ ಮನೆಗೆ, ಕಾಲೇಜಿಗೆ, ಪರೀಕ್ಷೆಗೆ, ದೇವಸ್ಥಾನಕ್ಕೆ, ಪ್ರವಾಸಕ್ಕೆ, ಹೊಲಿಗೆ ತರಬೇತಿಗೆ, ಔಷಧಿ ಅಂಗಡಿಗೆ, ಮಾರುಕಟ್ಟೆಗೆ, ಸಂಘದ ಹಣ ತುಂಬಲು, ಹಾಲು ತರಲು ಹೀಗೆ ಮನೆಯಲ್ಲಿ ವಿವಿಧ ಕಾರಣ ಹೇಳಿ ಯುವತಿಯರು ನಾಪತ್ತೆಯಾಗಿದ್ದಾರೆ.

ಹು–ಧಾ ಪೊಲೀಸ್ ಕಮಿಷನರೇಟ್ ವ್ಯಾಪ್ತಿ ವಿವಿಧ ಪೊಲೀಸ್ ಠಾಣೆಯಲ್ಲಿ ಪ್ರತಿ ದಿನವೂ 2–3 ಪ್ರಕರಣಗಳು ದಾಖಲಾಗುತ್ತಿವೆ.



ಇನ್ನು ಕೆಲವರು ಮನೆಯಲ್ಲಿ ಯಾರೂ ಇಲ್ಲದ ವೇಳೆ ಹಾಗೂ ರಾತ್ರಿ ಎಲ್ಲರೂ ಮಲಗಿದ್ದ ಸಂದರ್ಭದಲ್ಲಿ ನಾಪತ್ತೆಯಾಗಿದ್ದಾರೆ. ಹೀಗೆ ನಾಪತ್ತೆಯಾದ ಯುವತಿಯರಲ್ಲಿ 18 ರಿಂದ 23 ವರ್ಷದ ಒಳಗಿನವರೇ ಹೆಚ್ಚು ಎಂಬುವುದು ದಾಖಲಾದ ಪ್ರಕರಣಗಳ ಅಂಕಿ–ಅಂಶಗಳಿಂದ ಗೊತ್ತಾಗಿದೆ.

2025ರ ಅಕ್ಟೋಬರ್‌ನಿಂದ 2026ರ ಮಾರ್ಚ್ ವರೆಗೆ ಇಂತಹ 60ಕ್ಕೂ ಹೆಚ್ಚು ಪ್ರಕರಣಗಳನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ. ಪ್ರಸ್ತುತ ವರ್ಷ ಜನವರಿಯಿಂದ ಮಾರ್ಚ್‌ವರೆಗೆ ವಿವಿಧ ಪೊಲೀಸ್ ಠಾಣೆಗಳಲ್ಲಿ 30 ನಾಪತ್ತೆ ಪ್ರಕರಣಗಳು ದಾಖಲಾಗಿವೆ. 14 ಮಂದಿ ಪತ್ತೆಯಾಗಿದ್ದಾರೆ. ಪತ್ತೆಯಾದ ಬಹುತೇಕ ಯುವತಿಯರು ಮದುವೆಯಾಗಿದೆ. ಕಾಲೇಜ್, ಜಿಮ್, ವಿವಿಧ ಸಮಾರಂಭದಲ್ಲಿ ಪರಿಚಯವಾದ ಯುವಕರೊಂದಿಗೆ ನಾಪತ್ತೆಯಾಗಿರುವುದು ಪೊಲೀಸರು ತನಿಖೆಯಿಂದ ತಿಳಿದು ಬಂದಿದೆ.

ಪಾಲಕರು ಮಗಳು ಮರಳಿ ಮನೆಗೆ ಬಾರದ ಕಾರಣಕ್ಕೆ ಹಾಗೂ ನಾಪತ್ತೆ ಆಗಿರುವುದಕ್ಕೆ ಸ್ನೇಹಿತ, ಪಕ್ಕದ ಮನೆಯ ಹುಡುಗ ಹಾಗೂ ಪರಿಚಯದ ಹುಡುಗ ಅಪಹರಣ ಮಾಡಿದ್ದಾನೆ ಎಂದು ದೂರು ನೀಡಿದ್ದಾರೆ. ಇಂತಹ ಪ್ರಕರಣಗಳ ಬೆನ್ನು ಬಿದ್ದ ಪೊಲೀಸರಿಗೆ ಕಂಡು ಬಂದಿದ್ದು, ಪ್ರೇಮ ವಿವಾಹ!

ಪಾಲಕರ ಜಾಗೃತಿ ಅವಶ್ಯಕ: ಒತ್ತಡ ಜೀವನ, ಸಂಪಾದನೆ ಕಾರಣದಿಂದ ಪಾಲಕರು ತಮ್ಮ ಮಕ್ಕಳನ್ನು ನಿರ್ಲಕ್ಷ್ಯ ಮಾಡುತ್ತಿದ್ದಾರೆ. ವಿದ್ಯಾಭ್ಯಾಸದ ಒತ್ತಡ, ಮನೆ ಕೆಲಸದಿಂದ, ಪಾಲಕರಿಂದ ಮಾನಸಿಕ ಕಿರುಕುಳ ಹಾಗೂ ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾಗಿ ಯುವತಿಯರು ಮನೆ ಬಿಟ್ಟು ಹೋಗುತ್ತಾರೆ. ಬಹುತೇಕ ಯುವತಿಯರ ನಾಪತ್ತೆಗೆ ಪ್ರೀತಿ–ಪ್ರೇಮವೇ ಕಾರಣವಾಗಿದೆ. ಅದಕ್ಕೆ ಪಾಲಕರು ತಮ್ಮ ಮಕ್ಕಳನ್ನು ಮೊದಲ ಆದ್ಯತೆ ನೀಡಿ, ಸರಿಯಾಗಿ ಬೆಳಸಬೇಕು. ಅವರನ್ನು ಪ್ರೀತಿಯಿಂದ ನೋಡಿಕೊಂಡರೆ ಪಾಲಕರ ಬಿಟ್ಟು ಮಕ್ಕಳು ಎಲ್ಲಿಗೂ ಹೋಗಲ್ಲ ಎನ್ನುತ್ತಾರೆ ಪೊಲೀಸರು. 2024ರಲ್ಲಿ 28 ಬಾಲಕಿಯರು ಅಪಹರಣವಾಗಿದ್ದು, ಒಬ್ಬಳು ಇನ್ನೂ ಪತ್ತೆಯಾಗಿಲ್ಲ, 2025ರಲ್ಲಿ ಅಪಹರಣವಾದ 23 ಬಾಲಕಿಯರಲ್ಲಿ 18 ಮಂದಿ ಮಾತ್ರ ಪತ್ತೆಯಾಗಿದ್ದಾರೆ. ಪ್ರಸ್ತುತ ವರ್ಷ ಇಬ್ಬರು ಅಪಹರಣಕ್ಕೊಳಗಾಗಿದ್ದು, ಪತ್ತೆ ಕಾರ್ಯ ನಡೆಯುತ್ತಿದೆ.

ವಿವಿಧ ಕಾರಣಕ್ಕೆ ಯುವಕರು, ಯುವತಿಯರು ಮನೆಯಲ್ಲಿ ಹೇಳದೆ ಹೋಗುತ್ತಾರೆ. ಪಾಲಕರು ಮಕ್ಕಳ ಚಲನವಲನ ಗಮನಿಸಬೇಕು. ಪೊಲೀಸ್ ಇಲಾಖೆ ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸಲಿದೆ. ಕಳೆದ ವರ್ಷ ಹೋಲಿಸಿದರೆ ಈ ವರ್ಷ ನಾಪತ್ತೆ ಪ್ರಕರಣ ಕಡಿಮೆ ದಾಖಲಾಗಿವೆ.

■ **ಎನ್.ಶಶಿಕುಮಾರ, ಆಯುಕ್ತ ಹು–ಧಾ ಪೊಲೀಸ್ ಕಮಿಷನರೇಟ್**

ಪಾಲಕರು ತಮ್ಮ ಮಕ್ಕಳಿಗೆ ಸಂಸ್ಕಾರ ಕಲಿಸಬೇಕು. ವಿದೇಶಿ ಸಂಸ್ಕೃತಿ ಮೊರೆ ಹೋಗುತ್ತಿರುವ ಮಕ್ಕಳು ಪ್ರೀತಿ–ಪ್ರೇಮದ ಬಲೆಗೆ ಬೀಳುತ್ತಿದ್ದಾರೆ. ತಂದೆ ತಾಯಿಗಳು ಮಕ್ಕಳನ್ನು ಪ್ರೀತಿ, ವಾತ್ಸಲ್ಯದಿಂದ ಬೆಳಸಬೇಕು

■ **ಭವ್ಯಾ ಗೌಡ, ಸಂಯೋಜಕಿ ರಣರಾಗಿಣಿ ಮಹಿಳಾ ವಿಭಾಗ**

ಯುವತಿಯರ ನಾಪತ್ತೆ ಪ್ರಕರಣ

ವರ್ಷ	ಪ್ರಕರಣ	ಪತ್ತೆ	ತನಿಖೆ
2023	239	234	05
2024	250	243	07
2025	180	169	11
2026 (ಫೆ.15ರ ವರೆಗೆ)	25	14	11

ಸಂಪಾದಕೀಯ

‘ಲಾಕಪ್ ಸಾವು’ ತಡೆಯುವುದಗತ್ಯ

ತಮಿಳುನಾಡಿನ ಸಾತಂಕುಲಂನಲ್ಲಿ 2020ರಲ್ಲಿ ಸಂಭವಿಸಿದ ತಂದೆ ಮತ್ತು ಮಗನ ಲಾಕಪ್ ಸಾವಿಗೆ ಸಂಬಂಧಿಸಿದಂತೆ 9 ಪೊಲೀಸರಿಗೆ ಮಧುರೈ ನ್ಯಾಯಾಲಯವು ಮರಣದಂಡನೆ ಶಿಕ್ಷೆ ವಿಧಿಸಿರುವುದು ಒಂದು ಅಪರೂಪದ ನ್ಯಾಯದಾನವೇ ಸರಿ. ಭಾರತದಲ್ಲಿ ‘ಅಪರೂಪದಲ್ಲಿ ಅಪರೂಪದ’ ಪ್ರಕರಣಗಳಲ್ಲಷ್ಟೇ ಮರಣದಂಡನೆ ನೀಡುವ ಪದ್ಧತಿಯಿದ್ದು, ಮಧುರೈ ನ್ಯಾಯಾಲಯವು ಈ ಲಾಕಪ್ ಸಾವನ್ನು ಕೂಡಾ ಅಪರೂಪದ ಪ್ರಕರಣವೆಂಬುದಾಗಿಯೇ ಪರಿಗಣಿಸಿದೆ. ಕಾನೂನು ಸುವ್ಯವಸ್ಥೆ ಕಾಪಾಡುವ ಬಾಧ್ಯತೆ ಹೊಂದಿರುವ ಪೊಲೀಸ್ ಅಧಿಕಾರಿಗಳೇ ಕಾನೂನಿಗೆ ವಿರುದ್ಧವಾಗಿ ವರ್ತಿಸಿ ಹಲ್ಲೆ ನಡೆಸಿರುವ ಅಪರೂಪದ ಪ್ರಕರಣವಿದಾಗಿದೆ ಎಂದು ನ್ಯಾಯಾಲಯ ಅಭಿಪ್ರಾಯಿಸಿದೆ. ಜಯರಾಜ್ ಮತ್ತು ಅವರ ಪುತ್ರ



ಬೆನ್ನಿಕ್ಸ್ ಎಂಬವರನ್ನು ಲಾಕಪ್‌ನಲ್ಲಿ ಮಾರಣಾಂತಿಕವಾಗಿ ಥಳಿಸಿ ಹತ್ಯೆಗೈದ ಪೊಲೀಸರ ಅಮಾನುಷ ವರ್ತನೆಯು ಅಕ್ಷಮ್ಯ ಎಂಬುದರಲ್ಲಿ ಅನುಮಾನವಿಲ್ಲ. ಇಷ್ಟಕ್ಕೂ ಅವರು ಯಾವುದೇ ಅಪರಾಧವನ್ನೂ ಎಸಗಿರಲಿಲ್ಲ. ಕೋವಿಡ್ ಸಮಯದಲ್ಲಿ ಸಮಯಮಿತಿಯೊಳಗೆ ತಮ್ಮ ಮೊಬೈಲ್ ಅಂಗಡಿಯನ್ನು ಮುಚ್ಚಲಿಲ್ಲ ಎಂಬ ಕಾರಣಕ್ಕಾಗಿಯಷ್ಟೇ ಅವರನ್ನು ಬಂಧಿಸಲಾಗಿತ್ತು. ಅಲ್ಲೂ ಅವರನ್ನು ಸುಳ್ಳು ದೂರು ದಾಖಲಿಸಿ ಬಂಧಿಸಲಾಗಿತ್ತು ಎಂಬುದೂ ಕಂಡುಬಂದಿತ್ತು. ಬಳಿಕ ತಂದೆ ಮಗ ಇಬ್ಬರೂ ಪತ್ತೆಯಾದುದು ಶವವಾಗಿಯೆ. ಪೊಲೀಸರು ಠಾಣೆಯಲ್ಲಿನ ಸಿಸಿಟಿವಿ ವಿಡಿಯೋಗಳನ್ನು ಅಳಿಸಿ ಸಾಕ್ಷ್ಯ ನಾಶಕ್ಕೂ ಪ್ರಯತ್ನಿಸಿದ್ದರು. ಇವೆಲ್ಲದರ ಹಿನ್ನೆಲೆಯಲ್ಲಿ ಪೊಲೀಸರಿಗೆ ಮರಣದಂಡನೆ ವಿಧಿಸಿರುವ ನ್ಯಾಯಾಲಯವು ಪೊಲೀಸರಿಗೆ ಇದೊಂದು ಎಚ್ಚರಿಕೆ ಗಂಟೆ ಎಂದು ಹೇಳಿದೆ.

ಈ ಮರಣದಂಡನೆ ಶಿಕ್ಷೆ ಜಾರಿಯಾಗುವುದೆ ಎಂಬ ಕುರಿತಂತೆ ಖಚಿತವಾಗಿ ಹೇಳಲಾಗದು. ಏಕೆಂದರೆ ಇತ್ತೀಚಿನ ವರ್ಷಗಳಲ್ಲಿ ಉನ್ನತ ನ್ಯಾಯಾಲಯಗಳು ಮರಣದಂಡನೆ ಜಾರಿಗೊಳಿಸುವುದು ಕಡಿಮೆಯಾಗಿದೆ. ಈ 9 ಮಂದಿ ಪೊಲೀಸರು ಕೂಡಾ ಮೇಲ್ಮನವಿ ಸಲ್ಲಿಸುವುದು ಹಾಗೂ ಅಂತಿಮ ತೀರ್ಪು ಬರಲು ಇನ್ನೂ ಕೆಲವು ವರ್ಷ ಕಾಯಬೇಕಾಗಿರುವುದು ಸಹಜವಾಗಿದೆ. ಆದರೆ ಲಾಕಪ್ ಸಾವುಗಳನ್ನು ತಡೆಯುವಲ್ಲಿ ಹೆಚ್ಚಿನ ಕ್ರಮಗಳು ಬೇಕಾಗಿವೆ ಎಂಬುದನ್ನಂತೂ ಮಧುರೈ ನ್ಯಾಯಾಲಯದ ತೀರ್ಪು ಎತ್ತಿ ಹಿಡಿದಿದೆ. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ದೇಶದಲ್ಲಿ ಸಾವಿರಾರು ಲಾಕಪ್ ಸಾವುಗಳು ಸಂಭವಿಸುತ್ತಿವೆ ಎಂದು ಹೇಳುತ್ತಿದೆ. ಈ ವರ್ಷದ ಮೊದಲ ಮೂರು ತಿಂಗಳಲ್ಲೇ 170 ಲಾಕಪ್ ಸಾವು ಸಂಭವಿಸಿರುವುದಾಗಿ ನುಡಿಯುತ್ತಿದೆ. ಪೊಲೀಸರು ರಾಜ್ಯ ಸರಕಾರವನ್ನು ಪ್ರತಿನಿಧಿಸುವುದರಿಂದ ಆಯಾ ರಾಜ್ಯದ ಸರಕಾರವೂ ಲಾಕಪ್ ಸಾವಿನ ಹೊಣೆ ಹೊರಬೇಕಾಗುತ್ತದೆ. ಆದ್ದರಿಂದ ಪೊಲೀಸ್ ಠಾಣೆಗಳಲ್ಲಿ ಪೊಲೀಸ್ ಥಳಿತಕ್ಕೆ ಸಿಲುಕಿ ಸಾವು ಸಂಭವಿಸುವುದನ್ನು ತಡೆಯಲು ಸೂಕ್ತ ಉಪಕ್ರಮಗಳಂತೂ ಅಗತ್ಯವಾಗಿದೆ.

ಔರ್ಧ್ವದೈಹಿಕಕ್ರಿಯೆಗಳ ವಿಧಾನ, ಉದ್ದೇಶ ಮತ್ತು ಅರ್ಥ



ಪದಸಂಚಲನ
• ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com

ಇಲ್ಲಿಯವರೆಗೆ ಜೀವನ ಜನ್ಮಪ್ರಕ್ರಿಯೆ, ಮರಣದ ಪ್ರಕ್ರಿಯೆ, ಮರಣದ ಅನಂತರ ಉಪಾಸಕನು ಸಾಗುವ ಮಾರ್ಗ, ಕರ್ಮಿಯು ಸಾಗುವ ಮಾರ್ಗ ಮತ್ತು ಇವೆರಡೂ ಅಲ್ಲದವರ ಮೂರನೆಯ ಮಾರ್ಗ, ಮತ್ತೆ ದೇಹವನ್ನು ಹೊಂದಲು ತಿರುಗಿ ಬರುವ ಮಾರ್ಗ ಇತ್ಯಾದಿ ಅಂಶಗಳನ್ನು ಕ್ರಮಶಃ ವಿಚಾರಿಸಲಾಯಿತು. ಇನ್ನು ಮುಂದೆ ಜೀವನ ಔರ್ಧ್ವದೈಹಿಕಕ್ರಿಯೆಗಳ ಉದ್ದೇಶ, ವಿಧಾನ ಮತ್ತು ಅರ್ಥಗಳನ್ನು ಮುಂದಿನ ಲೇಖನಗಳಲ್ಲಿ ಯಥಾಶಕ್ತಿ ನೋಡೋಣ. ಈ ಸರಣಿಯ ಆರಂಭದಲ್ಲಿಯೇ ಅನೇಕರು ಮರಣದ ಪ್ರಕ್ರಿಯೆಯ ಬಗೆಗೆ ಬರೆಯುವಾಗ ಸಂಕೋಚದಿಂದ ಕೇಳಿದ್ದುಂಟು. ಮರಣದ ಪ್ರಕ್ರಿಯೆಯೆಂದರೆ ಅಶುಭವಲ್ಲವೇ? ಸಾವು ಎಂಬ ಶಬ್ದವನ್ನು ಮನೆಯೊಳಗೆ ನುಡಿಯುವುದೂ ಅಶುಭಸೂಚಕ ಎಂಬ ಪ್ರತೀತಯಿದೆಯಲ್ಲ? ಅಂಥದ್ದರಲ್ಲಿ ಅದರ ಬಗ್ಗೆ ಬರೆಯುವುದು, ಯೋಚಿಸುವುದು, ವಿಚಾರವನ್ನು ನಡೆಸುವುದು ಇವೆಲ್ಲ ಅಶುಭವೇ ಅಲ್ಲವೇ? ಎಂಬುದಾಗಿ. ಅವರ ಪ್ರಶ್ನೆಯ ಹಿಂದಿನ ಭಯ ಅರ್ಥವಾಗುವಂಥದ್ದು. ಯಾಕೆಂದರೆ, ಲೋಕದಲ್ಲಿ ಸಾಮಾನ್ಯವಾಗಿ ಮರಣದ ಭಯ ಎಲ್ಲರಿಗೂ ಇರುವಂಥದ್ದೇ. ನಮ್ಮಲ್ಲಿ ಆಶೀರ್ವಾದದ ಸಮಯದಲ್ಲಿಯಾಗಲೀ, ದೇವತಪ್ರಾರ್ಥನೆಯ ಸಮಯದಲ್ಲಿಯಾಗಲೀ ನೂರು ವರ್ಷ ಆಯುಸ್ಸು ದೊರಕಲಿ ಎಂದೇ ಹರಸಲಾಗುತ್ತದೆ ಅಥವಾ ಬೇಡಿಕೊಳ್ಳಲಾಗುತ್ತದೆ. ಸಾವು ಎಂಬುದು ಯಾರಿಗೂ ಬೇಕಿಲ್ಲ. ಜೊತೆಗೆ ಸಾವೆಂದರೆ ತುಂಬ ಭಯ ಕೂಡ. ಹಾಗಿರುವಾಗ ಶಾಸ್ತ್ರಗಳು ಯಾಕೆ ಮರಣದ ಬಗೆಗೆ ವಿಸ್ತೃತವಾಗಿ ವಿಚಾರವನ್ನು ನಡೆಸಿವೆ ಎಂಬ ಪ್ರಶ್ನೆ ಸಹಜ.

ವಸ್ತುತಃ ಮರಣ ಎಂಬುದು ಶಾಸ್ತ್ರಗಳ ದೃಷ್ಟಿಯಲ್ಲಿ ಅತ್ಯಂತ ಸಹಜ ಪ್ರಕ್ರಿಯೆ. ನಮ್ಮ ದೃಷ್ಟಿಯಲ್ಲಿ ಸಾವು ಎಂದರೆ ಅದು ಒಮ್ಮೆ ಮಾತ್ರ ಆಗುವಂಥ ಪ್ರಕ್ರಿಯೆ. ಯಾಕೆಂದರೆ ಸಾವಿನ ಅನಂತರ ಏನು ಎಂಬುದು ನಮ್ಮ ಇಂದ್ರಿಯಗಳಿಗೆ ನಿಲುಕುವುದಿಲ್ಲ. ಜೊತೆಗೆ ಸಾವಿನ ಅನಂತರ ನಮ್ಮೆಲ್ಲ ಭೋಗಗಳೂ ನಿಂತು ಹೋಗುತ್ತವೆ. ಹಾಗಾಗಿ ಸಾವಿನ ಅನಂತರದ ವಿಷಯದಲ್ಲಿ ನಮ್ಮ ಬುದ್ಧಿ ಕೆಲಸ ಮಾಡುವುದಿಲ್ಲ. ಸಾವೆಂದರೆ ಅಮಂಗಲ, ಅಶುಭ, ಅಪಶಕುನ ಎಂದೆಲ್ಲ ಲೋಕದಲ್ಲಿ ಪ್ರತೀತಿ ಆ ಕಾರಣಕ್ಕಾಗಿ ಬಂದಿದೆ. ಆದರೆ ಭಾರತೀಯ ಸಂಸ್ಕೃತಿಯಲ್ಲಿ ಸಾವೆಂಬುದು ಇದೇ ಮೊದಲಲ್ಲ, ಸಾವು ಕೊನೆಯೂ ಅಲ್ಲ. ವಸ್ತುತಃ ಹೇಳಬೇಕೆಂದರೆ ಶಾಸ್ತ್ರಗಳ ದೃಷ್ಟಿಯಲ್ಲಿ ಜೀವನಿಗೆ ಪ್ರತಿಕ್ಷಣವೂ ಸಾವು ಮತ್ತು ಪ್ರತಿಕ್ಷಣವೂ ಹುಟ್ಟು. ನಮಗೇ ಗೊತ್ತಿಲ್ಲದಂತೆ ನಮ್ಮ ಶರೀರದಲ್ಲಿ ಪ್ರತಿಕ್ಷಣವೂ ಜೀವಕೋಶಗಳು ಸಾಯುತ್ತಲೂ, ಹೊಸ ಜೀವಕೋಶಗಳು ಹುಟ್ಟುತ್ತಲೂ ಇರುವುದು ನಮಗೆ ತಿಳಿಯುವುದೇ ಇಲ್ಲ. ಬಾಲ್ಯದಿಂದ ಯೌವ್ವನವನ್ನೂ, ಯೌವ್ವನದಿಂದ ವಾರ್ಧಕ್ಯವನ್ನೂ ಪಡೆಯುವುದೆಲ್ಲ ನಮಗೆ ಅರಿವಿಗೆ ಬಾರದಂತೆ ನಡೆಯುತ್ತಿರುತ್ತವೆ. ಇವೆಲ್ಲ ಒಂದು ರೀತಿಯ ಸೂಕ್ಷ್ಮವಾದ ಸಾವು ಮತ್ತು ಹುಟ್ಟುಗಳೇ ಆಗಿವೆ. ಹಳೆಯ ಅವಸ್ಥೆಯಿಂದ ಹೊಸ ಅವಸ್ಥೆಯನ್ನು ಪಡೆಯುವುದೇ ಹುಟ್ಟು. ಹಳೆಯದನ್ನು ಬಿಡುವುದೇ ಮರಣ.

ಜೊತೆಗೆ ಭಾರತೀಯ ಸಂಸ್ಕೃತಿಯಲ್ಲಿ ಪುನರ್ಜನ್ಮವನ್ನು ಸ್ವೀಕರಿಸಲಾಗುವುದರಿಂದ ಅನಾದಿಕಾಲದಿಂದಲೂ ಜೀವನು ಹುಟ್ಟು-ಸಾವುಗಳ ಚಕ್ರದಲ್ಲಿ ಸಿಲುಕಿಯೇ ಇದ್ದಾನೆ. ಹುಟ್ಟುತ್ತ, ಸಾಯುತ್ತಲೇ ಈ ಶ್ರೇಷ್ಠವಾದ ಮನುಷ್ಯ ಜನ್ಮವನ್ನು ಪಡೆದಿದ್ದಾನೆ. ಮುಂದೆಯೂ ಇದಕ್ಕಿಂತ ಶ್ರೇಷ್ಠವೋ, ಅಧಮವೋ ಆದ ಶರೀರವನ್ನು ತಮ್ಮ ತಮ್ಮ ಕರ್ಮಾನುಸಾರ ಮತ್ತೆ ಪಡೆಯುತ್ತಲೇ ಹೋಗುತ್ತಾನೆ. ಹೀಗೆ ಸಂಸರಣ ಮಾಡುವುದರಿಂದಲೇ ಇದನ್ನು ಸಂಸಾರವೆಂದು ಕರೆಯಲಾಗುತ್ತದೆ. ಹಾಗಾಗಿ ಹುಟ್ಟು ಮತ್ತು ಸಾವು ಇವೆರಡರಲ್ಲಿ ಯಾವುದೂ ಜೀವನಿಗೆ ಹೊಸದಲ್ಲ. ಅವೆರಡೂ ನಿತ್ಯ ಪ್ರಕ್ರಿಯೆಗಳು.

ಶಾಸ್ತ್ರಗಳ ದೃಷ್ಟಿಯಲ್ಲಿ ಸಾವೆಂಬುದು ಕೂಡ ಒಂದು ಪವಿತ್ರವಾದ ಕ್ರಿಯೆ. ಹುಟ್ಟಿದ ಪ್ರತಿಯೊಂದು ಜೀವನೂ ಮತ್ತೊಂದು ಶರೀರವನ್ನು ಪಡೆಯಲು ಇರುವ ಮಾಧ್ಯಮವೇ ಸಾವು. ಸಾವೆಂದರೆ ತನ್ನ ನಾಶವಲ್ಲ. ಬದಲಿಗೆ ಸ್ಥೂಲಶರೀರಮಾತ್ರದ ತ್ಯಾಗ. ಅರ್ಥಾತ್ ಸಾವಿನ ಅನಂತರ ಆತ ತನ್ನ ಸೂಕ್ಷ್ಮಶರೀರದಲ್ಲಿದ್ದುಕೊಂಡು ಇನ್ನೊಂದು ಸ್ಥೂಲಶರೀರವನ್ನು ಪಡೆಯುತ್ತಾನೆ. ಈ ನಡುವೆ ಆತನಿಗೆ ಔರ್ಧ್ವದೈಹಿಕಕ್ರಿಯೆಗಳು ಒಂದು ಶರೀರದಿಂದ ಮತ್ತೊಂದು ಸ್ಥೂಲಶರೀರವನ್ನು ಪಡೆಯುವಲ್ಲಿ ವೇಗವನ್ನು ವರ್ಧಿಸುತ್ತವೆ. ಮರಣದ ಅನಂತರ ವ್ಯಕ್ತಿಗೆ ನಡೆಸಲ್ಪಡುವ ಔರ್ಧ್ವದೈಹಿಕಕ್ರಿಯೆಗಳೂ ಕೂಡ ಆತನಿಗೆ ಒಂದು ಸಂಸ್ಕಾರವೇ ಆಗಿವೆ. ಅಷ್ಟೇ ಅಲ್ಲ, ಇಂಥ ಔರ್ಧ್ವದೈಹಿಕಕ್ರಿಯೆಗಳನ್ನು ಯಜ್ಞವೆಂದೇ ಕರೆಯಲಾಗಿದೆ. ಅದನ್ನು ಅಂತ್ಯೇಷ್ಟಿ ಎಂದು ಕರೆಯಲಾಗುತ್ತದೆ. ಭಾರತೀಯಸಂಸ್ಕೃತಿಯಲ್ಲಿ ಮನುಷ್ಯನ ಜೀವನವಿಡೀ ಅಗ್ನಿಯ ಆರಾಧನೆ ಹಾಗೂ ಸಾಂಗತ್ಯವನ್ನು ಹೇಳಲಾಗಿದೆ. ಉಪನಯನದಿಂದ ಆರಂಭವಾಗುವ ಈ ಅಗ್ನಿಯ ಸಂಬಂಧ ಸಾವಿನ ಅನಂತರವೂ ಮುಂದುವರೆಯುತ್ತದೆ.

ಉಪನಯನದಲ್ಲಿ ಪ್ರಾರಂಭವಾದ ಅಗ್ನಿಕಾರ್ಯವು ನಿರಂತರ ಮುಂದುವರೆದು, ಅದೇ ಅಗ್ನಿಯಲ್ಲಿಯೇ ವಿವಾಹಹೋಮವನ್ನು ಮಾಡಲಾಗುತ್ತದೆ. ಅದನ್ನು ಔಪಾಸನಾಗ್ನಿ ಎಂದು ಕರೆಯಲಾಗುತ್ತದೆ. ವಿವಾಹದ ಅನಂತರ ಆತ ಅಗ್ನಿಹೋತ್ರವನ್ನು ಆರಂಭಿಸುತ್ತಾನೆ. ಇದನ್ನು ಶ್ರೌತಾಗ್ನಿ ಎಂದು ಕರೆಯಲಾಗುತ್ತದೆ. ಇದು ನಿತ್ಯಾಗ್ನಿಹೋತ್ರವಾಗಿದೆ. ಹೀಗೆ ಜೀವನವಿಡೀ ಅಗ್ನಿಯನ್ನು ಉಪಾಸಿಸುತ್ತಾ, ಕೊನೆಗೆ ಆ ವ್ಯಕ್ತಿಯ ಮರಣದ ಸಮಯದಲ್ಲಿ ಆತನ ದೇಹವನ್ನು ಇದೇ ಅಗ್ನಿಯಲ್ಲಿಯೇ ಸಮರ್ಪಿಸಲಾಗುತ್ತದೆ. ಆಗ ಆ ವ್ಯಕ್ತಿಯ ದೇಹವೇ ಆ ಅಗ್ನಿಗೆ ಆಹುತಿಯಾಗುತ್ತದೆ. ಹೀಗೆ ಜೀವನವಿಡೀ ಆಜ್ಯವೇ ಮೊದಲಾದ ದ್ರವ್ಯಗಳನ್ನು ಆಹುತಿಯನ್ನಾಗಿ ನೀಡಿದ ವ್ಯಕ್ತಿಯ ಶರೀರವೇ ಆ ಅಗ್ನಿಗೆ ಕೊನೆಯ ಆಹುತಿಯಾಗುತ್ತದೆ. ಹೀಗೆ ನಮ್ಮಲ್ಲಿ ದೇಹದ ದಹನವನ್ನೂ ಕೂಡ ಒಂದು ಯಜ್ಞವನ್ನಾಗಿಯೇ ಪರಿಗಣಿಸಲಾಗಿದೆ.

ಮರಣವನ್ನು ಹೊಂದಿದವನು ಉತ್ತಮ ಲೋಕಗಳನ್ನು ಹೊಂದಲಿ ಎಂಬ ಕಾರಣಕ್ಕೆ ಆತನ ಪುತ್ರರು ಆತನ ಔರ್ಧ್ವದೈಹಿಕಕ್ರಿಯೆಯನ್ನು ನೆರವೇರಿಸುತ್ತಾರೆ. ಆ ಮೂಲಕ ಮರಣವನ್ನು ಹೊಂದಿದ ಜೀವನು ತನ್ನ ಕರ್ಮಾನುಸಾರ ಉತ್ತಮ ಲೋಕಗಳನ್ನು ಕ್ಷಿಪ್ರವಾಗಿ ಹೊಂದಲಿ ಎಂಬುದು ಇವುಗಳ ಮುಖ್ಯ ಉದ್ದೇಶ. ಅರ್ಥಾತ್ ಜೀವನು ಮರಣದ ಅನಂತರ ತನ್ನ ಕರ್ಮಾನುಸಾರವಾಗಿಯೇ ಮುಂದಿನ ಲೋಕವನ್ನು ಅಥವಾ ಜನ್ಮವನ್ನು ಹೊಂದುತ್ತಾನೆಯಾದರೂ, ಅಂಥ ಲೋಕದ ಪ್ರಾಪ್ತಿಯು ತೊಡಕಿಲ್ಲದೇ ಆಗುವಂತೆ ಈ ಕ್ರಿಯಾಕಲಾಪವು ನೆರವಾಗುತ್ತದೆ. ಔರ್ಧ್ವದೈಹಿಕಕ್ರಿಯೆಗಳು ಕೂಡ ಮೃತಜೀವಕ್ಕೆ ಒಂದು ವಿಧದ ಸಂಸ್ಕಾರವೇ ಆಗಿದೆ. ಗರ್ಭದಿಂದ ಆರಂಭಿಸಿ ವಿವಾಹದವರೆಗೆ ಅನೇಕ ಸಂಸ್ಕಾರಗಳನ್ನು ಪಡೆದ ವ್ಯಕ್ತಿಯು ಔರ್ಧ್ವದೈಹಿಕಕ್ರಿಯೆಯೆಂಬ ಅಂತಿಮ ಸಂಸ್ಕಾರದ ಮೂಲಕ ಪೂರ್ಣನಾಗುತ್ತಾನೆ. ಪಿತೃಲೋಕವೇ ಮೊದಲಾದ ಉಚಿತ ಲೋಕವನ್ನು ಕುರಿತು ತೆರಳಲು ಆತನಿಗೆ ಈ ಸಂಸ್ಕಾರ ಮುಖ್ಯವಾಗುತ್ತದೆ. ಹಾಗೆ ನೋಡಿದರೆ ಎಲ್ಲ ಸಂಸ್ಕಾರಗಳೂ ಅತೀಂದ್ರಿಯವೇ ಆಗಿವೆ. ಗರ್ಭಾಧಾನದಿಂದ ಹಿಡಿದು, ಹುಟ್ಟಿದಾಗ ಮಾಡುವ ಜಾತಕರ್ಮವಿರಲಿ, ಹುಟ್ಟಿದ ಮೇಲಿನ ಉಪನಯನ, ವಿವಾಹಗಳವರೆಗೆ ಎಲ್ಲವೂ ಒಂದು ರೀತಿಯ ಅತೀಂದ್ರಿಯವಾದ ಅತಿಶಯವನ್ನು ಆಯಾ ವ್ಯಕ್ತಿಯಲ್ಲಿ ಈ ಸಂಸ್ಕಾರಗಳು ಆಧಾನಮಾಡುತ್ತವೆ. ಸಂಸ್ಕಾರವೆಂದರೆ ಗುಣದ ಆಧಾನ ಮತ್ತು ದೋಷದ ನಿವಾರಣೆಯೇ ಆಗಿದೆ. ಹಾಗೆಯೇ ಮರಣದ ಅನಂತರದ ಕ್ರಿಯೆಗಳೂ ಕೂಡ ಒಂದು ಸಂಸ್ಕಾರವೇ ಆಗಿದ್ದು, ಅದು ಜೀವನನ್ನು ಸೂಕ್ಷ್ಮವಾಗಿ ತಲುಪುತ್ತವೆ.

ಪಶುಗಳಿಗೆಲ್ಲ ಔರ್ಧ್ವದೈಹಿಕಕ್ರಿಯೆಗಳೇ ಇಲ್ಲದೇ ಸಾಕ್ಷಾತ್ ಮಣ್ಣಿನಲ್ಲಿ ಸೇರಿಹೋದರೂ ಅವು ಹೇಗೆ ಪ್ರೇತವಾಗುವುದಿಲ್ಲ? ಮನುಷ್ಯನಿಗೆ ಮಾತ್ರ ಯಾಕೆ ಶ್ರಾದ್ಧಾದಿಕರ್ಮಗಳು ಬೇಕು? ಎಂಬ ಪ್ರಶ್ನೆ ಉಂಟಾಗಬಹುದು. ಆದರೆ ಯಾವ ಕರ್ಮಗಳೂ ಕೂಡ ಪಶ್ವಾದಿಗಳಿಗೆ ಹೇಳಿದ್ದಲ್ಲ. ಎಲ್ಲವೂ ಮನುಷ್ಯನಿಗೆ ಮಾತ್ರ. ಇದಕ್ಕೆ ಶಾಸ್ತ್ರಗಳೇ ಪ್ರಮಾಣ. ಮನುಷ್ಯನಿಗೆ ಸಂಸ್ಕಾರವಿಲ್ಲದೆಯೇ ಹೇಗಾಗುತ್ತಾನೆ ಎಂಬುದು ನಮಗೆ ತಿಳಿದೇ ಇದೆ. ಪಶುಗಳಿಗೆ ಯಾವ ಸಂಸ್ಕಾರಗಳೂ ಇಲ್ಲ, ಯಾಕೆಂದರೆ ಅವುಗಳಿಗೆ ಅವುಗಳದೇ ಆದ ನಿಯತವಾದ ಸ್ವಭಾವವಿದೆ. ಏನೇ ಆದರೂ ಅದನ್ನು ಮೀರಲು ಅವುಗಳಿಗೆ ಸಾಧ್ಯವಾಗುವುದಿಲ್ಲ. ಆದರೆ ಮಾನವನಿಗೆ ಮಾತ್ರ ಹಾಗಲ್ಲ. ಆತ ಸಂಸ್ಕಾರದಿಂದ ಎಷ್ಟು ಎತ್ತರವನ್ನು ಬೇಕಿದ್ದರೂ ತಲುಪಬಲ್ಲ. ಆತನಲ್ಲಿ ಆಗುವ ಸೂಕ್ಷ್ಮವಾದ ಪರಿಣಾಮಗಳು ಆತನ ಮುಂದಿನ ಜನ್ಮವನ್ನು ನಿರ್ಧರಿಸುತ್ತವೆ. ಇಲ್ಲಿ ಶ್ರದ್ಧೆಯೇ ಮುಖ್ಯವಾದುದು. ಪಶುವಿಗೂ ಮತ್ತು ಸಂಸ್ಕಾರವಂತ ಮನುಷ್ಯರಿಗೂ ಒಂದೇ ವ್ಯತ್ಯಾಸವೆಂದರೆ ಅದು ಶ್ರದ್ಧೆ. ಶ್ರದ್ಧೆಯಿಂದ ಮಾಡಲಾಗುವುದರಿಂದಲೇ ಇವೆಲ್ಲವೂ ಫಲಿತಗೊಳ್ಳುತ್ತವೆ. ಔರ್ಧ್ವದೈಹಿಕಕ್ರಿಯೆಗಳೂ ಕೂಡ ಮನುಷ್ಯನ ಸಾವಿನ ಅನಂತರದ ಮಾರ್ಗಗಳನ್ನು ಪ್ರಶಸ್ತಗೊಳಿಸುತ್ತವೆ. ಕೇವಲ ಶ್ರಾದ್ಧ, ಪಿಂಡಪ್ರದಾನ, ತರ್ಪಣಗಳಿಂದಲೇ ಆತ ಸ್ವರ್ಗವನ್ನೋ, ಮೋಕ್ಷವನ್ನೋ ಹೊಂದುವುದಿಲ್ಲ. ಆದರೆ ಆತನ ಕರ್ಮಕ್ಕನುಗುಣವಾದ ಫಲವನ್ನು ಶೀಘ್ರವಾಗಿ ಹೊಂದಲು ಹಾಗೂ ಸಣ್ಣ ಪುಟ್ಟ ಪ್ರತಿಬಂಧಕಗಳಿದ್ದರೆ ಅದನ್ನು ನಿವಾರಿಸಿಕೊಳ್ಳಲು ಇವುಗಳು ಸಹಾಯವಾಗುತ್ತವೆ.

ಇನ್ನು ಔರ್ಧ್ವದೈಹಿಕಕ್ರಿಯೆಯು ಋಣಪ್ರಜ್ಞೆಯ ನೆಲೆಯಲ್ಲಿ ರೂಪುಗೊಂಡದ್ದು. ಮಕ್ಕಳಿಗೆ ತನ್ನ ಹೆತ್ತವರ ಋಣವಿರುತ್ತದೆ. ಅದಕ್ಕೆ ಪ್ರತಿಯಾಗಿ ಏನನ್ನಾದರೂ ಮಾಡಲು ವಾರ್ಧಕ್ಯದಲ್ಲಿನ ಸೇವೆ ಮತ್ತು ಮರಣಾನಂತರದ ಪ್ರಕ್ರಿಯೆಗಳು ಒಂದು ಅವಕಾಶ. ಹಿರಿಯರನ್ನು ನೆನೆದು ತಾನು ಬದುಕುವುದರಿಂದ ವ್ಯಕ್ತಿಯು ಇನ್ನಷ್ಟು ವಿಧೇಯನಾಗಿ, ಪ್ರಾಮಾಣಿಕವಾಗಿ ಬದುಕಲು ಅನುವಾಗುತ್ತದೆ. ಆ ಮೂಲಕ ಸಮಾಜದಲ್ಲಿ ಇಂಥ ಒಂದು ಪ್ರಜ್ಞೆ ಜಾಗರಿತವಾಗಿ, ತನಗೆ ಬದುಕನ್ನು ಕೊಟ್ಟ ತಂದೆ-ತಾಯಿಯರಿಗೂ, ಪ್ರಕೃತಿಗೂ, ಸಮಾಜಕ್ಕೂ ತನ್ನ ಕರ್ತವ್ಯದ ಮೂಲಕ ಸೇವೆಯನ್ನು ಮಾಡುವ ಮನೋಭಾವ ಬೆಳೆಯುತ್ತದೆ. ಹೀಗೆ ವ್ಯಷ್ಟಿಯಿಂದ ಸಮಷ್ಟಿಯವರೆಗೆ ಎಲ್ಲರ ಹಿತವೂ ಇಂಥ ಕ್ರಿಯೆಗಳಲ್ಲಿ ಸೂಕ್ಷ್ಮವಾಗಿ ಅಡಕವಾಗಿರುವುದನ್ನು ನಾವು ಗಮನಿಸಬೇಕು. ಇದೇ ಸನಾತನ ಸಂಸ್ಕೃತಿಯ ಹಿರಿಮೆಯಾಗಿದೆ ಎಂಬುದನ್ನು ನಾವು ಮರೆಯಬಾರದು.

ಇನ್ನು ಮುಂದೆ ಮರಣಾನಂತರ ಮಾಡಲಾಗುವ ಕೆಲವು ಕ್ರಿಯಾವಿಧಾನಗಳನ್ನು ನೋಡೋಣ.

ಪತ್ರ ಮಿತ್ರ

ನಾಯಿ ಕಡಿತ : ನೆಲದ ಸತ್ಯ!

ಕಳವಳಕಾರಿ ಮಟ್ಟದಲ್ಲಿ ಹೆಚ್ಚಿರುವ ನಾಯಿ ಕಡಿತಗಳ ಸಮಸ್ಯೆಯ ನಿವಾರಣೆಗೆ ತಾನು ಕೈಕೊಂಡಿರುವ ಕ್ರಮಗಳ ವಿವರಗಳನ್ನು ರಾಜ್ಯ ಸರ್ಕಾರವು, ಜನ ಮೆಚ್ಚಿ ಅಹುದಹುದೆನ್ನುವಂತೆ ಮಾಧ್ಯಮಗಳಿಗೆ ಬಿಡುಗಡೆ ಮಾಡಿದೆ. ಆದರೆ ನೆಲದ ಸತ್ಯವು ಇದಕ್ಕೆ ವ್ಯತಿರಿಕ್ತವಾಗಿದೆ. ಬೆಂಗಳೂರಿನ ವಿದ್ಯಾರಣ್ಯಪುರದಲ್ಲಿ ಒಂದು ವರ್ಷದ ಕೆಳಗೆ ಬೀದಿನಾಯಿಯೊಂದು ನನ್ನನ್ನೂ ಒಳಗೊಂಡಂತೆ ಏಳು ಜನರನ್ನು ಕಚ್ಚಿದ್ದಕ್ಕೆ ದೂರು ನೀಡಿದರನ್ವಯ ಮಹಾನಗರ ಪಾಲಿಕೆಯು ಅದನ್ನು ಹಿಡಿದುಕೊಂಡು ಹೋಯಿತು. ಎರಡು ವಾರದ ನಂತರ ಮತ್ತೆ ತಂದು ಬಿಟ್ಟಿತು. ಅನಂತರ ಅದು ಮತ್ತೆ ನಾಲ್ವರಿಗೆ ಕಚ್ಚಿದೆ. ಈಗಲೂ ವೃದ್ಧರನ್ನು, ಮಕ್ಕಳನ್ನು ಅಟ್ಟಿಸಿಕೊಂಡುಹೋಗಿ ಕಚ್ಚುತ್ತಿದೆ. ನಾಗರಿಕರಿಂದ ವಿವಿಧ ಬಗೆಯ ಪ್ರಯತ್ನಗಳ ನಡುವೆಯೂ ಮಹಾನಗರ ಪಾಲಿಕೆಗೆ ಆ ನಾಯಿಯನ್ನು ಇಲ್ಲಿಂದ ಕೊಂಡೊಯ್ಯಲು ಸಮಯವಿಲ್ಲ ಅಥವಾ ಸಾಧ್ಯವಾಗುತ್ತಿಲ್ಲ! ರಾಜ್ಯದ ಎಲ್ಲ ಕಡೆಯೂ ಪರಿಸ್ಥಿತಿ ಇದೇ ರೀತಿ ಇದೆ. ಇದು ಈ ನೆಲದ ಸತ್ಯ. ನಮ್ಮನ್ನು ಆಳುವವರು, ಪ್ರಕಟಣಾಶೂರರೇ ಹೊರತು ಕರ್ತವ್ಯತತ್ಪರರಲ್ಲ.

- ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಐಪಿಎಲ್‌ನಿಂದ ಮಾಲಿನ್ಯ

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಐಪಿಎಲ್ ಪಂದ್ಯದಿಂದ ಆಗುವ ಪರಿಸರ ಮಾಲಿನ್ಯ ಭಯಾನಕವಾಗಿದೆ. ಅಂಕಿಅಂಶಗಳ ಪ್ರಕಾರ, ಒಂದು ಪಂದ್ಯವು ಸರಾಸರಿ 16,000 ಕೆಜಿಗಿಂತ ಹೆಚ್ಚು ತ್ಯಾಜ್ಯವನ್ನು ಉತ್ಪಾದಿಸುತ್ತದೆ ಮತ್ತು ಸುಮಾರು 18,000 ಟನ್ ಕಾರ್ಬನ್ ಡೈಆಕ್ಸೈಡ್ ತತ್ಸಮಾನ ಇಂಗಾಲವನ್ನು ಹೊರಸೂಸುತ್ತದೆ. ಇದು ಸಾವಿರಾರು ಮನೆಗಳ ದಿನನಿತ್ಯದ ಇಂಧನ ಬಳಕೆಗೆ ಸಮಾನವಾಗಿದೆ. ನಗರವನ್ನು ಕಸ-ಮುಕ್ತ ಎಂದು ಘೋಷಿಸಿರುವುದು ಕೇವಲ ಕಣ್ಣೊರೆಸುವ ತಂತ್ರ. ಇದು ಕಸವನ್ನು ಇಲ್ಲವಾಗಿಸುವುದಿಲ್ಲ, ಬದಲಾಗಿ ಪ್ಲಾಸ್ಟಿಕ್ ಬಾಟಲಿಗಳು ಮತ್ತು ಕಸವನ್ನು ಕಬ್ಬನ್ ಪಾರ್ಕ್‌ನಂತಹ ಹಸಿರು ವಲಯಗಳಿಗೆ ತಳ್ಳುತ್ತಿದೆ. ಸ್ವಯಂಸೇವಕರು ಕಸ ಆರಿಸಿದಷ್ಟಕ್ಕೇ ಪರಿಸರ ಸ್ವಚ್ಛವಾಗುವುದಿಲ್ಲ. ಶೂನ್ಯ ತ್ಯಾಜ್ಯ ಕ್ರೀಡಾಂಗಣ ನೀತಿಯನ್ನು ಜಾರಿಗೆ ತರಬೇಕು. ಕ್ರೀಡಾಂಗಣದ ಸುತ್ತಲಿನ 5 ಕಿ.ಮೀ ವ್ಯಾಪ್ತಿಯಲ್ಲಿ ಏಕಬಳಕೆಯ ಪ್ಲಾಸ್ಟಿಕ್ ಅನ್ನು ಸಂಪೂರ್ಣವಾಗಿ ನಿಷೇಧಿಸದಿದ್ದರೆ ಮತ್ತು ಆಯೋಜಕರು ವೈಜ್ಞಾನಿಕ ತ್ಯಾಜ್ಯ ವಿಲೇವಾರಿಗೆ ಜವಾಬ್ದಾರರಾಗದಿದ್ದರೆ, ಕೇವಲ ಮನರಂಜನೆಗಾಗಿ ನಮ್ಮ ಹಸಿರು ಬೆಂಗಳೂರನ್ನು ಬಲಿ ನೀಡಿದಂತಾಗುತ್ತದೆ.

-ಡಾ. ವಿಜಯಕುಮಾರ ಎಚ್.ಕೆ, ರಾಯಚೂರು

ಟ್ರಂಪ್ ಉತ್ತರ ನೀಡುವರೆ?

ಭಾರತ- ಪಾಕಿಸ್ತಾನ ಸಂಘರ್ಷದ ವೇಳೆ ಅಷ್ಟು ವಿಮಾನ ಉರುಳಿದೆ, ಇಷ್ಟು ವಿಮಾನ ಉರುಳಿದೆ ಎಂದು ಗಳಹುತ್ತಿದ್ದ ಡೊನಾಲ್ಡ್ ಟ್ರಂಪ್ ಈಗ ಇರಾನ್ ಮೇಲಿನ ಸಮರದ ವೇಳೆ ತಮ್ಮ ದೇಶದ ಎಷ್ಟು ಯುದ್ಧವಿಮಾನಗಳು ನೆಲಕಚ್ಚಿವೆ ಎಂಬುದರ ವಿವರ ನೀಡಿದರೆ ಚೆನ್ನಾಗಿತ್ತು. ಯುದ್ಧ ನಿಲ್ಲಿಸಿದ ಶಾಂತಿದೂತನೆಂಬಂತೆ ವರ್ತಿಸುತ್ತಿದ್ದ ಟ್ರಂಪ್ ಈಗ ತಾವೇ ಸಮರ ದೂತರಾಗಿರುವುದು ದೊಡ್ಡ ಅಣಕವೇ ಸರಿ.

-ಚಿದಂಬರ ರಾವ್, ಕುಂದಾಪುರ

ಈಶಾನ್ಯ ಭಾರತದಲ್ಲಿ ಅಮೆರಿಕದ ರಹಸ್ಯ ಚಟುವಟಿಕೆ?

▸ ದಿನೇಶ್

ರಾಷ್ಟ್ರೀಯ ತನಿಖಾ ದಳವು ಇತ್ತೀಚೆಗೆ ಒಬ್ಬ ಅಮೆರಿಕನ್ ಪ್ರಜೆ ಮತ್ತು ಆರೂ ಮಂದಿ ಉಕ್ರೇನ್ ಪ್ರಜೆಗಳನ್ನು ದೇಶದ ವಿವಿಧೆಡೆಗಳಿಂದ ಬಂಧಿಸಿತು. ಇದು ಭಾರತದ ಪಾಲಿಗೆ ದೂರಗಾಮಿ ಪರಿಣಾಮ ಬೀರಬಲ್ಲ ಪ್ರಕರಣವಾಗಿದ್ದು, ಭದ್ರತೆಗೆ ಒದಗುವ ಅಪಾಯವನ್ನೂ ತೋರ್ಪಡಿಸಿದೆ. ಸದ್ಯಕ್ಕೆ ಈ ಬಂಧಿತರ ಕಾರ್ಯಾಚರಣೆಯು ಮ್ಯಾನ್ಮಾರ್‌ಗೆ ಸಂಬಂಧಿಸಿದ್ದೆಂದು ಕಂಡುಬಂದರೂ ದೀರ್ಘಾವಧಿಯಲ್ಲಿ ಈಶಾನ್ಯ ಭಾರತಕ್ಕೂ ಈ ಅಪಾಯ ತಟ್ಟಲಿರುವುದು ಖಂಡಿತವಾಗಿದೆ.

ಮೇಲ್ನೋಟಕ್ಕೆ ಇದು ವಿದೇಶಿಯರು ವೀಸಾ ನಿಯಮಗಳನ್ನು ಉಲ್ಲಂಘಿಸಿ ಗಡಿ ಪ್ರದೇಶದಲ್ಲಿ ಕಾನೂನುಬಾಹಿರ ಚಟುವಟಿಕೆಯಲ್ಲಿ ತೊಡಗಿದ ಪ್ರಕರಣವೆಂಬಂತೆ ಕಂಡುಬಂದರೂ ಇದನ್ನು ಆಳವಾಗಿ ವಿಶ್ಲೇಷಿಸಿದಾಗ ಆತಂಕಕಾರಿ ಚಿತ್ರಣವು ದೊರಕುತ್ತದೆ. ಈ ವ್ಯಕ್ತಿಗಳು ಅಧಿಕೃತ ಪ್ರವಾಸೀ ವೀಸಾದೊಂದಿಗೆ ಭಾರತಕ್ಕೆ ಬಂದಿದ್ದರು. ಬಳಿಕ ಅಸ್ಸಾಮಿಗೆ ತೆರಳಿ ಅಲ್ಲಿಂದ ಅಗತ್ಯ ಅನುಮತಿ ಇಲ್ಲದೆ ಮಿಜೋರಾಂ ಪ್ರವೇಶಿಸಿದ್ದರು. ಅಲ್ಲಿಂದ ಬಳಿಕ ಮ್ಯಾನ್ಮಾರ್‌ಗೆ ನುಸುಳಿ ಅಲ್ಲಿನ ಕೆಲವು ಸಶಸ್ತ್ರ ಗುಂಪುಗಳಿಗೆ ಡ್ರೋನ್ ಹಾಗೂ ಎಲೆಕ್ಟ್ರಾನಿಕ್ ಸಮರದ ತರಬೇತಿ ನೀಡಿದ್ದರು.

ಪ್ರಸ್ತುತ ಮ್ಯಾನ್ಮಾರ್‌ನಲ್ಲಿ ಮಿಲಿಟರಿ ಆಡಳಿತ ಹಾಗೂ ಸಶಸ್ತ್ರ ಜನಾಂಗೀಯ ಗುಂಪುಗಳ ಮಧ್ಯೆ ಆಂತರಿಕ ಸಮರ ನಡೆಯುತ್ತಿದೆ. ಅಮೆರಿಕವು ಸಶಸ್ತ್ರ ದಂಗೆಕೋರ ಗುಂಪುಗಳಿಗೆ ನೆರವು ನೀಡುತ್ತಿದೆ. ಈ ಗುಂಪುಗಳು ಮಾದಕ ವಸ್ತು ಕಳ್ಳಸಾಗಣೆಯಲ್ಲಿ ಕೂಡಾ ತೊಡಗಿದ್ದು ಈಶಾನ್ಯ ಭಾರತದಲ್ಲಿರುವ ಕೆಲವು ಅತಿಕ್ರಮಣಕಾರಿ ಬಣಗಳೊಂದಿಗೆ ಸಂಪರ್ಕ ಹೊಂದಿವೆ. ಈ ಬಂಡುಕೋರ ಗುಂಪುಗಳಿಗೆ ಡ್ರೋನ್ ತಂತ್ರಜ್ಞಾನ ಸಹಿತ ಅತ್ಯಾಧುನಿಕ ಸಮರ ತಂತ್ರಗಳನ್ನು ತರಬೇತಿ ನೀಡುತ್ತಿರುವುದು ಭವಿಷ್ಯದಲ್ಲಿ ಭಾರತಕ್ಕೂ ಅಪಾಯಕಾರಿಯಾಗಬಲ್ಲಂಥ ಬೆಳವಣಿಗೆ.

ಈ ಪರಿಸ್ಥಿತಿಯನ್ನು ಹೆಚ್ಚು ಅಪಾಯಕಾರಿಗೊಳಿಸಿರುವ ಅಂಶವೆಂದರೆ ಮಿಜೋರಾಂ, ಮಣಿಪುರ ಮತ್ತು ನಾಗಾಲ್ಯಾಂಡ್‌ಗಳಲ್ಲಿ ಭಾರತ ಮತ್ತು ಮ್ಯಾನ್ಮಾರ್ ನಡುವಿನ ಗಡಿಪ್ರದೇಶವು ಮುಕ್ತವಾಗಿರುವುದು. ಹಾಗಾಗಿ ಮ್ಯಾನ್ಮಾರ್‌ನಲ್ಲಿ ಬೆಳೆಯುತ್ತಿರುವ ಸಶಸ್ತ್ರ ಬಂಡುಕೋರ ತಂಡಗಳು ಭಾರತಕ್ಕೇನೂ ಅಪಾಯ ಉಂಟು ಮಾಡಲಾರವು ಎಂದು ಕಣ್ಮುಚ್ಚಿ ಕೂರುವಂತಿಲ್ಲ.

ದಶಕಗಳಿಂದ ಈಶಾನ್ಯ ಭಾರತವು ಅಂತಾರಾಜ್ಯ ಅತಿಕ್ರಮಣಕ್ಕೆ ಪ್ರಯೋಗಾಲಯದಂತಾಗಿದೆ. ಸಶಸ್ತ್ರ ಸಂಘರ್ಷಗಳು, ವಿಧ್ವಂಸಕ ಕೃತ್ಯಗಳು ಈ ಭಾಗದಲ್ಲಿ ನಡೆಯುತ್ತಿವೆ. ಇದಕ್ಕೀಗ ಹೊಸ ಆಯಾಮ ಸೇರಿದಂತಾಗಿದೆ. ಪಾಶ್ಚಿಮಾತ್ಯ ಹಂತಕರು ಮತ್ತು ಮಿಲಿಟರಿ ತರಬೇತಿ ಪಡೆದ ವಿದೇಶಿ ಪರಿಣತರು ಇಲ್ಲಿ ಪ್ರವೇಶ ಪಡೆದಿದ್ದಾರೆ. ಈ ಪ್ರದೇಶದಲ್ಲಿ ಚೀನಾದ ಹೆಜ್ಜೆ ಗುರುತುಗಳು ಈಗಾಗಲೇ ಸಾಬೀತಾಗಿದೆ. ಇನ್ನೀಗ ಅಮೆರಿಕಾದ ಛಾಯೆಯೂ ಕಂಡುಬಂದಿರುವುದು ಇಲ್ಲಿನ ಪರಿಸ್ಥಿತಿಯನ್ನು ಹೆಚ್ಚು ಸೂಕ್ಷ್ಮ ಮತ್ತು ಸಂಕೀರ್ಣಗೊಳಿಸಿದೆ.

ಮ್ಯಾಥ್ಯೂ ವಾನ್‌ಡೈಕ್ ಎಂಬ ಅಮೆರಿಕನ್ ಪ್ರಜೆ ಇದರಲ್ಲಿ ಪಾಲ್ಗೊಂಡಿರುವುದು ಅತ್ಯಂತ ಗಂಭೀರ ಪ್ರಶ್ನೆಗಳನ್ನೆತ್ತುತ್ತದೆ. ಈತ ಖಾಸಗಿ ಮಿಲಿಟರಿ ಸೈನಿಕ ಎನ್ನಲಾಗಿದ್ದು ಸಿರಿಯಾ, ಲಿಬಿಯಾ, ಅಫ್ಘಾನಿಸ್ತಾನ ಮತ್ತು ಇರಾಕ್ ಸಂಘರ್ಷದಲ್ಲಿ ಅಲ್ಲಿನ ಗುಂಪುಗಳಿಗೆ ತರಬೇತಿ ನೀಡಿದವನಾಗಿದ್ದಾನೆ. ಆತ ಅಮೆರಿಕನ್ ಸೈನ್ಯದಿಂದ ನಿವೃತ್ತಿಯಾಗಿರುವವನೇನೂ ಅಲ್ಲ. ಅಮೆರಿಕನ್ ಆಡಳಿತದ ಪರವಾಗಿಯೇ ಆತ ಕಾರ್ಯ ನಿರ್ವಹಿಸುತ್ತಿರುವ ಸಾಧ್ಯತೆಗಳಿವೆ. ಅಮೆರಿಕದ ಗುಪ್ತಚರ ಜಾಲದೊಂದಿಗೆ ಮತ್ತು ಸಿಐಎ ಜತೆಗೆ ಆತ ಸಂಪರ್ಕಗಳನ್ನು ಹೊಂದಿದ್ದಾನೆ. ಸೂಕ್ಷ್ಮಸಂವೇದಿ ಈಶಾನ್ಯ ಭಾರತದಲ್ಲಿ ಆತ ಕಂಡುಬಂದಿರುವುದು ಖಂಡಿತವಾಗಿಯೂ ಆಕಸ್ಮಿಕವಲ್ಲ.



ಮ್ಯಾಥ್ಯೂ ವಾನ್‌ಡೈಕ್

ಇದು ಭಾರತವು ಕಳವಳ ಪಡುವಂತಹ ಬೆಳವಣಿಗೆಯೇ ಆಗಿದೆ.

ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಪದಚ್ಯುತರಾಗುವ ತುಸುವೇ ಮುನ್ನ ಬಾಂಗ್ಲಾದೇಶ ಮತ್ತು ಮ್ಯಾನ್ಮಾರ್‌ಗಳನ್ನು ಸೇರಿಸಿಕೊಂಡು ಕ್ರೈಸ್ತ ಬಹುಸಂಖ್ಯಾತ ರಾಜ್ಯವೊಂದನ್ನು ನಿರ್ಮಿಸುವ ಯೋಜನೆಯನ್ನು ಅಮೆರಿಕ ಹೊಂದಿರುವುದಾಗಿ ಎಚ್ಚರಿಸಿದ್ದರು. ಅಮೆರಿಕವು ಬಂಗಾಳ ಕೊಲ್ಲಿಯಲ್ಲಿ ಮಿಲಿಟರಿ ಸೌಲಭ್ಯ ಹೆಚ್ಚಿಸಿಕೊಳ್ಳುತ್ತಿರುವ ಕುರಿತೂ ಹೇಳಿದ್ದರು. ಎಲ್ಲರೂ ಅದನ್ನು ಅತಿರಂಜಿತ ಕಲ್ಪನೆಯೆಂದು ತಳ್ಳಿ ಹಾಕಿದ್ದರು. ಆದರೆ ಈಗ ಅದು ಸತ್ಯವೆಂಬಂತೆ ತೋರಿಬರುತ್ತಿದೆ.

ಈಶಾನ್ಯ ಭಾರತದ ಜನಸಂಖ್ಯೆ ಮತ್ತು ರಾಜಕೀಯ ಪರಿಸ್ಥಿತಿಯನ್ನು ಗಮನಿಸುವಾಗ ಅಮೆರಿಕದ ಸೂತ್ರದ ಅಪಾಯ ಅರಿವಾಗುತ್ತದೆ. ಈಶಾನ್ಯ ಭಾರತದಲ್ಲಿ ಅದರಲ್ಲೂ ಮುಖ್ಯವಾಗಿ ನಾಗಲ್ಯಾಂಡ್ ಮತ್ತು ಮಿಜೋರಾಂನಲ್ಲಿ ಅಮೆರಿಕನ್ ಮಿಷನರಿಗಳು ಭದ್ರವಾಗಿ ಬೇರೂರಿದ್ದಾರೆ. ಮಣಿಪುರದಲ್ಲಿ ಜನಾಂಗೀಯ ಸಂಘರ್ಷವು ನಿರಂತರವಾಗಿ ನಡೆಯುತ್ತಿದ್ದು, ಅದಕ್ಕೆ ವಿದೇಶೀ ಕುಮ್ಮಕ್ಕೂ ಇದೆ.

ಮಣಿಪುರದಲ್ಲಿ ಮೈತೇಯಿ ಮತ್ತು ಕುಕಿ ನಡುವಿನ ಸಂಘರ್ಷವು ಕೇವಲ ಜನಾಂಗೀಯವಲ್ಲ, ಅದು ಧಾರ್ಮಿಕ ಆಯಾಮವನ್ನೂ ಪಡೆದಿದೆ. ಮೈತೇಯಿಗಳು ವೈಷ್ಣವ ಹಿಂದುಗಳಾಗಿದ್ದು, ಮಣಿಪುರದಲ್ಲಿ ಶೇ. 41.39 ಜನಸಂಖ್ಯೆ ಹೊಂದಿದ್ದಾರೆ. ಅವರು ಹೆಚ್ಚಾಗಿ ಇಂಫಾಲ ಕಣಿವೆಯಲ್ಲಿ ಕೇಂದ್ರಿತವಾಗಿದ್ದಾರೆ. 1951ರಲ್ಲಿ ಶೇ. 65ರಷ್ಟಿದ್ದ ಅವರ ಸಂಖ್ಯೆ 2011ರ ವೇಳೆಗೆ ಶೇ.44ಕ್ಕೆ ಕುಸಿದಿದೆ. ಇದೇವೇಳೆ ನಾಗಾ-ಕುಕಿ ಆದಿವಾಸಿಗಳು ಪ್ರಮುಖವಾಗಿ ಕ್ರೈಸ್ತರಾಗಿದ್ದು, ಸುತ್ತಲಿನ ಬೆಟ್ಟ ಪ್ರದೇಶಗಳಲ್ಲಿ ವ್ಯಾಪಿಸಿದ್ದಾರೆ.

ಇಂಫಾಲ ಕಣಿವೆಯು ರಾಜ್ಯದ ಶೇ. 10ರಷ್ಟು ಪ್ರದೇಶ ಹೊಂದಿದ್ದರೆ, ಉಳಿದ 90 ಭಾಗದಲ್ಲಿ ಕುಕಿಗಳಿರುವ ಬೆಟ್ಟ ಪ್ರದೇಶಗಳಿವೆ. ಇನ್ನೊಂದು ವಿಷಯವೆಂದರೆ ಆದಿವಾಸಿಗಳು ಇಂಫಾಲ ಕಣಿವೆಯಲ್ಲಿ ಭೂಮಿಯನ್ನು ಖರೀದಿಸಬಹುದಾಗಿದೆ. ಆದರೆ ಮೈತೇಯಿಗಳು ಬೆಟ್ಟಗುಡ್ಡಗಳಲ್ಲಿ ನೆಲೆಸುವಂತಿಲ್ಲ. ಎರಡೂ ಜನಾಂಗದವರು ಸಮಾನ ಜನಾಂಗೀಯ ಮೂಲವನ್ನು ಹೊಂದಿದ್ದರೂ ಬೇರೆ ಧರ್ಮಕ್ಕೆ ಸೇರಿದವರಾಗಿರುವುದರಿಂದ ಜನಾಂಗೀಯ ದ್ವೇಷ ಹೆಚ್ಚಿದೆ.

ಇಂತಹ ಪರಿಸ್ಥಿತಿಯಲ್ಲಿ ಸಶಸ್ತ್ರ ತರಬೇತಿ ಪಡೆದಿರುವಂತಹ ಶಂಕಾಸ್ಪದ ಮಿಲಿಟರಿ ವ್ಯಕ್ತಿಗಳು ಈ ಪ್ರದೇಶವನ್ನು ಪ್ರವೇಶಿಸುವುದು ಎಷ್ಟು ಅಪಾಯಕಾರಿಯಾದೀತು ಎಂದು ಊಹಿಸಬಹುದು.

ಈ ಪ್ರದೇಶದಲ್ಲಿ ಅಮೆರಿಕವು ತನ್ನ ಪ್ರಭಾವ ಹರಡಲು ಯತ್ನಿಸುತ್ತಿದೆಯೆಂದು ಕೇಳಿಬರುತ್ತಿದ್ದ ಪಿಸುಮಾತುಗಳು ಈಗ ದೃಢಪಟ್ಟಿದೆ. ಇತ್ತೀಚಿನ ವರ್ಷಗಳಲ್ಲಿ ಈಶಾನ್ಯ ಭಾರತಕ್ಕೆ ಅಮೆರಿಕದ ಪ್ರತಿನಿಧಿಗಳು ಪೂರ್ವಾನುಮತಿ ಪಡೆಯದೆ ಭೇಟಿ ನೀಡುತ್ತಿರುವುದೂ ಹೆಚ್ಚುತ್ತಿದೆ.

ಭಾರತದೊಂದಿಗೆ ಅಮೆರಿಕದ ಸಂಬಂಧವು ಯಾವಾಗಲೂ ದ್ವಿಮುಖವಾಗಿದೆ. ಒಂದು ಕಡೆಯಿಂದ ಸಹಕಾರ ಹಸ್ತ ಚಾಚುತ್ತಿದ್ದರೆ ಇನ್ನೊಂದೆಡೆಯಿಂದ ಭಾರತದ ಮೇಲೆ ಒತ್ತಡ ಹೇರುತ್ತದೆ. ಭಾರತದೊಂದಿಗೆ ಸ್ನೇಹ ಹೊಂದಿರುವಂತೆ ನಟಿಸುತ್ತಲೇ ಬೆನ್ನಿಗೆ ಚೂರಿ ಇರಿಯುವ ಕೆಲಸ ಮಾಡುತ್ತದೆ. ಭಾರತವು ಮತ್ತೊಂದು ಬಲಿಷ್ಠ ರಾಷ್ಟ್ರವಾಗುವುದನ್ನು ಅಮೆರಿಕ ಸಹಿಸುವುದಿಲ್ಲವೆಂಬುದು ಅದರ ನೀತಿಯಿಂದ ಸ್ಪಷ್ಟವಾಗಿದೆ.

ಭಾರತದ ಈಶಾನ್ಯ ಭಾಗದಲ್ಲಿ ಅಮೆರಿಕವು ರಹಸ್ಯವಾಗಿ ಕಾರ್ಯಾಚರಿಸುತ್ತಿದೆ. ಪ್ರಸ್ತುತ ಮ್ಯಾನ್ಮಾರ್‌ನ್ನು ಕೇಂದ್ರೀಕರಿಸಿ ಅಮೆರಿಕದ ಚಟುವಟಿಕೆ ನಡೆಯುತ್ತಿದೆಯಾದರೂ ಅದು ಈಶಾನ್ಯ ಭಾರತಕ್ಕೂ ವ್ಯಾಪಿಸುವ ದಿನಗಳು ದೂರವಿಲ್ಲ.

ಎನ್‌ಐಎ ವಿದೇಶಿಯರನ್ನು ಬಂಧಿಸಿರುವುದು ಸದ್ಯಕ್ಕೆ ಈ ಚಟುವಟಿಕೆಗೆ ಕಡಿವಾಣ ಹಾಕಿರಬಹುದು. ಆದರೆ ಇದು ಕೇವಲ ಒಂದು ಘಟನೆಯೆಂದು ಸುಮ್ಮನೆ ಕೂರುವಂತಿಲ್ಲ. ಇದರ ಹಿಂದೆ ದೊಡ್ಡ ಷಡ್ಯಂತ್ರವಿದೆ. ಆ ಕುರಿತಂತೆ ಭಾರತ ಹೆಚ್ಚು ಎಚ್ಚರದಿಂದಿರಬೇಕು.

ಎನ್‌ಐಎ ವಿದೇಶಿಯರನ್ನು ಬಂಧಿಸಿರುವುದು ಸದ್ಯಕ್ಕೆ ಈ ಚಟುವಟಿಕೆಗೆ ಕಡಿವಾಣ ಹಾಕಿರಬಹುದು. ಆದರೆ ಇದು ಕೇವಲ ಒಂದು ಘಟನೆಯೆಂದು ಸುಮ್ಮನೆ ಕೂರುವಂತಿಲ್ಲ. ಇದರ ಹಿಂದೆ ದೊಡ್ಡ ಷಡ್ಯಂತ್ರವಿದೆ. ಆ ಕುರಿತಂತೆ ಭಾರತ ಹೆಚ್ಚು ಎಚ್ಚರದಿಂದಿರಬೇಕು.

‘ಮಿಲೆನಿಯಲ್ಸ್’ಗಳಿಗಿಂತ ‘ಜೆನ್-ಝಿ’ ಕಡಿಮೆ ಬುದ್ಧಿವಂತರೆ?

▸ ಅರವಿಂದ ಶೆಣೈ

ಜೆನ್-ಝಿ ಕುರಿತಂತೆ ಇತ್ತೀಚೆಗೆ ಬಹಳಷ್ಟು ಕೇಳುತ್ತಿರುತ್ತೇವೆ. ಆಧುನಿಕ ಪೀಳಿಗೆ ಎಂಬರ್ಥದಲ್ಲಿ ‘ಜನರೇಶನ್ ಜಿ’ಯನ್ನು ಬಣ್ಣಿಸಲಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಕೆಲವು ದೇಶಗಳಲ್ಲಿ ಜೆನ್-ಝಿ ದಂಗೆಯಿಂದಾಗಿ ಸರಕಾರಗಳೇ ಉರುಳಿದ್ದು, ಆಡಳಿತ ಬದಲಾವಣೆಯಾಗಿದ್ದು ಕೇಳಿದ್ದೇವೆ.


ಆದರೆ ಜೆನ್-ಝಿ ತಲೆಮಾರಿನವರು ಅವರ ಹಿಂದಿನ ತಲೆಮಾರಾದ ಮಿಲೆನಿಯಲ್ಸ್‌ಗಳಿಗಿಂತ ಕಡಿಮೆ ಬುದ್ಧಿವಂತರೆ? ಎಂಬಂತಹ ಚರ್ಚೆಯೊಂದು ಈಗ ಶುರುವಾಗಿದೆ. ಹಿಂದಿನ ಪೀಳಿಗೆಯವರಿಗಿಂತ ಜೆನ್-ಝಿ ಪೀಳಿಗೆಯವರ ಬುದ್ಧಿವಂತಿಕೆ ಕಡಿಮೆ ಎಂಬುದಾಗಿ ಡಾ. ಜೇರೆಡ್ ಕೂನಿ ಹೋರ್ವತ್ ಎಂಬ ನ್ಯೂರೋ ವಿಜ್ಞಾನಿ ಪ್ರತಿಪಾದಿಸಿದ್ದಾರೆ. ಅಮೆರಿಕದ ಸಂಸತ್ತಿನ ವಾಣಿಜ್ಯ ಮತ್ತು ವಿಜ್ಞಾನದ ಮೇಲಿನ ಸೆನೆಟ್ ಸಮಿತಿಯ ಮುಂದೆ ಅವರು ಈ ಕುರಿತಾದ ಸಂಶೋಧನಾ ಮಾಹಿತಿಯನ್ನು ಸಲ್ಲಿಸುತ್ತಾ ಇದನ್ನು ತಿಳಿಸಿದ್ದಾರೆ.

ಪ್ರತಿಯೊಂದು ಪೀಳಿಗೆಯು ತನ್ನ ಹಿಂದಿನ ಪೀಳಿಗೆಗಿಂತ ಹೆಚ್ಚು ಬುದ್ಧಿವಂತಿಕೆಯನ್ನು ಸಾಧಿಸುತ್ತಾ ಬಂದಿದೆ. ಆದರೆ ಇದೇ ಮೊದಲ ಬಾರಿಯಾಗಿ ಪೀಳಿಗೆಯೊಂದು ಹಿಂದಿನ ಪೀಳಿಗೆಗಿಂತ ಕಡಿಮೆ ಬುದ್ಧಿವಂತಿಕೆ ಪ್ರದರ್ಶಿಸುತ್ತಿದೆ ಎನ್ನುವುದು ಅವರ ಅಭಿಪ್ರಾಯ. ಅದಕ್ಕೆ ಅವರು ಕಾರಣವನ್ನೂ ನೀಡಿದ್ದಾರೆ. “ಕಂಪ್ಯೂಟರ್, ಟ್ಯಾಬ್ಲೆಟ್‌ಗಳು ಸೇರಿದಂತೆ ಶೈಕ್ಷಣಿಕ ತಂತ್ರಜ್ಞಾನಗಳ ಹೆಚ್ಚೆಚ್ಚು ಬಳಕೆಯಿಂದಾಗಿ ಹೊಸ ಪೀಳಿಗೆಯವರು ಕಡಿಮೆ ಬುದ್ಧಿವಂತರಾಗುತ್ತಿದ್ದಾರೆ” ಎಂಬುದು ಅವರ ವಿವರಣೆ.

ಜೆನ್-ಝಿ ಮತ್ತು ಮಿಲೆನಿಯಲ್ಸ್

ಜೆನ್-ಝಿ ಎಂದರೆ 1997ರಿಂದ 2012ರ ಅವಧಿಯಲ್ಲಿ ಹುಟ್ಟಿದವರು. ಮಿಲೆನಿಯಲ್ಸ್ ಎಂದರೆ 1980ರಿಂದ 1996ರ ಅವಧಿಯಲ್ಲಿ ಜನಿಸಿದವರು. ಜೆನ್-ಝಿಗಳು ಶಾಲಾ ಕಲಿಕೆಗೆ ಡಿಜಿಟಲ್ ತಂತ್ರಜ್ಞಾನವನ್ನು ಹೆಚ್ಚಾಗಿ ಅವಲಂಬಿಸಿರುವುದರಿಂದ ಅವರ ಸಹಜ ಬುದ್ಧಿಶಕ್ತಿಯ ವಿಕಸನಕ್ಕೆ ಅಡ್ಡಿಯಾಗುತ್ತಿದೆ. ಜೆನ್-ಝಿ ಮಂದಿ 20ನೇ ಶತಮಾನದವರಿಗಿಂತ ಹೆಚ್ಚು ಸಮಯ ಶಾಲಾ ಕಾಲೇಜುಗಳಲ್ಲಿ ಕಳೆಯುವಂತಾಗಿದ್ದರೂ ಅವರ ಬುದ್ಧಿಶಕ್ತಿಯ ಮಟ್ಟ ಕುಸಿದಿದೆ ಎಂಬುದಾಗಿ ಈ ನರವಿಜ್ಞಾನಿ ಹೇಳುತ್ತಾರೆ.

ಈ ಪೀಳಿಗೆಯವರು ಸಣ್ಣ ಸಣ್ಣ ವಿಡಿಯೋಗಳ ಮೂಲಕ, ಪುಟ್ಟ ವಾಕ್ಯಗಳ ಮೂಲಕ ತಮ್ಮ ಕಲಿಕೆ ನಡೆಸುತ್ತಿದ್ದಾರೆ. ದೊಡ್ಡ ದೊಡ್ಡ ವಿವರಗಳನ್ನೂ ಈ ವಿಡಿಯೋ ವಿವರಣೆಗಳು ಅತ್ಯಂತ ಸಂಕ್ಷಿಪ್ತವಾಗಿ ನೀಡುತ್ತವೆ. ಆದರೆ ಮಾನವನ ಮಿದುಳು ಈ ರೀತಿ ಮೊಟಕು ಹಾದಿಯ ಮೂಲಕ ಕಲಿಯಲು ರೂಪುಗೊಂಡಿಲ್ಲ ಎಂದು ಅವರು ಹೇಳುತ್ತಾರೆ.



ಈಗಿನ ಹದಿಹರೆಯದವರು ತಾವು ಎಚ್ಚರದಲ್ಲಿರುವ ಸಮಯದಲ್ಲಿ ಅರ್ಧದಷ್ಟು ಕಾಲವನ್ನು ಮೊಬೈಲ್ ಅಥವಾ ಕಂಪ್ಯೂಟರ್ ಸ್ಕ್ರೀನ್ ವೀಕ್ಷಿಸುವುದರಲ್ಲೇ ಕಳೆಯುತ್ತಾರೆ. ಮನುಷ್ಯರ ದೇಹಶಾಸ್ತ್ರವು ಇತರ ಮನುಷ್ಯರಿಂದ ಮತ್ತು ಆಳವಾದ ಅಧ್ಯಯನದಿಂದ ಕಲಿತುಕೊಳ್ಳಲು ಪೂರಕವಾಗುವಂತೆ ರೂಪಿಸಲ್ಪಟ್ಟಿದೆಯೇ ಹೊರತು ಪುಟ್ಟ ಪುಟ್ಟ ಅಂಶಗಳನ್ನಷ್ಟೇ ನೆನಪಿಟ್ಟುಕೊಳ್ಳುವ ಮೂಲಕ ಅಲ್ಲ ಎನ್ನುತ್ತಾರೆ ಹೋರ್ವತ್. ಮೊಬೈಲ್ ಸ್ಕ್ರೀನ್ ನೋಡಿಕೊಂಡು ಕಲಿಯುವ ಮೂಲಕ ಈ ಪೀಳಿಗೆಯವರು ಸ್ಕಿಮ್ಮರ್‌ಗಳಂತಾಗಿದ್ದಾರೆ. ದೊಡ್ಡ ದೊಡ್ಡ ಪುಸ್ತಕಗಳನ್ನು ಎತ್ತಿಕೊಳ್ಳದಿರುವ ಮೂಲಕ ಸುಂದರ ಮನಸ್ಸುಗಳೂ ನಿಂತ ನೀರಿನಂತಾಗುತ್ತವೆ ಎನ್ನುತ್ತಾರವರು. ತಾನೇನೂ ತಂತ್ರಜ್ಞಾನ ವಿರೋಧಿಯಲ್ಲ. ಆದರೆ ವಿದ್ಯಾರ್ಥಿಗಳು ಮೊಬೈಲ್‌ನಲ್ಲಿ ಕಾಲಕಳೆಯುವ ಸಮಯವನ್ನು ನಿಯಂತ್ರಿಸಬೇಕಾಗಿದೆ. ಪುಸ್ತಕ ಓದುವಂತಹ ಹಳೆಯ ತಲೆಮಾರಿನ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕಾಗಿದೆ ಎಂಬುದು ಅವರ ಸಲಹೆ. ಪ್ರತಿಯೊಂದು ಪೀಳಿಗೆಯೂ ಅದರ ಹಿಂದಿನ ಪೀಳಿಗೆಗಿಂತ ಹೆಚ್ಚು ಬುದ್ಧಿವಂತಿಕೆಯನ್ನು ಹೊಂದಿರುತ್ತದೆ. ಆದರೆ ಜೆನ್ ಝೀ ಮಾತ್ರ ತನ್ನ ಹಿಂದಿನ ಪೀಳಿಗೆಗಿಂತ ಕಡಿಮೆ ಬುದ್ಧಿವಂತಿಕೆ ಹೊಂದಿದೆ. ಇದು ಕೇವಲ ಅಮೆರಿಕಕ್ಕಷ್ಟೇ ಸೀಮಿತವಲ್ಲ, ಜಾಗತಿಕವಾಗಿ ಕಂಡುಬರುತ್ತಿರುವ ವಿದ್ಯಮಾನ ಎಂದೂ ಅವರು ವಿವರಿಸುತ್ತಾರೆ.

ಜಾಗತಿಕ ಟ್ರೆಂಡ್

ಅಂಕಿಅಂಶಗಳನ್ನು ಗಮನಿಸಿದರೆ ಸುಮಾರು 80 ದೇಶಗಳಲ್ಲಿ ಇದೇ ಬಗೆಯ ಟ್ರೆಂಡ್ ಕಾಣಬಹುದು. ಶಾಲೆಗಳಲ್ಲಿ ಕಲಿಕೆಗೆ ಡಿಜಿಟಲ್ ಮಾಧ್ಯಮವನ್ನು ಬಳಸಿದ ಬಳಿಕ ವಿದ್ಯಾರ್ಥಿಗಳ ನಿರ್ವಹಣೆಯು ಗಣನೀಯವಾಗಿ ಕಡಿಮೆಯಾಗಿರುವುದನ್ನು ಕಾಣಬಹುದು.

ಅಮೆರಿಕ ನಡೆಸಿದ ಸಮೀಕ್ಷೆಯೊಂದು ಈಗ 8ರಿಂದ 18ರ ಹರೆಯದೊಳಗಿನ ಮಕ್ಕಳಲ್ಲಿ ಓದುವ ಅಭ್ಯಾಸ ಬಹಳಷ್ಟು ಕಡಿಮೆಯಾಗಿರುವುದನ್ನು ಕಂಡುಕೊಂಡಿದೆ. ತಲಾ ಐವರಲ್ಲಿ ಒಬ್ಬರು ಮಾತ್ರ ಓದುವ ಹವ್ಯಾಸ ಹೊಂದಿದ್ದಾರೆ. ಕಳೆದ ಎರಡು ದಶಕಗಳಲ್ಲಿ ವಿದ್ಯಾರ್ಥಿಗಳಲ್ಲೂ, ಹಿರಿಯರಲ್ಲೂ ಓದುವ ಹವ್ಯಾಸ ಶೇ. 40ರಷ್ಟು ಕಡಿಮೆಯಾಗಿದೆ ಎಂದು ಮತ್ತೊಂದು ಅಧ್ಯಯನವು ತಿಳಿಸಿದೆ.

ಕೋವಿಡ್ ಕಾಲದಲ್ಲಿ ಮಕ್ಕಳ ಕೈಗೆ ಮೊಬೈಲ್ ಬರುವಂತಾಗಿತ್ತು. ಶಾಲಾ ಕಲಿಕೆಗೆ ಮೊಬೈಲನ್ನೇ ಆಶ್ರಯಿಸುವಂತಾಗಿತ್ತು. ಆ ಬಳಿಕ ಕಂಡುಬಂದ ಅಂಶವೆಂದರೆ ಮೂರನೇ ತರಗತಿವರೆಗಿನ ಮಕ್ಕಳಲ್ಲಿ ಸ್ಪಷ್ಟವಾಗಿ ಓದುವ ಅಭ್ಯಾಸ ಶೇ. 30ರಷ್ಟು ಕಡಿಮೆಯಾಗಿದೆ ಎಂಬುದಾಗಿ. ಲೆಕ್ಕಗಳನ್ನು ಮಾಡಲು ಈಗ ಕ್ಯಾಲ್ಕುಲೇಟರ್‌ಗಳನ್ನು ಹೆಚ್ಚೆಚ್ಚು ಬಳಸುತ್ತಿರುವುದರಿಂದಾಗಿ ಮಕ್ಕಳಲ್ಲಿ ಮತ್ತು ಯುವಜನರಲ್ಲಿ ಗಣಿತ ಪರಿಣತಿ, ಮನದಲ್ಲೇ ಲೆಕ್ಕ ಹಾಕುವ ತಜ್ಞತೆ ಕಡಿಮೆಯಾಗಿದೆ ಎಂದೂ ಹೇಳಲಾಗುತ್ತಿದೆ.

ಒಂದಂತೂ ನಿಜ. ತಂತ್ರಜ್ಞಾನವು ಬೆಳೆದಂತೆ ಅದು ಚಿಂತನಾ ಶೈಲಿಯನ್ನು, ಕಲಿಕೆಯ ಮಾದರಿಯನ್ನು ಕೂಡಾ ಬದಲಿಸಿದೆ. ಓದುವ ಅಭ್ಯಾಸ ಕಡಿಮೆಯಾಗಿದೆ. ಆಳಗಮನ ಇಲ್ಲ. ಸುದೀರ್ಘ ವಿವರಣೆಗಿಂತ ಸಂಕ್ಷಿಪ್ತ ವಿವರಣೆಗಳೇ ಮುಖ್ಯವಾಗುತ್ತಿವೆ. ಪ್ರಶ್ನೆಗಳಿಗೆ ಮೊದಲಿನಂತೆ ಹುಡುಕಾಟ ನಡೆಸಬೇಕಾಗಿಲ್ಲ. ತಂತ್ರಜ್ಞಾನವು ತಕ್ಷಣವೇ ಉತ್ತರ ನೀಡುತ್ತದೆ.

ಹಾಗೆಂದು ಇವೆಲ್ಲ ಮನುಷ್ಯನ ಬುದ್ಧಿವಂತಿಕೆ ನಶಿಸುತ್ತಿರುವುದರ ಸಂಕೇತವೆಂದೇ ಹೇಳುವುದು ತಪ್ಪು. ಪೀಳಿಗೆಯೊಂದರ ಸ್ಥಿತ್ಯಂತರ ಎಂದೂ ಇದನ್ನು ಬಣ್ಣಿಸಬಹುದಾಗಿದೆ.

ಟ್ರಂಪ್ ಅಂತಿಮ ಗಡುವು | ಇರಾನ್ ಅಧ್ಯಕ್ಷ ಪೆಝೆಶ್ಕಿಯನ್ ಘೋಷಣೆ

1.4 ಕೋಟಿ ಇರಾನಿಯರು ರಾಷ್ಟ್ರಕ್ಕಾಗಿ ಪ್ರಾಣತ್ಯಾಗಕ್ಕೆ ಸಿದ್ಧ

ಟೆಹ್ರಾನ್: ಇರಾನ್‌ನ 1.4 ಕೋಟಿ ಪ್ರಜೆಗಳು ರಾಷ್ಟ್ರಕ್ಕಾಗಿ ಪ್ರಾಣಾರ್ಪಣೆಗೂ ಸಿದ್ಧರಿದ್ದಾರೆ ಎಂದು ಇರಾನ್ ಅಧ್ಯಕ್ಷ ಮಸೌದ್ ಪೆಝೆಶ್ಕಿಯನ್ ಮಂಗಳವಾರ ಘೋಷಿಸಿದ್ದಾರೆ. ತನ್ಮೂಲಕ ಇರಾನ್-ಅಮೆರಿಕ ನಡುವಣ ಉದ್ವಿಗ್ನತೆ ಮತ್ತಷ್ಟು ತಾರಕಕ್ಕೇರುವ ಲಕ್ಷಣಗಳು ನಿಚ್ಚಳವಾಗಿದೆ. ನಿರ್ಣಾಯಕ ಹಾರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸದಿದ್ದಲ್ಲಿ ದಾಳಿ ನಡೆಸುವುದಾಗಿ ಎಚ್ಚರಿಸಿ, ಅಮೆರಿಕ ಅಧ್ಯಕ್ಷ ಟ್ರಂಪ್ ವಿಧಿಸಿರುವ ಅಂತಿಮ ಗಡುವು ಮುಕ್ತಾಯಕ್ಕೆ ಕೆಲ ತಾಸು ಮುನ್ನ, ಇರಾನ್ ಅಧ್ಯಕ್ಷ ಪೆಝೆಶ್ಕಿಯನ್ ಈ ರೀತಿ ಘೋಷಣೆ ಮಾಡಿದ್ದಾರೆ.

ತಾನೂ ಪ್ರಾಣತ್ಯಾಗಕ್ಕೆ ಸಿದ್ಧ: ಸುಮಾರು 1.4 ಕೋಟಿ ಇರಾನಿ ಪ್ರಜೆಗಳು ದೇಶದ ಸಮರ ಯತ್ನಗಳಿಗೆ ಕೈಜೋಡಿಸಲು ಸ್ವಯಂಪ್ರೇರಣೆಯಿಂದ ಮುಂದೆ ಬಂದಿದ್ದಾರೆ. ಈ ಸಂಖ್ಯೆ ಇರಾನ್‌ನ ಒಟ್ಟು ಜನಸಂಖ್ಯೆಯ ನಿರ್ಣಾಯಕ ಭಾಗವಾಗಿದೆ. ಮುಂದುವರೆದಿರುವ ಯುದ್ಧ ಸಂದರ್ಭವೂ ಏಕತೆ ಎತ್ತಿಹಿಡಿದ ಇರಾನ್ ಸರಕಾರದ ಪ್ರಯತ್ನಗಳನ್ನು 1.4 ಕೋಟಿ ಜನರ ಬೆಂಬಲ ಸಾಕ್ಷೀಕರಿಸಿದೆ. ಜನರೊಂದಿಗೆ ತಾನು ಕೂಡ ಇರಾನ್‌ಗಾಗಿ ಪ್ರಾಣತ್ಯಾಗಕ್ಕೆ ಸಿದ್ಧನಿರುವುದಾಗಿ ಅಧ್ಯಕ್ಷ ಪೆಝೆಶ್ಕಿಯನ್ ಜಾಲತಾಣದಲ್ಲಿ ಶೇರ್ ಮಾಡಿರುವ ಸಂದೇಶದಲ್ಲಿ ಘೋಷಿಸಿದ್ದಾರೆ.



ಅಧಿಕಾರಿಗಳ ಉತ್ತೇಜನ: ಇರಾನ್ ರಕ್ಷಣೆಗಾಗಿ ಹೋರಾಡಲು ಸ್ವಯಂಪ್ರೇರಣೆಯಿಂದ ಮುಂದೆ ಬರುವಂತೆ ಮತ್ತು ಟೆಕ್ಸ್ಟ್ ಮೆಸೇಜ್‌ಗಳು ಹಾಗೂ ರಾಷ್ಟ್ರೀಯ ಮಾಧ್ಯಮ ಅಭಿಯಾನಗಳ ಮುಖೇನ ಸ್ವಯಂಸೇವಕರೆಂದು ನೊಂದಾಯಿಸುವಂತೆ ಅಧಿಕಾರಿಗಳು ಜನರನ್ನು ಉತ್ತೇಜಿಸುತ್ತಿದ್ದಾರೆ. ಪರಿಣಾಮ, ಸಂಘರ್ಷಗಳ ಆರಂಭದ ವಾರಗಳಿಗಿಂತ ಅತ್ಯಧಿಕ ಸಂಖ್ಯೆಯಲ್ಲಿ ಇರಾನ್ ಪ್ರಜೆಗಳು ರಾಷ್ಟ್ರರಕ್ಷಣೆಗಾಗಿ ಪ್ರಾಣತ್ಯಾಗದ ಸಂಕಲ್ಪ ತೊಟ್ಟಿದ್ದಾರೆಂದು ಸರಕಾರಿ ಮೂಲಗಳು ತಿಳಿಸಿವೆ. 90 ಮಿಲಿಯನ್ ಜನಸಂಖ್ಯೆ ಹೊಂದಿರುವ ಇರಾನ್ ಈಚಿನ ವರ್ಷಗಳಲ್ಲಿ ಸಾರ್ವಜನಿಕ ಪ್ರತಿಭಟನೆಗಳು, ರಾಜಕೀಯ ಗೊಂದಲ-ಉದ್ವಿಗ್ನತೆಗಳಂತಹ ಆಂತರಿಕ ಸಮಸ್ಯೆಗಳಿಂದ ತತ್ತರಿಸಿತ್ತು. ವಿದೇಶೀ ಮಿಲಿಟರಿ ಕಾರ್ಯಾಚರಣೆಗಳ ಸ್ಥೈರ್ಯಗುಂದಿಸುವ ಯತ್ನವಾಗಿ ,ಬಲಿಷ್ಠ ಜನಬೆಂಬಲವನ್ನು ಇರಾನ್ ಪ್ರದರ್ಶಿಸುತ್ತಿದೆ ಎಂಬುದು ರಾಜಕೀಯ ವಿಶ್ಲೇಷಕರ ಲೆಕ್ಕಾಚಾರ.

ಶತ್ರುಗಳಿಗೆ ಸಂದೇಶ ರವಾನಿಸಲು ಹೇಳಿಕೆ: ಹಾರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸಬೇಕೆಂದು ಅಧ್ಯಕ್ಷ ಟ್ರಂಪ್ ಒತ್ತಡ ಹೇರಿರುವ ಕಾರಣ, ಇರಾನ್ ಅಧ್ಯಕ್ಷರು ಪ್ರಸ್ತುತ ದೇಶದ ಪ್ರಜೆಗಳ ಬೆಂಬಲದ ಹೇಳಿಕೆ ನೀಡಿದ್ದಾರೆ. ಜಲಸಂಧಿಯನ್ನು ಮತ್ತೆ ತೆರೆಯದಿದ್ದಲ್ಲಿ ಇರಾನ್‌ನ ಸೇತುವೆಗಳು, ವಿದ್ಯುತ್ ಸ್ಥಾವರಗಳು, ಪ್ರಮುಖ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸುವುದಾಗಿ ಟ್ರಂಪ್ ಬೆದರಿಸಿದ್ದು, ಇದು ವಲಯದಲ್ಲಿ ಸಂಘರ್ಷವನ್ನು ಮತ್ತಷ್ಟು ತೀವ್ರಗೊಳಿಸುವ ಭೀತಿ ಹುಟ್ಟು ಹಾಕಿದೆ. ರಾಷ್ಟ್ರೀಯ ನೈತಿಕ ಸ್ಥೈರ್ಯವನ್ನು ಬಲಪಡಿಸಿಕೊಂಡು ಶತ್ರುಗಳಿಗೆ ಪ್ರತಿರೋಧ ಒಡ್ಡಲಾಗುವುದೆಂಬ ಸಂದೇಶ ರವಾನಿಸುವುದಕ್ಕಾಗಿ , ಇರಾನ್ ಅಧ್ಯಕ್ಷರು ಪ್ರಸ್ತುತ ಹೇಳಿಕೆ ನೀಡಿದ್ದಾರೆಂದು ರಾಜಕೀಯ ವೀಕ್ಷಕರು ಹೇಳುತ್ತಾರೆ.

ಸಾವಿನ ಸಂಖ್ಯೆ

ಯುದ್ಧ ಆರಂಭವಾದಾಗಿನಿಂದ ಇರಾನ್‌ನಲ್ಲಿ 1,900 ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಲೆಬನಾನ್‌ನಲ್ಲಿ ಸಾವಿನ ಸಂಖ್ಯೆ 1,400 ದಾಟಿದ್ದು, ಹತ್ತು ಲಕ್ಷಕ್ಕೂ ಹೆಚ್ಚು ಜನರು ಸ್ಥಳಾಂತರಗೊಂಡಿದ್ದಾರೆ. ಈ ಸಂಘರ್ಷದಲ್ಲಿ 13 ಅಮೆರಿಕನ್ ಸೇವಾ ಸದಸ್ಯರು, 11 ಇಸ್ರೇಲಿ ಸೈನಿಕರು ಮತ್ತು ಇಸ್ರೇಲ್ ಹಾಗೂ ವೆಸ್ಟ್ ಬ್ಯಾಂಕ್‌ನಾದ್ಯಂತ ಹಲವಾರು ಜನರು ಸಾವನ್ನಪ್ಪಿದ್ದಾರೆ. ಮಂಗಳವಾರ ಅಲ್ಬೋರ್ಜ್ ಪ್ರಾಂತ್ಯದಲ್ಲಿ ನಡೆದ ವಾಯುದಾಳಿಯಲ್ಲಿ 18 ಜನರು ಮೃತಪಟ್ಟಿದ್ದು, 24 ಮಂದಿ ಗಾಯಗೊಂಡಿದ್ದಾರೆ.

ಹೆಚ್ಚಿದ ಪ್ರಾದೇಶಿಕ ಸಂಘರ್ಷ

ಮಂಗಳವಾರ ಇರಾನ್‌ನ ಕಿಶ್ ದ್ವೀಪದ ದಕ್ಷಿಣದಲ್ಲಿರುವ ಅಂತರಾಷ್ಟ್ರೀಯ ಜಲಪ್ರದೇಶದಲ್ಲಿ ಸರಕು ಸಾಗಣೆ ಹಡಗೊಂದಕ್ಕೆ ಕ್ಷಿಪಣಿ ಡಿಕ್ಕಿ ಹೊಡೆದಿದೆ. ಇಸ್ತಾನ್‌ಬುಲ್‌ನಲ್ಲಿರುವ ಇಸ್ರೇಲ್ ರಾಯಭಾರ ಕಚೇರಿಯ ಹೊರಗೆ ನಡೆದ ಗುಂಡಿನ ಚಕಮಕಿಯಲ್ಲಿ ಇಬ್ಬರು ದಾಳಿಕೋರರು ಸಾವನ್ನಪ್ಪಿದ್ದಾರೆ ಮತ್ತು ಒಬ್ಬ ಪೊಲೀಸ್ ಅಧಿಕಾರಿ ಗಾಯಗೊಂಡಿದ್ದಾರೆ. ಗುತ್ತಿಗೆದಾರರೊಬ್ಬರು ಮೃತಪಟ್ಟ ನಂತರ, ವಿಶ್ವ ಆರೋಗ್ಯ ಸಂಸ್ಥೆ, ರಫಾ ಕ್ರಾಸಿಂಗ್ ಮೂಲಕ ಗಾಜಾದ ವೈದ್ಯಕೀಯ ಸ್ಥಳಾಂತರಿಸುವಿಕೆಯನ್ನು ಸ್ಥಗಿತಗೊಳಿಸಿದೆ.

ಸಂಪನ್ಮೂಲಗಳ ಕೊರತೆ ತೀವ್ರ

ಇಂಧನ ಕೊರತೆಯಿಂದಾಗಿ ಉತ್ತರ ಇಟಲಿಯ ನಾಲ್ಕು ವಿಮಾನ ನಿಲ್ದಾಣಗಳು ಏಪ್ರಿಲ್ 9 ರವರೆಗೆ ಜೆಟ್ ಇಂಧನ ಪೂರೈಕೆಯನ್ನು ನಿರ್ಬಂಧಿಸಿವೆ. ಫ್ರಾನ್ಸ್ ನಲ್ಲಿ ಸುಮಾರು ಶೇ.18 ರಷ್ಟು ಸೇವಾ ಕೇಂದ್ರಗಳಲ್ಲಿ ಇಂಧನ ಕೊರತೆ ವರದಿಯಾಗಿದ್ದು, ಸರ್ಕಾರ 900 ಮರುಪೂರೈಕೆ ಟ್ರಕ್‌ಗಳನ್ನು ರವಾನಿಸಿದೆ. ಟೆಹ್ರಾನ್‌ನಲ್ಲಿ ಇಂಟರ್ನೆಟ್ ಸಂಪರ್ಕ ಕಡಿತಗೊಂಡಿದ್ದು, ಗಡುವು ಸಮೀಪಿಸುತ್ತಿದ್ದಂತೆ ನಿವಾಸಿಗಳು ವಿದ್ಯುತ್ ಕಡಿತದ ಆತಂಕದಲ್ಲಿದ್ದಾರೆ.

ಪ್ರಜ್ಞಾಹೀನ ಸ್ಥಿತಿಯಲ್ಲಿ ಮೊಜ್ತಬಾ ಖಮೇನಿ?

ಖೋಮ್: ಇರಾನ್‌ನ ಸುಪ್ರೀಂ ಲೀಡರ್ ಮೊಜ್ತಬಾ ಖಮೇನಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದು, ಖೋಮ್‌ನಲ್ಲಿ ತುರ್ತು ವೈದ್ಯಕೀಯ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಅಮೆರಿಕ ಮತ್ತು ಇಸ್ರೇಲ್ ಗುಪ್ತಚರ ಮಾಹಿತಿ ಆಧಾರಿತ ರಾಜತಾಂತ್ರಿಕ ಹೇಳಿಕೆ ತಿಳಿಸಿದೆ. ಖಮೇನಿ ಸ್ಥಿತಿ ಗಂಭೀರವಾಗಿದ್ದು, ಆಡಳಿತದ ನಿರ್ಧಾರಗಳನ್ನು ತೆಗೆದುಕೊಳ್ಳಲು ಅವರು ಅಸಮರ್ಥರಾಗಿದ್ದಾರೆ. ಅವರು ಇನ್ನೂ ಅಧಿಕಾರದಲ್ಲಿದ್ದಾರೆ ಎಂದು ಇರಾನ್ ಅಧಿಕಾರಿಗಳು ಪ್ರತಿಪಾದಿಸುತ್ತಿದ್ದರೂ, ಯುದ್ಧ ಆರಂಭವಾದ ನಂತರ ಅವರ ಯಾವುದೇ ಅಧಿಕೃತ ವಿಡಿಯೋ ಅಥವಾ ಆಡಿಯೋ ಹೊರಬಂದಿಲ್ಲ, ಸರ್ಕಾರಿ ದೂರದರ್ಶನ ಕೇವಲ ಲಿಖಿತ ಹೇಳಿಕೆಗಳು ಮತ್ತು ಎಐ ಮೂಲಕ ಸಿದ್ಧಪಡಿಸಿದ ದೃಶ್ಯಾವಳಿಗಳನ್ನು ಮಾತ್ರ ಬಿಡುಗಡೆ ಮಾಡಿದೆ. ಫೆ.28 ರಂದು ನಡೆದ ವಾಯುದಾಳಿಯಲ್ಲಿ ಗಾಯಗೊಂಡಿರುವ ಆತ ಕೋಮಾ ಸ್ಥಿತಿಯಲ್ಲಿದ್ದಾರೆ ಎಂದು ಹೇಳಲಾಗುತ್ತಿದೆ.

ಐಆರ್‌ಜಿಸಿ ಪಾತ್ರ ಇನ್ನೂ ಅಸ್ಪಷ್ಟ: ಖಮೇನಿ ಅನಾರೋಗ್ಯದ ವರದಿಗಳು, ದೇಶದ ನಿಯಂತ್ರಣದಲ್ಲಿ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಪಾತ್ರದ ಬಗ್ಗೆ ಪ್ರಶ್ನೆಗಳನ್ನು ಎತ್ತಿವೆ. ತಾವು ಸುಪ್ರೀಂ ಲೀಡರ್ ಬದಲಿಗೆ ಇರಾನ್‌ನ ಇತರ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸುತ್ತಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

ಅಂತ್ಯಕ್ರಿಯೆಗೆ ಸಿದ್ಧತೆ?: ಮಾಜಿ ನಾಯಕ ಅಲಿ ಖಮೇನಿ ಅಂತ್ಯಕ್ರಿಯೆಗಾಗಿ ಖೋಮ್‌ನಲ್ಲಿ ಸಿದ್ಧತೆಗಳು ನಡೆಯುತ್ತಿವೆ, ಎಂದು ಗುಪ್ತಚರ ಮೂಲಗಳು ಸೂಚಿಸಿವೆ. ಅಂತ್ಯಕ್ರಿಯೆಯಲ್ಲಿನ ವಿಳಂಬ, ಶಿಯಾ ಪಂಗಡದ ಸಾಂಪ್ರದಾಯಿಕ 40 ದಿನಗಳ ಶೋಕದ ಅವಧಿಯನ್ನು ಮೀರಿದೆ.

ಮಾಹಿತಿ ಸೋರಿಕೆ: ಮಾಧ್ಯಮಗಳ ವಿರುದ್ಧ ಟ್ರಂಪ್ ಕ್ರಮ ಎಚ್ಚರಿಕೆ

ವಾಷಿಂಗ್ಟನ್: ಇರಾನ್‌ನಲ್ಲಿ ನಡೆದ ಎಫ್-15 ಯುದ್ಧ ವಿಮಾನದ ಸಿಬ್ಬಂದಿಯ ರಹಸ್ಯ ರಕ್ಷಣಾ ಕಾರ್ಯಾಚರಣೆಯ ವಿವರಗಳನ್ನು ಸೋರಿಕೆ ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಘೋಷಿಸಿದ್ದಾರೆ. ಒಬ್ಬ ಸಿಬ್ಬಂದಿಯನ್ನು ರಕ್ಷಿಸಿದ ನಂತರ ಎರಡನೇ ವ್ಯಕ್ತಿ ನಾಪತ್ತೆಯಾಗಿರುವ ಸುದ್ದಿಯನ್ನು ಮಾಧ್ಯಮಗಳು ಬಹಿರಂಗಪಡಿಸಿದ್ದರಿಂದ ಇರಾನ್ ಪಡೆಗಳು ಎಚ್ಚೆತ್ತುಕೊಂಡವು, ಎಂದು ಟ್ರಂಪ್ ತಿಳಿಸಿದ್ದಾರೆ. ಈ ವರದಿಯ ನಂತರವಷ್ಟೇ ಇರಾನ್ ಸರ್ಕಾರ ನಾಪತ್ತೆಯಾದ ಪೈಲಟ್ ಅನ್ನು ಸೆರೆಹಿಡಿದವರಿಗೆ ಭಾರಿ ಬಹುಮಾನ ಘೋಷಿಸಿತು. ಇದರಿಂದ ರಕ್ಷಣಾ ಕಾರ್ಯಾಚರಣೆಗೆ ಅಡಚಣೆಯಾಯಿತು, ಎಂದು ಅವರು ಹೇಳಿದ್ದಾರೆ.

ಮಾಧ್ಯಮಗಳಿಗೆ ಎಚ್ಚರಿಕೆ: ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ಮಾಹಿತಿ ಸೋರಿಕೆ ಮಾಡಿದ ಮೂಲವನ್ನು ಬಹಿರಂಗಪಡಿಸದಿದ್ದರೆ ಮಾಧ್ಯಮ ಸಂಸ್ಥೆಗಳ ಪ್ರತಿನಿಧಿಗಳನ್ನು ಜೈಲಿಗಟ್ಟುವುದಾಗಿ ಅಧ್ಯಕ್ಷರು ಎಚ್ಚರಿಸಿದ್ದಾರೆ. ಶುಕ್ರವಾರ ಪತನಗೊಂಡ ವಿಮಾನದಲ್ಲಿದ್ದ ಇಬ್ಬರು ಸಿಬ್ಬಂದಿ ಗಾಯಗೊಂಡಿದ್ದು, ಸದ್ಯ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಅವರು ತಿಳಿಸಿದ್ದಾರೆ. ನೌಕಾಪಡೆಯ ಸೀಲ್ ಟೀಮ್-6 ಇರಾನ್‌ನ ಒಳಗಿನ ಪ್ರದೇಶಗಳಲ್ಲಿ ಈ ಕಾರ್ಯಾಚರಣೆ ನಡೆಸಿತ್ತು.



ಇರಾನಿಯನ್ನರ ಕೈಗೆ ಬಂದೂಕು ಹಿಡಿಸುವಲ್ಲಿ ವಿಫಲರಾದ ಟ್ರಂಪ್

ವಾಷಿಂಗ್ಟನ್: ಇರಾನ್ ಪ್ರತಿಭಟನಾಕಾರರ ಕೈಗೆ ಬಂದೂಕು ನೀಡಿ ಖಮೇನಿ ಇಸ್ಲಾಮಿಕ್ ಆಡಳಿತವನ್ನು ಕೊನೆಗೊಳಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೆಣೆದಿದ್ದ ತಂತ್ರ ಕೆಲಸಕ್ಕೆ ಬರಲಿಲ್ಲ, ಯಾಕೆಂದರೆ ಟ್ರಂಪ್ ಕಳುಹಿಸಿದ್ದ ಬಂದೂಕುಗಳು ಪ್ರತಿಭಟನಾಕಾರರಿಗೆ ತಲುಪಿರಲಿಲ್ಲ, ಹೌದು, ಹೀಗೆಂದು ಸ್ವತಃ ಅಧ್ಯಕ್ಷ ಟ್ರಂಪ್ ಅವರೇ ಬಹಿರಂಗಗೊಳಿಸಿದ್ದಾರೆ.

ಅಮೆರಿಕದ ಗುಪ್ತಚರ ಸಂಸ್ಥೆ (ಸಿಐಎ) ದಶಕಗಳಿಂದ ಅನುಸರಿಸುವ ಯುದ್ಧ ತಂತ್ರವನ್ನೇ ಟ್ರಂಪ್ ಬಳಸಿದ್ದಾರೆ. ಆದರೆ ಇರಾನಿಯನ್ನರು ಟ್ರಂಪ್ ಅವರನ್ನೇ ಬಕ್ರಾ ಮಾಡಿದ್ದಾರೆ. ಆದರೆ ಟ್ರಂಪ್ ಮೋಸ ಹೋದರೆ? ಅಥವಾ ಯಾರಿಂದ ಮೋಸ ಹೋದರು ಎಂಬ ಮಾಹಿತಿಯನ್ನು ಅಧ್ಯಕ್ಷರು ಬಹಿರಂಗಗೊಳಿಸಿಲ್ಲ, ಇರಾನ್‌ನಲ್ಲಿ ಆಡಳಿತ ವಿರೋಧಿ ಪ್ರತಿಭಟನೆ ಸಂದರ್ಭ ಪ್ರತಿಭಟನಾಕಾರರಿಗೆ ಕುರ್ದಿಶ್‌ಗಳ ಮೂಲಕ ಟ್ರಂಪ್ ಬಂದೂಕುಗಳನ್ನು ಕಳುಹಿಸಿದ್ದು, ಇರಾನ್ ನೊಳಗೆ ಶಸ್ತ್ರಾಸ್ತ್ರಗಳನ್ನು ಕಳುಹಿಸಿದ್ದಾರೆ. ಬಂದೂಕುಗಳು ಪ್ರತಿಭಟನಾಕಾರರಿಗೆ ತಲುಪದಂತೆ ಇರಾನ್ ಮಧ್ಯವರ್ತಿಗಳು ನೋಡಿಕೊಂಡಿದ್ದಾರೆ. ಟ್ರಂಪ್ ಕಳುಹಿಸಿದ ಶಸ್ತ್ರಾಸ್ತ್ರಗಳು ಇರಾನ್ ಮಧ್ಯವರ್ತಿಗಳಲ್ಲೇ ಉಳಿದುಕೊಂಡಿವೆ.

ವೈಫಲ್ಯ ಒಪ್ಪಿಕೊಂಡ ಟ್ರಂಪ್: ಶ್ವೇತ ಭವನದ ಈಸ್ಟರ್ ಸಂಭ್ರಮಾಚರಣೆ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಅಧ್ಯಕ್ಷ ಟ್ರಂಪ್, ನಾವು ಬಂದೂಕುಗಳನ್ನು ಕಳುಹಿಸಿದ್ದೆವು. ಈ ದರೋಡೆಕೋರರ (ಇರಾನ್ ಆಡಳಿತ) ವಿರುದ್ಧ ಹೋರಾಡಲು ಇರಾನ್ ಜನತೆಗೆ ಸಹಾಯ ಮಾಡಿದ್ದೆವು. ಆದರೆ ಏನಾಯಿತು? ಸುಂದರವಾದ ಬಂದೂಕುಗಳೆಂದು ಮಧ್ಯವರ್ತಿಗಳು ತಮ್ಮಲ್ಲೇ ಇಟ್ಟುಕೊಂಡಿದ್ದಾರೆ. ಇದಕ್ಕೆ ಅವರು ಬೆಲೆ ಕಟ್ಟಬೇಕಾಗುತ್ತದೆ ಎಂದು ಟ್ರಂಪ್ ಎಚ್ಚರಿಸಿದ್ದಾರೆ.

ನ್ಯಾಟೋ ಒಕ್ಕೂಟದಲ್ಲಿ ಬಿರುಕು

ವಾಷಿಂಗ್ಟನ್: ಇರಾನ್ ವಿರುದ್ಧದ ಯುದ್ಧ ನ್ಯಾಟೋ (ಎನ್‌ಎಟಿಒ) ಒಕ್ಕೂಟದ ಮೇಲೆ ಶಾಶ್ವತ ಪರಿಣಾಮ ಬೀರಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಅಷ್ಟೇ ಅಲ್ಲದೆ, ಕಷ್ಟಕಾಲದಲ್ಲಿ ವಾಷಿಂಗ್ಟನ್‌ಗೆ ಸಹಾಯ ಮಾಡಲು ವಿಫಲವಾದ ನ್ಯಾಟೋ ಮತ್ತು ಅಮೆರಿಕದ ಇತರ ಪಾಲುದಾರ ರಾಷ್ಟ್ರಗಳ ವಿರುದ್ಧ ಅವರು ವಾಗ್ದಾಳಿ ನಡೆಸಿದ್ದಾರೆ.

ಸೋಮವಾರ ಶ್ವೇತಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟ್ರಂಪ್, ಇರಾನ್ ಯುದ್ಧದ ಸಮಯದಲ್ಲಿ ಅಮೆರಿಕಕ್ಕೆ ಸಹಾಯ ಮಾಡದಿರಲು ನ್ಯಾಟೋ ಸದಸ್ಯ ರಾಷ್ಟ್ರಗಳು ಸರ್ವಪ್ರಯತ್ನ ನಡೆಸಿದವು ಎಂದು ಆರೋಪಿಸಿದರು. ಏಷ್ಯಾದಲ್ಲಿ ಅಮೆರಿಕದ ಮಿಲಿಟರಿ ಉಪಸ್ಥಿತಿ ಮತ್ತು ಆ ದೇಶಗಳ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರೂ, ಜಪಾನ್, ಆಸ್ಟ್ರೇಲಿಯಾ ಮತ್ತು ದಕ್ಷಿಣ ಕೊರಿಯಾ ಸಹಾಯಕ್ಕೆ ಬರಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಗ್ರೀನ್‌ಲ್ಯಾಂಡ್ ಅನ್ನು ಸ್ವಾಧೀನಪಡಿಸಿಕೊಳ್ಳುವ ತಮ್ಮ ಪ್ರಸ್ತಾವನೆಯನ್ನು ನ್ಯಾಟೋ ತಿರಸ್ಕರಿಸಿದ ಸಮಯದಲ್ಲೇ ಭಿನ್ನಾಭಿಪ್ರಾಯ ಆರಂಭವಾಗಿತ್ತು, ಎಂದ ಟ್ರಂಪ್, ನ್ಯಾಟೋ ಒಂದು ಪೇಪರ್ ಟೈಗರ್ ಎಂದು ಟೀಕಿಸಿದರು. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ನ್ಯಾಟೋಗೆ ಹೆದರುವುದಿಲ್ಲ ಎಂದರು.

ಅಮೆರಿಕ ಯುದ್ಧವನ್ನು ಗೆದ್ದ ನಂತರ ಈಗ ನ್ಯಾಟೋ ಸದಸ್ಯ ರಾಷ್ಟ್ರಗಳು ತಮ್ಮನ್ನು ಸಂಪರ್ಕಿಸಲು ಪ್ರಯತ್ನಿಸುತ್ತಿವೆ ಎಂದು ಟ್ರಂಪ್ ಲೇವಡಿ ಮಾಡಿದರು. ನ್ಯಾಟೋ ಪ್ರಧಾನ ಕಾರ್ಯದರ್ಶಿ ಮಾರ್ಕ್ ರುಟ್ಟೆ ಬುಧವಾರ ವಾಷಿಂಗ್ಟನ್‌ಗೆ ಭೇಟಿ ನೀಡಲಿರುವ ಹಿನ್ನೆಲೆಯಲ್ಲಿ ಈ ಹೇಳಿಗೆ ಗಮನ ಸೆಳೆದಿದೆ. ಉತ್ತರ ಕೊರಿಯಾದ ನಾಯಕ ಕಿಮ್ ಜೊಂಗ್ ಉನ್ ಅವರೊಂದಿಗೆ ಉತ್ತಮ ಸಂಬಂಧವಿದೆ, ಎಂದು ತಿಳಿಸಿದರು.

ಕಿರುಸುದ್ಧಿ

ಅಲ್ ಫಲಾ:₹39 ಕೋಟಿ ಠೇವಣಿಗಳ ಮುಟ್ಟುಗೋಲು

ಹೊಸದಿಲ್ಲಿ: ಅಲ್ ಫಲಾ ಗ್ರೂಪ್ ಅಧ್ಯಕ್ಷ ಜವದ್ ಅಹ್ಮದ್ ಸಿದ್ಧಿಖಿ ಮತ್ತೀತನ ಚಾರಿಟೇಬಲ್ ಟ್ರಸ್ಟ್ ವಿರುದ್ಧದ ಅಕ್ರಮ ಹಣ ವರ್ಗಾವಣೆ ಪ್ರಕರಣದ ಭಾಗವಾಗಿ, ಫರೀದಾಬಾದ್‌ನ ದೌಜ್ ಗ್ರಾಮದಲ್ಲಿರುವ ಈತನ ಕೃಷಿ ಭೂಮಿ, ಹಲವು ಬ್ಯಾಂಕ್‌ಗಳಲ್ಲಿದ್ದ ಸಿದ್ಧಿಖಿ ಮತ್ತು ಈತನ ಟ್ರಸ್ಟ್‌ನ ನಿರಖು ಠೇವಣಿ ಸಹಿತ ಸುಮಾರು 39ಕೋಟಿ ರೂ. ಠೇವಣಿಗಳ ಸಹಿತ 39.45 ಕೋಟಿ ಮೊತ್ತದ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಬಾಂಬ್ ದಾಳಿ: 2 ಸಾವು,

ಇಂಫಾಲ್: ಮಣಿಪುರದ ಬಿಷ್ಣುಪುರ ಜಿಲ್ಲೆಯಲ್ಲಿ ಮಂಗಳವಾರ ಶಂಕಿತ ಉಗ್ರರು ಮನೆಯೊಂದರ ಮೇಲೆ ನಡೆಸಿದ ಬಾಂಬ್ ದಾಳಿಯಲ್ಲಿ ಇಬ್ಬರು ಮಕ್ಕಳು ಬಲಿಯಾಗಿದ್ದು, ಹಲವರು ಗಾಯಗೊಂಡಿದ್ದಾರೆ. ದಾಳಿ ಖಂಡಿಸಿ ಭಾರೀ ಪ್ರತಿಭಟನೆ ನಡೆದಿದೆ. ಮಧ್ಯರಾತ್ರಿ 1 ಗಂಟೆ ಸುಮಾರಿಗೆ ಶಂಕಿತರು ಮನೆಯ ಮೇಲೆ ಬಾಂಬ್ ಎಸೆದಿದ್ದು, ತಾಯಿಗೆ ಗಾಯವಾಗಿದೆ. ಮಕ್ಕಳ ಸಾವಿನಿಂದ ಭಾವೋದ್ರಿಕ್ತರಾದ ಜನರು ಪ್ರತಿಭಟನೆ ವೇಳೆ ಸಿಆರ್‌ಪಿಎಫ್ ಶಿಬಿರದೊಳಗೆ ನುಗ್ಗುವ ಪ್ರಯತ್ನ ಮಾಡಿದ್ದು, ಸೇನಾ ವಾಹನಗಳನ್ನು ಸುಟ್ಟಿದ್ದಾರೆ.

ಎಲ್‌ಇಟಿ ಘಟಕದ ಪಾಕ್ ಉಗ್ರರು ಸೇರಿ ಐವರ ಸೆರೆ

ಶ್ರೀನಗರ: ಅಂತಾರಾಜ್ಯ ಲಷ್ಕರ್-ಎ-ತೊಯ್ಬಾ (ಎಲ್‌ಇಟಿ) ಘಟಕವನ್ನು ಶ್ರೀನಗರದ ಪೊಲೀಸರು ಪ್ರಮುಖ ಭೇದಿಸಿ , 16 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಪಾಕಿಸ್ತಾನಿ ಭಯೋತ್ಪಾದಕ ಅಬ್ದುಲ್ಲಾ ಅಲಿಯಾಸ್ ಅಬು ಹುರೇರಾ ಸೇರಿದಂತೆ ಐವರನ್ನು ಬಂಧಿಸಿದ್ದಾರೆ. ಉಗ್ರ ಚಟುವಟಿಕೆಗಳ ಮಾಸ್ಟರ್ ಮೈಂಡ್ ಹುರೇರ, ಶ್ರೀನಗರದ ಸಮೀಪ ಹರ್ವಾನ್‌ನಲ್ಲಿ ಭಯೋತ್ಪಾದನಾ ಚಟುವಟಿಕೆಗಳಿಗೆ ಹಣಕಾಸಿನ ನೆರವು ನೀಡುತ್ತಿದ್ದ. ಇದೇ ಪ್ರಕರಣದಲ್ಲಿ ಎರಡನೇ ಪಾಕಿಸ್ತಾನಿ ಭಯೋತ್ಪಾದಕ



ಉಸ್ಮಾನ್ ಅಲಿಯಾಸ್ ಖುಬೈಬ್‌ನನ್ನು ಸೋಮವಾರ ಬಂಧಿಸಲಾಗಿದೆ. ಕಾರ್ಯಾಚರಣೆಯಲ್ಲಿ, 2011ರಿಂದ ಹರ್ವಾನ್‌ನಲ್ಲಿ ಪಾಕ್ ಹಣಕಾಸು ನೆರವು ಪಡೆದು ಸಕ್ರಿಯವಾಗಿ ಉಗ್ರ ಚಟುವಟಿಕೆ ನಡೆಸುತ್ತಿದ್ದ ಎಲ್‌ಇಟಿ ಜಾಲವನ್ನು ಭೇದಿಸಿದ್ದೇವೆಂದು ಪೊಲೀಸ್ ಮೂಲಗಳು ತಿಳಿಸಿವೆ. ದಶಕಗಳ ಹಿಂದೆ ಜಮ್ಮು ಕಾಶ್ಮೀರದೊಳಗೆ ಅಕ್ರಮವಾಗಿ ನುಸುಳಿದ್ದ ಹುರೇರ, ಗಸ್ಸು, ವಾನಿಹೊಮ, ಚಾಟರ್‌ಹಮ ಮತ್ತು ಡೆನಿಹಮ ಇತ್ಯಾದಿ ಗ್ರಾಮಗಳಲ್ಲಿ ತಲೆಮರೆಸಿಕೊಂಡು ಉಗ್ರ ಚಟುವಟಿಕೆಗಳಲ್ಲಿ ಸಕ್ರಿಯವಾಗಿದ್ದ. ಬಂಧಿತ ಐವರಲ್ಲಿ ಶ್ರೀನಗರದ ಮೂವರು ನಿವಾಸಿಗಳು ಸೇರಿದ್ದಾರೆ ಎಂದು ಹೇಳಿದರು. ಭಯೋತ್ಪಾದಕರಿಗೆ ಆಶ್ರಯ ಮತ್ತು ಆಹಾರ ಸೇರಿದಂತೆ ಲಾಜಿಸ್ಟಿಕಲ್ ಬೆಂಬಲವನ್ನು ಒದಗಿಸಿದ ಆರೋಪದ ಮೇಲೆ ಮೊಹಮ್ಮದ್ ನಕೀಬ್ ಭಟ್, ಆದಿಲ್ ರಶೀದ್ ಭಟ್ ಮತ್ತು ಗುಲಾಮ್ ಮೊಹಮ್ಮದ್ ಮಿರ್ ಅಲಿಯಾಸ್ ಮಾಮಾರನ್ನು ಬಂಧಿಸಲಾಗಿದೆ.

ವಲಸೆ ಕಾರ್ಮಿಕರಿಗೆ ಎಲ್‌ಪಿಜಿ ಹಂಚಿಕೆ ಪ್ರಮಾಣ ದ್ವಿಗುಣ

ಹೊಸದಿಲ್ಲಿ: ಇರಾನ್ ಯುದ್ಧದ ಹಿನ್ನೆಲೆಯಲ್ಲಿ ಅಡುಗೆ ಅನಿಲ ಪೂರೈಕೆಯಲ್ಲಿ ಉಂಟಾಗಿರುವ ವ್ಯತ್ಯಯದ ನಡುವೆ, ವಲಸೆ ಕಾರ್ಮಿಕರಿಗೆ ನೆರವಾಗಲು ರಾಜ್ಯಗಳಿಗೆ ನೀಡಲಾಗುವ 5 ಕೆಜಿ ತೂಕದ ಎಲ್‌ಪಿಜಿ ಸಿಲಿಂಡರ್‌ಗಳ ದೈನಂದಿನ ಹಂಚಿಕೆಯನ್ನು ದ್ವಿಗುಣಗೊಳಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ವಿತರಣಾ ಕಾರ್ಯತಂತ್ರ; 'ಚೋಟು' ಎಂದು ಕರೆಯಲ್ಪಡುವ ಈ 5 ಕೆಜಿಯ ಮುಕ್ತ ವ್ಯಾಪಾರ ಎಲ್‌ಪಿಜಿ ಸಿಲಿಂಡರ್‌ಗಳ



ಹೆಚ್ಚುವರಿ ಪೂರೈಕೆಯನ್ನು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನೀಡಲಾಗುವುದು. ಈ ವರ್ಷದ ಮಾರ್ಚ್ 2-3 ರ ಅವಧಿಯಲ್ಲಿ ದಾಖಲಾದ ಸರಾಸರಿ ದೈನಂದಿನ ಪೂರೈಕೆಯ ಆಧಾರದ ಮೇಲೆ ಈ ಹೆಚ್ಚುವರಿ ಹಂಚಿಕೆಯನ್ನು ಲೆಕ್ಕಹಾಕಲಾಗುತ್ತದೆ. ಇದು ಮಾರ್ಚ್ 21 ರಂದು ನಿಗದಿಪಡಿಸಲಾಗಿದ್ದ ಶೇ.20 ರಷ್ಟು ಮಿತಿಗಿಂತ ಹೆಚ್ಚುವರಿಯಾಗಿರಲಿದೆ.

ಸೌಲಭ್ಯ ಮತ್ತು ಬಳಕೆ ; ಖಾಯಂ ವಿಳಾಸದ ಪುರಾವೆ ಇಲ್ಲದ ನಗರ ಮತ್ತು ಅರೆ-ನಗರ ಪ್ರದೇಶಗಳ ವಲಸೆ ಕಾರ್ಮಿಕರಿಗಾಗಿ ಈ ಸಿಲಿಂಡರ್‌ಗಳನ್ನು ವಿತರಿಸಲಾಗುತ್ತದೆ. ತೈಲ ಮಾರುಕಟ್ಟೆ ಕಂಪನಿಗಳು ಈ ಪೂರೈಕೆಯನ್ನು ಸುಗಮಗೊಳಿಸಲಿದ್ದು, ದುರ್ಬಲ ವರ್ಗದವರಿಗೆ ಅಡುಗೆ ಇಂಧನ ಲಭ್ಯವಾಗುವಂತೆ ನೋಡಿಕೊಳ್ಳಲಿವೆ. ಈ ಸಿಲಿಂಡರ್‌ಗಳನ್ನು ಖರೀದಿಸಲು ಕೇವಲ ಗುರುತಿನ ಚೀಟಿ ಸಾಕು ಮತ್ತು ಇವುಗಳಲ್ಲಿ 'ಬೈ ಬ್ಯಾಕ್' (ಮರಳಿ ಮಾರಾಟ ಮಾಡುವ) ಸೌಲಭ್ಯವೂ ಇದೆ. ಇದರಿಂದಾಗಿ ಕಾರ್ಮಿಕರು ಹೆಚ್ಚಿನ ಬೆಲೆಗೆ ಕಾಳಸಂತೆಯಲ್ಲಿ ಅನಿಲ ಖರೀದಿಸುವುದು ತಪ್ಪಲಿದೆ.

ಕಲ್ಪಾಕಂನಲ್ಲಿ ಫಾಸ್ಟ್ ಬ್ರೀಡರ್ ರಿಯಾಕ್ಟರ್ ತಯಾರಿ

ಚೆನ್ನೈ: ಕಲ್ಪಾಕ್ಕಂನಲ್ಲಿ ದೇಶೀಯವಾಗಿ ನಿರ್ಮಾಣ ಮಾಡಲಾಗಿರುವ ಫಾಸ್ಟ್ ಬ್ರೀಡರ್ ರಿಯಾಕ್ಟರ್ ನಿರ್ಣಾಯಕ ಹಂತ ತಲುಪಿದೆ. ಈ ಮೂಲಕ ಭಾರತ ಪರಮಾಣು ಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡಿ ಯಶಸ್ಸು ಸಾಧಿಸುವತ್ತ ಹೆಜ್ಜೆ ಇಟ್ಟಿದೆ.

ಇನ್ನೊಂದು ಹಂತ ದಾಟಿಬಿಟ್ಟರೆ ಭಾರತಕ್ಕೆ ಮುಂದಿನ ನೂರಾರು ವರ್ಷ ಕಾಲ ವಿದ್ಯುತ್ ಸಮಸ್ಯೆ ಇಲ್ಲದಂತಾಗಬಹುದು. ಕಲ್ಪಾಕಂನಲ್ಲಿರುವ ಭಾರತದ 500 ಮೆಗಾವ್ಯಾಟ್ ಮಾದರಿ ಫಾಸ್ಟ್ ಬ್ರೀಡರ್ ರಿಯಾಕ್ಟರ್ (ಪಿಎಫ್‌ಬಿಆರ್) ಕಾರ್ಯಾರಂಭ ಮಾಡಿದೆ. ಇದು ದೇಶದ ನಾಗರಿಕ ಪರಮಾಣು ಕಾರ್ಯಕ್ರಮದ ಎರಡನೇ ಹಂತವನ್ನು ಮುನ್ನಡೆಸುವಲ್ಲಿ ನಿರ್ಣಾಯಕ ಹೆಜ್ಜೆ ಎಂದು ಪ್ರಧಾನಿ ಮೋದಿ ಕರೆದಿದ್ದಾರೆ.

ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ ಅವರು, ಕಲ್ಪಾಕಂನಲ್ಲಿರುವ ಸ್ಥಳೀಯವಾಗಿ ವಿನ್ಯಾಸಗೊಳಿಸಲಾದ ಮತ್ತು ನಿರ್ಮಿಸಲಾದ ಮೂಲಮಾದರಿ ಫಾಸ್ಟ್ ಬ್ರೀಡರ್ ರಿಯಾಕ್ಟರ್ ನಿರ್ಣಾಯಕ ಹಂತವನ್ನು ತಲುಪಿದೆ ಎಂದು ಬರೆದಿದ್ದಾರೆ. ಈ ಮುಂದುವರಿದ ರಿಯಾಕ್ಟರ್, ತಾನು ಬಳಸುವುದಕ್ಕಿಂತ ಹೆಚ್ಚಿನ ಇಂಧನವನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿದೆ, ಇದು ನಮ್ಮ ವೈಜ್ಞಾನಿಕ ಸಾಮರ್ಥ್ಯದ ಆಳ ಮತ್ತು ನಮ್ಮ ಎಂಜಿನಿಯರಿಂಗ್ ಉದ್ಯಮದ ಬಲವನ್ನು ಪ್ರತಿಬಿಂಬಿಸುತ್ತದೆ ಎಂದರು. ಈ ಮುಂದುವರಿದ ರಿಯಾಕ್ಟರ್ ಬಳಸುವುದಕ್ಕಿಂತ ಹೆಚ್ಚಿನ ಇಂಧನ ಉತ್ಪಾದಿಸುವ ಸಾಮರ್ಥ್ಯ ಹೊಂದಿದ್ದು, ಭಾರತೀಯ ವೈಜ್ಞಾನಿಕ ಸಾಮರ್ಥ್ಯದ ಆಳ ಮತ್ತು ದೇಶದ ಎಂಜಿನಿಯರಿಂಗ್ ಉದ್ಯಮದ ಬಲವನ್ನು ಪ್ರತಿಬಿಂಬಿಸುತ್ತದೆ ಎಂದು ಪ್ರಧಾನಿ ಮೋದಿ ಆಶಯ ವ್ಯಕ್ತಪಡಿಸಿದ್ದಾರೆ.

ಕೇರಳದ ದೇವಾಲಯ, ಆನೆಗಳ ಕಲ್ಯಾಣಕ್ಕಾಗಿ ₹18 ಕೋಟಿ ದೇಣಿಗೆ

ಮುಂಬೈ: ರಿಲಯನ್ಸ್ ಇಂಡಸ್ಟ್ರೀಸ್ ಕಾರ್ಯನಿರ್ವಾಹಕ ನಿರ್ದೇಶಕ ಅನಂತ್ ಅಂಬಾನಿ ಅವರು ಕೇರಳದ ಎರಡು ಪ್ರಮುಖ ಧಾರ್ಮಿಕ ತಾಣಗಳಾದ ರಾಜರಾಜೇಶ್ವರಂ ದೇವಾಲಯ ಮತ್ತು ಗುರುವಾಯೂರ್ ದೇವಾಲಯಕ್ಕೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ದೇವಾಲಯ ಸಂರಕ್ಷಣೆ ಮತ್ತು ಪ್ರಾಣಿ ಕಲ್ಯಾಣಕ್ಕೆ ಸಂಬಂಧಿಸಿದಂತೆ ವಿವಿಧ ಉಪಕ್ರಮಗಳನ್ನು ಘೋಷಿಸಿದರು. ಎರಡೂ ದೇವಾಲಯಗಳಿಗೆ ಒಟ್ಟು 6 ಕೋಟಿ ದೇಣಿಗೆ ನೀಡಿದ್ದು, ರಾಜರಾಜೇಶ್ವರಂ ದೇವಾಲಯದ ಸಮಗ್ರ ಪುನಃ ಸ್ಥಾಪನೆಗಾಗಿ 12 ಕೋಟಿ ರೂ.ದೇಣಿಗೆ ನೀಡಿದ್ದಾರೆ. ಉತ್ತರ ಕೇರಳದ ಕಣ್ಣೂರು ಜಿಲ್ಲೆಯ ತಳಿಪರಂಬ ಪಟ್ಟಣದಲ್ಲಿ ಇರುವ ಪ್ರಾಚೀನ ರಾಜರಾಜೇಶ್ವರಂ ದೇವಾಲಯಕ್ಕೆ ಅನಂತ್ ಅಂಬಾನಿ 3 ಕೋಟಿ ರೂ.ದೇಣಿಗೆ ನೀಡಿದ್ದಾರೆ. ದೇವಾಲಯದ ಸಮಗ್ರ ನವೀಕರಣಕ್ಕಾಗಿ ಅವರು ಹೆಚ್ಚುವರಿಯಾಗಿ 12 ಕೋಟಿ ರೂ. ದೇಣಿಗೆ ನೀಡಲಿದ್ದಾರೆ. ಈ ಯೋಜನೆಯಲ್ಲಿ ಬಹಳ ದಿನಗಳಿಂದ ಶಿಥಿಲಾವಸ್ಥೆಯಲ್ಲಿ ಇದ್ದ ದೇವಾಲಯದ ಐತಿಹಾಸಿಕ ಪೂರ್ವ ಗೋಪುರದ ಪುನರ್ನಿರ್ಮಾಣ ಮತ್ತು ಮೂಲಸೌಕರ್ಯ ಮತ್ತು ಪಾರ್ಕಿಂಗ್ ಸೌಲಭ್ಯಗಳ ಸುಧಾರಣೆ ಸೇರಿವೆ.

ಪಶ್ಚಿಮ ಬಂಗಾಳ ಎಸ್‌ಐಆರ್ ನ್ಯಾಯಾಂಗ ಪರಾಮರ್ಶೆ ಪೂರ್ಣ

ಮತಪಟ್ಟಿಯಿಂದ 91 ಲಕ್ಷ ಮತದಾರರು ಡಿಲೀಟ್

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆಯಲ್ಲಿ ನ್ಯಾಯಾಂಗ ಪರಾಮರ್ಶೆ ಬಳಿಕ, 91ಲಕ್ಷ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ಚುನಾವಣಾ ಆಯೋಗದ ಡೇಟಾ ಹೇಳಿದೆ. ಮತದಾರರ ಯಾದಿ ವಿಶೇಷ ಪರಿಷ್ಕರಣೆ ಪ್ರಕ್ರಿಯೆ ನಂತರ, ರಾಜ್ಯದ ಅಂತಿಮ ಪರಿಷ್ಕೃತ ಮತದಾರರ ಪಟ್ಟಿಯನ್ನು ಆಯೋಗ ಅಧಿಕೃತವಾಗಿ ಇನ್ನಷ್ಟೆ ಪ್ರಕಟಿಸಬೇಕಿದೆ. ಆದಾಗ್ಯೂ ಕಳೆದ ವರ್ಷ ಅಕ್ಟೋಬರ್ ಅಂತ್ಯವರೆಗೆ ಗುರುತಿಸಲಾದ 7.66 ಕೋಟಿ ಮತದಾರರನ್ನು ಪರಿಗಣಿಸುವಾಗ, ಯಾದಿಯಿಂದ ಡಿಲಿಟ್ ಆಗಿರುವ ಒಟ್ಟು ಮತದಾರರ ಪ್ರಮಾಣ ಶೇ.11.85ರಷ್ಟಾಗುವುದು. ಎಸ್‌ಐಆರ್ ಪ್ರಕ್ರಿಯೆ ಆರಂಭದಿಂದಲೇ ಲೆಕ್ಕ ಹಾಕಿದರೆ ಒಟ್ಟು ರದ್ದತಿ ಪ್ರಮಾಣ 90.83ಲಕ್ಷಕ್ಕಿಂತ ಕೊಂಚ ಅಧಿಕ.

'ಇತ್ಯರ್ಥ ಹಂತದಲ್ಲಿದೆ 'ಲಿಸ್ಟ್‌ನಲ್ಲಿದ್ದ 60.06 ಲಕ್ಷ ಮತದಾರರ ಪೈಕಿ 27.16 ಲಕ್ಷ ಮೀರಿ ಮತದಾರರ ಹೆಸರುಗಳನ್ನು, ನ್ಯಾಯಾಂಗ ಅಧಿಕಾರಿಗಳು ಈಗಷ್ಟೆ ಮುಗಿಸಿರುವ ಪರಾಮರ್ಶೆ ಸಂದರ್ಭ ಅಳಿಸಲಾಗಿದೆ ಎಂದು ಆಯೋಗದ ಡೇಟಾ ತಿಳಿಸಿದೆ. ನ್ಯಾಯಾಂಗ ಪರಾಮರ್ಶೆಗೀಡಾದ ಸುಮಾರು 45.22ಶೇ. ಪ್ರಕರಣಗಳು ಅಥವಾ ಮತದಾರರ ಹೆಸರುಗಳು, ಫೆ.28ರಂದು ಎಸ್‌ಐಆರ್ ನಂತರದ ಮತದಾರರ ಯಾದಿ ಪ್ರಕಟಗೊಂಡ ಬಳಿಕ ಯಾದಿಯಿಂದ ರದ್ದಾಗಿವೆ ಎಂದು ಅಂಕಿಅಂಶಗಳಿಂದ ವ್ಯಕ್ತವಾಗಿದೆ. ಇತ್ಯರ್ಥ ಹಂತದಲ್ಲಿದೆ ಕೆಟಗರಿಯಲ್ಲಿದ್ದ 32.68 ಲಕ್ಷ ಮತದಾರರ ಹೆಸರುಗಳನ್ನು ಯಥಾವತ್ ಉಳಿಸಿಕೊಂಡು ಅಂತಿಮ ಮತದಾರರ ಯಾದಿಗೆ ಸೇರಿಸಲಾಗಿದೆ.

ಮುರ್ಶಿದಾಬಾದ್ ಜಿಲ್ಲೆಯಲ್ಲಿ ಗರಿಷ್ಠ: ಮುಸ್ಲಿಂ ಬಾಹುಳ್ಯದ ಮುರ್ಶಿದಾಬಾದ್ ಜಿಲ್ಲೆಯಲ್ಲಿ ಗರಿಷ್ಠ ಹೆಸರುಗಳು ರದ್ದತಿಯಾಗಿವೆ. ಇಲ್ಲಿ ನ್ಯಾಯಾಂಗ ಪರಾಮರ್ಶೆ ಹಂತದಲ್ಲಿದ್ದ 11.01ಲಕ್ಷ ಹೆಸರುಗಳ ಪೈಕಿ 4.55ಲಕ್ಷಗಳಿಗೂ ಮೀರಿ ಹೆಸರುಗಳನ್ನು ಮತದಾರರ ಯಾದಿಯಿಂದ ಕಿತ್ತು ಹಾಕಲಾಗಿದೆ. ತನ್ಮೂಲಕ ಈ ಜಿಲ್ಲೆಯಲ್ಲಿ ಇತ್ಯರ್ಥ ಹಂತದಲ್ಲಿದೆ ಘಟಕದಲ್ಲಿ ಡಿಲಿಟ್ ಆದ ಮತದಾರರ ಸಂಖ್ಯೆ ಶೇ. 41.33ರಷ್ಟಾಗಿದೆ. ಬಾಂಗ್ಲಾ ಗಡಿಗೆ ಸಮೀಪದ ಉತ್ತರ 24ಪರಗಣ ಜಿಲ್ಲೆಯಲ್ಲೂ ಅಧಿಕ ಸಂಖ್ಯೆಯಲ್ಲಿ ಹೆಸರುಗಳು ಡಿಲಿಟ್ ಆಗಿವೆ. ಇಲ್ಲಿ ನ್ಯಾಯಾಂಗ ಪರಾಮರ್ಶೆ ಹಂತದಲ್ಲಿದ್ದ 5.91 ಲಕ್ಷ ಮತದಾರರ ಪೈಕಿ 3.25ಲಕ್ಷ ಮತದಾರರು ಮತದಾನಕ್ಕೆ ಅನರ್ಹರೆಂಬುದು ಬಯಲಾಗಿದೆ. ಇನ್ನು ನ್ಯಾಯಾಂಗ ಅಧಿಕಾರಿಗಳನ್ನೇ ಘೇರಾವ್ ಮಾಡಿದ ಕುಖ್ಯಾತ ಮಾಲ್ದಾದಲ್ಲಿ ನ್ಯಾಯಾಂಗ ಪರಾಮರ್ಶೆ ಹಂತದಲ್ಲಿದ್ದ 8.28 ಮತದಾರರ ಪೈಕಿ 2.39ಲಕ್ಷ ಮತದಾರರ ಹೆಸರುಗಳು ಅನರ್ಹವೆಂದು ರದ್ದಾಗಿವೆ.

24 ಪರಗಣದಲ್ಲಿ 2.23ಲಕ್ಷಗಳು: ನ್ಯಾಯಾಂಗ ಪರಾಮರ್ಶೆ ಮುಖೇನ ಅನರ್ಹ ಮತದಾರರ ಹೆಸರುಗಳು ರದ್ದಾದ ನಂತರ 24ಪರಗಣ ಜಿಲ್ಲೆಯಲ್ಲಿ ಅಂತಿಮ ಮತದಾರರ ಯಾದಿಯಲ್ಲಿ ಉಳಿದಿರುವ ಮತದಾರರ ಸಂಖ್ಯೆ ಅಂದಾಜು 2.23ಲಕ್ಷಗಳು. ಪೂರ್ಬಾ ಬರ್ಧಮಾನ್ ಜಿಲ್ಲೆಯಲ್ಲಿ ಮತದಾರರ ಯಾದಿಯಲ್ಲುಳಿದಿರುವ ಮತದಾರರ ಸಂಖ್ಯೆ 2.09ಲಕ್ಷಗಳು, ನಡಿಯಾ ಜಿಲ್ಲೆಯಲ್ಲಿ 2.98ಲಕ್ಷ ಮತದಾರರು ಮತದಾನದ ಅರ್ಹತೆ ಉಳಿಸಿಕೊಂಡಿದ್ದಾರೆ. ಸಿಎಂ ಮಮತಾ ಬ್ಯಾನರ್ಜಿ ಅವರ ಭವಾನಿಪುರ ವಿಧಾನ ಸಭಾ ಕ್ಷೇತ್ರ ಒಳಗೊಂಡ ಕೋಲ್ಕತ್ತಾ ದಕ್ಷಿಣದಲ್ಲಿ 28ಸಾವಿರ ಮತದಾರರ ಹೆಸರುಗಳು ರದ್ದಾಗಿವೆ. ನ್ಯಾಯಾಂಗ ಪರಾಮರ್ಶೆ ಹಂತದಲ್ಲಿ ಈ ಜಿಲ್ಲೆಯಲ್ಲಿ ಮತದಾರರ ಯಾದಿಯಿಂದ ಡಿಲಿಟ್ ಆದ ಮತದಾರರ ಶೇಕಡಾವಾರು 36.19. ಕೋಲ್ಕತ್ತಾ ಉತ್ತರದಲ್ಲಿ 39ಸಾವಿರ ಮತದಾರರು ಮತದಾನಕ್ಕೆ ಅನರ್ಹರಾಗಿದ್ದು, ಇಲ್ಲಿ ರದ್ದತಿ ಶೇಕಡಾ 64ರಷ್ಟಾಗಿದೆ.

ಗಡಿಯಲ್ಲಿ ಹಾವು, ಮೊಸಳೆ ನಿಯೋಜಿಸಲು ಸೇನೆ ಚಿಂತನೆ

ನುಸುಳುಕೋರರ ಬೇಟೆಗೆ ಉರಗ

ಶ್ರೀನಗರ: ಗಡಿ ಭದ್ರತೆಯ ಬಲವರ್ಧನೆ ಉದ್ದೇಶದಿಂದ ಭಾರತ-ಬಾಂಗ್ಲಾದೇಶ ಗಡಿ ಸಮೀಪ ನದಿ ತಟಗಳಲ್ಲಿ ಹಾವು ಮತ್ತು ಮೊಸಳೆಗಳಂತಹ ಉರಗಗಳನ್ನು ನಿಯೋಜಿಸಲು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಮುಂದಾಗಿದೆ. ಬಾಂಗ್ಲಾದೇಶಿ ಒಳನುಸುಳುಕೋರರು (ಅಕ್ರಮ ಬಾಂಗ್ಲಾ ವಲಸಿಗರು) ಗಡಿದಾಟಿ ಬರುವುದನ್ನು ತಡೆಗಟ್ಟುವ ಉದ್ದೇಶದಿಂದ ಉರಗಗಳನ್ನು ನಿಯೋಜಿಸಲು ಬಿಎಸ್‌ಎಫ್ ಚಿಂತನೆ ನಡೆಸಿದೆ.



ಕೆಲವು ಗಡಿ ಪ್ರದೇಶಗಳಲ್ಲಿ ಸಾಂಪ್ರದಾಯಿಕ ಬೇಲಿ ಹಾಕಲು ಸಾಧ್ಯವಿಲ್ಲ, ಅಂತಹ ಸ್ಥಳಗಳಲ್ಲಿ ಅಕ್ರಮ ವಲಸೆಯನ್ನು ತಡೆಗಟ್ಟಲು ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯವಿದೆ. ವರದಿಗಳ ಪ್ರಕಾರ, ಪ್ರಾಯೋಗಿಕವಾಗಿ ಇಂತಹದ್ದೊಂದು ಕಠಿಣ ಕ್ರಮ ತೆಗೆದುಕೊಳ್ಳಲು ಸಾಧ್ಯತೆಯ ಕುರಿತು ಪರಿಶೀಲಿಸಿ ವರದಿ ನೀಡುವಂತೆ ತನ್ನ ಸ್ಥಳೀಯ ತಂಡಗಳಿಗೆ ಬಿಎಸ್‌ಎಫ್ ಪ್ರಧಾನ ಕಚೇರಿ ಆದೇಶಿಸಿದೆ. ನದಿ ಗಡಿ ಪ್ರದೇಶಗಳಲ್ಲಿ ಉರಗಗಳನ್ನು ನಿಯೋಜಿಸಲು ಪರಿಶೀಲಿಸುವುದಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಕೆಲವು ಸೂಚನೆಗಳನ್ನು ನೀಡಿದ್ದಾರೆ ಎನ್ನಲಾಗಿದೆ. ಬಾಂಗ್ಲಾ ಗಡಿ ಪ್ರದೇಶದಲ್ಲಿ ಬೇಲಿ ಹಾಕಲಾಗದ ಸ್ಥಳಗಳ ನದಿ ಪ್ರವಾಹದಲ್ಲಿ ಮೊಸಳೆ ಹಾಗೂ ಹಾವುಗಳಂತಹ ನೈಸರ್ಗಿಕ ನಿರೋಧಕ ಶಕ್ತಿಗಳನ್ನು ಬಳಸಿಕೊಳ್ಳಲು ಪ್ರಾಯೋಗಿಕವಾಗಿ ಸಾಧ್ಯವಾಗುವುದೇ ಎಂಬ ಸಂಶಯವಿದೆ.

ಅಧಿಕಾರಿಗಳು ಹೇಳುವುದೇನು?: ಬಿಎಸ್‌ಎಫ್ ಇಂತಹದ್ದೊಂದು ಚಿಂತನೆ ನಡೆಸಿರುವುದು ನಿಜ. ಆದರೆ ಬಾಂಗ್ಲಾ ಗಡಿ ಪ್ರದೇಶಗಳಲ್ಲಿ ಉರಗಗಳ ನಿಯೋಜಿಸುವ ಪ್ರಸ್ತಾವ ಇನ್ನೂ ಪ್ರಾಥಮಿಕ ಹಂತದಲ್ಲಿದೆ. ಈ ಬಗ್ಗೆ ಪರಿಶೀಲನೆಗಳನ್ನು ನಡೆಸಲಾಗುತ್ತಿದ್ದು, ಹಲವು ಪ್ರಾಯೋಗಿಕ ಸವಾಲುಗಳ ಕುರಿತು ಚರ್ಚಿಸಲಾಗುವುದು. ಉರಗಗಳನ್ನು ಸಂಗ್ರಹಿಸುವುದು ಮತ್ತು ಅವುಗಳನ್ನು ನಿರ್ವಹಿಸುವುದು ಮತ್ತು ನದಿ ತಟಗಳಲ್ಲಿ ವಾಸವಾಗಿರುವ ಸ್ಥಳೀಯ ಭಾರತೀಯರ ಸುರಕ್ಷತೆ ಖಚಿತಪಡಿಸುವುದರ ಪರಿಶೀಲನೆ ಮಾಡುತ್ತಿದ್ದೇವೆ ಎಂದು ಬಿಎಸ್‌ಎಫ್ ಅಧಿಕಾರಿಗಳು ತಿಳಿಸಿದ್ದಾರೆ.

ಫೆ.9ರಂದು ಮೊದಲ ಪ್ರಸ್ತಾವ: ಫೆ. 9ರಂದು ದಿಲ್ಲಿ ಬಿಎಸ್‌ಎಫ್ ಮುಖ್ಯ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಉರಗಗಳ ನಿಯೋಜನೆ ಪ್ರಸ್ತಾವ ಬಂದಿತ್ತೆಂದು ವರದಿಯಾಗಿದೆ. ಬಾಂಗ್ಲಾ ಮತ್ತು ಪಾಕಿಸ್ತಾನ ಜತೆ ಗಡಿ ಹಂಚಿಕೊಳ್ಳುವ ಪ್ರದೇಶಗಳಲ್ಲಿ ಪ್ರಾಥಮಿಕ ಹಂತದ ಭದ್ರತಾ ಪಡೆಯಾಗಿ ಹಾವು ಮತ್ತು ಮೊಸಳೆಗಳನ್ನು ಬಳಸಿಕೊಳ್ಳಲು ಚರ್ಚೆ ನಡೆದಿದೆ.

CHANGE OF NAME

I, **SANTOSH CHALAWADI** (Old Name) Resident of Shelawadi Navalagund, Dharwad Pin - 5822081, have changed my name as **SANTOSH BASAPPA CHALAWADI** (New Name) henceforth I will be called and recognized by new name for all future purposes, dated: 07/04/2026.

CHANGE OF NAME

I, **VRISHAB** (Old Name) Resident of Plot No: 61, Honganasu, 2nd Cross, Sharada Colony, Yelakki Shettar Colony, Dharwad, Hubballi - Dharwad City - 580004, Karnataka, India, have changed my name as **VRISHAB HURKADALE PRITHVI** (New Name) henceforth I will be called and recognized by new name for all future purposes, dated: 07/04/2026.

CHANGE OF NAME

I, **SABIHA KAZI** (Old Name) Resident of Plot No: 57 Hasmi Nagar Mehaboob Nagar Last Bus Stop Dharwad Pin - 580001, have changed my name as **SABIHA MOHAMMED YASEEN BALEKUNDRI** (New Name) henceforth I will be called and recognized by new name for all future purposes, dated: 07/04/2026.

CHANGE OF NAME

I, **RUSTUMBI JOPADIWALE** (Old Name) Resident of 6B, Golehalli, Nagshetikop, Uttara Kannada, Karnataka, 581329, have changed my name as **RUSTUMBI ADAKINAKAL** (New Name) henceforth I will be called and recognized by new name for all future purposes, dated: 07/04/2026.

CHANGE OF NAME

I, **MAHAMMADYASIN BALEKUNDRI** (Old Name) Resident of Plot No 57 Hashmi Nagar Mehaboob Nagar Dharwad Pin - 580001, have changed my name as **MOHAMMED YASEEN BALEKUNDRI** (New Name) henceforth I will be called and recognized by new name for all future purposes, dated: 07/04/2026.

CHANGE OF NAME

I, **BHUVANESHWARI RAMU** (Old Name) Resident of C/o K Ramu Plot No12 Gayatni Colony Bengeri Ext Hubli 580023 (address), have changed my name as **BHUVANESHWARI SAGAR** (New Name) henceforth I will be called and recognized by new name for all future purposes, dated: 07/04/2026.

CHANGE OF NAME

I, **NAGABHUSHAN GANAPATI HEGDE** (Old Name) Resident of H No: 20 At Balehadda Kamagod Post Chauvatti Tq: Yallapur Uttara Kannada 581347 Karnataka (address), have changed my name as **NAGABHUSHANA GANAPATI HEGDE** (New Name) henceforth I will be called and recognized by new name for all future purposes, dated: 07/04/2026.

CHANGE OF NAME

I, **MARUTI ANNASAHEB VATARE** (Old Name) Resident of 25/26, Shanti Colony, Vishweshwar Nagar, Hubli - 580032, have changed my name as **MARUTI ANNASAHEB VATHARE** (New Name) henceforth I will be called and recognized by new name for all future purposes, dated: 07/04/2026.

CHANGE OF NAME

I, **SAHIL BABAJAN ONTI** (Old Name) Resident of Ambedkar Colony 2nd Cross, Mantur Road, Hubli - 580020, have changed my name as **SAHIL ONTI** (New Name) henceforth I will be called and recognized by new name for all future purposes, dated: 07/04/2026.

CHANGE OF NAME

I, **UMMEHANI MEHBOOBKHAN PATHAN** (Old Name) Resident of H No: 204/B, Bepari Mohalla, Chittakula, Sadashivgad, Karwar, Dist: Uttara Kannada - 581352, Karnataka, India, have changed my name as **UMMEHANI ADIL SAYED** (New Name) henceforth I will be called and recognized by new name for all future purposes, dated: 07/04/2026.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

CHANGE OF NAME

I, **PREETI LIGADI** (Old Name) Resident of #1133 Kumbar Galli, Galagali, Bilagi, Bagalkot, Karnataka 587117, have changed my name as **PREETI MALLIKARJUN TUPPAD** (New Name) henceforth I will be called and recognized by new name for all future purposes, dated: 07/04/2026.

CHANGE OF NAME

I, **JUJEPIN RUZAR** (Old Name) Resident of H No: 835 Near Anthony Church Old Dandeli, Dandeli, Dist: Uttara Kannada 581325 (address), have changed my name as **JUJEPIN ITORNE BARETTO** (New Name) henceforth I will be called and recognized by new name for all future purposes, dated: 07/04/2026.

CHANGE OF NAME

I, **NOURIN BANU BALEKUNDRI** (Old Name) Resident of Plot No 57 Hashmi Nagar Near Quba Masjeed Mehaboob Nagar Dharwad Pin - 580008, have changed my name as **NOURIN MUNSHI** (New Name) henceforth I will be called and recognized by new name for all future purposes, dated: 07/04/2026.

CHANGE OF NAME

I, **FAREEDAHAMMAND SAGAR** (Old Name) Resident of C/o K Ramu Plot No12 Gayatni Colony Bengeri Ext Hubli 580023 (address), have changed my name as **FARHAD SAGAR** (New Name) henceforth I will be called and recognized by new name for all future purposes, dated: 07/04/2026.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ

ಕ್ರಿಮಿನಲ್ ಸಂಖ್ಯೆ : 237/2026

ಅರ್ಜಿದಾರರು: ಶ್ರೀ ಎಂ.ವಿರುಪಾಕ್ಷಪ್ಪ ತಂದೆ ನಾಗಪ್ಪ ವಯಸ್ಸು 58 ವರ್ಷ, ಸಾ॥ ಹೂವಿನಹಡಗಲಿ, ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ,

ವಿರುದ್ಧ

ಎದುರುದಾರರು: ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ

ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ತಾಯಿಯ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ.

ಅರ್ಜಿದಾರರ ನನ್ನ ತಾಯಿಯಾದ ಎಂ.ಮಹಾದೇವಮ್ಮ ಗಂಡ ಎಂ.ನಾಗಪ್ಪ ಇವರು ದಿನಾಂಕ: 25–10–2018 ರಂದು ಇಟ್ಟಿಗಿ ಗ್ರಾಮದ ತಮ್ಮ ಮನೆಯಲ್ಲಿ ಮರಣಹೊಂದಿರುತ್ತಾರೆ. ಸದರಿಯವರ ಮರಣದ ಬಗ್ಗೆ ಎದುರುದಾರರ ಕಚೇರಿಯಲ್ಲಿ ನೋಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 22/04/2026 ರಂದು ಸಮಯ ಬೆಳಿಗ್ಗೆ 11.00 ಗಂಟೆಗೆ ಹೂವಿನಹಡಗಲಿ ಸಿವಿಲ್ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ (ಏಕಪಕ್ಷೀಯ) ಆದೇಶ ಮಾಡಲಾಗುವುದೆಂದು ತಿಳಿಯತಕ್ಕದ್ದು.

ದಿನಾಂಕ: 04/04/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/– ಶಿರಸ್ತೇದಾರರು,
ಸಿ.ಜೆ. & ಜೆ.ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ.
ಸಹಿ/–ಶ್ರೀ. ಆರ್.ಎಸ್.ಅರ್ಜಿ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

ಕರ್ನಾಟಕ ಗೃಹ ಮಂಡಳಿ

Karnataka Housing Board

3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–560009

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಗೃಹ ಮಂಡಳಿ ವತಿಯಿಂದ ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ ಸೂರ್ಯನಗರ 4ನೇ ಹಂತದ ಕೋನಸಂದ್ರ ಬೊಮ್ಮಂಡನಹಳ್ಳಿ ಗ್ರಾಮಗಳ ಬ್ಲಾಕ್ 22, 23, 24, 25, 26, 27, 28 ಮತ್ತು 29 ರಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ನಿವೇಶನ ಮತ್ತು ಸೇವೆಗಳು & 100 ಡುಪ್ಲೆಕ್ಸ್ ಮನೆಗಳ ನಿರ್ಮಾಣ ಕಾಮಗಾರಿಗಳ ಮೇಲ್ವಿಚಾರಣೆಗಾಗಿ ಯೋಜನಾ ಉಸ್ತುವಾರಿ ಸಂಸ್ಥೆ (PMC)ಯನ್ನು ನೇಮಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ.

ಟೆಂಡರ್ ಪ್ರಕಟಣೆ ಸಂಖ್ಯೆ:

1. CE/PMC/SNR/KHB/2025-26/SE0259/CALL-2 to SE0264/CALL-2 and KHB/2026-27/SE0373 & SE0374 Date: 06.04.2026
2. CE/PMC/100 Houses-Suryanagara Phase-4/KHB/2026-27/SE0376 Date: 07.04.2026

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 21.04.2026 ಸಂಜೆ 4.00 ಗಂಟೆಗೆ.

ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080–22273511/080–22100077 website: https://kppp.karnataka.gov.in

ಸಹಿ/– ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/80/ಆಕಾರ್/2026–27

ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ: 41/2026

ಮಾನ್ಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕಲಘಟಗಿ ತಾ: ಕಲಘಟಗಿ

ಅರ್ಜಿದಾರರು : ಶ್ರೀ ಬೀಮಪ್ಪ ತಂದೆ ಬೈರಪ್ಪ ರಾಮಾಪೂರ ವಯಾ: 56 ವರ್ಷ ಉದ್ಯೋಗ: ಶೇತ್ಕಿ ಕೆಲಸ ಸಾ: ಗಳಗಿ–ಹುಲಕೊಪ್ಪ ತಾ: ಕಲಘಟಗಿ.

ವಿರುದ್ಧ

ಎದುರುಗಾರರು : 1)ಮಾನ್ಯ ತಹಶೀಲದಾರರು ಹಾಗೂ ಜನನ ಮತ್ತು ಮರಣಗಳ ನೊಂದಣಿ ಅಧಿಕಾರಿಗಳು ಕಲಘಟಗಿ ಹಾಗೂ ಇನ್ನೊಬ್ಬರು

ಸಾರ್ವಜನಿಕ ನೋಟಿಸು

ಈ ಮೇಲ್ಕಾಣಿಸಿದ ಅರ್ಜಿದಾರರ ಸಹೋದರಿಯಾದ ಶ್ರೀಮತಿ ನೀಲವ್ವ ಕೋಂ ಮಲ್ಲಿಕಾರ್ಜುನ ಉಪ್ಪಾರ ಇವರು ದಿನಾಂಕ: 05–06–2005 ರಂದು ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕ ಗಳಗಿ–ಹುಲಕೊಪ್ಪ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ಆದ್ದರಿಂದ ಮರಣ ಪ್ರಮಾಣಪತ್ರವನ್ನು ಪಡೆಯಲು ಎದುರುಗಾರರಿಗೆ ನಿರ್ದೇಶನ ನೀಡುವಂತೆ ಸಿವಿಲ್ ಜಡ್ಜ್ ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಕಲಘಟಗಿಯಲ್ಲಿ ಅರ್ಜಿ ಸಲ್ಲಿಸಿದ್ದು ಯಾರಾದರೂ ಆಕ್ಷೇಪಣೆ ಅಥವಾ ತಕರಾರು ಇದ್ದಲ್ಲಿ ಖುದ್ದಾಗಿ ಅಥವಾ ವಕೀಲರ ಮೂಲಕವಾಗಲಿ ದಿನಾಂಕ: 10–04–2026 ರಂದು ಸಮಯ ಬೆಳಗ್ಗೆ 11–00 ಗಂಟೆಗೆ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು, ಇಲ್ಲವಾದಲ್ಲಿ ನ್ಯಾಯಾಲಯವು ಏಕಪಕ್ಷಿಯ ಆದೇಶ ನೀಡಲಾಗುವುದು.

ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಕೊಡಲಾಗಿದೆ.

ಸಹಿ/– ಶಿರಸ್ತೇದಾರರು
ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಾ: ಕಲಘಟಗಿ.
ಸಹಿ/– ಶ್ರೀ ಆರ್.ಎಸ್. ಉಡುಪಿ
ಅರ್ಜಿದಾರರ ಪರ ವಕೀಲರು. ಕಲಘಟಗಿ.

IN THE COURT OF THE HON'BLE CIVIL JUDGE AND JMFC AT SIRUGUPPA

CRIMINAL MISC CASE
NO 381 OF 2026

Between:
Koravappa .....Petitioner
And
The Tahasildar cum Birth & Death Registrar Taluk Office, Siruguppa .....Respondents

TO WHOMSOEVER IT MAY CONCERN
NOTICE

WHEREAS above named petitioner here in have instituted above petition under section 13[3]of birth and death Acts 1969 against the respondents for purpose of seeking death certificate of petitioner (Elder Cousin Brother) by name Mallappa S/o. Erappa who was died on 08-09-1995 at the residence of the Petitioner.

Any person interested are here by summoned to appear before this court in person or by pleader duly instructed and able to answer all material questions relating to the petition on 15-05-2026 at 11.00 am before this court. In default of your appearance on the date/ day of above petition will be heard and determined as "Ex-parte"

Given under my hand & seal of the court this 1st day of April-2026.

By Order of the court,
Sd/- Chief ministrial officer,
Civil judge & JMFC Court Siruguppa.
Sd/- Digambara swamy
Advocates Siruguppa,

IN THE COURT OF THE HON'BLE CIVIL JUDGE AND JMFC AT SIRUGUPPA

CRIMINAL MISC CASE
NO 380 OF 2026

Between:
Rangamma .....Petitioner
And
The Tahasildar cum Birth & Death Registrar Taluk Office, Siruguppa .....Respondents

TO WHOMSOEVER IT MAY CONCERN
NOTICE

WHEREAS above named petitioner here in have instituted above petition under section 13[3]of birth and death Acts 1969 against the respondents for purpose of seeking death certificate of petitioner Grandfather by name Dangu Huluga S/o Dangu Rama (Unmarried) who was died on 01-01-1971 at the residence of the Petitioner.

Any person interested are here by summoned to appear before this court in person or by pleader duly instructed and able to answer all material questions relating to the petition on 11-05-2026 at 11.00 am before this court. In default of your appearance on the date/ day of above petition will be heard and determined as "Ex-parte"

Given under my hand & seal of the court this 1st day of April-2026.

By Order of the court,
Sd/- Chief ministrial officer,
Civil judge & JMFC Court Siruguppa.
Sd/- Digambara swamy
Advocates Siruguppa,

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ

ಕ್ರಿಮಿನಲ್ ಸಂಖ್ಯೆ : 333/2026

ಅರ್ಜಿದಾರರು: ಪಿ.ಎಂ.ಕೊಟ್ರಯ್ಯ ತಂದೆ ಗಂಗಾಧರಯ್ಯ, ವಯಸ್ಸು 47 ವರ್ಷ, ಸಾ॥ ಅಡವಿಮಲ್ಲನಕೆರೆ ಗ್ರಾಮ, ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ

ವಿರುದ್ಧ

ಎದುರುದಾರರು: ಮಾನ್ಯ ತಹಶೀಲ್ದಾರರು & ಇನ್ನೊಬ್ಬರು ತಾಲೂಕು ಕಛೇರಿ, ಹೂವಿನಹಡಗಲಿ.

ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರರು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ದೊಡ್ಡಮ್ಮನ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ.

ಅರ್ಜಿದಾರರ ನನ್ನ ದೊಡ್ಡಮ್ಮನಾದ ಚಂದ್ರಮ್ಮ ಗಂಡ ಗಂಗಾಧರಯ್ಯ ಇವರು ದಿನಾಂಕ: 16–05–1955 ರಂದು ಅಡವಿಮಲ್ಲನಕೆರೆ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮರಣಹೊಂದಿರುತ್ತಾರೆ. ಸದರಿಯವರ ಮರಣದ ಬಗ್ಗೆ ಎದುರುದಾರರ ಕಚೇರಿಯಲ್ಲಿ ನೋಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 27/05/2026 ರಂದು ಸಮಯ ಬೆಳಿಗ್ಗೆ 11.00 ಗಂಟೆಗೆ ಹೂವಿನಹಡಗಲಿ ಸಿವಿಲ್ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ (ಏಕಪಕ್ಷೀಯ) ಆದೇಶ ಮಾಡಲಾಗುವುದೆಂದು ತಿಳಿಯತಕ್ಕದ್ದು.

ದಿನಾಂಕ: 04/04/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/– ಶಿರಸ್ತೆದಾರರು,
ಸಿ.ಜೆ. & ಜೆ.ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ.
ಸಹಿ/– ಶ್ರೀ ಆರ್.ಎಸ್.ಅರ್ಜಿ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

ಮೆ : ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದ. ಮುಧೋಳ ಇವರ ನ್ಯಾಯಾಲಯದಲ್ಲಿ

ಕ್ರಿಮಿನಲ್ ಮಿಸ್ಲೆನೆಸ ನಂ.72/2026

1. ರಾಜಕುಮಾರ ತಂದೆ ಮಾರುತಿ ಗೋಡಿ
ವಯಾ: 39 ವರ್ಷ, ಉದ್ಯೋಗ : ಒಕ್ಕಲುತನ,
ಸಾ: ದತ್ತ ಕಾಲನಿ, ಮಂಟೂರ ರೋಡ,
ಮುಧೋಳ, ತಾ: ಮುಧೋಳ
2. ಸುಕನ್ಯಾ ಗಂಡ ಪರಶುರಾಮ ಘೋರ್ಪಡೆ
ವಯಾ: 46 ವರ್ಷ, ಉದ್ಯೋಗ : ಒಕ್ಕಲುತನ,
ಸಾ: ದತ್ತ ಕಾಲನಿ, ಮಂಟೂರ ರೋಡ,
ಮುಧೋಳ, ತಾ: ಮುಧೋಳ
3. ಶಾರದಾ ಗಂಡ ಪರಶುರಾಮ ಕೋಳಿ
ವಯಾ: 40ವರ್ಷ, ಉದ್ಯೋಗ : ಒಕ್ಕಲುತನ,
ಸಾ: ಸಂಬರಗಿ, ತಾ: ಅಥಣಿ
4. ಜಯಶ್ರೀ ಗಂಡ ಕೃಷ್ಣಾ ಶಿರೋಳೆ
ವಯಾ: 45 ವರ್ಷ, ಉದ್ಯೋಗ : ಒಕ್ಕಲುತನ,
ಸಾ: ಮನೆ ನಂ.1119, ಜೈಭೀಮಾ ನಗರ,
ಚಿಂಚಲಿ, ತಾ: ರಾಯಬಾಗ
5. ಸರಸ್ವತಿ ಗಂಡ ಶಿವಪ್ಪ ಪರಮಾನಟ್ಟಿ
ವಯಾ: 41 ವರ್ಷ, ಉದ್ಯೋಗ : ಒಕ್ಕಲುತನ,
ಸಾ: ಕಲ್ಲಟ್ಟಿ ಗಲ್ಲಿ, ತೇರದಾಳ,
ತಾ: ರಬಕವಿ–ಬನಹಟ್ಟಿ .....ಅರ್ಜಿದಾರರು

ವಿರುದ್ಧ

ಮುಖ್ಯಾಧಿಕಾರಿಗಳು, ನಗರಸಭೆ, ಮುಧೋಳ
ತಾ: ಮುಧೋಳ, ಜಿ: ಬಾಗಲಕೋಟ .....ಎದುರುದಾರ

ಜಾಹೀರನಾಮೆ

ಪ್ರಸ್ತುತ ಕೇಸನ್ನು ಮಾನ್ಯ ನ್ಯಾಯಾಲಯದಲ್ಲಿ ಅರ್ಜಿದಾರರ ತಾಯಿಯಾದ–ಶಕುಂತಲಾ ಗಂಡ ಮಾರುತಿ ಗೋಡಿ ಇವಳು ದಿನಾಂಕ 30/06/2016 ರಂದು ಮುಧೋಳ ಪಟ್ಟಣದ ಸ್ವ ಗೃಹದಲ್ಲಿ ಮರಣ ಹೊಂದಿದ್ದು, ಆ ಬಗ್ಗೆ ಎದುರುದಾರ ಇವರು ತಮ್ಮ ಕಾರ್ಯಾಲಯದ ಮರಣ ರಜಿಸ್ಟರದಲ್ಲಿ ನೋಂದಣಿ ಮಾಡಿಕೊಳ್ಳಬೇಕೆಂದು ನಿರ್ದೇಶನ ಆದೇಶ ಕೋರಿ ಈ ಕೇಸನ್ನು ಮಾನ್ಯ ನ್ಯಾಯಾಲಯದಲ್ಲಿ ಸಲ್ಲಿಸಿದ್ದು ಇರುತ್ತದೆ.

ಕಾರಣ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಪ್ರಸ್ತುತ ಕೇಸನಲ್ಲಿ ಯಾರಾದರೂ ಹಕ್ಕು ವ ಹಿತಾಸಕ್ತಿ ಇದ್ದಲ್ಲಿ ಪ್ರಸ್ತುತ ಕೇಸನಲ್ಲಿ ದಿನಾಂಕ: 02–06–2026 ರಂದು ಮುಂಜಾನೆ 10–30 ಘಂಟೆಗೆ ನ್ಯಾಯಾಲಯದಲ್ಲಿ ಹಾಜರ ಇದ್ದು, ತಮ್ಮ ತಕರಾರು ವಗೈರೆ ಸಲ್ಲಿಸಬಹುದು. ಒಂದು ವೇಳೆ ಯಾವುದೇ ತಕರಾರು ಬಾರದಿದ್ದಲ್ಲಿ ಅರ್ಜಿದಾರರ ಮಾಂಗಣಿ ಪ್ರಕಾರ ಮುಂದಿನ ಆದೇಶ ಮಾಡಲು ಬರುವುದು ತಿಳಿಯಿರಿ ಅಂತಾ ಕೊಟ್ಟ ಜಾಹೀರನಾಮೆ.

ಮುಧೋಳ
ತಾ: 16–03–2026

ನ್ಯಾಯಾಲಯದ ಆದೇಶದ ಮೇರೆಗೆ,
ಸಹಿ/– ಶಿರಸ್ತೆದಾರರು,
ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಮುಧೋಳ ಇವರ ನ್ಯಾಯಾಲಯ.
ಸಹಿ/– (ಸಿ.ಪಿ. ಬೀಳಗಿ)
ಅರ್ಜಿದಾರರ ಪರ ವಕೀಲರು.

IN THE COURT OF THE HON'BLE CIVIL JUDGE AND JMFC AT SIRUGUPPA

CRIMINAL MISC CASE
NO 379 OF 2026

Between:
Koravappa .....Petitioner
And
The Tahasildar cum Birth & Death Registrar Taluk Office, Siruguppa .....Respondents

TO WHOMSOEVER IT MAY CONCERN
NOTICE

WHEREAS above named petitioner here in have instituted above petition under section 13[3]of birth and death Acts 1969 against the respondents for purpose of seeking death certificate of petitioner Fathers Elder Brother by name Erappa M/o Basvi Gouramma, who was died on 01-02-1990 at the residence of the Petitioner.

Any person interested are here by summoned to appear before this court in person or by pleader duly instructed and able to answer all material questions relating to the petition on 11-05-2026 at 11.00 am before this court. In default of your appearance on the date/ day of above petition will be heard and determined as "Ex-parte"

Given under my hand & seal of the court this 1st day of April-2026.

By Order of the court,
Sd/- Chief ministrial officer,
Civil judge & JMFC Court Siruguppa.
Sd/- Digambara swamy
Advocates Siruguppa,

ಹಾಸನ ಮಹಾನಗರ ಪಾಲಿಕೆ, ಹಾಸನ. ಬಿ.ಎಂ.ರಸ್ತೆ, ಸಂತೇಪೇಟೆ ವೃತ್ತ, ಹಾಸನ–573201.

Email:commn_hassan@yahoo.com ದೂರವಾಣಿ: 08172–268276, 263033 web: http://www.hassancity.mrc.gov.in ಸಹಾಯವಾಣಿ: 233702 ಫ್ಯಾಕ್ಸ್: 234792

ನಂ:ಮನಪಾಹಾ/ಮಿ.ಶಾ/ಸಿಆರ್/2025–26 ದಿನಾಂಕ:04–04–2026

:: ಹರಾಜು ಪ್ರಕಟಣೆ ::

ಈ ಮೂಲಕ ಹಾಸನ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ದಿನಾಂಕ: 06–04–2026 ರಿಂದ ದಿನಾಂಕ: 21–04–2026 ರ ವರೆಗಿನ ಅವಧಿಯಲ್ಲಿ ಈ ಕೆಳಕಂಡ ವಿವಿದ ಬಾಬುಗಳ ಸುಂಕ ವಸೂಲಿ ಹಕ್ಕುಗಳನ್ನು ಕೆ.ಪಿ.ಪಿ.ಪೋರ್ಟಲ್ ಮೂಲಕ ವಿಲೇವಾರಿ ಮಾಡಲು ಹರಾಜು ಇಸ್ತಿಯಾರ್ ಹೊರಡಿಸಲಾಗಿದೆ. (http:/kppp.karnataka4.gov.in) ಸದರಿ ಬಾಬುಗಳ ಸುಂಕ ವಸೂಲಿ ಹಕ್ಕನ್ನು ಪಡೆಯುವ ಆಸಕ್ತರು/ಏಜೆನ್ಸಿಯವರು ದಿನಾಂಕ:21–04–2026 ರಂದು ಸಂಜೆ 5 ಗಂಟೆಯೊಳಗಾಗಿ ಠೇವಣಿ ಮೊತ್ತವನ್ನು ಪಾವತಿಸಿ ಆನ್‌ಲೈನ್ ಮೂಲಕ ಸಲ್ಲಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಕಂದಾಯಾಧಿಕಾರಿಯನ್ನು ಸಂಪರ್ಕಿಸುವುದು. ಕ್ರ.ಸಂ.ಬಾಬುಗಳ ವಿವರ 1)ಪ್ರತಿ ಮಂಗಳವಾರ ಗೊರೂರು ರಸ್ತೆಯ ಬದಿ ಸಂತೆ ಸಾಲಗಾಮೆ ರಸ್ತೆ ಕ್ರೀಡಾಂಗಣದ ಹತ್ತಿರ ಎನ್.ಸಿ.ಸಿ. ಕಛೇರಿ ಮುಂಭಾಗ ನಡೆಯುವ ಸಂತೆ, ಕೇಂದ್ರ ಅರಣ್ಯ ಇಲಾಖೆ ಹತ್ತಿರ ನಡೆಯುವ ಸಂತೆ ಸುಂಕ ವಸೂಲಿ ಮಾಡುವ ಹಕ್ಕು. ಹರಾಜಿನ ಭಾಗವಹಿಸಲು ಆನ್ ಲೈನ್ ಮೂಲಕ ಕಟ್ಟಬೇಕಾಗಿರುವ ಠೇವಣಿ ಮೊತ್ತ ರೂ.2,00,000.00 ಅಖೈರು ಬಿಡ್ ಹೊಂದಲು ಕನಿಷ್ಟ ಬಿಡ್ ಮೊತ್ತ ರೂ.40,00,000.00 ಮೇಲ್ಪಟ್ಟು Live Bidding time 22-04-2026 ನೇ ಬುಧವಾರ ಬೆಳಿಗ್ಗೆ 10.30 ರಿಂದ ಸಂಜೆ 2.00 ಗಂಟೆ ವರೆಗೆ 2)ಗೊರೂರು ರಸ್ತೆ ಎಡಭಾಗದಲ್ಲಿ ನಿರ್ಮಿಸಿರುವ (ಕಸಾಯಿ ಖಾನೆಯಲ್ಲಿ) ಕುರಿ ಮಾಂಸ ಮಾರಾಟ ಮಾಡುವ ಹಕ್ಕು, ಮಹಾನಗರ ಪಾಲಿಕೆ ಜಾಗದ ಮಳಿಗೆಗಳಲ್ಲಿ ಮೀನು ಮಾರಾಟ ಮಾಡುವ ಹಕ್ಕು ಮತ್ತು ಖಸಾಯಿ ಖಾನೆಯಲ್ಲಿ ಬೀಳುವ ಗೊಬ್ಬರವನ್ನು ತೆಗೆದುಕೊಂಡು ಹೋಗುವ ಹಕ್ಕು ಹರಾಜಿನ ಭಾಗವಹಿಸಲು ಆನ್ ಲೈನ್ ಮೂಲಕ ಕಟ್ಟಬೇಕಾಗಿರುವ ಠೇವಣಿ ಮೊತ್ತ ರೂ. 1,00,000.00 ಅಖೈರು ಬಿಡ್ ಹೊಂದಲು ಕನಿಷ್ಟ ಬಿಡ್ ಮೊತ್ತ ರೂ. 2,00,000.00 ಮೇಲ್ಪಟ್ಟು 3)ಹಾಸನ ಮಹಾನಗರ ಪಾಲಿಕೆಯ ಮುಖ್ಯ ರಸ್ತೆಗಳಾದ ಸಹ್ಯಾದ್ರಿ ರಸ್ತೆಯ ಫುಡ್ ಕೋರ್ಟ್, ಎಂ.ಜಿ.ರಸ್ತೆಯ ಫುಡ್ ಕೋರ್ಟ್ ಹಾಗೂ ಪೃಥ್ವಿ ಥಿಯೇಟರ್ ಹತ್ತಿರ ಇರುವ ಫುಡ್ ಕೋರ್ಟ್ ಹರಾಜಿನ ಭಾಗವಹಿಸಲು ಆನ್ ಲೈನ್ ಮೂಲಕ ಕಟ್ಟಬೇಕಾಗಿರುವ ಠೇವಣಿ ಮೊತ್ತ ರೂ.1,00,000.00 ಅಖೈರು ಬಿಡ್ ಹೊಂದಲು ಕನಿಷ್ಟ ಬಿಡ್ ಮೊತ್ತ ರೂ.13,00,000.00 ಹರಾಜು ವಿಧಾನ ಕೆ.ಪಿ.ಪಿ.ಪೋರ್ಟಲ್ ಮೂಲಕ ಷರತ್ತುಗಳು 1.ಹರಾಜಿನಲ್ಲಿ ಭಾಗವಹಿಸುವವರು ಕಾಲಂ ನಂ 3 ರಲ್ಲಿ ಸೂಚಿಸಿರುವಂತೆ ಐಟಂವಾರು ಠೇವಣಿ ಮೊತ್ತವನ್ನು ಆನ್‌ಲೈನ್ ಮೂಲಕ ಕಡ್ಡಾಯವಾಗಿ ಪಾವತಿಸಬೇಕು. 2.ಹರಾಜು ಅಖೈರಾದ ಕೂಡಲೇ ಅಖೈರು ಸವಾಲುದಾರರು ಹರಾಜಿನ ಬಾಕಿ ಮೊತ್ತವನ್ನು ಹರಾಜು ಆದ ಸ್ಥಳದಲ್ಲಿಯೇ ಪೂರ್ಣ ಮೊತ್ತವನ್ನು ಜಿ.ಎಸ್.ಟಿ. ಮೊತ್ತದೊಂದಿಗೆ ಪಾವತಿ ಮಾಡಿ ರಸೀದಿ ಪಡೆಯತಕ್ಕದ್ದು. 3.ಹರಾಜು ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಹರಾಜನ್ನು ರದ್ದುಪಡಿಸುವ ಅಧಿಕಾರ ಮಹಾನಗರ ಪಾಲಿಕೆ ಆಯುಕ್ತರಿಗೆ ಇರುತ್ತದೆ. 4.ಹರಾಜು ಖಾಯಂ ಆಯಿತೆಂದು ವಿಷಯವನ್ನು ಅಖೈರು ಸವಾಲುದಾರರಿಗೆ ಬರವಣಿಗೆ ಮೂಲಕ ತಿಳಿಯಪಡಿಸಿದ ಕೂಡಲೇ ಸವಾಲುದಾರರನ್ನು ಗುತ್ತಿಗೆದಾರನೆಂದು (ಕಂಟ್ರಾಕ್ಟರ್) ಕರೆಯಲ್ಪಡುತ್ತಾನೆ. ಈ ರೀತಿ ಬರವಣಿಗೆ ಮೂಲಕ ಅವರ ಸವಾಲನ್ನು ಅಂಗೀಕರಿಸುವುದಾಗಿ ತಿಳಿಸಿದ ನಂತರ ಹರಾಜು ಇಸ್ತಿಯಾರ್‌ನಲ್ಲಿ ವಿಧಿಸಿರುವ ಷರತ್ತಿನಂತೆ ತಾನು ಮತ್ತು ತನ್ನ ವಾರಸುದಾರರು ಬದ್ಧರಾಗಿರುತ್ತೇನೆಂತಲು ಮತ್ತು ಕೆಳಗೆ ನಮೂದಿಸಿರುವ ಆಗಿಂದ್ದಾಗ್ಗೆ ಮಹಾನಗರ ಪಾಲಿಕೆ ಕಛೇರಿಯಿಂದ ಕೊಡಬಹುದಾದ ಆದೇಶಗಳಿಗೆ ಬದ್ಧರಾಗಿರುತ್ತಾರೆಂದು ಛಾಪಾ ಕಾಗದಲ್ಲಿ ಸ್ಟ್ಯಾಂಪ್ ಕಾಯ್ದೆ(ಸ್ಟ್ಯಾಂಪ್ ರೂಲ್ಸ್) ಅನುಸರಿಸಿ ಬರೆದ ಸ್ವಂತ ಖರ್ಚಿನಿಂದ ರಿಜಿಸ್ಟರ್ ಮಾಡಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ದುಸರಾ ಹರಾಜು ಮಾಡಲು ಆಗುವ ನಷ್ಟವನ್ನು ಮೊದಲನೇ ಹರಾಜುದಾರರು ಕಟ್ಟಿಕೊಡಬೇಕಾಗುತ್ತದೆ. 5.ಗುತ್ತಿಗೆದಾರು (ಕಂಟ್ರಾಕ್ಟರ್) ಯಾವುದೇ ಕಾರಣದಿಂದಲೂ ಒಳಗುತ್ತಿಗೆ ಮಾಡಕೂಡದು, ಈ ರೀತಿ ಮಾಡಿದ್ದು ಕಂಡುಬಂದಲ್ಲಿ ಸದರಿ ಗುತ್ತಿಗೆಯನ್ನು ತಪ್ಪಿಸಿ ಠೇವಣಿಯ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಕೂಡಲೇ ಅವರ ಹಕ್ಕನ್ನು ರದ್ದುಪಡಿಸಿ ಮಹಾನಗರ ಪಾಲಿಕೆ ಸ್ವಾದೀನಪಡಿಸಿಕೊಳ್ಳಲಾಗುವುದು. ಮತ್ತು ಗುತ್ತಿಗೆವಾಯಿದೆಯವರಿಗೆ ಆಗಬಹುದಾದ ನಷ್ಟಕ್ಕೆ ಅವರನ್ನೇ ಗುರಿಪಡಿಸಿ ಅವರಿಂದ ವಸೂಲಿ ಮಾಡಲಾಗುವುದು 6.ಫುಡ್‌ಕೋರ್ಟ್‌ನಿಂದ ಬರುವಂತಹ ತ್ಯಾಜ್ಯವನ್ನು ಹಸಿಕಸ – ಒಣಕಸಗಳನ್ನಾಗಿ ಬೇರ್ಪಡಿಸಿ ಪ್ರತ್ಯೇಕ ಆಟೋ ಟಿಪ್ಪರ್‌ನಲ್ಲಿ ವಿಲೇವಾರಿ ಮಾಡುವುದು ಹಾಗೂ ಸ್ವಚ್ಚತೆ ಕಾಪಾಡುವುದು ಟೆಂಡರ್‌ದಾರರ ಜವಾಬ್ದಾರಿಯಾಗಿರುತ್ತದೆ. 7.ಗುತ್ತಿಗೆದಾರರಿಂದ ಬರಬೇಕಾದ ಮೊಬಲಗು ಮಹಾನಗರ ಪಾಲಿಕೆ ಇಸ್ತಿಹಾರ್ ಚಾಪ್ಟರ್ 12 ರಲ್ಲಿ ದತ್ತವಾಗಿರುವ ಮೇರೆಗೆ ವಸೂಲಿ ಮಾಡುವುದಕ್ಕು ಮಹಾನಗರ ಪಾಲಿಕೆಗೆ ಅಧಿಕಾರವಿರುತ್ತದೆ. 8.ಗುತ್ತಿಗೆದಾರರಿಂದ ಬರಬೇಕಾದ ಮೊಬಲಗು ಪುರಸಭಾ ಕಾಯ್ದೆ 1964ರ ಅನುಸೂಚಿ 10 ಮತ್ತು 11 ರ ಪ್ರಕರಣ 142 ಮತ್ತು 143ರಂತೆ ದತ್ತವಾಗಿರುವ ಮೇರೆಗೆ ವಸೂಲಿ ಮಾಡುವುದಕ್ಕು ಮಹಾನಗರ ಪಾಲಿಕೆಗೆ ಅಧಿಕಾರವಿರುತ್ತದೆ. 9.ಗುತ್ತಿಗೆದಾರನಾಗಲಿ, ಆತನ ನೌಕರನಾಗಲಿ ಹರಾಜು ಇಸ್ತಿಹಾರ್ ಷರತ್ತು ಅಥವಾ ಹುಕುಂ ಉಲ್ಲಂಘಡಿಸಿದಲ್ಲಿ ಆತನ ಗುತ್ತಿಗೆ ತಪ್ಪಿಸಿ ಸೂಕ್ತ ರೀತಿ ವಿಲೇವಾರಿ ಮಾಡಲು ಆಯುಕ್ತರಿಗೆ ಅಧಿಕಾರವಿರುತ್ತದೆ. 10.ಚಾಲ್ತಿ ಸಾಲಿನಲ್ಲಿ ಹಿಂದಿನ ಸಾಲಿನಲ್ಲಿ ಸುಸ್ತಿದಾರರಾಗಿರುವ ಗುತ್ತಿಗೆದಾರರು (ಕಂಟ್ರಾಕ್ಟರ್) ತಮ್ಮ ಖಾತೆಯನ್ನು ಬೇಬಾಕಿ ಮಾಡದ ಹೊರತ್ತು ಹರಾಜಿನಲ್ಲಿ ಸವಾಲು ಮಾಡಲು ಅಧಿಕಾರವಿರುವುದಿಲ್ಲ. 11.ಗುತ್ತಿಗೆದಾರರು ಆಂಗಿದ್ದಾಂಗೆ ಮಹಾನಗರ ಪಾಲಿಕೆ ಕಛೇರಿಯಿಂದ ಕೊಡತಕ್ಕ ಹುಕುಂಗಳಿಗೆ ಬದ್ಧರಾಗಿರತಕ್ಕದ್ದು. 12.ಬಿಡ್‌ದಾರರು ಯಾವ ಕಾರಣದಿಂದಲೂ ಖಿಸ್ತು ಮೊಬಲಗನ್ನು ರೆಮೀಷನ್ ಮಾಡುವುದಾಗಲೀ ಪರಿಹಾರ ದ್ರವ್ಯವನ್ನು ಕೇಳಲು ಅವಕಾಶವಿರುವುದಿಲ್ಲ. 13.ಬಿಡ್‌ದಾರರು ಸರ್ಕಾರದಿಂದ ಮುಂದೆ ಬರುವ ಕಾನೂನು ಪ್ರಕಾರ ನಡೆದುಕೊಳ್ಳುವುದಕ್ಕು ಸಂದರ್ಭಾನುಸಾರ ಮಹಾನಗರ ಪಾಲಿಕೆಯವರು ಮಾಡಬಹುದಾದ ಬದಲಾವಣೆಗೆ ಒಳಪಟ್ಟಿರತಕ್ಕದ್ದು. 14.ಬಿಡ್‌ದಾರರು ತಾನು ವಸೂಲು ಮಾಡುವ ಬಗ್ಗೆ ಲೆಕ್ಕವನ್ನು ಇಡುವುದಲ್ಲದೇ, ತನಿಖೆಗೆ ಬಂದಾಗ ಅಧಿಕಾರಿಗಳು ಅಪೇಕ್ಷಿಸಿದಲ್ಲಿ ಹಾಜರುಪಡಿಸಬೇಕು. 15.ಕಂಟ್ರಾಕ್ಟರ್‌ದಾರರು ಪ್ರತಿ ಬಾಬಿಗೂ ಮಹಾನಗರ ಪಾಲಿಕೆಯಿಂದ ನಿಗದಿಪಡಿಸಿರುವ ಧರದಂತೆ ಅಚ್ಚಾದ ರಶೀದಿಯನ್ನು ಪಾರ್ಟಿಗೆ ಕೊಡಬೇಕು ಹಾಗೂ ನಿಗದಿಪಡಿಸಿದ್ದಕ್ಕಿಂತ ಹೆಚ್ಚಿನ ಹಣವನ್ನು ವಸೂಲಿ ಮಾಡತಕ್ಕದ್ದಲ್ಲ. 16.ಷೆಡ್ಯೂಲ್ ದರದ ವಿಚಾರದಲ್ಲಿ ಏನಾದರೂ ತಕರಾರು ಬಂದರೆ ಮಹಾನಗರ ಪಾಲಿಕೆಯಿಂದ ಅಧಿಕಾರ ಹೊಂದಿರುವವರ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ. 17.ಒಂದು ಅಂಗಡಿಯಲ್ಲಿರತಕ್ಕ ವಿವಿಧ ಸಾಮಾನುಗಳನ್ನು ಬೇರೆ ಬೇರೆಯೆಂದು ಪರಿಗಣಿಸದೆ ಒಂದು ಅಂಗಡಿಯನ್ನು ಮಾಡಬೇಕು. ಷರಾ:– ಇಸ್ತಿಹಾರ್ ಒಳಗೊಂಡ ಷರತ್ತುಗಳಿಗೆ ಬದಲಾವಣೆ ಮಾಡಲು ಹರಾಜು ವೇಳೆಯಲ್ಲಿ ಅವಶ್ಯಕತೆ ಕಂಡು ಬಂದಲ್ಲಿ ನಿಭಂದನೆಗಳನ್ನು ಸೇರಿಸಲು ಆಡಳಿತಾಧಿಕಾರಿಗಳು/ಆಯುಕ್ತರಿಗೆ ಅಧಿಕಾರ ಇರುತ್ತದೆ.

ಸಹಿ/–ಆಯುಕ್ತರು, ಹಾಸನ
ಮಹಾನಗರ ಪಾಲಿಕೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/16/ಕೆಎಸ್ಎಂಸಿಎ/2026–27

IN THE COURT OF CIVIL JUDGE AND JMFC AT SIRUGUPPA

O. S. No.110/2026

BETWEEN:
M. Shivakumar and Others .....Plaintiffs
And
Somashekar Gouda .....Defendant

NOTICE

WHEREAS, the above named plaintiffs are instituted above suit against the defendant in representative capacity for the relief of declaration based on easementary rights for ABCD Rastha/Cart Track Path passing through Sy.No. 249/A of defendant situated in Bogguru Village within the Registration District of Ballari and Sub-Registration District of Siruguppa, Who are interested to contest the case they may appear before the court on the 18th day of April 2026 at about 08:00 "O" clock in the morning to answer the claim and on the day fixed, for your appearance and to contest and defend themselves in the above case.

Given under my hand and seal of the court on this 7th day of April 2026.

By order of the Court
Sd/- Shirasthadar
Civil judge & J M F C Court Siruguppa
Advocate for the Petitioner
Sd/- S. Manjunatha Gouda
Advocate & Legal Adviser,
Siruguppa, Ballari District

IN THE COURT OF THE HON'BLE CIVIL JUDGE AND JMFC AT SIRUGUPPA

CRIMINAL MISCELLENEOUS CASE
NO 128 OF 2026

Between:
Syed Qamar Peer .....Petitioner
And
The Registrar Cum Birth and Death C.M.C. Siruguppa. .....Respondents

TO WHOMSOEVER IT MAY CONCERN
NOTICE

WHEREAS above named petitioner here in have instituted above petition under section 13[3]of birth and death Acts 1969 against the respondents for purpose of seeking death certificate of petitioner Wife by name Shahida begum who was died on 05-07-2021 at Siruugppa.

Any person interested are here by summoned to appear before this court in person or by pleader duly instructed and able to answer all material questions relating to the petition on 13-05-2026 at 11.00 am before this court. In default of your appearance on the date/ day of above petition will be heard and determined as "Ex-parte"

Given under my hand & seal of the court this 2nd day of April-2026.

By Order of the court,
Sd/- Chief Ministrial Officer,
Civil judge & JMFC Court Siruguppa.
Sd/- Sameena M.
Advocate, Siruguppa.

ಕರ್ನಾಟಕ ಸರ್ಕಾರ
ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ದೇವಗಿರಿ–ಯಲ್ಲಾಪುರ, ಹಾವೇರಿ–581110

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)

Website : https://himshaveri.karnataka.gov.in
E-mail : tenders.hims.dme@gmail.com

ಸಂ: ಹಿಮ್ಸ್/ವೈಉ/02/2026–27 ದಿನಾಂಕ : 07/04/2026

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಗಳ ಪಾರದರ್ಶಕ ಅಧಿನಿಯಮ–99/2000 ಮತ್ತು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಿರುವ ಷರತ್ತುಗಳನ್ವಯ ನೊಂದಾಯಿತ ಅರ್ಹ ಸಂಸ್ಥೆಗಳಿಂದ/ಪ್ರತಿಷ್ಠಿತ ಮೂಲ ತಯಾರಕರು/ಅಧೀಕೃತ ಪ್ರತಿನಿಧಿಗಳು/ ಅಧೀಕೃತ ವಿತರಕರಿಂದ 2026–27ನೇ ಸಾಲಿಗಾಗಿ ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾವೇರಿಗೆ ಬೇಕಾದ BIO MEDICAL CONSUMABLES ಗಳನ್ನು ಖರೀದಿಸುವ ಕುರಿತು ಇ–ಟೆಂಡರ್ ಆಹ್ವಾನಿಸಲಾಗಿದೆ ಅರ್ಹ ಟೆಂಡರ್‌ದಾರರು ಕೆ.ಪಿ.ಪಿ. ಪೋರ್ಟಲ್ https://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಸಲ್ಲಿಸಬಹುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ವಿಳಾಸದಲ್ಲಿ ಪಡೆಯುವುದು.

ಟೆಂಡರ್ ವೇಳಾಪಟ್ಟಿ : (01) ಟೆಂಡರ್ ಸಂಖ್ಯೆ : DHFWS/2025-26/IND2114 (02) ಟೆಂಡರ್ ಪ್ರಕಟಣೆ ದಿನಾಂಕ : **07/04/2026** (03) ಟೆಂಡರ್‌ನ ಒಟ್ಟು ಅಂದಾಜು ಮೌಲ್ಯ ರೂ. **22.27** ಲಕ್ಷ (04) ಆನ್‌ಲೈನ್‌ನಲ್ಲಿ ಟೆಂಡರ್ ಅನ್ನು KPP Portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ : **21/04/2026** ಅಪರಾಹ್ನ 4:30 (05) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ : **22/04/2026** ಅಪರಾಹ್ನ 4:30 (06) ತಾಂತ್ರಿಕ ಲಕೋಟೆಯ ದಾಖಲೆಗಳ ಪರಿಶೀಲನೆ : ತಿಳಿಸಲಾಗುವುದು (07) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ : ತಿಳಿಸಲಾಗುವುದು (08) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಶೇ 2.5% ರಷ್ಟು : ರೂ. **55,687/–** (09) E-Procurement Portal Processing Fees : https://kppp.karnataka.gov.inPortalನಲ್ಲಿ ನಿಗದಿಪಡಿಸಿರುವಂತೆ (10) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ ರಜಾ ದಿನಗಳನ್ನು ಹೊರತುಪಡಿಸಿ : ಡೀನ್ ಮತ್ತು ನಿರ್ದೇಶಕರು, ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾವೇರಿ ದೂರವಾಣಿ ಸಂಖ್ಯೆ : **8660990320** Email : tenders.hims.dme@gmail.com

ಸಹಿ/– ಡೀನ್ ಮತ್ತು ನಿರ್ದೇಶಕರು,
ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾವೇರಿ

ವಾಸಾಸಂಇ/ಹಾವೇರಿ/ಕೆಎಸ್ಎಂಸಿಎ/28/2026–27

IN THE COURT OF THE HON'BLE CIVIL JUDGE AND J.M.F.C. AT SANDUR.

P& SC No. 01/2026

Between:-
Sri. S.M. Ameerzan & another .....Petitioners
And
The BEO Educational Department Sandur .....Respondent

SUMMONS TO INTERESTED PERSON U/O V RULE 20 R/W SEC 151 OF CPC FILED ON BEHALF OF THE PETITIONER.

Whereas the above petitioner have instituted to filing this petition to get the succession certificate of petitioner's deceased wife by name Fathimatuz Zohra S.F wife of S.M.Ameerzan was died on 04-04-2025 due to ill health from the court. On the file of the Hon'ble civil Judge & JMFC at Sandur, The interested person are hereby summoned to appear in this court in person or by pleader duly instructed and able to answer all material question relating to the above petition on 01/06/2026 at 11.00 A.M. and interested persons are directed to produce all the doc uments upon which you intended to rely in support of your defense.

Take notice that in default of your appearance on that day, above mentioned case will be heard and determined ex parte.

Given under my hand and seal of this Hon'ble Court on 07/04/2026.

By Order of the court court
Sd/- Sheristedar,
Civil Judge and J.M.F.C Court at Sandur.
Sd/- Sri. L.S. Basheer Ahamed [LSB]
Advocate, Kudligi /Sandur

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು

ಸಿಆರ್.ಎಲ್.ಎಮ್.ಸಿ. ಸಂಖ್ಯೆ : 494/2026

ಅರ್ಜಿದಾರರು: 1) ಸಿದ್ದರಾಮೇಶ, ಜಿ ತಂದೆ ದಿವಂಗತ ಗಂಡಿ ಮಲ್ಲಪ್ಪ, ವಯಸ್ಸು 44 ವರ್ಷ, 2) ಗಂಡಿ ನೀಲಮ್ಮ ಗಂಡ ದಿವಂಗತ ಗಂಡಿ ಮಲ್ಲಪ್ಪ, ವಯಸ್ಸು 81 ವರ್ಷ, 3) ಕುಮಾರಸ್ವಾಮಿ ತಂದೆ ದಿವಂಗತ ಗಂಡಿ ಮಲ್ಲಪ್ಪ, ವಯಸ್ಸು 52 ವರ್ಷ, 4) ಜಿ. ವಿರೇಶ ತಂದೆ ದಿವಂಗತ ಗಂಡಿ ಮಲ್ಲಪ್ಪ, ವಯಸ್ಸು 51 ವರ್ಷ, ಎಲ್ಲಾರ ವಾಸ: 7ನೇ ವಾರ್ಡ್, ಮೇನ್ ಬಜಾರ್, ಸಂಡೂರು ಪಟ್ಟಣ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.

ವಿರುದ್ಧ

ಎದುರುದಾರರು : ಮಾನ್ಯ ಮುಖ್ಯಾಧಿಕಾರಿಗಳು/ಜನನ ಮರಣ ನೊಂದಣಾಧಿಕಾರಿಗಳು ಪುರಸಭೆ ಕಾರ್ಯಾಲಯ ಸಂಡೂರು

ನೋಟಿಸ್

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರ 1, 3 ಮತ್ತು 4 ರವರ ತಂದೆ ಮತ್ತು ಅರ್ಜಿದಾರ 2 ರವರ ಗಂಡನಾದ ಗಂಡಿ ಮಲ್ಲಪ್ಪ ತಂದೆ ಮಹಾದೇವಪ್ಪ ಇವರು ದಿನಾಂಕ: 06–02–1998 ಸಂಡೂರು ಪಟ್ಟಣ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆಯಲ್ಲಿ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದ್ದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರದರು ಯಾವುದೇ ರೀತಿಯ ತಂಟೆ–ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 18–05–2026 ಬೆಳಗ್ಗೆ 11:00 ಗಂಟೆಗೆ ಮುದ್ದುತ್ತು ನೇಮಿಸಿದ್ದು, ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಎಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು. ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ: 07/04/2026 ರಂದು ನೀಡಲಾಯಿತು.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶಿರಸ್ತೇದಾರರು
ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು.
ಸಹಿ/– ರಾಮಚಂದ್ರ ಟಿ.
ಅರ್ಜಿದಾರರ ಪರ ವಕೀಲರು, ಸಂಡೂರು.

IN THE COURT OF THE HON'BLE CIVIL JUDGE AND J.M.F.C. AT KUDLIGI

Crl. Misc. No. 2562/2025

Between :-
1. Smt. Thippamma D/o late Kumbara Thippaiah aged about 70 years,
2. Thippeswamy s/o late Kumbara Thippaiah, aged about 65 years,
3. Basavaraja s/o late Kumbara Thippaiah, aged about 62 years,
4. Thippeshi son of late Kumbara Thippaiah, aged about 60 years,
5. Shivarudramma D/o late Kumbara Thippaiah, aged about 58 years,
6. Smt. Jayamma D/o late Kumbara Thippaiah, aged about 56 years,
7. Sivanna son of late Kumbara Thippaiah, aged about 54 years,
8. Shekharappa son of late Kumbara Thippaiah, aged about 52 years,

All are Hindu, agriculturist, R/o Nelabommanahalli Village, in Kudligi Taluk, Vijayangara district .....Petitioner
And
The Tahasildar, Taluk Office, KUDLIGI .....Respondent

SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.

Whereas the above petitioners have instituted above petition to get the death certificate of her deceased mother by Name late Kumbara Rudramma w/o late Kumbara Thippaiah was died on 02.09.2013 at Nelabommanahalli village in Kudligi Taluk and Vijayanagara District, On the file of the civil Judge & JMFC at Kudligi. The Tahasildar, Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 28.04.2026 at 11 A.M. and interested persons are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte.

Given under my hand and seal of this Hon'ble Court on 06-04-2026.

By Order of the court
Sd/- Chief Ministerial Officer
Civil Judge (J.D) Court at Kudligi
Sd/- Sri. M. Nagaraja, Advocate, Kudligi

IN THE COURT OF THE HON'BLE CIVIL JUDGE AND J.M.F.C. AT KUDLIGI

Crl. Misc. No. 2561/2025

Between :-
1. Smt. Thippamma D/o late Kumbara Thippaiah aged about 70 years,
2. Thippeswamy s/o late Kumbara Thippaiah, aged about 65 years,
3. Basavaraja s/o late Kumbara Thippaiah, aged about 62 years,
4. Thippeshi son of late Kumbara Thippaiah, aged about 60 years,
5. Shivarudramma D/o late Kumbara Thippaiah, aged about 58 years,
6. Smt. Jayamma D/o late Kumbara Thippaiah, aged about 56 years,
7. Sivanna son of late Kumbara Thippaiah, aged about 54 years,
8. Shekharappa son of late Kumbara Thippaiah, aged about 52 years,

All are Hindu, agriculturist, R/o Nelabommanahalli Village, in Kudligi Taluk, Vijayangara district .....Petitioner
And
The Tahasildar, Taluk Office, KUDLIGI .....Respondent

SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.

Whereas the above petitioners have instituted above petition to get the death certificate of her deceased father by Name late Kumbara Thippaiah s/o late Thippaiah was died on 21-06-2009 at Nelabommanahalli village in Kudligi Taluk and Vijayanagara District, On the file of the civil Judge & JMFC at Kudligi. The Tahasildar, Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 28-04-2026 at 11 A.M. and interested persons are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte.

Given under my hand and seal of this Hon'ble Court on 06-04-2026.

By Order of the court
Sd/- Chief Ministerial Officer
Civil Judge (J.D) Court at Kudligi
Sd/- Sri. M. Nagaraja, Advocate, Kudligi

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ, ತುಮಕೂರು.

ಕ್ರ.ಸಂ:ಕಾಇಂ:ಲೋಇವಿ:ತುಮ:ಕಿಇಂ-3:ಟೆಂಡರ್ 03/2026-27
ದಿನಾಂಕ : 06.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.03/2025-26 ದಿನಾಂಕ: 06.04.2026

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 03/2026-27 ದಿನಾಂಕ 06-04-2026 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 03 ಕಾಮಗಾರಿಗಳಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಟ ಮೊತ್ತ ರೂ:282.29 ಲಕ್ಷಗಳು ಮತ್ತು ಟೆಂಡರಿಗಿಟ್ಟ ಕನಿಷ್ಟ ಮೊತ್ತ ರೂ:199.38 ಲಕ್ಷಗಳು ಇ.ಎಂ.ಡಿ ಗರಿಷ್ಟ ಮೊತ್ತ ರೂ. 423445/- ಮತ್ತು ಇ.ಎಂ.ಡಿ ಕನಿಷ್ಟ ಮೊತ್ತ ರೂ. 299072/-, ಅರ್ಹ ಗುತ್ತಿಗೆದಾರರು 3ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 09 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 18-04-2026 ರ 17-30 ಗಂಟೆಗೆ, KPPP-Portal ಮೂಲಕ ಟೆಂಡರ್‌ಅನ್ನು ದಿನಾಂಕ 06-04-2026 ರಿಂದ 21-04-2026 ರ 16.00 ಗಂಟೆವರೆಗೆ ಪಡೆಯಬಹುದಾಗಿದೆ. ಟೆಂಡರ್‌ಅನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 21-04-2026 ರ 16-00 ಗಂಟೆವರೆಗೆ, ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 22-04-2026 ರ 16-30 ಗಂಟೆಗೆ, ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 23-04-2026ರ 17-00 ಗಂಟೆಗೆ. ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.
DIPR/TUM/12/KSMCA/2026-27

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಕೊಪ್ಪಳ.

ಸಂ:ಕಾನಿಇಂ:ಲೋಇ:ವಿಕೊ:ಟೆಂ:KW-1, 3 & 4:2026-27:63 ದಿನಾಂಕ : 07-04-2026.

ಅಲ್ಪಾವಧಿ ಟೆಂಡರ್ ಪ್ರಕಟಣೆ

2025-26ನೇ ಸಾಲಿನ ಲೆಕ್ಕ ಶೀರ್ಷಿಕೆ: 4059-80-051-0-60-132 ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ವೆಚ್ಚಗಳು ಯೋಜನೆ (ಸಿಎಂಐಡಿಪಿ) ಮತ್ತು 2216-07-053-00-01-200 (ಯೋಜನೇತರ) ಅಡಿಗಳಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000ರ ಪ್ರಕಾರ ಪಾರದರ್ಶಕತೆ ಆಕ್ಟ್ 2000ರ ನಿಯಮದಂತೆ, ಸ್ಟ್ಯಾಂಡರ್ಡ್ ಬಿಡ್ ಡಾಕೂಮೆಂಟ್ KW-1, 3 & 4ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿಪಿ ಪೋರ್ಟಲ್ **http://kppp.karnataka.gov.in** ಮುಖಾಂತರ ಭಾಗವಹಿಸಬಹುದು. ಒಟ್ಟು 3 ಕಾಮಗಾರಿಗಳಿಗೆ **(ವರ್ಕ ಇಂಡೆಂಟ್ ಸಂಖ್ಯೆ: 32306/ CALL-2, 32128 & 34079)** ಟೆಂಡರ್ ಸ್ವೀಕರಿಸುವ ಅಂತಿಮ **ದಿನಾಂಕ: 17-04-2026 ಸಮಯ 13.00 ಗಂಟೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 18-04-2026 ಸಮಯ 13.30 ಗಂಟೆ.** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 21-04-2026 ಸಮಯ 11.00 ಗಂಟೆ.** ಕನಿಷ್ಟ ಅಂದಾಜು ಮೊತ್ತ **ರೂ. 5.00** ಲಕ್ಷಗಳು ಹಾಗೂ ಗರಿಷ್ಟ ಅಂದಾಜು ಮೊತ್ತ **ರೂ. 480.00** ಲಕ್ಷಗಳು ಇರುತ್ತದೆ. ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ, ಟೆಂಡರ್ ಪ್ರೋಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರಿಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ, ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು ಕೆಲಸದ ವೇಳೆಯಲ್ಲಿ ಈ ಕಚೇರಿಯಿಂದ ಪಡೆಯಬಹುದು. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರು,
ಲೋ.ಇ ವಿಭಾಗ, ಕೊಪ್ಪಳ
ವಾ.ಸಾ.ಸಂ.ಇ/ಕೊಪ್ಪಳ/10/ದೇಶಪಾಂಡೆಪಬ್ಲಿಸಿಟಿ/2026-27

ನಗರಸಭಾ ಕಾರ್ಯಾಲಯ, ಪುತ್ತೂರು, ದ.ಕ

ಕಿಲ್ಲೆ ಮೈದಾನ ಹತ್ತಿರ, ಕೋರ್ಟ್ ರಸ್ತೆ, ಪುತ್ತೂರು, ದಕ್ಷಿಣ ಕನ್ನಡ-574201
ವೆಬ್‌ಸೈಟ್: www.puttururcity.mrc.gov.in ಇಮೇಲ್: co.puttur.cmc@gmail.com
ಪು.ನ.ಸ/ಎ.ನಿ/07/ತಾಂ.ವಿ.ಸಿ.ಆರ್/06/2026-27 ದಿನಾಂಕ: 06/04/2026

ಟೆಂಡರ್ ಪ್ರಕಟಣೆ

(ಕರ್ನಾಟಕ ಸರಕಾರದ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಪುತ್ತೂರು ನಗರಸಭೆ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸರಕಾರದ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮೂಲಕ kppp.karnataka.gov.in ನಿಯಮಗಳನ್ವಯ ಒಟ್ಟು: 1 ಕಾಮಗಾರಿಗೆ ಟೆಂಡರ್‌ನ್ನು ಆಹ್ವಾನಿಸಿದೆ. (1) Pre Bid Meeting ದಿನಾಂಕ: 13/04/2026 ಪೂರ್ವಾಹ್ನ: 11.30 ಗಂಟೆಗೆ ಸ್ಥಳ ನಗರಸಭೆ ಪುತ್ತೂರು ಕಿಲ್ಲೆ ಮೈದಾನ ಕೋರ್ಟು ರಸ್ತೆ ಪುತ್ತೂರು (2) Tender Queries/Clarifications ಕೊನೆಯ ದಿನಾಂಕ: 13/04/2026 ಪೂರ್ವಾಹ್ನ: 11.30 ಗಂಟೆ. (3) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ಸಮಯ: 21/04/2026 ಅಪರಾಹ್ನ: 5.30 ಗಂಟೆ. (4) ಸ್ವೀಕೃತವಾದ ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 23/04/2026 ಪೂರ್ವಾಹ್ನ: 11.00 ಗಂಟೆ. (5) ಸ್ವೀಕೃತವಾದ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 27/04/2026 ಪೂರ್ವಾಹ್ನ: 11.00 ಗಂಟೆ. (6) ಜಿ.ಎಸ್.ಟಿ ತೆರಿಗೆ ಪ್ರತ್ಯೇಕ ಪಾವತಿಸಲಾಗುವುದು. ಗುತ್ತಿಗೆದಾರರು ಟೆಂಡರ್ ಶೆಡ್ಯೂಲ್ ನಲ್ಲಿ GST ಯನ್ನು ಹೊರತುಪಡಿಸಿದ ದರವನ್ನು ನಮೂದಿಸುವುದು. (7) ದಿನಾಂಕಗಳಲ್ಲಿನ ಯಾವುದೇ ಬದಲಾವಣೆಗಳು ಅಥವಾ ಟೆಂಡರ್ ನಲ್ಲಿನ ತಿದ್ದುಪಡಿಯನ್ನು ಕೊರಿಜೆಂಡಮ್ /ಅಡೆಂಡಮ್ ಮೂಲಕ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ನಗರಸಭಾ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ಅಥವಾ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಮಾಹಿತಿಯನ್ನು ಪಡೆದುಕೊಳ್ಳುವುದು. ಯಾವುದೇ ತಿದ್ದುಪಡಿ ಮತ್ತು ಬದಲಾವಣೆ ಇದ್ದಲ್ಲಿ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್ ನಲ್ಲಿ ಪ್ರಕಟಿಸಲಾಗುವುದು.

(1) ಕಾಮಗಾರಿ ಹೆಸರು: ಪುತ್ತೂರು ನಗರಸಭಾ ವ್ಯಾಪ್ತಿಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಕೆರೆ ಅಭಿವೃದ್ಧಿ ಕಾಮಗಾರಿ. ಇಂಡೆಂಟ್ ನಂಬ್ರ: DMA/2025-26/OW/WORK_INDENT56287, ಟೆಂಡರ್ ಮೊತ್ತ ರೂ. 373.95 ಲಕ್ಷ.

ಸಹಿ/-, ಆಡಳಿತಾಧಿಕಾರಿಗಳು, ನಗರಸಭೆ ಪುತ್ತೂರು
ಸಹಿ/-, ಪೌರಾಯುಕ್ತರು, ನಗರಸಭೆ ಪುತ್ತೂರು
DIPR/DK/KSMCA/42/26-27 dt. 07.04.2026

ಪುರಸಭಾ ಕಾರ್ಯಾಲಯ, ಹೊಸದುರ್ಗ-577527

(ಜಿಲ್ಲೆ: ಚಿತ್ರದುರ್ಗ.)
ಫೋನ್ ನಂ. 08199-230221 E-mail:tmchosadurga@yahoo.com
Webist: hosadurgatown.gov.in
ಕ್ರಮಾಂಕ : ತಾ.ಶಾ/ಸಿಆರ್-08/2025-26/10/2 ದಿನಾಂಕ: 06.04.2026

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗೊಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ.)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ 2016 ಪ್ರಕಾರ ಹೊಸದುರ್ಗ ಪುರಸಭೆ ವ್ಯಾಪ್ತಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ ಅನುದಾನದಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ದಿನಾಂಕ 29.04.2026 ರ ಸಂಜೆ 5:30 ಗಂಟೆವರೆಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ನಲ್ಲಿ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದಾಗಿರುತ್ತದೆ. www.hosdurgatown.mrc.gov.in ಮತ್ತು https://kppp.karnataka.gov.in ಹಾಗೂ ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಹಾಕಲಾಗಿರುರುತ್ತದೆ. ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದು.

ಕಾಮಗಾರಿ ಹೆಸರು:- DMA/2025-26/OW/WORK_INDENT55438/Call-2
ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) (ಜಿ.ಎಸ್.ಟಿ. ಹೊರತು ಪಡಿಸಿ) 97,37,873-00 ಇ.ಎಂ.ಡಿ (ರೂ.ಗಳಲ್ಲಿ) 194760-00. ನಿಗಧಿಪಡಿಸಿದ ಕಾಲಾವಧಿ:- 9 Months (Including Monsoon season)

"ಷರತ್ತುಗಳು" 1. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ವಿಭಾಗದಲ್ಲಿ ಮಾಹಿತಿ ಪಡೆದುಕೊಳ್ಳಬಹುದಾಗಿದೆ ಮತ್ತು ಈ ಪುರಸಭೆಯ ಅಧಿಕೃತ ಅಂತರ್ಜಾಲ ತಾಣ http://www.hosadurgatown.mrc.gov.in ರ Tender ವಿಭಾಗದಲ್ಲೂ ಸಹ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿದೆ.

ಸಹಿ/- ಆಡಳಿತಾಧಿಕಾರಿಗಳು, ಪುರಸಭೆ, ಹೊಸದುರ್ಗ. ಹಾಗೂ ಉಪ ವಿಭಾಗಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ
ಸಹಿ/-ಮುಖ್ಯಾಧಿಕಾರಿಗಳು, ಪುರಸಭೆ, ಹೊಸದುರ್ಗ.
DIPR/CTA/KSMCA/12/2026-27

ಶ್ರೀ ಸುಬ್ರಹ್ಮಣ್ಯ ಮಠ ಎಜುಕೇಶನ್ ಸೊಸೈಟಿ (ರಿ.) ಸುಬ್ರಹ್ಮಣ್ಯ

ಶ್ರೀ ಗೋಪಾಲಕೃಷ್ಣ ಪ್ರೌಢಶಾಲೆ ಬಿಳಿನೆಲೆ, ಕಡಬ ತಾಲೂಕು, ದಕ್ಷಿಣ ಕನ್ನಡ -574230

ಬೇಕಾಗಿದ್ದಾರೆ

ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ, ಬೆಂಗಳೂರು ಇವರ ಆದೇಶ ಸಂಖ್ಯೆ: DPI.CPIO;C8(2)/FOV.18/E.1554165/ಖಾಹುಭ.ಅನು/60/2024-25 ದಿನಾಂಕ: 31-03-2026 ರ ಅನ್ವಯ ಸಂಸ್ಥೆಯ ಅಧೀನದಲ್ಲಿ ನಡೆಯುತ್ತಿರುವ ಶ್ರೀ ಗೋಪಾಲಕೃಷ್ಣ ಪ್ರೌಢಶಾಲೆ ಬಿಳಿನೆಲೆ, ಕಡಬ ತಾಲೂಕು, ದಕ್ಷಿಣ ಕನ್ನಡ ಇಲ್ಲಿ ಈ ಕೆಳಗೆ ಖಾಲಿ ಇರುವ ಅನುದಾನಿತ ಸಹಶಿಕ್ಷಕ ಹುದ್ದೆಯನ್ನು ಸರಕಾರದ ಆದೇಶ ಅನುಸಾರ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ವಿಷಯ	ಹುದ್ದೆ	ವಿದ್ಯಾರ್ಹತೆ	ಮೀಸಲಾತಿ
1	ಸಹ ಶಿಕ್ಷಕರು (ಪಿಸಿಎಂ)	01	ಬಿ.ಎಸ್ಸಿ, ಬಿ.ಎಡ್	ಅನ್ವಯಿಸುವುದಿಲ್ಲ

ಅರ್ಜಿ ಸಲ್ಲಿಸುವ ವಿಧಾನ: ಅರ್ಹ ಅಭ್ಯರ್ಥಿಗಳು ತಮ್ಮ ಸಂಪೂರ್ಣ ಸ್ವ ಕೈಬರಹದ ಅರ್ಜಿಯೊಂದಿಗೆ ತಮ್ಮ ಶೈಕ್ಷಣಿಕ ವಿದ್ಯಾರ್ಹತೆ, ಜಾತಿ ಪ್ರಮಾಣ ಪತ್ರ ಮತ್ತು ಸಂಬಂಧಪಟ್ಟ ಪ್ರಮಾಣ ಪತ್ರಗಳ ದೃಢೀಕರಿಸಿದ ನಕಲು ಪ್ರತಿಗಳೊಂದಿಗೆ ಈ ಪ್ರಕಟಣೆ ಪ್ರಕಟಗೊಂಡ **21 ದಿವಸದೊಳಗಾಗಿ** ಈ ಕೆಳಗಿನ ವಿಳಾಸಕ್ಕೆ ಅರ್ಜಿಯನ್ನು ಸಲ್ಲಿಸಬೇಕು ಮತ್ತು ಅರ್ಜಿಯ ಪ್ರತಿಯೊಂದನ್ನು ಅಗತ್ಯ ದಾಖಲೆಗಳೊಂದಿಗೆ **ಮಾನ್ಯ ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಮಂಗಳೂರು** ಇವರಿಗೆ ನಿಗದಿತ ಸಮಯದೊಳಗೆ ಕಳುಹಿಸಿಕೊಡಬೇಕು. ಅವಧಿ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸುವುದಿಲ್ಲ. ನಂತರ ನಿಯಮಾನುಸಾರ ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನ ದಿನಾಂಕ, ಸಮಯ ಹಾಗೂ ಸ್ಥಳ ವಿವರಗಳನ್ನು ತಿಳಿಸಲಾಗುವುದು.

ಅರ್ಜಿ ಸಲ್ಲಿಸುವ ವಿಳಾಸ: **ಅಧ್ಯಕ್ಷರು, ಶ್ರೀ ಸುಬ್ರಹ್ಮಣ್ಯ ಮಠ ಎಜುಕೇಶನ್ ಸೊಸೈಟಿ (ರಿ.) ಸುಬ್ರಹ್ಮಣ್ಯ, ಸುಬ್ರಹ್ಮಣ್ಯ ಗ್ರಾಮ ಮತ್ತು ಅಂಚೆ ಕಡಬ ತಾಲೂಕು,** ದಕ್ಷಿಣ ಕನ್ನಡ-574238.

ಸಹಿ/-ಅಧ್ಯಕ್ಷರು

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ, ಧಾರವಾಡ

ISO 14001-2015 CERTIFICATE NO: ICW-EMS-2024-515162
ಉಪ ಅರಣ್ಯ ಸಂರಕ್ಷಣಾಧಿಕಾರಿ, ಮತ್ತು ಪ್ರಾದೇಶಿಕ ವ್ಯವಸ್ಥಾಪಕರು,
ಅರಣ್ಯ ಸಂಕೀರ್ಣ ಕೆ.ಸಿ ಪಾರ್ಕ ಹತ್ತಿರ ಧಾರವಾಡ-580008
ದೂರವಾಣಿ/ಫ್ಯಾಕ್ಸ ನಂ : 0836-2440526.
E-mail Id : rmksficdwd@gmail.com
ಸಂಖ್ಯೆ: ಕರಾಅಕೈನಿ/ಪ್ರಾವ್ಯಧಾ/ಸಿಬ್ಬಂದಿ/ಹೊ.ಗು/ಇ-ಟೆಂಡರ್/11/2026-27
ದಿನಾಂಕ : 07.04.2026

ಇ-ಟೆಂಡರ್ ಪ್ರಕಟಣೆ

2026-27 ನೇ ಸಾಲಿಗಾಗಿ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ಪ್ರಾದೇಶಿಕ ಧಾರವಾಡ ಕಛೇರಿಗೆ ದಿನಾಂಕ : 31-03-2027 ರ ವರೆಗಿನ ಅವಧಿಗೆ ಈ ಕೆಳಕಂಡ ಸಿಬ್ಬಂದಿಯನ್ನು ಕಾಲಕಾಲಕ್ಕೆ ಪ್ರಧಾನ ಕಛೇರಿಯಿಂದ ಮಂಜೂರಾಗುವ ಶರತ್ತುಗಳಿಗೊಳಪಟ್ಟು ಹೊರಗುತ್ತಿಗೆ ಆಧಾರದ ಮೇಲೆ ಪೂರೈಕೆ ಮಾಡಲು ಆಸಕ್ತಿಯುಳ್ಳ ಅಧಿಕೃತ ಮಾನವ ಸಂಪನ್ಮೂಲ ಏಜೆನ್ಸಿಗಳಿಂದ ಇ-ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಛೇರಿಗೆ ಒದಗಿಸಬೇಕಾದ ಅಂದಾಜು ಹೊರಗುತ್ತಿಗೆ ನೌಕರರ ವಿವರ
1) ಲಿಪಿಕ ಸಹಾಯಕ (ಪದವೀಧರ) : 1 ಸಂಖ್ಯೆ
2) ಬೆರಳಚ್ಚುಗಾರ : 2 ಸಂಖ್ಯೆ
3) ವಾಹನ ಚಾಲಕ : 1 ಸಂಖ್ಯೆ
4) ಕಛೇರಿ ಸೇವಕ : 1 ಸಂಖ್ಯೆ
5) ರಾತ್ರಿ ಕಾವಲುಗಾರ (Security) : 4 ಸಂಖ್ಯೆ
6) ಲಾಗಿಂಗ್ ಸಹಾಯಕರು : 2 ಸಂಖ್ಯೆ (ಪ್ರಧಾನ ಕಛೇರಿಯ ಮಂಜೂರಾತಿ ಆದೇಶದ ಮೇರೆಗೆ ಕಾಲಕ್ಕನುಗುಣವಾಗಿ)

(1) ಟೆಂಡರ್ ನಮೂನೆ ದೊರಕುವ ಸ್ಥಳ : ಇ-ಪ್ರೋಕ್ಯುರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ : www.kppp.karnataka.gov.in (2) ಇ- ಟೆಂಡರ್‌ಗಳನ್ನು ಎರಡು ಲಕೋಟೆಯಲ್ಲಿ ತಾಂತ್ರಿಕ ಬಿಡ್ ಆರ್ಥಿಕ ಬಿಡ್‌ಗಳನ್ನು ಇ-ಪೋರ್ಟಲ್ ಮೂಲಕ ಸಲ್ಲಿಸತಕ್ಕದ್ದು. (3) ಇ.ಎಂ.ಡಿ. ಹಣ ರೂ. **50,000/-** ನ್ನು ಟೆಂಡರ್ ಪ್ರಕಟಣೆಯಲ್ಲಿ ತಿಳಿಸಿದಂತೆ ಇ-ಪ್ರೋಕ್ಯುರ್‌ಮೆಂಟ್ ಪೋರ್ಟಲ್ ಮೂಲಕ (ಅ) ಕ್ರೆಡಿಟ್ ಕಾರ್ಡ್, (ಬಿ) ಡೆಬಿಟ್ ಕಾರ್ಡ್, (ಸಿ) ನ್ಯಾಷನಲ್ ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್ (NEFT) ಮೂಲಕ. (4) ಟೆಂಡರ್ ಪ್ರಕಟಣೆಯನ್ನು ಇ-ಪೋರ್ಟಲ್‌ಗೆ ಅಫ್‌ಲೋಡ್ ಮಾಡುವ ದಿನಾಂಕ : **07.04.2026** (5) ಇ-ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : **20.04.2026** ಮತ್ತು ಸಮಯ : 05.00 PM ಘಂಟೆಗೆ. (6) ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : **21.04.2026** ರಂದು ಸಮಯ 11.00 AM

ಸದರಿ ಟೆಂಡರ್ ಕುರಿತು ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ ಕಛೇರಿಯ ಕೆಲಸದ ದಿನ ಕಛೇರಿಯ ಸಮಯದಲ್ಲಿ ಭೇಟಿ ನೀಡಿ ಪಡೆದುಕೊಳ್ಳಬಹುದು. (ದೂರವಾಣಿ ಸಂಖ್ಯೆ: **0836-2440526**)

ಸಹಿ/- (ಅಶೋಕ ಗೊಂಡೆ ಭಾ.ಅ.ಸೇ) ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಪ್ರಾದೇಶಿಕ ವ್ಯವಸ್ಥಾಪಕರು, ಕ.ರಾ.ಅ.ಕೈ.ನಿ.ನಿ. ಧಾರವಾಡ.
ವಾಸಾಸಂಇ/ಧಾ/ಕೆಎಸ್‌ಎಂಸಿಎ/28/2026-27

ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಚೇರಿ, ಉತ್ತರಹಳ್ಳಿ ಮತ್ತು ಅಂಜನಾಪುರ ವಿಭಾಗ, ಬೆಂಗಳೂರು ದಕ್ಷಿಣ ನಗರ ಪಾಲಿಕೆ, ಅಮೃತ್ ನಗರ-ಕೋಣನಕುಂಟೆ ಮುಖ್ಯ ರಸ್ತೆ, ಸೌದಾಮಿನಿ ಲೇಔಟ್, ಬೆಂಗಳೂರು-62.
ಸಂಖ್ಯೆ: ಕಾಪಾಅ/ಉಅವಿ/ಟೆಂಡರ/01/2026-27 ದಿನಾಂಕ:07-04-2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ದ್ವಿಲಕೋಟೆ ಟೆಂಡರ್)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಉತ್ತರಹಳ್ಳಿ ಮತ್ತು ಅಂಜನಾಪುರ ವಿಭಾಗ, ಬೆಂಗಳೂರು ದಕ್ಷಿಣ ನಗರ ಪಾಲಿಕೆ, ಬೆಂಗಳೂರು-62 ಇವರು ಆಯುಕ್ತರ ಪರವಾಗಿ ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಬೆಂಜಮಂ/ರೈಲ್ವೇಸ್/ಎಂ.ಇ.ಎಸ್/ ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1.	ಉತ್ತರಹಳ್ಳಿ ಉಪ ವಿಭಾಗದ ಯಾದಾಳಂನಗರ ಕಾಲೋನಿ, ವಸಂತಪುರ ಕಾಲೋನಿ (ಬ್ಲಾಕ್ 27_2) ಭುವನೇಶ್ವರಿನಗರ ಕಾಲೋನಿ, ವಡ್ಡರಪಾಳ್ಯ ಕಾಲೋನಿ, ಶ್ರೀನಿವಾಸ ಕಾಲೋನಿ, ಉತ್ತರಹಳ್ಳಿ ಕಾಲೋನಿ ಮತ್ತು ಚಿಕ್ಕಲ್ಲಸಂದ್ರ ಕಾಲೋನಿಗಳ ಪ.ಜಾ/ಪ.ಪಂ. ಫಲಾನುಭವಿ ಪ್ರದೇಶ ಮತ್ತು ಸಂಪರ್ಕಿತ ರಸ್ತೆಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (2ನೇ ಕರೆ) (ಸಾಮಾನ್ಯರಿಗೆ). **ಟೆಂಡರ್‌ಗಿಟ್ಟ ಅಂದಾಜು ಮೊತ್ತ: ₹.397.49 ಲಕ್ಷಗಳು,** ಇಎಂಡಿ: **₹.5,96,235.00**
2.	ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ, ವಾರ್ಡ್ ಸಂಖ್ಯೆ-51, ಸುಬ್ರಮಣ್ಯಪುರದ ಗುಬ್ಬಲಾಳ ಮತ್ತು ಸುತ್ತಮುತ್ತಲ ಪ್ರದೇಶಗಳು, ಜೆ.ಟಿ. ಬಡಾವಣೆ, ಶ್ರೀನಿವಾಸ ಕಾಲೋನಿ, ವಡ್ಡರಪಾಳ್ಯ ಗ್ರಾಮ, ಅರೇಹಳ್ಳಿ, ತುರಹಳ್ಳಿ ಬಸವಣ್ಣ ದೇವಸ್ಥಾನ ರಸ್ತೆಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (2ನೇ ಕರೆ) (ಸಾಮಾನ್ಯರಿಗೆ). **ಟೆಂಡರ್‌ಗಿಟ್ಟ ಅಂದಾಜು ಮೊತ್ತ: ₹.397.49 ಲಕ್ಷಗಳು,** ಇಎಂಡಿ: **₹.5,96,235.00**
3.	ದೊರೆಕೆರೆ ಕೆರೆ, ಉತ್ತರಹಳ್ಳಿ ಕೆರೆ ಮತ್ತು ದೇವರಕೆರೆ ಕೆರೆಗಳನ್ನು ವಾರ್ಷಿಕ ನಿರ್ವಹಣೆ ಮಾಡುವುದು. (2ನೇ ಕರೆ)(ಪರಿಶಿಷ್ಟ ಪಂಗಡ) **ಟೆಂಡರ್‌ಗಿಟ್ಟ ಅಂದಾಜು ಮೊತ್ತ: ₹.49.00 ಲಕ್ಷಗಳು,** ಇಎಂಡಿ: **₹.49000.00**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ದಿನಾಂಕ: **08-04-2026**ರಿಂದ (2) ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **15-04-2026**ರ ಸಂಜೆ **4:00** ಗಂಟೆಯವರೆಗೆ. (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **17-04-2026**ರ ಸಂಜೆ **4:30** ಗಂಟೆಯ ನಂತರ ತೆರೆಯಲಾಗುವುದು.

ಸಹಿ/-
ಕಾರ್ಯಪಾಲಕ ಅಭಿಯಂತರರು
ಉತ್ತರಹಳ್ಳಿ ಮತ್ತು ಅಂಜನಾಪುರ ವಿಭಾಗ

Shri Sangam Sahakari Sakkare Karkhane Nyt., HidkalDam - 591107

Tal: Hukkeri, Dist: Belgaum, Karnataka State
E-mail: sangamsugars@yahoo.com
Ref No: SSSSKN/Tender/2026-27/09 Date: 06-04-2026

TENDER NOTIFICATION FOR SALE OF
1) A, Grade Molasses of 2025-26 Season – 4730 MT.s

Interested parties may send their sealed offers.
Terms & Conditions:
- You have to pay non refundable Tender fee Rs. 2500.00.
- EMD @ 5% on quoted price to be submitted along with tender by DD in favour of Shri Sangam SSKN Hidakal Dam payable at HidakalDam/Hukkeri.
- Last date for receipt of tender is on or before 15-04-2026 till 11.00 AM. The date of negotiation will be communicated separately.
- The entire value of allotted quantity of Molasses should be remitted within 3 days from the date of acceptance tender.
- The quantity indicated is tentative; it may increase or decrease as the case may be.
- Karakhane reserves the right to accept or reject any tender without assigning any reason.

FOR DETAILS CONTACT:
Chairman: 9538589499, Managing Director: 8884012838
Chief Chemist: 9113529926, Sales: 6366226745

Sd/- Managing Director Sd/- Chairman

(ಕಂದಾಯ ಇಲಾಖೆ)
ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಯವರ ಕಾರ್ಯಾಲಯ

ಉಡುಪಿ ಜಿಲ್ಲೆ, "ರಜತಾದ್ರಿ" ಮಣಿಪಾಲ, ಉಡುಪಿ - 576104, Email: udupidc@gmail.com
ನಂ.ಇಎಸ್‌ಟಿ ಸಿಆರ್ 66/2026 ಇ-260791 ದಿನಾಂಕ : 06-04-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಉಡುಪಿ ಜಿಲ್ಲಾ ಕಂದಾಯ ಘಟಕಕ್ಕೆ ಬಾಹ್ಯ ಮೂಲದಿಂದ ಹೊರಗುತ್ತಿಗೆ ಆಧಾರದಲ್ಲಿ ಮಾನವ ಸಂಪನ್ಮೂಲ ಒದಗಿಸುವ ಬಗ್ಗೆ ಒಂದು ವರ್ಷದ ಅವಧಿಗೆ ಅಂಗೀಕೃತ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KTPP) ಆಕ್ಟ್-2000ರ ಪ್ರಕಾರ ಟೆಂಡರ್ ಅನ್ನು ಆಹ್ವಾನಿಸಿದೆ.

ಆಸಕ್ತ ಟೆಂಡರ್‌ದಾರರು ಅನುಬಂಧ 1 ರಲ್ಲಿ ಸೂಚಿಸಿರುವಂತೆ, ತಮ್ಮ ಅಲ್ಪಾವಧಿ ಟೆಂಡರ್ ಸೇವಾ ವೆಚ್ಚದ ಕುರಿತು ದರಗಳ ವಿವರಗಳನ್ನು ಇ-ಪ್ರೊಕೂರ್‌ಮೆಂಟ್ ಪೋರ್ಟಲ್ **(http://kppp.karnataka.gov.in)** ಮೂಲಕ ಸಲ್ಲಿಸಬಹುದಾಗಿರುತ್ತದೆ.

ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ: 08-04-2026 ರಿಂದ ದಿನಾಂಕ: 14-04-2026 ರ ಸಾಯಂಕಾಲ 5.00 ಘಂಟೆಯೊಳಗೆ ಟೆಂಡರನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ, ಜಿಲ್ಲಾಧಿಕಾರಿಗಳ ಕಛೇರಿ, ಉಡುಪಿಯ ಆಡಳಿತ ಶಾಖೆಯನ್ನು ಸಂಪರ್ಕಿಸಬಹುದು.

1) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ : 08-04-2026 ರಿಂದ 14-04-2026 ರ ಸಾಯಂಕಾಲ 5.00 ಘಂಟೆಯೊಳಗೆ ಟೆಂಡರನ್ನು ಸಲ್ಲಿಸುವುದು.
2) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 14-04-2026 ರ ಸಾಯಂಕಾಲ 5.00 ಘಂಟೆ
3) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 15-04-2026 ರಂದು ಅಪರಾಹ್ನ 3.00 ಗಂಟೆ
4) ಟೆಂಡರ್ ನ ಆರ್ಥಿಕ ಬಿಡ್ ತೆರೆಯುವ ದಿನಾಂಕ:17-04-2026 ರಂದು ಅಪರಾಹ್ನ 3.00 ಘಂಟೆ
5) ಇ.ಎಂ.ಡಿ. ಮೊತ್ತ ರೂ. 2,50,000.00

ಸಹಿ/- ಅಪರ ಜಿಲ್ಲಾಧಿಕಾರಿ ಉಡುಪಿ ಜಿಲ್ಲೆ, ಉಡುಪಿ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಧಾರವಾಡ

ಸ್ಥಾಪನೆ-1947
ಮುರುಘಾಮಠದ ಹತ್ತಿರ, ಸವದತ್ತಿ ರಸ್ತೆ, ಧಾರವಾಡ-580 008.
ಇ-ಮೇಲ್: apmcdharwad@rediffmail.com ದೂರವಾಣಿ: 0836-2448157, 2970324
ಸಂ:ಕೃಮಾಇ:ಕೃಉಮಾಸ(ಧಾ):07 :2026-27 ದಿನಾಂಕ: 06-04-2026

ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಧಾರವಾಡ ವತಿಯಿಂದ ಈ ಕೆಳಕಂಡಂತೆ **https://kppp.Karnataka.gov.in** ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **22/04/2026** ಆಗಿರುತ್ತದೆ. ಹೆಚ್ಚಿನ ನಿಯಮ ಹಾಗೂ ಮಾಹಿತಿಗಾಗಿ ಕರ್ನಾಟಕ ಸರ್ಕಾರದ **https://kppp.Karnataka.gov.in** ವೆಬ್‌ಸೈಟ್‌ನಲ್ಲಿ ಮತ್ತು ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಕ್ರ ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ / ದಿನಾಂಕ	ಇಂಡೆಂಟ್ ಸಂಖ್ಯೆ	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಜಿ.ಎಸ್.ಟಿ. ಹೊರತುಪಡಿಸಿ) (ರೂ.ಗಳಲ್ಲಿ)
1	ದಿನಾಂಕ: 25/03/2026 ರ ಕೃಉಮಾಸ(ಧಾ) :ಟೆಂ.ಪ್ರ; 954 : 2025-26	APMC/2025-26 / WO / WORK_INDENT_916 (ಸಾಮಾನ್ಯ ವರ್ಗ)	ರೂ. 54,13,212-00
2	ದಿನಾಂಕ: 25/03/2026 ರ ಕೃಉಮಾಸ(ಧಾ) :ಟೆಂ.ಪ್ರ; 953 : 2025-26	APMC/2025-26 / WO / WORK_INDENT_915 (ಸಾಮಾನ್ಯ ವರ್ಗ)	ರೂ. 9,16,488-00
3	ದಿನಾಂಕ: 25/03/2026 ರ ಕೃಉಮಾಸ(ಧಾ) : ಟೆಂ.ಪ್ರ; 952 : 2025-26	APMC/2025-26 / SE0835	ರೂ. 17,24,396-96

ಸಹಿ/- (ಎ. ಪಿ. ಪಾಟೀಲ) ಕಾರ್ಯದರ್ಶಿ(ಪ್ರ), ಕೃ. ಉ. ಮಾ. ಸ., ಧಾರವಾಡ
ಸಹಿ/- (ಕೆ. ಹೆಚ್. ಗುರುಪ್ರಸಾದ) ಆಡಳಿತಾಧಿಕಾರಿಗಳು ಕೃ. ಉ. ಮಾ. ಸ., ಧಾರವಾಡ
ವಾ.ಸಾ.ಇ./ಧಾರವಾಡ/31/2026-27/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿ
ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಜಿಲ್ಲೆ-591302
ಸಂಖ್ಯೆ. ಕನೀನಿನಿ/ಕಯೋವಿ/ಖಾ/ಪಬಿ/ಅ.ಟೆಂ.ಪ್ರ/2026-27/43-45 ದಿನಾಂಕ: 06.04.2026.

"ಅಲ್ಪಾವಧಿ ಶೇಕಡಾವಾರು ಟೆಂಡರ್ ಪ್ರಕಟಣೆ"
(ಕೆಪಿಪಿ-ಪೋರ್ಟಲ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಕಚೇರಿ ಅಡಿಯಲ್ಲಿ ಬರುವ ಈ ಕೆಳಗಿನ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ಗಳನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಕೆಪಿಪಿ-ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ.

ಕ್ರ ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗೆ ಇಟ್ಟ ಮೊತ್ತ ಜಿ.ಎಸ್.ಟಿ. ಹೊರತುಪಡಿಸಿ (ರೂ. ಲಕ್ಷಗಳಲ್ಲಿ)	ಅರ್ಹ ಗುತ್ತಿಗೆದಾರರ ದರ್ಜೆ
1	Improvements to road from Beejagarni village to Janewadi village in Belagavi Taluka. **(W.I. No. KNNL/2025-26/RD/WORK_INDENT4176/Call-2)**	338.81	ದರ್ಜೆ 2 ಮತ್ತು ಮೇಲ್ಪಟ್ಟು
2	Improvements to road from Belavatti village to Karle-Kawalewadi Main road in Belagavi Tulaka. **(W.I. No. KNNL/2025-26/RD/WORK_INDENT4177/Call-2)**	422.48	ದರ್ಜೆ 2 ಮತ್ತು ಮೇಲ್ಪಟ್ಟು
3	Improvements to road from Kudaremani Village main road to Shinoli-Surute main road and Shinoli-Surute main road Sonoli Village limits in Belagavi Taluka. **(W.I. No. KNNL/2025-26/RD/WORK_INDENT4178/ Call-2)**	338.84	ದರ್ಜೆ 2 ಮತ್ತು ಮೇಲ್ಪಟ್ಟು

https://kppp.karnataka.gov.in ನಲ್ಲಿ ಅರ್ಜಿ ಡೌನಲೋಡ ಮಾಡಿಕೊಳ್ಳಬಹುದು/ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 15.04.2026**ರಂದು **ಸಂಜೆ 4.00 ಗಂಟೆ** ವರೆಗೆ ಸಲ್ಲಿಸಬಹುದು. ಪ್ರಿ-ಬಿಡ್ ಸಭೆಯನ್ನು **ದಿನಾಂಕ: 10.04.2026**ರಂದು **ಮುಂಜಾನೆ 11.00 ಗಂಟೆಗೆ** ಕಾರ್ಯನಿರ್ವಾಹಕ ಇಂಜಿನೀಯರ, ಕನೀನಿನಿ, ಕಳಸಾ ಯೋಜನಾ ವಿಭಾಗ, ಖಾನಾಪೂರ ಕಚೇರಿಯಲ್ಲಿ ಆಯೋಜಿಸಲಾಗಿದೆ. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 16.04.2026 ಸಂಜೆ** 4.30 ಗಂಟೆಗೆ. ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ್ ಷರತ್ತುಗಳು ಹಾಗೂ ಇತರೆ ವಿವರಗಳನ್ನು **ಕೆಪಿಪಿ-ಪೋರ್ಟಲ್** ಮುಖಾಂತರ **https://kppp.karnataka.gov.in** ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: **08336-222163** ಸಂಪರ್ಕಿಸುವದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರ
ಕನೀನಿನಿ, ಕಳಸಾ ಯೋಜನೆ ವಿಭಾಗ,
ಖಾನಾಪೂರ, ಬೆಳಗಾವಿ
ವಾ.ಸಾ.ಇ./ಬೆಳಗಾವಿ/52/2026-27/ದೇಶಪಾಂಡೆಪಬ್ಲಿಸಿಟಿ

CHANGE OF SURNAME

I, **CHANDRASHEKHAR LAXMAN BARMANNGOL, (Old Name)** R/o Nedoni Taluk, Bableshwar, Dist : Vijayapura, Karnataka have changed my name as **CHANDRASHEKHAR LAXMAN MALI (New Name)** Vide Affidavit Sworn Before Notary A.M.Jakanur on 07-04-2026

ಜಿ & ಡಬ್ಲು ನಂ: 10/2026

ಮಾನ್ಯ ಹಿರಿಯ ಶ್ರೇಣಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಕುಂದಗೋಳ ಇವರ ನ್ಯಾಯಾಲಯದಲ್ಲಿ.

ಅರ್ಜಿದಾರರು : 1] ಕುಮಾರ ರುದ್ರಯ್ಯ ತಂದೆ ನಿರಂಜನಯ್ಯ ಮಣಕಟ್ಟಿಮಠ ವಯಸ್ಸು 15 ವರ್ಷ, ಉದ್ಯೋಗ॥ ವಿದ್ಯಾರ್ಥಿ, ಸಾಕಿನ॥ ನೆಹರೂ ನಗರ, ಕುಂದಗೋಳ, ತಾಲೂಕ॥ ಕುಂದಗೋಳ ಜಿಲ್ಲಾ॥ ಧಾರವಾಡ,
2] ಕುಮಾರ ಬಸಯ್ಯ ತಂದೆ ನಿರಂಜನಯ್ಯ ಮಣಕಟ್ಟಿಮಠ ವಯಸ್ಸು 11 ವರ್ಷ, ಉದ್ಯೋಗ॥ ವಿದ್ಯಾರ್ಥಿ, ಸಾಕಿನ॥ ನೆಹರೂ ನಗರ ಕುಂದಗೋಳ, ತಾಲೂಕ॥ ಕುಂದಗೋಳ ಜಿಲ್ಲಾ॥ ಧಾರವಾಡ,
3] ಶ್ರೀ ನಿರಂಜನಯ್ಯ ತಂದೆ ರುದ್ರಯ್ಯ ಮಣಕಟ್ಟಿಮಠ ವಯಸ್ಸು॥ 45 ವರ್ಷ, ಉದ್ಯೋಗ॥ ಶೇತ್ಕಿ ಸಾಕಿನ॥ ನೆಹರೂ ನಗರ ಕುಂದಗೋಳ, ತಾಲೂಕ॥ ಕುಂದಗೋಳ ಜಿಲ್ಲಾ॥ ಧಾರವಾಡ.
[1 ಮತ್ತು 2ನೇ ಅರ್ಜಿದಾರರು ಅಲ್ಪವಯಿ ಇದ್ದು 1 ಮತ್ತು 2ನೇ ಅರ್ಜಿದಾರರ ತಂದೆ ಮತ್ತು ಪಾಲಕ 3ನೇ ಅರ್ಜಿದಾರನು 1 ಮತ್ತು 2ನೇ ಅರ್ಜಿದಾರರನ್ನು ಪ್ರತಿನಿಧಿಸಿ ಸಹಿ ಮಾಡಿದ್ದು ಇರುತ್ತದೆ.]
4] ಶ್ರೀಮತಿ ವಿದ್ಯಾ ಕೋಂ. ನಿರಂಜನಯ್ಯ ಮಣಕಟ್ಟಿಮಠ ವಯಸ್ಸು॥ 35ವರ್ಷ, ಉದ್ಯೋಗ॥ ಮನೆಗೆಲಸ, ಸಾಕಿನ॥ ನೆಹರೂ ನಗರ, ಕುಂದಗೋಳ, ತಾಲೂಕ॥ ಕುಂದಗೋಳ ಜಿಲ್ಲಾ॥ ಧಾರವಾಡ.

ವಿರುದ್ಧ

ಎದುರುಗಾರರು : ಯಾರು ಇಲ್ಲ.

ಸಾರ್ವಜನಿಕ ನೋಟೀಸು

ಮೇಲ್ಕಂಡ ಪ್ರಕರಣದಲ್ಲಿ ಮೇಲ್ಕಂಡ ಅರ್ಜಿದಾರರು ಧಾರವಾಡ ಜಿಲ್ಲಾ ಕುಂದಗೋಳ ತಾಲೂಕ ಕುಂದಗೋಳ ಗ್ರಾಮದ ಹದ್ದಿನಲ್ಲಿ ಬರುವ ರಿ.ಸ.ನಂ: 455/4 ಕ್ಷೇತ್ರ 02 ಎಕರೆ 02 ಗುಂಟೆ ಆಕರ 06 ರೂಪಾಯಿ 34 ಪೈಸೆ ಜಮೀನನ್ನು ಅಲ್ಪವಯ 1 ಮತ್ತು 2ನೇ ಅರ್ಜಿದಾರರ ಪರವಾಗಿ ಮಾರಾಟ ಮಾಡಲು ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದು ಇರುತ್ತದೆ. ಸದರಿ 1 ಮತ್ತು 2ನೇ ಅರ್ಜಿದಾರರ ಅ.ಸ.ದಾರ ಅಂತಾ 3ನೇ ಅರ್ಜಿದಾರನನ್ನು ನೇಮಿಸುವ ಕುರಿತು ಅನುಮತಿಗೆ ಯಾವದೇ ವ್ಯಕ್ತಿಯ ತಕರಾರು ಇದ್ದಲ್ಲಿ ಮೇಲ್ಕಂಡ ಪ್ರಕರಣವು ದಿನಾಂಕ: 30-04-2026 ರಂದು ಮುಂಜಾನೆ 10.30 ಗಂಟೆಗೆ ಸದರಿ ಪ್ರಕರಣದ ವಿಚಾರಣೆಗಾಗಿ ಮಾನ್ಯ ಹಿರಿಯ ಶ್ರೇಣಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಕುಂದಗೋಳ ಸಾ॥ ತಾ॥ ಕುಂದಗೋಳ ನಿಯಮಿಸಿದ್ದು ಇರುತ್ತದೆ ತಮ್ಮದೇನಾದರೂ ತಕರಾರುಗಳು ಇದ್ದರೆ ಅವುಗಳನ್ನು ಸಲ್ಲಿಸಬೇಕು. ತಪ್ಪಿದಲ್ಲಿ ಸೂಕ್ತ ಆದೇಶ ಹೊರಡಿಸಲಾಗುವದು.

ಈ ಹೊತ್ತು ದಿ: 07/04/2026 ರಂದು ನಮ್ಮ ಸಹಿ ಮಾಡಿ ಕೋರ್ಟಿನ ಮೋಹರು ಹಾಕಿ ಕೊಡಲ್ಪಟ್ಟಿತು.

ಕೋರ್ಟಿನ ಆಜ್ಞೆಯ ಮೇರೆಗೆ
ಸಹಿ/- ಶಿರಸ್ತೆದಾರ
ಮಾನ್ಯ ಹಿರಿಯ ಶ್ರೇಣಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಕುಂದಗೋಳ
ಸಹಿ/- ಯು.ಸಿ.ಪಾಟೀಲ
ಅರ್ಜಿದಾರ ಪರ ವಕೀಲರು

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ, ಗದಗ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಗದಗ.

NATIONAL HEALTH MISSION
ದೂರವಾಣಿ ಸಂ: 08372-233996, 231744, ಫ್ಯಾಕ್ಸ್ ಸಂ: 08372-239597
ಮೇಲ್: gadagdfwo@gmail.com
ಕ್ರಸಂ /ಜಿಆಕುಕಅಸ/ಜಿಗುಭಘ/ BMW- ಟೆಂಡರ್‌ಪ್ರಕಟಣೆ/ 14/2026-27
ದಿನಾಂಕ: 06.04.2026

ಟೆಂಡರ್ ಪ್ರಕಟಣೆ

2026-27 ನೇ ಸಾಲಿಗೆ ಎನ್.ಹೆಚ್.ಎಂ ಯೋಜನೆಯ ಜೀವ ವೈದ್ಯಕೀಯ ತ್ಯಾಜ್ಯ ನಿರ್ವಹಣಾ ಕಾರ್ಯಕ್ರಮದಡಿಯಲ್ಲಿ ಗದಗ ಜಿಲ್ಲೆಯಲ್ಲಿ **191** ಆರೋಗ್ಯ ಕೇಂದ್ರಗಳ (THs/CHCs/PHCs/UPHCs /Namma Clinics/SC-AAMs) ಜೀವ ವೈದ್ಯಕೀಯ ತ್ಯಾಜ್ಯ ನಿರ್ವಹಣಾ ಸೇವೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ, ಟೆಂಡರ್ ಅಂದಾಜು ಮೊತ್ತ **ರೂ. 26.74/- ಲಕ್ಷ**ಗಳು ಇ.ಎಮ್.ಡಿ ಮೊತ್ತ **ರೂ. 53488/-** ಟೆಂಡರ್ ಸಲ್ಲಿಸಲು ಪ್ರಾರಂಭ ಮತ್ತು ಕೊನೆ ದಿನಾಂಕ: **06/04/2026** ರಿಂದ ಪ್ರಾರಂಭ ಹಾಗೂ **21/04/2026** ರಂದು ಸಂಜೆ **04:00** ಗಂಟೆಗೆ ವರೆಗೆ, ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in/** ಮೂಲಕ **Tender Reference Number : _DHFWS/2026-27/SE2137** ಸಂಖ್ಯೆಯನ್ನು ಬಳಸಿಕೊಂಡು ಪರಿಶೀಲಿಸಬಹುದಾಗಿದೆ ಅಥವಾ **gadagdfwo@gmail.com/ dhogadag@gmail.com** ಸಂಪರ್ಕಿಸಬಹುದಾಗಿದೆ.

ವಂದನೆಗಳೊಂದಿಗೆ,
ಸಹಿ/-
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಗದಗ
ವಾ.ಸಾ.ಇ./ಗದಗ/10/2026-27/ದೇಶಪಾಂಡೆಪಬ್ಲಿಸಿಟಿ

ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ.

ಸರ್ಕಾರಿ ತಾಂತ್ರಿಕ ಮಹಾವಿದ್ಯಾಲಯದ ಆವರಣ, ತಳಕಲ್ - 583231.
ಕೊಪ್ಪಳ ಜಿಲ್ಲೆ, ಕರ್ನಾಟಕ, ಮೊಬೈಲ್ : +91 94486 87862
ಇ-ಮೇಲ್ : re.koppaluniversity@gmail.com
ವೆಬ್‌ಸೈಟ್ : www.koppaluniversity.ac.in
ಸಂಖ್ಯೆ : ಕೊ.ವಿ.ವಿ./ಪರೀಕ್ಷಾಂಗ ವಿಭಾಗ/ಟೆಂಡರ್/2026-27/02
ದಿನಾಂಕ : 07-04-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

2026-27 ಮತ್ತು 2027-28 ನೇ ಶೈಕ್ಷಣಿಕ ಸಾಲಿಗೆ ಕೊಪ್ಪಳ ವಿಶ್ವ ವಿದ್ಯಾಲಯ ಕೊಪ್ಪಳದ ಪರೀಕ್ಷಾ ವಿಭಾಗಕ್ಕೆ ಬೇಕಾಗಿರುವ ಬಾಡಿಗೆ ವಾಹನಗಳ ಸೇವೆಯನ್ನು ಪಡೆಯುವ ನಿಮಿತ್ತ ಅರ್ಹರಾದ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

1) ಕೆಲಸದ ಹೆಸರು : 2026-27 ಮತ್ತು 2027-28 ನೇ ಶೈಕ್ಷಣಿಕ ಸಾಲಿಗೆ ಕೊಪ್ಪಳ ವಿಶ್ವವಿದ್ಯಾಲಯ ಕೊಪ್ಪಳದ ಪರೀಕ್ಷಾ ವಿಭಾಗಕ್ಕೆ ಬೇಕಾಗಿರುವ ಬಾಡಿಗೆ ವಾಹನಗಳ ಸೇವೆಯನ್ನು ಪಡೆಯುವ ಕುರಿತು. ಕೆಲಸದ ಅಂದಾಜು ಮೊತ್ತ ರೂ. ಗಳಲ್ಲಿ : 40,00,000/-, ಇ.ಎಂ.ಡಿ. (ರೂ. ಗಳಲ್ಲಿ) : 1,00,000/-, ಟೆಂಡರ್ ಪಕ್ರಿಯೆ ಶುಲ್ಕ (ರೂ. ಗಳಲ್ಲಿ) : ಇ-ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ, ಕೆಲಸ ಪೂರ್ಣಗೊಳಿಸಲು ನಿಗಧಿಪಡಿಸಿದ ಅವಧಿ : 15 ದಿನಗಳೊಳಗೆ.

ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ ಸ್ವೀಕರಿಸಲಾಗುವುದು, **http://kppp.karnataka.gov.in** ಪ್ರಕಟಣೆಗೆ ಸಂಬಂಧಿಸಿದಂತೆ **ಹೆಚ್ಚಿನ ಮಾಹಿತಿಯನ್ನು ದಿನಾಂಕ : 08-04-2026 ರ ಸಂಜೆ 5.00 ಗಂಟೆಯವರೆಗೆ ವೆಬ್‌ಸೈಟ್‌ನಲ್ಲಿ ಹಾಗೂ ಇತರೆ ಮಾಹಿತಿ ಯನ್ನು ಪಡೆಯಬಹುದು.**

ಸಹಿ/- ಕುಲಸಚಿವರು (ಮೌಲ್ಯಮಾಪನ),
ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/12/ಮೇಸಹಾಲ್/2026-27

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಹಳಿಯಾಳ ವಿಭಾಗ (ಉ.ಕ)

ಇ-ಮೇಲ್: midhly@yahoo.co.in ಫೋ.ನಂ: 08284-220113
ನಂ:ಕಾನಿಅ/ಸನೀಇಹ/ತಾವಿ/ಟೆಂಡರ್/Consultancy Services/2026-27/09 ದಿನಾಂಕ: 04/04/2026

ಟೆಂಡರ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್)

2022-23ನೇ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಖಾರಲ್ಯಾಂಡ ಯೋಜನೆಯ ನಿರ್ಮಾಣ/ಪುನರುಜ್ಜೀವನಕ್ಕಾಗಿ ಅನುಮೋದನೆಗೊಂಡ ಕಾಮಗಾರಿಗಳನ್ನು ವ್ಯವಸ್ಥಿತವಾಗಿ ಅನುಷ್ಠಾನಗೊಳಿಸಲು ಯೋಜನಾ ನಿರ್ವಹಣೆ, ನಿರ್ಮಾಣ ಉಸ್ತುವಾರಿ ಹಾಗೂ ಗುಣನಿಯಂತ್ರಣ ಪರೀಕ್ಷೆಗಳನ್ನು ಕೈಗೊಳ್ಳಲು ಅನುಕೂಲವಾಗುವ ಉದ್ದೇಶದಿಂದ ಸಮಾಲೋಚಕರನ್ನು ನೇಮಿಸಿಕೊಳ್ಳಲು (Consultancy Services) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದನ್ವಯ ಸ್ಟಾಂಡರ್ಡ್ ಕನ್ಸಲ್‌ಟೆನ್ಸಿ ಡಾಕ್ಯೂಮೆಂಟ್ (KC-6) ಕಲಂನನ್ವಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರುಗಳನ್ನು "ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ಸ" ಅಂತರ್ಜಾಲದ ವೆಬ್‌ಸೈಟ್ (ದ್ವಿ-ಲಕೋಟೆ) ಪದ್ಧತಿಯ ಮುಖಾಂತರ ಟೆಂಡರ ಕರೆಯಲಾಗಿದೆ.

(1) ಇಂಟೆಂಡ್ ನಂ: MI/2026-27/SE0534 (2) ಇಂಟೆಂಡ್ ನಂ: MI/2026-27/SE0535 (3) ಇಂಟೆಂಡ್ ನಂ: MI/2026-27/SE0536 (4) ಇಂಟೆಂಡ್ ನಂ: MI/2026-27/SE0537 (5) ಇಂಟೆಂಡ್ ನಂ: MI/2026-27/SE0538

ಖಾಲಿ ಟೆಂಡರ ಫಾರಂಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ ವೆಬಸೈಟ್ ವಿಳಾಸ: "https://kppp.karnataka.gov.in" ದಲ್ಲಿ ದಿನಾಂಕ: 08-04-2026 ರ ನಂತರದಿಂದ ಡೌನಲೋಡ್ ಮಾಡಿಕೊಳ್ಳುವುದು. ಟೆಂಡರ್ ಕುರಿತಂತೆ ದಿನಾಂಕ: 21-04-2026 ರೊಳಗಾಗಿ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕಚೇರಿ ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ. ಟೆಂಡರಗಳನ್ನು ದಿನಾಂಕ: 22-04-2026 ರ ಸಾಯಂಕಾಲ 05.15 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಗಳ ತಾಂತ್ರಿಕ ಬಿಡ್‌ನ್ನು ದಿನಾಂಕ: 23-04-2026 ಸಾಯಂಕಾಲ 05.30 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್‌ನ ಅನುಮೋದನೆ ನಂತರ ತೆರೆಯಲಾಗುವುದು.

ಕಾಮಗಾರಿಗಳ ಟೆಂಡರನ್ನು ಒಪ್ಪಿಕೊಳ್ಳುವ ಕನಿಷ್ಟ ಅರ್ಹತಾ ಮಾನದಂಡಗಳನ್ನು ಕೆ.ಡಬ್ಲ್ಯೂ ಬಿಡ್ ಡಾಕ್ಯುಮೆಂಟ್ ರಲ್ಲಿರುವಂತೆ ಪರಿಗಣಿಸಲಾಗುವುದು ಹಾಗೂ ವೆಬ್‌ಸೈಟನಲ್ಲಿರುವ ವಿವರಗಳೇ ಅಂತಿಮ.

ವಿ.ಸೂ: ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/-, (ಎಂ. ನಾಗರಾಜ)
ಕಾರ್ಯನಿರ್ವಾಹಕ ಅಭಿಯಂತರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಹಳಿಯಾಳ ವಿಭಾಗ (ಉ.ಕ)
DIPR/KWR/KSMCA/27/26-27 Dt.-07.04.2026

ಕಿರುಸುದ್ದಿ

ಆರೆಂಜ್ ಕ್ಯಾಪ್	ಪರ್ಪಲ್ ಕ್ಯಾಪ್
ರಿಜ್ವಿ (ದಿಲ್ಲಿ ಕ್ಯಾಪಿಟಲ್)	ರವಿ ಬಿಷ್ಣೋಯ್ (ರಾಜಸ್ಥಾನ)
160 ರನ್	5 ವಿಕೆಟ್

ಜೈಲಿಗೆ ಡೆವಿಡ್ ವಾರ್ನರ್!

ಸಿಡ್ನಿ(ಆಸ್ಟ್ರೇಲಿಯಾ): ಆಸ್ಟ್ರೇಲಿಯಾ ತಂಡದ ದಿಗ್ಗಜ ಆಟಗಾರ ಡೆವಿಡ್ ವಾರ್ನರ್ ಪಾನಮತ್ತ ಚಾಲನೆ ಮಾಡಿರುವ ಆರೋಪದಲ್ಲಿ ಜೈಲು ಪಾಲಾಗಿದ್ದಾರೆ. ಪಾಕಿಸ್ತಾನದಲ್ಲಿ ನಡೆಯುತ್ತಿರುವ ಪಿಎಸ್ಎಲ್‌ನಲ್ಲಿ ಕರಾಚಿ ತಂಡದ ಭಾಗವಾಗಿರುವ ವಾರ್ನರ್ ಆಸ್ಟ್ರೇಲಿಯಾದ ಸಿಡ್ನಿಯಲ್ಲೇ ಜೈಲು ಪಾಲಾಗಿದ್ದಾರೆ. ಮಾರೌಬ್ರಾದಲ್ಲಿ ತಮ್ಮ ವಾಹನದಲ್ಲಿ ಹೊರಟಿದ್ದ ವಾರ್ನರ್ ಅವರನ್ನು ಪೊಲೀಸರು ಪರಿಶೀಲಿಸಿದ್ದಾರೆ. ಮಶೀನಿನಲ್ಲಿ ಅವರು ಮದ್ಯಪಾನ ಸೇವನೆ ಮಾಡಿ ಚಾಲನೆ ಮಾಡುತ್ತಿರುವುದು ಗೊತ್ತಾಗಿದೆ. ಸ್ಥಳೀಯ ನ್ಯೂ ಸೌಥ್ ವೇಲ್ಸ್ ಪೊಲೀಸ್ ನಿಲ್ದಾಣಕ್ಕೆ ಅವರನ್ನು ಕೊಂಡೊಯ್ಯಲಾಗಿತ್ತು ಎಂದು ವರದಿಯಾಗಿದೆ. ಪಾನಮತ್ತ ಚಾಲನೆ ಮಾಡಿರುವ ಬಗ್ಗೆ ರಕ್ತ ತಪಾಸಣೆ ಮಾಡಿದಾಗ 0.104 ದಾಟಿದೆ. ಇದು ಆಸ್ಟ್ರೇಲಿಯಾ ಮಾನದಂಡದ ಬಹುತೇಕ ದ್ವಿಗುಣವಾಗಿದೆ. ಕೇಸು ದಾಖಲಿಸಿದ್ದಲ್ಲದೆ ಮುಂದಿನ ತಿಂಗಳು ನ್ಯಾಯಾಲಯಕ್ಕೆ ಹಾಜರಾಗಲು ಸೂಚಿಸಲಾಗಿದೆ.

ಕುಸ್ತಿ: ಭಾರತ ಮೂಲದ ಇಬ್ಬರಿಗೆ ಪದಕ

ಹೊಸದಿಲ್ಲಿ: ಕಿರ್ಗಿಸ್ತಾನ್‌ನ ಬಿಷ್ಕೆಕ್‌ನಲ್ಲಿ ನಡೆದ ಏಷ್ಯನ್ ಕುಸ್ತಿ ಚಾಂಪಿಯನ್‌ಶಿಪ್‌ನಲ್ಲಿ ಭಾರತೀಯ ಗ್ರೀಕೋ ರೋಮನ್ ಕುಸ್ತಿಪಟುಗಳು ಎರಡು ಪದಕಗಳನ್ನು ಗೆದ್ದು ಮತ್ತೊಂದು ಪದಕವನ್ನು ಖಚಿತಪಡಿಸಿದರು. ಲಲಿತ್ 55 ಕೆಜಿ ಫೈನಲ್‌ನಲ್ಲಿ ಉಜ್ಬೇಕಿಸ್ತಾನದ ಇಖ್ತಿಯೋರ್ ಬೊಟಿರೋವ್ ವಿರುದ್ಧ 0–9 ಅಂತರದಿಂದ ಸೋತು ಬೆಳ್ಳಿಗೆ ತೃಪ್ತಿಪಟ್ಟರೆ, ಅನುಭವಿ ಸುನಿಲ್ ಕುಮಾರ್ 87 ಕೆಜಿ ಕಂಚಿನ ಪದಕದ ಪಂದ್ಯದಲ್ಲಿ ಮತ್ತೊಬ್ಬ ಉಜ್ಬೇಕಿಸ್ತಾನದ ಮುಖಮ್ಮದ್ಕೋದಿರ್ ರಸುಲೋವ್ ಅವರನ್ನು 5–4 ಅಂತರದಿಂದ ಸೋಲಿಸಿ ಕಂಚು ಗೆದ್ದರು. ನಿತೇಶ್ 97 ಕೆಜಿ ಫೈನಲ್‌ಗೆ ಪ್ರವೇಶಿಸಿ ಭಾರತಕ್ಕೆ ಮತ್ತೊಂದು ಪದಕವನ್ನು ಖಚಿತಪಡಿಸಿದರು. ಕ್ವಾರ್ಟರ್ ಫೈನಲ್‌ನಲ್ಲಿ ಕಿರ್ಗಿಸ್ತಾನ್‌ನ ಮೆಲಿಸ್ ಐಟ್ಬೆಕೊವ್ ಅವರನ್ನು 8–0 ಅಂತರದಿಂದ ಮತ್ತು ಸೆಮಿಫೈನಲ್‌ನಲ್ಲಿ ಚೀನಾದ ಜೆಗಾಂಗ್ ವಾಂಗ್ ಅವರನ್ನು 7–2 ಅಂತರದಿಂದ ಸೋಲಿಸಿದ ಭಾರತೀಯ ಕುಸ್ತಿಪಟು ಚಿನ್ನದ ಪದಕ ಸ್ಪರ್ಧೆಯಲ್ಲಿ ಇರಾನ್‌ನ ಅಬ್ದುಲ್ಲಾ ಸರವಿ ಅವರನ್ನು ಎದುರಿಸಲಿದ್ದಾರೆ. ಅಮಾನ್ (77 ಕೆಜಿ) ಕಂಚಿನ ಪದಕಕ್ಕಾಗಿ ನಡೆದ ಮತ್ತೊಂದು ಹೋರಾಟದಲ್ಲಿ ಕೊರಿಯಾದ ಯೆಯೊಂಗ್‌ಹುನ್ ನೋಹ್ ವಿರುದ್ಧ 14–15 ಅಂತರದಿಂದ ಸೋತರು. ಪ್ರಿನ್ಸ್ (82 ಕೆಜಿ) ಕಂಚಿನ ಪದಕದ ಪಂದ್ಯವನ್ನು ತಲುಪಿ ತನ್ನ ಭರವಸೆಯನ್ನು ಜೀವಂತವಾಗಿರಿಸಿಕೊಂಡರು.

ಮುಂದಿನ ವಾರ ಅರ್ಜೆಂಟಿನಾ ಪ್ರವಾಸ

ಹೊಸದಿಲ್ಲಿ: ಭಾರತೀಯ ಮಹಿಳಾ ಹಾಕಿ ತಂಡವು ಮುಂದಿನ ವಾರ ನಾಲ್ಕು ಪಂದ್ಯಗಳಿಗಾಗಿ ಅರ್ಜೆಂಟಿನಾಗೆ ಪ್ರವಾಸ ಮಾಡಲಿದೆ. ಬೀನೋಸ್ ಏರಿಸ್‌ನ ಸೆನಾಡ್‌ನಲ್ಲಿ ಏಪ್ರಿಲ್ 13ರಿಂದ17ರ ವರೆಗೆ ನಾಲ್ಕು ಪಂದ್ಯಗಳು ನಡೆಯಲಿವೆ ಎಂದು ಸಂಸ್ಥೆ ತಿಳಿಸಿದೆ. ಕಳೆದ ಎಫ್ಐಎಚ್ ಪ್ರೋ ಲೀಗ್ ಪಂದ್ಯಾವಳಿಯ ಪಂದ್ಯದಲ್ಲಿ 2–2 ಡ್ರಾ ನಂತರ ಶೂಟೌಟ್‌ನಲ್ಲಿ ಮುಕ್ತಾಯಗೊಂಡ ನಂತರ ಮೊದಲ ಬಾರಿಗೆ ಉಭಯ ತಂಡಗಳು ಮುಖಾಮುಖಿಯಾಗಲಿದ್ದು, ಎಲ್ಲಾ ಪಂದ್ಯಗಳು ಬೆಳಗ್ಗೆ 11ಕ್ಕೆ ಶುರುವಾಗಲಿವೆ.

ವರ್ಷದಲ್ಲಿ ನಡೆಯಲಿರುವ ಎಫ್ಐಎಚ್ ವಿಶ್ವಕಪ್ ಪಂದ್ಯಾವಳಿಯ ತಯಾರಿಗಾಗಿ ಇದು ಪ್ರಮುಖ ಪಾತ್ರ ವಹಿಸಲಿದೆ. ಭಾರತ ಮಹಿಳಾ ತಂಡವು ಏಷ್ಯನ್ ಗೇಮ್ಸ್‌ನಲ್ಲೂ ಆಡಬೇಕಿರುವುದರಿಂದ ಇಲ್ಲಿ ನಡೆಯಲಿರುವ ಈ ಸರಣಿ ಅಭ್ಯಾಸದ ದೃಷ್ಟಿಯಿಂದ ಪ್ರಮುಖ ಪಾತ್ರ ವಹಿಸಲಿದೆ. ಈ ಬಗ್ಗೆ ಮಾತನಾಡಿರುವ ತಂಡದ ಮುಖ್ಯ ತರಬೇತುದಾರ ಸ್ಜೋರ್ಡ್ ಮರಿಜ್ನೆ ನಾವು 24 ಜನರ ತಂಡದೊಂದಿಗೆ ಅರ್ಜೆಂಟಿನಾಗೆ ಹೋಗಲಿದ್ದೇವೆ. ವಿವಿಧ ಆಟಗಾರರಿಗೆ ಅವಕಾಶ ಸಿಗಲಿರುವುದು ವಿಶೇಷ. ದೊಡ್ಡ ಪಂದ್ಯಾವಳಿಗೂ ಮುನ್ನ ಅಂತಾರಾಷ್ಟ್ರೀಯ ತಂಡಗಳೊಂದಿಗೆ ಪಂದ್ಯಗಳನ್ನಾಡುವುದು ತಂಡಕ್ಕೆ ಲಾಭ ನೀಡುತ್ತದೆ. ಅರ್ಜೆಂಟಿನಾ ನಮ್ಮ ತಂಡಕ್ಕೆ ಉತ್ತಮ ಅಭ್ಯಾಸದ ಜೊತೆಗೆ ನಮ್ಮ ತಂಡಕ್ಕೆ ಸ್ಪರ್ಧಾತ್ಮಕ ವಾತಾವರಣ ನೀಡುತ್ತದೆ ಎಂದಿದ್ದಾರೆ.

- ಹಾಕಿ ಮಹಿಳಾ ತಂಡದ 3 ಪಂದ್ಯಗಳ ಸರಣಿ
- ವಿಶ್ವಕಪ್ ಅಭ್ಯಾಸ ಭಾಗವಾಗಿ ಪಂದ್ಯ
- 4 ಪಂದ್ಯಗಳ ಸರಣಿಗೆ ಪ್ರವಾಸ

ಬದಲಾದ ಆರ್‌ಸಿಬಿ ಬ್ಯಾಟಿಂಗ್ ಅಪ್ರೋಚ್!

ಪೃಥ್ವಿರಾಜ್ ಕುಲಕರ್ಣಿ



ಅದೊಂದು ಕಾಲ. ಟಿ20ಯಲ್ಲಿ ದೊಡ್ಡ ಸ್ಕೋರ್ ಅಂದರೆ 180–190! ಮುಂದೊಂದು ದಿನ ಅಂಥದ್ದೇ ಸ್ಕೋರ್ ಸಾಮಾನ್ಯವಾಯಿತು. ಡಿಫೆಂಡ್ ಮಾಡಿಕೊಳ್ಳುವ ತಂಡಕ್ಕೆ 200 ದಾಟಿದಾಗಲೇ ವಿಶ್ವಾಸ ಹೆಚ್ಚು. ಆದರೆ ಇತ್ತೀಚಿನ ಕ್ರಿಕೆಟ್‌ನಲ್ಲಿ ಅದೂ ಕೂಡ ಕಡಿಮೆ ಸ್ಕೋರ್ ಎಂಬ ಲೆಕ್ಕಾಚಾರಗಳು ಹುಟ್ಟುತ್ತಿವೆ. ಅಂತಾರಾಷ್ಟ್ರೀಯ ಕ್ರಿಕೆಟ್ ಬಿಟ್ಟರೂ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ 200 ರನ್ ಸಾಕಾಗುವುದಿಲ್ಲ ಎಂಬ ಮಾತುಗಳು, ಲೆಕ್ಕಾಚಾರಗಳು ಮತ್ತು ಎಕ್ಸ್‌ಪರ್ಟ್‌ಗಳ ಅಭಿಪ್ರಾಯ ನಮ್ಮ ಮುಂದಿವೆ. ಬದಲಾದ ಕ್ರಿಕೆಟ್‌ನ್ನು ಅಳವಡಿಸಿಕೊಳ್ಳುವ ತಂಡವೇ ಚಾಂಪಿಯನ್ ಎಂಬ ಮಾತು ಆರ್‌ಸಿಬಿ ತಂಡ ನೋಡಿದಾಗ ಸತ್ಯವೆನ್ನಿಸುತ್ತದೆ. ಆರ್‌ಸಿಬಿ ಈಗ ತನ್ನ ಬ್ಯಾಟಿಂಗ್ ನಡೆಯನ್ನೇ ಬದಲಾಯಿಸಿಕೊಂಡಿದೆ.

17 ಆವೃತ್ತಿಯವರೆಗೂ ರಾಯಲ್ ಚಾಲೆಂಜರ್ಸ್ ತಂಡದಲ್ಲಿ ದೊಡ್ಡ ದೊಡ್ಡ ಆಟಗಾರರು ಆಡಿದ್ದಾರೆ. ಆರ್‌ಸಿಬಿ ಮಾಡದ ದಾಖಲೆ ಇರಲಿಲ್ಲ. ಆದರೆ ಕಪ್ ಗೆಲ್ಲುವ ವಿಚಾರದಲ್ಲಿ ಆರ್‌ಸಿಬಿ ಹಿಂದಿತ್ತು. ಈಗ ಅದೂ ಬದಲಾಗಿದೆ. ಅದಕ್ಕೆ ಕಾರಣ ಹುಡುಕಿದಾಗ ಬೆಂಗಳೂರು ತಂಡದ ಅಪ್ರೋಚ್ ಮುನ್ನೆಲೆಗೆ ಬರುತ್ತದೆ. ಬೆಂಗಳೂರು ತಂಡ ಈಗ ಅತಿ ಹೆಚ್ಚು ಸ್ಕೋರ್ ಮಾಡಬಲ್ಲದು. ದೊಡ್ಡ ದೊಡ್ಡ ಸ್ಕೋರ್ ಪೇರಿಸಬಹುದು. ಅದಕ್ಕೆ ಮುಖ್ಯ ಕಾರಣವೇ ಆರ್‌ಸಿಬಿಯ ಅಪ್ರೋಚ್ ಅಂದರೆ ತಪ್ಪಾಗಲಿಕ್ಕಿಲ್ಲ.

2025ರ ಮೆಗಾ ಹರಾಜಿನಲ್ಲಿ ಆರ್‌ಸಿಬಿ ಸಮತೋಲಿತ ತಂಡವನ್ನು ಆಯ್ಕೆ ಮಾಡಿಕೊಂಡಿತು. ಮುಖ್ಯವಾಗಿ ದೊಡ್ಡ ದೊಡ್ಡ ಸ್ಟಾರ್ ಆಟಗಾರರ ಮೊರೆಗಿಂತಲೂ ಯುವಕರು, ಪ್ರಭಾವಿಶಾಲಿಗಳು ಮತ್ತು ಆಗ್ರೆಸ್ಸಿವ್ ಆಟಕ್ಕೆ ಒತ್ತು ನೀಡುವ ತಂಡವನ್ನು ಆಯ್ಕೆ ಮಾಡಿಕೊಂಡಿತ್ತಲ್ಲದೆ ತನ್ನ ಆಟದ ಶೈಲಿಯನ್ನೇ ಬದಲಾಯಿಸಿದೆ. ಇದು ಮೊದಲಿನ ರನ್ ದಾಹ, ಅಪ್ರೋಚ್ ಮತ್ತು ವೈಖರಿಯನ್ನು ಈಗಿನದಕ್ಕೆ ಹೋಲಿಸಿದಾಗ ಗೊತ್ತಾಗುತ್ತದೆ.

ಬದಲಾದ ಇರಾದೆ: ಆರ್‌ಸಿಬಿ ತಂಡದ ಎಲ್ಲಾ ಬ್ಯಾಟಿಗರು ಇರಾದೆ ಬದಲಾಯಿಸಿದ್ದಾರೆ. ಮೊದಲನೇ ವಿಕೆಟ್‌ನಿಂದ ಹಿಡಿದು ಕೆಳಕ್ರಮಾಂಕದ ಬ್ಯಾಟರ್‌ಗಳವರೆಗೂ ಯಾವುದೇ ಬ್ಯಾಟರ್ ಈಗ ಸೆಟ್ ಆಗುವ ಮುಲಾಜಿಗೆ ಬೀಳುವುದಿಲ್ಲ. ಸ್ಟ್ರೈಕ್‌ಗೆ ಬಂದವರೆಲ್ಲಾ ದಂಡಿಸಲು ಪ್ರಯತ್ನಿಸುತ್ತಾರೆ. ಇದು ಮೊದಲಿನ ಇರಾದೆಯನ್ನೇ ಬದಲಾಯಿಸಿದೆ. ರನ್‌ರೇಟ್ ವಿಚಾರ ನೋಡಿದಾಗ ಇದು ಬಯಲಾಗುತ್ತದೆ. ಮೊದಲಿನ ಪಂದ್ಯಗಳಲ್ಲಿ ಸಾಮಾನ್ಯ ರನ್‌ರೇಟ್ 8.5–9.5 ಆಗಿರುತ್ತಿತ್ತು. ಈಗ ಅದು 9.5–10.5ಗೆ ಬದಲಾಗಿದೆ.

ಸ್ಟ್ರೈಕ್‌ರೇಟ್‌ನಲ್ಲಿ ದೊಡ್ಡ ಬದಲಾವಣೆ: ಮುಖ್ಯವಾಗಿ ಆರ್‌ಸಿಬಿಯ ಎಲ್ಲಾ ಬ್ಯಾಟರ್‌ಗಳ ಸ್ಟ್ರೈಕ್‌ರೇಟ್ ಬದಲಾಗಿದೆ. ವಿರಾಟ್ ಕೊಹ್ಲಿ, ಫಿಲ್ ಸಾಲ್ಟ್, ದೇವದತ್ತ ಪಡಿಕ್ಕಲ್ ಅವರ ಬ್ಯಾಟಿಂಗ್ ಶೈಲಿಯೇ ಬದಲಾಗಿದೆ. ಹಳೆಯದಕ್ಕೂ ಈಗಿನದಕ್ಕೂ ಸ್ಟ್ರೈಕ್‌ರೇಟ್ ವಿಚಾರದಲ್ಲಿ ಹೋಲಿಸಿದಾಗ ದೊಡ್ಡ ಬದಲಾವಣೆ ಕಾಣಿಸಿಕೊಳ್ಳುತ್ತದೆ. ಮಧ್ಯಮ ಕ್ರಮಾಂಕದಲ್ಲಿ ಬ್ಯಾಟರ್‌ಗಳ ಸ್ಟ್ರೈಕ್‌ರೇಟ್ 130–135ರವರೆಗೆ ಇರುತ್ತಿತ್ತು. ಅದು ಈಗ 145–155ಗೆ ಬದಲಾಗಿದೆ.

ಡೆತ್ ಓವರ್‌ಗಳಲ್ಲಿ ರನ್ ಹೊಳೆ: ಡೆತ್ ಓವರ್‌ಗಳಲ್ಲಿ ರನ್ ಹೊಳೆ ಹರಿಯುತ್ತಿದೆ. ಚೆನ್ನೈ ವಿರುದ್ಧದ ಪಂದ್ಯದಲ್ಲಿ ಕೊನೆಯ 5 ಓವರ್‌ಗಳಲ್ಲಿ 97 ರನ್‌ಗಳು ಬಂದಿದ್ದವು. ಎಲ್ಲಾ ಪಂದ್ಯಗಳಲ್ಲಿ ನೋಡಿದಾಗ ಇದು ಮೊದಲಿನ ಆಟಕ್ಕಿಂತಲೂ ಪರಿಣಾಮಕಾರಿ ಬದಲಾವಣೆ ಹೊಂದಿದೆ. ಡಾಟ್ ಬಾಲ್‌ಗಳ ಅಂಕಿ ಅಂಶವೂ ಬದಲಾಗಿದೆ.

ಅಂಕಿ ಅಂಶ

2024ರ ಹಿಂದೆ	2025ರಿಂದ
ಅಪ್ರೋಚ್	
ಆರಂಭಿಕರಿಂದ ಶೇ. 65-75ರಷ್ಟು ರನ್	ಆರಂಭಿಕರಿಂದ ಶೇ. 50-60 ರನ್
ಮಧ್ಯಮ ಕ್ರಮಾಂಕದ ಬ್ಯಾಟಿಗರ ಸ್ಟ್ರೈಕ್ ರೇಟ್: 130-135	ಮಧ್ಯಮ ಕ್ರಮಾಂಕಿತ ಬ್ಯಾಟಿಗರ ಸ್ಟ್ರೈಕ್ ರೇಟ್ 145 ರಿಂದ 160ಕ್ಕೇರಿಕೆ
ತಂಡದ ರನ್‌ರೇಟ್- 8.5-9.5	ತಂಡದ ರನ್‌ರೇಟ್: 10-10.8ಕ್ಕೇರಿಕೆ
ಡಾಟ್‌ಬಾಲ್ ಶೇ.- 38-42 ಶೇ.	ಡಾಟ್‌ಬಾಲ್‌ಗಳು: 30-34ಶೇ. ಅತಿ ಕಡಿಮೆ
ಡೆತ್ ಓವರ್‌ನಲ್ಲಿ ರನ್‌ರೇಟ್: 9.5-10.5	ಡೆತ್ ಓವರ್‌ನಲ್ಲಿ ರನ್‌ರೇಟ್: 11.5-13.5

(ಮೊದಲು)	(2025ರ ನಂತರ)
ರನ್ ಕ್ರಮ	
ಪವರ್‌ಪ್ಲೇ (1-6 ಓವರ್ಸ್) ರನ್‌ರೇಟ್ (ಸಾಮಾನ್ಯ): 8.5-9.5	ಪವರ್‌ಪ್ಲೇ (1-6 ಓವರ್ಸ್) ರನ್‌ರೇಟ್(ಸಾಮಾನ್ಯ): 9.5-10-5
ಮಧ್ಯಮ ಓವರ್ಸ್ (7-15) ರನ್‌ರೇಟ್: ಕನಿಷ್ಠ 7-7.5	ಮಧ್ಯಮ ಓವರ್ಸ್(7-15) ರನ್‌ರೇಟ್: ಕನಿಷ್ಠ 8-9
ಡೆತ್ ಓವರ್‌ಗಳಲ್ಲಿ ರನ್‌ರೇಟ್: 10.5-11	ಡೆತ್ ಓವರ್‌ಗಳಲ್ಲಿ ರನ್‌ರೇಟ್: 12-13

ರನ್ ಪ್ಯಾಟರ್ನ್

ಮೊದಲು	ನಂತರ
ಸಾಮಾನ್ಯ: 150-170	ಸಾಮಾನ್ಯ: 180-200
ಉತ್ತಮ: 175-195	ಉತ್ತಮ: 200-220
ಅತ್ಯುತ್ತಮ: 200-210	ಅತ್ಯುತ್ತಮ: 220-240

ಚಾಂಪಿಯನ್‌ಶಿಪ್‌ಗಿಲ್ಲ ಸಾ–ಚಿ



ಹೊಸದಿಲ್ಲಿ: ವಾರಾಂತ್ಯದಲ್ಲಿ ನಡೆಯಲಿರುವ ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಶಿಪ್ ಪಂದ್ಯಾವಳಿಯಲ್ಲಿ ಭಾರತದ ಅಗ್ರ ಜೋಡಿಯಾದ ಸಾತ್ವಿಕ್ ಹಾಗೂ ಚಿರಾಗ್ ಜೋಡಿ ಭಾಗವಹಿಸುತ್ತಿಲ್ಲ ಎಂದು ಜೋಡಿಯ ತರಬೇತುದಾರ ಟ್ಯಾನ್ ಕಿಮ್ ಹರ್ ತಿಳಿಸಿದ್ದಾರೆ.

ಬ್ಯಾಡ್ಮಿಂಟನ್ ಕ್ಷೇತ್ರದ ಮುಖ್ಯ ಪಂದ್ಯಾಗವಳಿಗಳಲ್ಲಿ ಒಂದಾದ ಏಷ್ಯನ್ ಬ್ಯಾಡ್ಮಿಂಟನ್ ಪಂದ್ಯಾವಳಿ ಶುರುವಾಗಲಿದೆ. ಈಗಾಗಲೇ ಅರ್ಹತಾ ಸುತ್ತಿನ ಪಂದ್ಯಗಳು ನಡೆಯುತ್ತಿವೆ. ಸಿಂಗಲ್ಸ್ ವಿಭಾಗದಲ್ಲಿ ಪ್ರಮುಖ ಆಟಗಾರರು ಆಡುತ್ತಿದ್ದಾರೆ. ಕಳೆದ ಬಾರಿ ಪ್ರಮುಖ ಪಂದ್ಯಾವಳಿಗಳಲ್ಲಿ ಭರ್ಜರಿ ಪ್ರದರ್ಶನ ನೀಡಿರುವ ಸಾತ್ವಿಕ್ ಹಾಗೂ ಚಿರಾಗ್ ಜೋಡಿ ಕೂಡ ನಿರೀಕ್ಷೆಯಲ್ಲಿತ್ತು. ಹೀಗಿರುವಾಗ ಪಂದ್ಯಾವಳಿಯಲ್ಲಿ ಅವರಿಬ್ಬರು ಆಡುತ್ತಿಲ್ಲ ಎಂದು ಕೋಚ್ ಸ್ಪಷ್ಟಪಡಿಸಿದ್ದಾರೆ. ಸ್ವಿಸ್ ಓಪನ್ ಪಂದ್ಯಾವಳಿಯ ಕ್ವಾರ್ಟರ್ ಫೈನಲ್ ಪಂದ್ಯದ ವೇಳೆ ಈ ಇಬ್ಬರೂ ಗಾಯದಿಂದ ಹೊರಬಿದ್ದಿದ್ದರು. ಸಾತ್ವಿಕ್ ಭುಜದ ಗಾಯದಿಂದ ಚೇತರಿಸಿಕೊಂಡರೂ ಪಂದ್ಯಾವಳಿಯಲ್ಲಿ ಆಡಲು ಸಜ್ಜಾಗಿಲ್ಲ. ಇದರೊಂದಿಗೆ ಹರಿಹರನ್ ಮತ್ತು ಅರ್ಜುನ್ ಮಾತ್ರ ಪಂದ್ಯಾವಳಿಯಲ್ಲಿ ಭಾಗವಹಿಸುತ್ತಿರುವ ಜೋಡಿಯಾಗಿದ್ದಾರೆ. ಮಹಿಳೆಯರ ವಿಭಾಗದಲ್ಲೂ ತ್ರಿಶಾ ಮತ್ತು ಗಾಯತ್ರಿ ಜೋಡಿ ಕೂಡ ಕೂಟದಲ್ಲಿ ಭಾಗವಹಿಸುತ್ತಿಲ್ಲ.

ಬಾಕ್ಸಿಂಗ್: ಫೈನಲ್‌ಗೆ ಭಾರತೀಯರು



ಹೊಸದಿಲ್ಲಿ: ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್ಸ್‌ನಲ್ಲಿ ಭಾರತದ ಮಹಿಳಾ ಬಾಕ್ಸರ್‌ಗಳು ಭರ್ಜರಿ ಪ್ರದರ್ಶನ ನೀಡುತ್ತಾ ಫೈನಲ್ ಪ್ರವೇಶಿಸಿದ್ದಾರೆ.

ಮಹಿಳೆಯರ 54 ಕೆಜಿ ವಿಭಾಗದಲ್ಲಿ ಪ್ರೀತಿ ಪವಾರ್ ದಕ್ಷಿಣ ಕೊರಿಯಾದ ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಇಮ್ ಏಜಿ ವಿರುದ್ಧ 5–0 ಅಂತರದಲ್ಲಿ ಭರ್ಜರಿ ಗೆಲುವು ಸಾಧಿಸಿ ಫೈನಲ್‌ಗೆ ಪ್ರವೇಶಿಸಿದರು. ಅವರು ಈಗ ತೈವಾನ್‌ನ ಹುವಾಂಗ್ ಹ್ಸಿಯಾವ್–ವೆನ್ ವಿರುದ್ಧ ಚಿನ್ನದ ಪದಕಕ್ಕಾಗಿ ಸೆಣಸಲಿದ್ದಾರೆ. ಮಹಿಳೆಯರ 60 ಕೆಜಿ ವಿಭಾಗದಲ್ಲಿ ಕ್ಬಜಿಥಚ ಮಂಗೋಲಿಯಾದ ನಮೂನ್ ಮೋನ್ಖೋರ್ ವಿರುದ್ಧ 5–0 ಅಂತರದಲ್ಲಿ ಜಯ ಸಾಧಿಸಿ ಫೈನಲ್‌ಗೆ ಪ್ರವೇಶಿಸಿದರು. ಅವರು ಉತ್ತರ ಕೊರಿಯಾದ ಉನ್ ಗ್ಯಾಂಗ್ ವೋನ್ ವಿರುದ್ಧ ಮುಂದಿನ ಪಂದ್ಯದಲ್ಲಿ ಕಣಕ್ಕಿಳಿಯಲಿದ್ದಾರೆ.

ಪ್ರಮುಖರು ಹೊರಕ್ಕೆ: ಮಹಿಳೆಯರ 70 ಕೆಜಿ ವಿಭಾಗದಲ್ಲಿ ಅರುಂಧತಿ ಚೌಧ್ರಿ ಉಜ್ಬೇಕಿಸ್ತಾನದ ಒಯ್ಸಾ ತೊಯಿರೋವಾ ವಿರುದ್ಧ 4–1 ಅಂತರದಲ್ಲಿ ಗೆದ್ದು ಫೈನಲ್‌ಗೆ ಅರ್ಹತೆ ಪಡೆದರು. ಅವರು ಕಜಕಿಸ್ತಾನದ ಬಕೀತ್ ಸೈದಿಶ್ ವಿರುದ್ಧ ಸೆಣಸಲಿದ್ದಾರೆ. ಇನ್ನೊಂದೆಡೆ, ಮಹಿಳೆಯರ 65 ಕೆಜಿ ವಿಭಾಗದಲ್ಲಿ ಅಂಕುಶಿತಾ ಬೋರೊ ತೈವಾನ್‌ನ ನಿಯೆನ್–ಚಿನ್ ಚೆನ್ ವಿರುದ್ಧ 0–3 ಅಂತರದಲ್ಲಿ ಸೋತು ಸೆಮಿಫೈನಲ್‌ನಲ್ಲೇ ಹೊರಬಂದರು. ಮಹಿಳೆಯರ 51 ಕೆಜಿ ವಿಭಾಗದಲ್ಲಿ ನಿಖತ್ ಝರೀನ್ ಚೀನಾದ ವು ಯು ವಿರುದ್ಧ 0–5 ಅಂತರದಲ್ಲಿ ಸೋತರು. ಇದೇ ರೀತಿ, ಲವ್ಲಿನಾ ಬೊರ್ಗೊಹೈನ್ (75 ಕೆಜಿ) ಮತ್ತು ಪೂಜಾ ರಾಣಿ (80 ಕೆಜಿ) ತಮ್ಮ ತಮ್ಮ ಸೆಮಿಫೈನಲ್ ಪಂದ್ಯಗಳಲ್ಲಿ ಸೋತು ಹೊರಬಂದರು. ಒಟ್ಟಿನಲ್ಲಿ, ನಾಲ್ವರು ಭಾರತೀಯ ಬಾಕ್ಸರ್‌ಗಳು ಈಗಾಗಲೇ ಫೈನಲ್ ಪ್ರವೇಶಿಸಿದ್ದು, ಇನ್ನೂ ಎರಡು ವಿಭಾಗಗಳ ಸೆಮಿಫೈನಲ್ ಪಂದ್ಯಗಳು ಏಪ್ರಿಲ್ 7ರಂದು ನಡೆಯಲಿವೆ. ಭಾರತಕ್ಕೆ ಹೆಚ್ಚಿನ ಪದಕಗಳ ನಿರೀಕ್ಷೆ ಹೆಚ್ಚಾಗಿದೆ.

ಒಟ್ಟು ನಾಲ್ಕು ಜನರು ಫೈನಲ್‌ಗೆ

ಮುಂಬೈ ದಂಡಿಸಿದ ಜೈಸ್ವಾಲ್–ವೈಭವ್



ಗುವಾಹಟಿ: ಬೂಮ್ರಾ, ಬೋಲ್ಟ್, ಪಾಂಡ್ಯ ಹೀಗೆ ಬಂದ ಬೌಲರ್‌ಗಳನ್ನೆಲ್ಲಾ ದಂಡಿಸುತ್ತಾ ಮೆರೆದ ಯಶಸ್ವಿ ಜೈಸ್ವಾಲ್–ವೈಭವ್ ಸೂರ್ಯವಂಶಿ, ಮುಂಬೈ ವಿರುದ್ಧದ ಕಡಿಮೆ ಓವರ್ ಪಂದ್ಯದಲ್ಲಿ ದೊಡ್ಡ ಸ್ಕೋರ್‌ನತ್ತ ಕೊಂಡೊಯ್ದರು.

ಮಳೆಯಿಂದಾಗಿ 11 ಓವರ್‌ಗೆ ಇಳಿಸಲಾದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ ಐದೇ ಓವರ್‌ಗಳಲ್ಲಿ 80 ರನ್ ಚಚ್ಚಿತು. ಟಾಸ್ ಸೋತ ನಂತರ ಮೊದಲು ಬ್ಯಾಟಿಂಗ್‌ಗಿಳಿದ ರಾಜಸ್ಥಾನಕ್ಕೆ ಜೈಸ್ವಾಲ್ ಬಿರುಸಿನ ಬ್ಯಾಟಿಂಗ್‌ನೊಂದಿಗೆ ಅಬ್ಬರದ ಆರಂಭ ನೀಡಿದರು. ಅವರಿಗೆ ಎಂದಿನಂತೆ ವೈಭವ್ ಸೂರ್ಯವಂಶಿ ಸಾಥ್ ನೀಡಿದರು. ಇವರಿಬ್ಬರ ಬ್ಯಾಟಿಂಗ್ ಅಬ್ಬರಕ್ಕೆ ಮುಂಬೈನ ದಿಗ್ಗಜ ಬೌಲರ್‌ಗಳೆಲ್ಲಾ ತತ್ತರಿಸಿದರು. ಜೈಸ್ವಾಲ್ ತಮ್ಮ ಅಬ್ಬರದ ಬ್ಯಾಟಿಂಗ್‌ನೊಂದಿಗೆ 23 ಬಾಲ್‌ಗಳಲ್ಲಿ ಅರ್ಧ ಶತಕ ಬಾರಿಸಿದರು. ಆರ್‌ಆರ್ 11 ಓವರ್‌ಗಳಲ್ಲಿ 150 ರನ್ ಗಳಿಸಿತು.ಜೈಸ್ವಾಲ್ 77 ರನ್ ಗಳಿಸಿದರು.

ತಡವಾಗಿ ಶುರುವಾದ ಪಂದ್ಯ: ಮಂಗಳವಾರ ನಡೆಯಬೇಕಿದ್ದ ಮುಂಬೈ ಇಂಡಿಯನ್ಸ್ ಹಾಗೂ ರಾಜಸ್ಥಾನ ರಾಯಲ್ಸ್ ನಡುವಿನ ಪಂದ್ಯಕ್ಕೂ ಮಳೆ ಅಡ್ಡಿಯಾಯಿತು. ಟಾಸ್‌ಗೂ ಅವಕಾಶ ಸಿಗಲಿಲ್ಲ. ಗುವಾಹಟಿಯಲ್ಲಿ ಸಂಜೆ 7 ಗಂಟೆ ಸುಮಾರಿಗೆ ಮಳೆ ಶುರುವಾಯಿತು. ಬಿಟ್ಟುಬಿಡದ ಮಳೆಯಿಂದಾಗಿ ಟಾಸ್ ವಿಳಂಬಗೊಂಡಿತು. ಮುಂದೂಡಲಾದ ಸಮಯಕ್ಕೆ ಟಾಸ್ ನಡೆಸುವುದಾಗಿ ಘೋಷಿಸಿದರೂ, ಮಳೆ ದಾಹ ಕಮ್ಮಿಯಾಗಲಿಲ್ಲ. 8 ಗಂಟೆಗೆ ಮಳೆ ತೀವ್ರಗೊಂಡಿತು. ನಿರ್ಣಾಯಕರು 8:40ಕ್ಕೆ ಓವರ್ ಕಡಿತ ಶುರು ಮಾಡಿದರು. 9:45ರ ಸುಮಾರಿಗೆ ಮಳೆ ನಿಂತಿತು. 10:10ಕ್ಕೆ ಪಂದ್ಯ ಶುರು ಮಾಡಲು ನಿರ್ಧರಿಸಿದರು. ತಂಡಕ್ಕೆ 11 ಓವರ್ ನಿಗದಿ ಮಾಡಲಾಯಿತು. ಟಾಸ್ 10:55ಕ್ಕೆ ನಡೆಯಿತು.

ಕೆಕೆಆರ್–ಪಂಜಾಬ್ ಪಂದ್ಯ ರದ್ದು

ಕೋಲ್ಕತ್ತಾ: ಕೋಲ್ಕತ್ತಾ ನೈಟ್ ರೈಡರ್ಸ್ ಹಾಗೂ ಪಂಜಾಬ್ ಕಿಂಗ್ಸ್ ವಿರುದ್ಧ ನಡೆಯಬೇಕಿದ್ದ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ 12 ಪಂದ್ಯ ಮಳೆಯಿಂದ ರದ್ದಾಯಿತು. ಸೋಮವಾರದಂದು ಈಡನ್ ಗಾರ್ಡನ್ಸ್ ಸಜ್ಜಾಗಿತ್ತು. ಸತತ ಎರಡು ಪಂದ್ಯಗಳಲ್ಲಿ ಗೆದ್ದು ಹ್ಯಾಟ್ರಿಕ್ ಹಂಬಲದಲ್ಲಿದ್ದ ಪಂಜಾಬ್ ಕಿಂಗ್ಸ್ ಮೊದಲ ಗೆಲುವಿನ ಹುಡುಕಾಟದಲ್ಲಿದ್ದ ಕೆಕೆಆರ್ ತಂಡವನ್ನು ಎದುರಿಸಬೇಕಿತ್ತು. ಯಥಾವತ್ತಾಗಿ ಟಾಸ್ ಸಂಭವಿಸಿತು. ಮೊದಲು ಫೀಲ್ಡಿಂಗ್ ಆಯ್ದುಕೊಂಡಿದ್ದ ಪಂಜಾಬ್ 3.4 ಓವರ್‌ಗಳಲ್ಲಿ 2 ವಿಕೆಟ್ ಪಡೆದಿತ್ತು. ಕೆಕೆಆರ್ 25 ರನ್ ಗಳಿಸಿತ್ತು. ಅಲ್ಲಿಂದ ಶುರುವಾದ ಮಳೆ ಮುಂದಿನ ಪಂದ್ಯಕ್ಕೆ ಭಾರೀ ಅಡ್ಡಪಡಿಸಿತು. ಮುಂದೆ ಒಂದೂ ಬಾಲ್ ಕೂಡ ಆಗಲು ಬಿಡಲೇ ಇಲ್ಲ. 5 ಓವರ್‌ಗಳ ಪಂದ್ಯಕ್ಕಾಗಿ ನಿಗದಿತ ಸಮಯ ಸೂಚಿಸಲಾಗಿತ್ತು. ಅಲ್ಲಿಯವರೆಗೂ ಮಳೆ ಬಿಡದ ಕಾರಣ ಪಂದ್ಯವನ್ನು ರದ್ದುಗೊಳಿಸಲಾಯಿತು. ಈ ರದ್ದಿನೊಂದಿಗೆ ಕೆಕೆಆರ್ ಪಂದ್ಯಾವಳಿಯಲ್ಲಿ ಮೊದಲ ಅಂಕ ಗಳಿಸಿದೆ. ಪಂಜಾಬ್ ಮೊದಲ ಅಂಕ ಕಳೆದುಕೊಂಡಿದೆ.

ಇಂದು ದಿಲ್ಲಿ–ಗುಜರಾತ್ ಪಂದ್ಯ



ಹೊಸದಿಲ್ಲಿ: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಪಂದ್ಯಾವಳಿಯ 14ನೇ ಪಂದ್ಯ ದಿಲ್ಲಿ ಕ್ಯಾಪಿಟಲ್ಸ್ ಮತ್ತು ಗುಜರಾತ್ ಟೈಟಾನ್ಸ್ ನಡುವೆ ಬುಧವಾರದಂದು ನಡೆಯಲಿದೆ.

ಎರಡು ಪಂದ್ಯಗಳಲ್ಲಿ ಸತತ ಸೋಲು ಅನುಭವಿಸಿರುವ ಶುಭಮನ್ ಗಿಲ್ ನೇತೃತ್ವದ ಟೈಟಾನ್ಸ್, ಎರಡು ಪಂದ್ಯಗಳಲ್ಲಿ ಸತತ ಗೆಲುವುಗಳನ್ನು ದಾಖಲಿಸಿರುವ ದಿಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಲಿದೆ. ಹಿಂದಿನ ಪಂದ್ಯಗಳಲ್ಲಿ ದಿಲ್ಲಿ ಸಮೀರ್ ರಿಜ್ವಿ ಅವರ ಸ್ಫೋಟಕ ಬ್ಯಾಟಿಂಗ್ ಬಲದೊಂದಿಗೆ ಎರಡೂ ಪಂದ್ಯಗಳಲ್ಲಿ ಗೆದ್ದಿದೆ. ಇತ್ತ ಹರಸಾಹಸ ಪಟ್ಟರೂ ಎರಡೂ ಪಂದ್ಯಗಳಲ್ಲಿ ಗುಜರಾತ್ ನಿರಾಸೆ ಮೂಡಿಸಿದೆ. ಗೆಲುವಿನ ಲಯ ಮುಂದುವರಿಸುವ ತವಕದಲ್ಲಿ ದಿಲ್ಲಿ ಇದ್ದರೆ ಸೋಲಿನಿಂದ ಹೊರಬರಲು ಗುಜರಾತ್ ಯತ್ನಿಸಲಿದೆ.

ಪುಟಿದೇಳುವ ತವಕದಲ್ಲಿ ಗುಜರಾತ್: ಇನ್ನು ಗುಜರಾತ್ ಟೈಟಾನ್ಸ್ ಪಡೆಯಲ್ಲಿ ಗೆಲುವಿನ ತವಕ ಕಾಣಿಸಿಕೊಂಡಿದೆ. ಗೆಲುವಿನ ಹುಡುಕಾಟವೂ ಹೆಚ್ಚಿದೆ. ಮೊದಲೆರಡು ಪಂದ್ಯಗಳಲ್ಲಿ ಉತ್ತಮ ಬ್ಯಾಟಿಂಗ್ ಮಾಡಿದ್ದರೂ ಗೆಲುವಿನ ಇನ್ನಿಂಗ್ಸ್ ಕಟ್ಟಲಾಗಲಿಲ್ಲ. ಬ್ಯಾಟಿಂಗ್‌ನಲ್ಲಿ ಸಾಯಿ ಸುದರ್ಶನ್ ಲಯಕ್ಕೆ ಬಂದಿದ್ದಾರೆ. ಶುಭಮನ್ ಗಿಲ್ ಬ್ಯಾಟ್‌ನಿಂದ ರನ್ ಬರಬೇಕಿದೆ. ಜಾಸ್ ಬಟ್ಲರ್ ಸ್ಫೋಟಕ ಬ್ಯಾಟಿಂಗ್ ಶುರು ಮಾಡಬೇಕಿದೆ. ಮುಖ್ಯವಾಗಿ ತಂಡದಲ್ಲಿ ಫಿನಿಶಿಂಗ್ ವಿಚಾರದಲ್ಲಿ ಬ್ಯಾಟರ್‌ಗಳು ಜವಾಬ್ದಾರಿ ತೆಗೆದುಕೊಳ್ಳಬೇಕಿದೆ. ಬೌಲಿಂಗ್‌ನಲ್ಲಿ ಸಿರಾಜ್ ದಂಡಿಸಿಕೊಂಡಿದ್ದಾರೆ. ರಬಾಡ ಕೂಡ ದುಬಾರಿ, ಇತ್ತ ಸ್ಪಿನ್ ವಿಭಾಗದಲ್ಲಿ ರಶೀದ್ ಖಾನ್ ಕೂಡ ದುಬಾರಿಯಾಗಿದ್ದಾರೆ.

ಗಿಲ್ ಲಭ್ಯ: ಗಾಯದಿಂದ ಕಳೆದ ಪಂದ್ಯಕ್ಕೆ ಅಲಭ್ಯರಾಗಿದ್ದ ಗುಜರಾತ್ ತಂಡದ ನಾಯಕ ಶುಭಮನ್ ಗಿಲ್ ಅವರು ತಂಡಕ್ಕೆ ಮರಳಿದ್ದಾರೆ. ಈಗಾಗಲೇ ಚೇತರಿಸಿಕೊಂಡಿರುವ ಅವರು ಪಂದ್ಯಕ್ಕೆ ಲಭ್ಯವಿರುವುದು ಕೋಚ್ ಖಚಿತಪಡಿಸಿದ್ದಾರೆ.

ದಿಲ್ಲಿ ತಂಡಕ್ಕೆ ಯುವಕರ ಬಲ

ದಿಲ್ಲಿ ಕ್ಯಾಪಿಟಲ್ಸ್ ದೊಡ್ಡ ಆಟಗಾರರಗಿಂತಲೂ ಯುವ ಸ್ಟಾರ್‌ಗಳ ಮೊರೆ ಹೋಗಿತ್ತು. ಅದೇ ಈ ಸಮಯದಲ್ಲಿ ದಿಲ್ಲಿ ತಂಡಕ್ಕೆ ಬಲವಾಗಿ ನಿಂತಿದೆ. ಕಳೆದ ಎರಡು ಪಂದ್ಯಗಳಲ್ಲಿ ದಿಲ್ಲಿ ತಂಡದ ಸಮೀರ್ ರಿಜ್ವಿ ಗೆಲ್ಲಿಸಿದ ಪ್ರಮುಖ ಆಟಗಾರ ಅನ್ನಿಸಿಕೊಂಡಿದ್ದಾರೆ. ತಂಡಕ್ಕೆ ಬ್ಯಾಟಿಂಗ್ ಬಲ ತಂದಿದ್ದಾರೆ. ಸ್ಫೋಟಕ ಬ್ಯಾಟಿಂಗ್ ಜೊತೆಗೆ ಸಮಯೋಚಿತ ಬ್ಯಾಟಿಂಗ್ ಮಾಡುವುದು ವಿಶೇಷ. ರಾಹುಲ್, ನಿಸ್ಸಂಕಾ, ನಿತಿಶ್ ರಾಣಾ, ಅಕ್ಷರ್ ಪಟೇಲ್ ಲಯಕ್ಕೆ ಬರಬೇಕಿದೆ. ಬೌಲಿಂಗ್‌ನಲ್ಲೂ ಮುಖೇಷ್ ಕುಮಾರ್ ವಿಕೆಟ್ ಪಡೆದಿದ್ದಾರೆ. ಆದರೆ ಉಳಿದ ಬೌಲರ್‌ಗಳು ಅಲ್ಪ ದುಬಾರಿಯಾಗಿದ್ದಾರೆ.

ಐಎಸ್ಸಿಎಫ್ ಶೂಟಿಂಗ್ ವಿಶ್ವಕಪ್ | ವಿಶ್ವದಾಖಲೆ ನಿರ್ಮಾಣ

ಪಲಕ್–ಮುಖೇಷ್ ಜೋಡಿಗೆ ಚಿನ್ನ



ಹೊಸದಿಲ್ಲಿ: ಗ್ರಾನಾಡಾದಲ್ಲಿ ನಡೆದ ಐಎಸ್ಸಿಎಫ್ ವಿಶ್ವಕಪ್‌ನಲ್ಲಿ ಭಾರತದ ಶೂಟರ್ ಜೋಡಿ ಪಲಕ್ ಮತ್ತು ಮುಖೇಷ್ ಅದ್ಭುತ ಪ್ರದರ್ಶನ ನೀಡಿ 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ತಂಡ ಸ್ಪರ್ಧೆಯಲ್ಲಿ ವಿಶ್ವ ದಾಖಲೆ ಸೃಷ್ಟಿಸಿ ಚಿನ್ನದ ಪದಕ ಜಯಿಸಿದರು.

ಫೈನಲ್‌ನಲ್ಲಿ ಈ ಭಾರತೀಯ ಜೋಡಿ ಒಟ್ಟು 487.7 ಅಂಕಗಳನ್ನು ಪಡೆದು ಜೂನಿಯರ್ ವಿಶ್ವ ದಾಖಲೆ ಸ್ಥಾಪಿಸಿತು. ಪಲಕ್ 243.0 ಅಂಕ ಗಳಿಸಿದರೆ, ಮುಕೇಶ್ 244.7 ಅಂಕಗಳನ್ನು ಕಲೆಹಾಕಿ ತಂಡದ ಗೆಲುವಿಗೆ ಮಹತ್ವದ ಕೊಡುಗೆ ನೀಡಿದರು. ಅರ್ಹತಾ ಸುತ್ತಿನಲ್ಲಿ ಕೂಡ ಈ ಜೋಡಿ ಉತ್ತಮ ಪ್ರದರ್ಶನ ನೀಡಿ 581–17ಎಕ್ಸ್ ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆದಿತ್ತು. ಚೀನಾದ ಜೋಡಿ ಅಗ್ರಸ್ಥಾನದಲ್ಲಿದ್ದರೂ, ಫೈನಲ್‌ನಲ್ಲಿ ಭಾರತೀಯರು ಅದ್ಭುತ ಆಟವಾಡಿ ಮುನ್ನಡೆ ಸಾಧಿಸಿದರು. ಚೀನಾದ ಕಿಯನ್ ಶುನ್ ಯಾವೋ ಮತ್ತು ಕೈ ಹು ಜೋಡಿ 484.8 ಅಂಕಗಳೊಂದಿಗೆ ಬೆಳ್ಳಿ ಪದಕ ಪಡೆದುಕೊಂಡರೆ, ಹಂಗೇರಿಯ ವೆರೋನಿಕಾ ಮಜೋರ್ ಮತ್ತು ಅಕೋಸ್ ಕಾರೋಲಿ ನಾಗ್ಯ ಜೋಡಿ ಕಂಚಿನ ಪದಕಕ್ಕೆ ತೃಪ್ತಿಪಟ್ಟಿತು.

ಭರವಸೆ ಮೂಡಿಸಿದ ಪಲಕ್: 18 ವರ್ಷದ ಪಲಕ್ ಈಗಾಗಲೇ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನ ಗೆದ್ದು ತನ್ನ ಪ್ರತಿಭೆಯನ್ನು ಸಾಬೀತುಪಡಿಸಿದ್ದಾರೆ. ಮುಕೇಶ್ ಕೂಡ ಜೂನಿಯರ್ ವಿಶ್ವ ಚಾಂಪಿಯನ್ ಆಗಿದ್ದು ಭರವಸೆಯ ಶೂಟರ್ ಆಗಿ ಹೊರಹೊಮ್ಮಿದ್ದಾರೆ. ಈ ಸಾಧನೆ ಭಾರತ ಶೂಟಿಂಗ್ ಕ್ಷೇತ್ರದಲ್ಲಿ ಮತ್ತೊಮ್ಮೆ ತನ್ನ ಸಾಮರ್ಥ್ಯವನ್ನು ತೋರಿಸಿದ್ದು, ಭವಿಷ್ಯದ ಅಂತರರಾಷ್ಟ್ರೀಯ ಸ್ಪರ್ಧೆಗಳಿಗಾಗಿ ದೊಡ್ಡ ಆತ್ಮವಿಶ್ವಾಸವನ್ನು ನೀಡಿದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5947

ಎಡದಿಂದ ಬಲಕ್ಕೆ
1.ಈ ಶಬ್ದಾಲಂಕಾರದ ಮೊದಲು ನರಕಾಧಿಪತಿಯಿದ್ದಾನೆ (3)
3.ಗಾಯ ಮಾಡಿಕೊಳ್ಳದೆ ಹಾಡುವುದು (3)
5.ಕಾವಲುಪಡೆ–ಕಾಪಿನ ಸೈನ್ಯವಿದು (5)
6.ಸರಗಳೊಂದಿಗೆ ಖರೀದಿಸಿದ ರಂಪ (4)
8.ಗಣಿ ಕಡೆಯಲ್ಲಿ ತಿರುಗಿಸಿಟ್ಟುಕೊಂಡ ಬಾಣಸಿಗ (4)
9.ಗಟ್ಟಿಮುಟ್ಟಾದ ದೇಹವುಳ್ಳವನು (4)
10.ವಸ್ತುಗಳನ್ನು ಆಯುಧದಿಂದ ತುಂಡುಮಾಡು (4)
12.ಉತ್ತರಪತ್ರಿಕೆ ಪರಿಶೀಲಿಸಿ ಅಂಕ ನೀಡುವಿಕೆ (5)
14.ಅಡುಗೆಗೆ ಬಳಸುವ ಬೆಳ್ಳುಳ್ಳಿ (3)
15.ಸಂಖ್ಯೆ–ಆಕಾರ–ಪ್ರಮಾಣಗಳ ಅಧ್ಯಯನ ಶಾಸ್ತ್ರ (3)

ಮೇಲಿನಿಂದ ಕೆಳಕ್ಕೆ
1.ತಾರುಣ್ಯವುಳ್ಳವನು (4)
2.ಶಂಕರನು ಕಟ್ಟಿದ ತೆರಿಗೆ (2)
3.ಮೀನಿಗಾಗಿ ಬೀಸಿದ ಬಲೆ (2)
4.ದೇವಾಲಯದ ಸಭಾಮಂಟಪ (4)
7.ಹಾಸ ಮೊದಲು ತಿರುಗಿ ನೆರವಾಯ್ತು (3)
8.ಸಸ್ಯಗಳ ಬೆಳವಣಿಗೆಗೆ ಬೇಕಾಗುವ ರಸಗೊಬ್ಬರ (3)
9.ಕಣ್ಣೀರು–ಕಂಬನಿಯಿದು (4)
11.ತಲ–ಸುಲಿ ಒಳಗೊಂಡ ಸುಲಭವಾದುದು (4)
12.ಮಾತನಾಡದಿರುವಿಕೆ–ನೀರವತೆ (2)
13.ಬೆಟ್ಟವೂ ಹೌದು–ಆಭರಣವೂ ಹೌದು (2)

5946 ಉತ್ತರ

ಎಡದಿಂದ ಬಲಕ್ಕೆ:
1.ಸಾಯಂಕಾಲ
3.ದೂದಪೇಡಾ
5.ಆವೇಶ 7.ಭರವಸೆ
9.ಕಸರತ್ತು 11.ಕಂದಹಾರ
14.ಗೋಣಿತಾಟು
16.ಸರಳು 17.ಯೋಗ ಕ್ಷೇಮ 18.ಕರ್ನಾಟಕ

ಮೇಲಿನಿಂದ ಕೆಳಕ್ಕೆ:
2.ಯಂತ್ರಾಗಾರ
4.ಪೇಶಾವರ 5.ಆಸೆ
6.ಶಕ 8.ವರದ 10.ಸರಣಿ
12.ಹಾವಾಡಿಗ 13.ಕಂಸ
14.ಗೋಳು 15.ತಾಕಲಾಟ

ಕಿರುಸುದ್ದಿ

ಮರಳು ಅಕ್ರಮ ಸಾಗಾಟ: ಟ್ರ್ಯಾಕ್ಟರ್ ವಶ



◆**ಗದಗ:** ಗಜೇಂದ್ರಗಡ: ತಾಲೂಕಿನ ಗುಳಗುಳಿ ಗ್ರಾಪಂ ವ್ಯಾಪ್ತಿಯ ಹಿರೇಅಳಗುಂಡಿ ಗ್ರಾಮದ ಹಳ್ಳದಲ್ಲಿ ಅಕ್ರಮವಾಗಿ ಮರಳು ತೆಗೆದು ಸಾಗಾಟ ಮಾಡುತ್ತಿದ್ದ ಎರಡು ಟ್ರ್ಯಾಕ್ಟರ್‌ಗಳನ್ನು ಗದಗ ಜಿಲ್ಲಾ ಲೋಕಾಯುಕ್ತ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಹಿರೇಅಳಗುಂಡಿ ಗ್ರಾಮದಲ್ಲಿ ಅಪಾರ ಪ್ರಮಾಣದ ಮರಳು ಇದ್ದು, ಅದನ್ನು ತೆಗೆದು ಹಳ್ಳವನ್ನು ಖಾಲಿ ಮಾಡಲಾಗುತ್ತಿದೆ. ಕಾರ್ಮಿಕರನ್ನು ಬಳಸಿಕೊಂಡು ಹಾಗೂ ಜೆಸಿಬಿ ಮೂಲಕ ಮರಳು ಲೂಟಿ ಮಾಡಲಾಗುತ್ತಿದೆ. ಇಲ್ಲಿ ಹಗಲು-ರಾತ್ರಿ ಎನ್ನದೇ ಮರಳು ಲೂಟಿ ಪ್ರಕ್ರಿಯೆ ನಿರಂತರವಾಗಿದ್ದು, ಅದನ್ನು ತಡೆಯಬೇಕು ಎಂದು ಬೆಂಗಳೂರು ಲೋಕಾಯುಕ್ತ ಅಧಿಕಾರಿಗಳಿಗೆ ದೂರು ಸಲ್ಲಿಕೆಯಾಗಿತ್ತು. ಲೋಕಾಯುಕ್ತ ಡಿವೈಎಸ್ಪಿ ವಿಜಯ ಬಿರಾದಾರ, ಕಂದಾಯ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿ ಉಮೇಶ ಮಾಡೋಳಿ, ಆರ್.ಐ. ಪಿ.ಬಿ.ಮಾಲಿಪಾಟೀಲ, ಗ್ರಾಮ ಲೆಕ್ಕಾಧಿಕಾರಿ ಸಂತೋಷ ವಾಲಿಕಾರ ಸೇರಿದಂತೆ ಪೊಲೀಸ್ ಇಲಾಖೆಯ ಸಿಬ್ಬಂದಿ ಇದ್ದರು.

ರೋಣಕ್ಕೆ ಇಂದು ನಟಿ



◆**ರೋಣ:** ಶಾಸಕ ಜಿ.ಎಸ್.ಪಾಟೀಲ ಹುಟ್ಟು ಹಬ್ಬದ ನಿಮಿತ್ತ ಏ.10 ರಂದು ಅಭಿಮಾನಿ ಬಳಗದವರು ಹಮ್ಮಿಕೊಂಡಿರುವ ಉದ್ಯೋಗ ಮೇಳಕ್ಕೆ ಚಲನಚಿತ್ರ ನಟಿ ಕಾರುಣ್ಯ ರಾಮ್ ಆಗಮಿಸಲಿದ್ದು, ಅವರು ಮಹಿಳೆಯರನ್ನು ಕುರಿತು ಸ್ವ ಉದ್ಯೋಗದಲ್ಲಿ ತೊಡಗಿಕೊಂಡಿರುವ ಮಹಿಳೆಯರು ತಾವು ತಯಾರಿಸಿದ ವಸ್ತುಗಳನ್ನು ಬೇರೆ ಶಹರ ಅಥವಾ ರಾಜ್ಯಗಳಿಗೆ ಯಾವ ರಿತಿಯಲ್ಲಿ ಮಾರಾಟ ಮಾಡಬೇಕು ಎಂಬ ಕುರಿತು ಸಂವಾದ ನಡೆಸಲಿದ್ದಾರೆ. ಜೊತೆಗೆ ಅತೀ ಹೆಚ್ಚಿನ ರೀತಿಯಲ್ಲಿ ಮಹಿಳೆಯರು ಹಾಗೂ ಯುವತಿಯರು ಮೇಳದಲ್ಲಿ ಭಾಗಿಯಾಗಿ ಉದ್ಯೋಗ ಪಡೆದುಕೊಂಡು ಕುಟುಂಬದ ಆರ್ಥಿಕ ಸ್ಥಿತಿಯನ್ನು ಸುಧಾರಿಸುವಲ್ಲಿ ಶಕ್ತಿಯಾಗಿ ನಿಲ್ಲಬೇಕು ಎಂದು ರೋಣದ ಸ್ಪಂದನಾ ಮಹಿಳಾ ಮಂಡಳ ಅಧ್ಯಕ್ಷೆ ಶಶಿಕಲಾ ಪಾಟೀಲ ತಿಳಿಸಿದ್ದಾರೆ.

ಕಟ್ಟಡ ಉದ್ಘಾಟನೆ ಇಂದು

◆**ನರಗುಂದ:** ಜಿಲ್ಲಾಡಳಿತ, ಜಿಪಂ ಹಾಗೂ ಜಿಲ್ಲಾ ಆಯುಷ್ ಇಲಾಖೆ ಸಹಯೋಗದಲ್ಲಿ 2018-19ನೇ ಸಾಲಿನ ರಾಷ್ಟ್ರೀಯ ಆಯುಷ್ ಅಭಿಯಾನದ ಅಡಿಯಲ್ಲಿ ಲೋಕೋಪಯೋಗಿ ಇಲಾಖೆ ರಸ್ತೆಯಲ್ಲಿನ ಮೇಲ್ದರ್ಜೆಗೇರಿಸಿದ ಶೇಖರಗೌಡ ಚನ್ನಪ್ಪಗೌಡ ಪಾಟೀಲ ಸರ್ಕಾರಿ ಆಯುರ್ವೇದ ಹಾಗೂ ಹೋಮಿಯೋಪತಿ ಆಸ್ಪತ್ರೆಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ಏ.8ರ ಬೆಳಗ್ಗೆ 10 ಗಂಟೆಗೆ ಜರುಗಲಿದೆ ಆಯುಷ್ಮಾನ್ ಇಲಾಖೆ ತಿಳಿಸಿದೆ. ಸಮಾರಂಭದಲ್ಲಿ ಆರೋಗ್ಯ ಸಚಿವ ದಿನೇಶ ಗುಂಡೂರಾವ್, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ, ಶಾಸಕ ಸಿ.ಸಿ. ಪಾಟೀಲ, ವಿಪ ಸದಸ್ಯ ಸಲೀಂ ಅಹ್ಮದ್, ಸಂಸದ ಪಿ.ಸಿ. ಗದ್ದಿಗೌಡರ, ವಿ.ಪ. ಸದಸ್ಯರಾದ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ ಇತರರಿರುವರು.

ಎಫ್ ಐಡಿ ಕಡ್ಡಾಯ

◆**ನರಗುಂದ:** ತಾಲೂಕಿನಲ್ಲಿ ಮುಂಗಾರು ಹಂಗಾಮಿನಲ್ಲಿ ರೈತರು ರಸಗೊಬ್ಬರ ಖರೀದಿಸಲು ಎಫ್‌ಐಡಿ ಸಂಖ್ಯೆಗಳನ್ನು ಕಡ್ಡಾಯವಾಗಿ ಹೊಂದಿರಬೇಕು. ಅಲ್ಲದೇ ತಮ್ಮ ಎಲ್ಲಾ ಜಮೀನುಗಳನ್ನು ಸಹ ಎಫ್‌ಐಡಿಗೆ ಕಡ್ಡಾಯವಾಗಿ ಜೋಡಿಸಿರಬೇಕು. ಈ ಕುರಿತು ರಾಜ್ಯ ಸರ್ಕಾರದ ಕೃಷಿ ಇಲಾಖೆ ಕಟ್ಟುನಿಟ್ಟಿನ ಸೂಚನೆ ನೀಡಿದೆ. ಇದರ ಆಧಾರದ ಮೇಲೆ ಹಾಕಿದ ಬೆಳೆಗೆ ರಸಗೊಬ್ಬರವನ್ನು ರೈತರಿಗೆ ಕೆ-ಕಿಸಾನ್ ತಂತ್ರಜ್ಞಾನ ಹಾಗೂ ಪಿಒಎಸ್ ಮಶೀನ್ ಮೂಲಕವೇ ವಿತರಣೆ ಮಾಡಲಾಗುವುದು ಎಂದು ಸಹಾಯಕ ಕೃಷಿ ನಿರ್ದೇಶಕ ಎಂ. ಎಸ್ ಕುಲಕರ್ಣಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಶೇಂಗಾ	4512-6669
ಅಜವಾನ	8281-8281
ಅಲಸಂದಿ	3339-6291
ಮಡಕಿ	9789-9789
ಕಡಲೆ	2044-5419
ಉದ್ದು	4712-4712
ಹವೀಜ	4500-4500
ಹೆಸರು	1102-8389
ಹುರಳಿ	2277-4421
ಜೋಳ	1689-4777
ಗೋವಿನಜೋಳ	1265-1769
ಕುಸಬಿ	4663-5577
ಗೋಧಿ	1219-5021
ಹತ್ತಿ	7100-7100
ಬೆಲ್ಲ	5495-5495



ಗದಗ: ಬಿಜೆಪಿ ಗದಗ ವಿಧಾನಸಭಾ ಕ್ಷೇತ್ರದ ಹುಲಕೋಟಿ ಗ್ರಾಮದಲ್ಲಿ 46ನೇ ಸಂಸ್ಥಾಪನ ದಿನವನ್ನು ಪಕ್ಷದ ಮುಖಂಡ ವೆಂಕಟೇಶ ಸೂರಣಗಿ ಮನೆಯ ಮೇಲೆ ಪಕ್ಷದ ಧ್ವಜ ಹಾರಿಸಲಾಚರಿಸಲಾಯಿತು. ಗದಗ ಗ್ರಾಮೀಣ ಮಂಡಲ ಅಧ್ಯಕ್ಷ ಬೂದಪ್ಪ ಹಳ್ಳಿ, ಜಿಲ್ಲಾಧ್ಯಕ್ಷ ತೋಟಪ್ಪ(ರಾಜು) ಕುರುಡಗಿ, ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ, ಹಿರಿಯ ಮುಖಂಡ ಎಂ.ಎಸ್. ಕರೀಗೌಡ್ರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಿಂಗರಾಜ ಪಾಟೀಲ, ಗ್ರಾಮೀಣ ಮಂಡಲ ಪ್ರ.ಕಾ. ಮಂಜುನಾಥ ಹಳ್ಳೂರಮಠ ಇತರರಿದ್ದರು.

ರೈಲ್ವೆ ಮಾರ್ಗ ಸರ್ವೇಗೆ ಪುನರ್ ಸ್ಥಾಪನೆ: ಹರ್ಷ

◆**ಮುಂಡರಗಿ:** ಮುಂಡರಗಿ ಮತ್ತು ಹೂವಿನ ಹಡಗಲಿ ಮಾರ್ಗವಾಗಿ ಗದಗ-ಹರಪನಹಳ್ಳಿ ರೈಲ್ವೆ ಮಾರ್ಗ ಸರ್ವೇಗೆ ಪುನರ್ ಸ್ಥಾಪನೆ ಮಾಡಿರುವ ಕೇಂದ್ರ ಸರ್ಕಾರಕ್ಕೆ ಮುಂಡರಗಿ ತಾಲೂಕು ರೈಲ್ವೆ ಹೋರಾಟ ಸಮಿತಿ, ಗದಗ - ಹರಪನಹಳ್ಳಿ ರೈಲ್ವೆ ಮಾರ್ಗ ಜಂಟಿ ಕ್ರಿಯಾ ಸಮಿತಿ ಅಭಿನಂದನೆ ಸಲ್ಲಿಸಿ ಕೊಪ್ಪಳ ಸರ್ಕಲ್‌ನಲ್ಲಿ ಪಟಾಕಿ ಸಿಡಿಸಿ ವಿಜಯೋತ್ಸವ ಆಚರಣೆ ಮಾಡಲಾಯಿತು.

ಮುಂಡರಗಿ ತಾಲೂಕು ರೈಲ್ವೆ ಹೋರಾಟ ಸಮಿತಿ ಅಧ್ಯಕ್ಷ ಬಸವರಾಜ ದೇಸಾಯಿ ಮಾತನಾಡಿ, ಗದಗ-ಹರಪನಹಳ್ಳಿ ರೈಲ್ವೆ ಮಾರ್ಗವು ಬಹುದಿನಗಳಿಂದ ನನೆಗುದಿಗೆ ಬಿದ್ದಿರುವುದನ್ನು ಖಂಡಿಸಿ ಮುಂಡರಗಿಯಿಂದ ದೆಹಲಿ ಚಲೋ ಪ್ರತಿಭಟನೆ ಮತ್ತು ಜಂತರ ಮಂತರನಲ್ಲಿ ಪ್ರತಿಭಟನೆ ನಡೆಸಿದ ಪ್ರತಿಫಲವಾಗಿ ಗದಗ-ಹರಪನಹಳ್ಳಿ ರೈಲ್ವೆ ಮಾರ್ಗವು ರಿವೋಕ್ ಆಗಿರುವುದು ಸಂತೋಷವಾಗಿದೆ ಎಂದರು.

ಗದಗ- ಹರಪನಹಳ್ಳಿ ರೈಲ್ವೆ ಮಾರ್ಗ ರಚನೆ ಜಂಟಿ ಕ್ರಿಯಾ ಸಮಿತಿ ಸಂಸ್ಥಾಪನಾ ಅಧ್ಯಕ್ಷ ಬಸವರಾಜ ನವಲಗುಂದ ಮಾತನಾಡಿ, ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಆಗ್ರಹಿಸಿದಾಗ ಮಾಜಿ ಸಂಸದ ಶಿವಕುಮಾರ ಉದಾಸಿಯವರು ಈ ಮಾರ್ಗವನ್ನು ಗದಗ, ಮುಂಡರಗಿ ಹೂವಿನ ಹಡಗಲಿ ಹರಪನಹಳ್ಳಿ ಹರಿಹರ ಅರಸಿಕೇರಿ ಮಾರ್ಗವಾಗಿ ಬೆಂಗಳೂರು ವರೆಗೂ ತಲುಪುವ ಈ ಮಾರ್ಗವನ್ನು ಪುನರ ಪರಿಶೀಲನೆ ಮಾಡಲು ದೆಹಲಿ ರೈಲ್ವೆ ಬೋರ್ಡಿನವರಿಗೆ ಮತ್ತು ಕೇಂದ್ರ ರೈಲ್ವೆ ಸಚಿವರಿಗೆ ಪತ್ರ ಬರೆದ ತರುವಾಯ ಪುನರ್ ಸರ್ವೆಗೆ ಆದೇಶವಾಗಿರುವುದು ಮತ್ತು ಪ್ರೊಗ್ರೆಸ್‌ಲ್ಲಿರುವುದು ಹೋರಾಟಕ್ಕೆ ಸಿಕ್ಕ ಜಯವಾಗಿದೆ ಎಂದರು.



ಮುಂಡರಗಿ: ಮುಂಡರಗಿ ಮತ್ತು ಹೂವಿನ ಹಡಗಲಿ ಮಾರ್ಗವಾಗಿ ಗದಗ-ಹರಪನಹಳ್ಳಿ ರೈಲ್ವೆ ಮಾರ್ಗ ಸರ್ವೇಗೆ ಪುನರ್ ಸ್ಥಾಪನೆ ಮಾಡಿರುವ ಕೇಂದ್ರ ಸರ್ಕಾರಕ್ಕೆ ಮುಂಡರಗಿ ತಾಲೂಕು ರೈಲ್ವೆ ಹೋರಾಟ ಸಮಿತಿ, ಗದಗ - ಹರಪನಹಳ್ಳಿ ರೈಲ್ವೆ ಮಾರ್ಗ ಜಂಟಿ ಕ್ರಿಯಾ ಸಮಿತಿ ಅಭಿನಂದನೆ ಸಲ್ಲಿಸಿ ಕೊಪ್ಪಳ ಸರ್ಕಲ್‌ನಲ್ಲಿ ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಲಾಯಿತು. ಮುಂಡರಗಿ ತಾಲೂಕು ಗದಗ ಹರಪನಹಳ್ಳಿ ರೈಲ್ವೆ ಮಾರ್ಗ ರಚನೆಯ ಜಂಟಿ ಕ್ರಿಯಾ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ಧ್ರುವಕುಮಾರ ಹೂಗಾರ, ಬಸಪ್ಪ ವಡ್ಡರ , ವಿಜಯಕುಮಾರ ಡಂಬಳ , ಅಂದಯ್ಯ ಹಿರೇಮಠ, ಶೇಖರಯ್ಯ ಹೈತಾಪೂರ, ನಜೀರ ಅಳವಂಡಿ, ನಜೀರಸಾಬ ಕೇಲೂರ, ರಾಜಾಭಕ್ಷಿ ಬೇಟಗೇರಿ ಮುಂತಾದವರಿದ್ದರು.

ಟಾಸ್ಕ್ ಫೋರ್ಸ್ ವಿಪತ್ತು ನಿರ್ವಹಣಾ ಸಭೆ | ಡಾ. ಚಂದ್ರು ಲಮಾಣಿ ಸೂಚನೆ

ಶುದ್ಧ ಕುಡಿಯುವ ನೀರು ಪೂರೈಸಿ



◆**ಶಿರಹಟ್ಟಿ:** ಗ್ರಾಮೀಣ ಭಾಗದ ಜನರಿಗೆ ಸಮರ್ಪಕ ಶುದ್ಧ ಕುಡಿಯುವ ನೀರು ಸಿಗುತ್ತಿಲ್ಲ. ಹಲವು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬೇಸಿಗೆ ತಾಪಕ್ಕೆ ಬೋರವೆಲ್ ಬತ್ತುತ್ತಿವೆ. ನೀರು ಎತ್ತುವ ಮಿಷನ್ ದುರಸ್ತಿಗೆ ಬಂದರೂ ರಿಪೇರಿಗೆ ಮಾಡುವ ಗೋಜಿಗೆ ಹೋಗುತ್ತಿಲ್ಲ. ಆದರೆ ಅಧಿಕಾರಿಗಳನ್ನು ಕೇಳಿದರೆ ಶೇ.97 ರಷ್ಟು ಉತ್ತಮವಾಗಿವೆ ಎಂಬ ಉತ್ತರ ನೀಡುತ್ತಿರುವುದು ಹಾಸ್ಯಾಸ್ಪದ ಎಂದು ಶಾಸಕ ಡಾ. ಚಂದ್ರು ಲಮಾಣಿ ಅಧಿಕಾರಿಗಳ ವಿರುದ್ಧ ಕಿಡಿಕಾರಿದರು.

ಸ್ಥಳೀಯ ತಾಲೂಕು ಪಂಚಾಯಿತಿ ಸಾಮರ್ಥ್ಯ ಸೌಧದಲ್ಲಿ ಮಂಗಳವಾರ ಶಿರಹಟ್ಟಿ, ಲಕ್ಷ್ಮೇಶ್ವರ, ಮುಂಡರಗಿ ತಾಲೂಕಿನ ಟಾಸ್ಕ್ ಫೋರ್ಸ್ ವಿಪತ್ತು ನಿರ್ವಹಣಾ ಸಭೆಯಲ್ಲಿ ಮಾತನಾಡಿದರು. ಗ್ರಾಮೀಣ ಭಾಗದಲ್ಲಿ ಜನ-ಜಾನುವಾರುಗಳಿಗೆ ಕುಡಿಯಲು ನೀರು ಬರುತ್ತಿಲ್ಲ, ಆದರೂ ಶೇ.97 ರಷ್ಟು ಪ್ರಗತಿ ತೋರಿಸುತ್ತಿದ್ದಾರೆ. ಅಧಿಕಾರಿಗಳು ಪ್ರತಿ ಗ್ರಾಮಕ್ಕೆ ಭೇಟಿ ನೀಡಿ ಅಲ್ಲಿಯ ಬೋರವೆಲ್ ಸ್ಥಿತಿಗತಿ ಪರಿಶೀಲನೆ ಮಾಡಬೇಕು. ಯಾವ ಗ್ರಾಮದಲ್ಲಿ ಡಿಬಿಓಟಿ ನೀರು ಸಮರ್ಪಕ ಪೂರೈಕೆಯಾಗುವುದಿಲ್ಲವೊ ಅಲ್ಲಿ ಹೊಸ ಬೋರವೆಲ್ ಹಾಕಿಸಲು ಮತ್ತು ಮಿಷನ್ ಕೆಟ್ಟುನಿಂತ ಹಳೆ ಬೋರವೆಲ್ ದುರಸ್ತಿ ಪಡಿಸಿ ನೀರು ಪೂರೈಸುವ ಕಾರ್ಯ ತುರ್ತಾಗಿ ಮಾಡಬೇಕು. ದನಕರುಗಳಿಗೆ ಮೇವು ನೀರು ಪೂರೈಸಬೇಕು. ಯಾವುದೇಕಾರಣಕ್ಕೂ ವಿಳಂಬ ಧೋರಣೆ ಅನುಸರಿಸಿದರೆ ಮುಲಾಜಿಲ್ಲದೇ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ತಹಶೀಲ್ದಾರ್ ಕೆ. ರಾಘವೇಂದ್ರ ರಾವ್, ಲಕ್ಷ್ಮೇಶ್ವರ ತಹಶೀಲ್ದಾರ್ ಧನಂಜಯ ಎಂ., ತಾಪಂ ಇಒ ಕೃಷ್ಣಪ್ಪ ಧರ್ಮದ, ಶಿರಹಟ್ಟಿ ತಾಪಂ ಇಒ ರಾಮಪ್ಪ ದೊಡ್ಡಮನಿ, ಮುಂಡರಗಿ ತಹಶೀಲ್ದಾರ್ ಯರೇಸ್ವಾಮಿ ಪಿ.ಎಸ್., ತಾಪಂ ಇಒ ವಿಶ್ವನಾಥ ಹೊಸಮನಿ, ಮುಖ್ಯಾಧಿಕಾರಿ ಸವಿತಾ ತಾಂಬ್ರೆ, ಗ್ರಾಮೀಣ ನೀರು ಸರಬರಾಜ ಇಲಾಖೆ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ ಪಾಟೀಲ ಸೇರಿದಂತೆ ಮೂರು ತಾಲೂಕಿನ ಪಿಡಿಒಗಳು ಇದ್ದರು.

ಅನುದಾನ ಕಲ್ಪಿಸಿ

ಡಿಬಿಓಟಿ ನೀರು ಮೂರು ತಾಲೂಕಿಗೂ ಹಂಚಿಕೆಯಾಗುತ್ತಿರುವುದರಿಂದ ಗ್ರಾಮೀಣ ಜನರಿಗೆ ಸ್ವಲ್ಪ ಸಮಸ್ಯೆಯಾಗುತ್ತಿದೆ. ಅದರಲ್ಲೂ ಸುವರ್ಣಗಿರಿ ತಾಂಡಾ, ಕಲಕೇರಿ, ಮಾಡಳ್ಳಿ, ಯಳವತ್ತಿ, ಬನ್ನಿಕೊಪ್ಪ, ವರವಿ, ಸಾಸರವಾಡ, ಬಾಗೇವಾಡಿ, ದೊಡ್ಡೂರು ಗ್ರಾಮಗಳು ಸೇರಿ ಇನ್ನಿತರ ಗ್ರಾಮಗಳು ಈಗಿರುವ ಬೋರವೆಲ್ ನೀರು ಪೂರೈಸಲು ಸಾಕಾಗುತ್ತಿಲ್ಲ. ಹೊಸ ಬೋರವೆಲ್ ಹಾಕಿಸಲು ಅನುಮತಿ ಮತ್ತು ಅನುದಾನ ಕಲ್ಪಿಸಬೇಕು ಎಂದು ಪಿಡಿಒಗಳು ಮನವಿ ಮಾಡಿದರು.

ಬೋರವೆಲ್ ಅವಶ್ಯ

ಪ್ರತಿ ಗ್ರಾಪಂ ವ್ಯಾಪ್ತಿಯಲ್ಲೂ 1 ರಿಂದ 2 ಬೋರವೆಲ್ ಅವಶ್ಯಕತೆಯಿದೆ. ಅಧಿಕಾರಿಗಳು ತಕ್ಷಣ ಅವಶ್ಯವಿರುವ ಕಡೆ ಹೊಸ ಬೋರವೆಲ್ ಹಾಕಿಸಲು ಕ್ರಮ ಕೈಗೊಳ್ಳಬೇಕು. ಬಹುತೇಕ ಗ್ರಾಮಗಳಲ್ಲಿ ಜೆಜೆಎಂ ಕಾಮಗಾರಿ ಕಳಪೆಯಾಗಿದ್ದರಿಂದ ನೀರು ಸಮರ್ಪಕ ಪೂರೈಕೆಯಾಗುತ್ತಿಲ್ಲ ಎಂದು ಶಾಸಕರು ಅಸಮಾಧಾನ ವ್ಯಕ್ತಪಡಿಸಿದರು.

ಶುದ್ಧತೆ ಕಾಯ್ದುಕೊಳ್ಳಿ

ಜನರು ಬೇಸಿಗೆಯ ಬಿಸಿಲಿನ ತಾಪಕ್ಕೆ ಹೈರಾಣಾಗಿದ್ದಾರೆ. ಇಂತಹ ವೇಳೆ ಜನರು ಅಶುದ್ಧ ನೀರು ಸೇವಿಸಿ ರೋಗ ರುಜಿನಿಗಳಿಗೆ ತುತ್ತಾಗಬಾರದು, ನೀರಿನ ಟ್ಯಾಂಕ್ ಸ್ವಚ್ಛ ಪಡಿಸಿ ಶುದ್ಧತೆ ಕಾಯ್ದುಕೊಳ್ಳಿ. ಶಿಥಿಲಗೊಂಡ ಟ್ಯಾಂಕ್ ಕೆಡವಿ ಹೊಸ ನೀರಿನ ಟ್ಯಾಂಕ್ ನಿರ್ಮಾಣಕ್ಕೆ ಆದ್ಯತೆ ನೀಡಿ ಮತ್ತು ಅಗತ್ಯವಿರುವ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ತೆರೆಯಲು ಗ್ರಾಪಂ ಅಧಿಕಾರಿಗಳು ಮತ್ತು ನೀರು ಸರಬರಾಜು ಇಲಾಖೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ನೀರಿನ ಗುಣಮಟ್ಟ ಪರಿಶೀಲಿಸಿ ಪೂರೈಸಬೇಕು ಎಂದು ಡಾ. ಚಂದ್ರು ಲಮಾಣಿ ಹೇಳಿದರು.

ತೆರೆದ ಚರಂಡಿಗಳು: ಅಪಘಾತಕ್ಕೆ ಆಹ್ವಾನ!

◆**ಲಕ್ಷ್ಮೇಶ್ವರ:** ಪಟ್ಟಣದ ಅನೇಕ ರಸ್ತೆಗಳ ಚರಂಡಿಗಳು ಮೇಲ್ಭಾಗ ತೆರೆದಿದ್ದು, ಅಪಘಾತಕ್ಕೆ ಆಹ್ವಾನ ನೀಡುತ್ತಿವೆ. ಅದರಲ್ಲೂ ರಸ್ತೆ ಮಧ್ಯೆ ಸಿಡಿಗಳು ಕಿತ್ತಿರುವುದು. ರಸ್ತೆ ಕುಸಿದಿರುವುದು, ಚೇಂಬರ್‌ಗಳು ಕುಸಿತ, ರಸ್ತೆಗೆ ಅಡ್ಡಲಾಗಿ ಚರಂಡಿ ಪೈಪ್‌ಗಳು ಕಿತ್ತಿರುವುದು, ರಸ್ತೆಗಳಲ್ಲಿ ವಾಹನ ಸವಾರರು ಜನರು ಕೈಯಲ್ಲಿ ಜೀವ ಹಿಡಿದುಕೊಂಡು ಅಡ್ಡಾಡುವ ಪರಸ್ಥಿತಿ ನಿರ್ಮಾಣವಾಗಿದೆ.

ಇದಕ್ಕೆ ಉದಾಹರಣೆ ಎಂಬಂತೆ ಬಜಾರ ರಸ್ತೆಯ ಹಾವಳಿ ಆಂಜನೇಯ ದೇವಸ್ಥಾನ ಹಿಂದೆ ಚರಂಡಿ ಮೇಲ್ಭಾಗ ತೆರೆದಿದ್ದು ದಿನನಿತ್ಯ ಒಂದಿಲ್ಲೊಂದು ಅಪಘಾತಗಳು ಸಂಭವಿಸುತ್ತಿವೆ. ವ್ಯಕ್ತಿ ಒಬ್ಬ ಅದೇ ರಸ್ತೆಯಲ್ಲಿ ಬರುವಾಗ ತೆರೆದ ಹೊಲನಲ್ಲಿ ಬಿದ್ದು ಗಾಯಗೊಂಡ ಘಟನೆ ಇತ್ತೀಚೆಗೆ ನಡೆದಿದ್ದು ಜನರು ಮೇಲೆತ್ತಿದ್ದಾರೆ. ಸ್ಕೂಟಿ ಮೇಲೆ ಹೋಗುತ್ತಿದ್ದ ವ್ಯಕ್ತಿಗೆ ಟಾಟಾ ಎಸಿ ಡಿಕ್ಕಿ ಹೊಡೆದ ಪರಿಣಾಮ ಸ್ಕೂಟಿ ನುಜ್ಜು ಗುಜ್ಜಾಗಿದ್ದು ವಾಹನ ಚಾಲಕನಿಗೆ ಗಾಯಗಳಾದ ಘಟನೆ, ಕಾರೊಂದು ಅಲ್ಲಿ ಇದ್ದ ಕಲ್ಲಿಗೆ ಡಿಕ್ಕಿ ಹೊಡೆದ ಘಟನೆ ಹೀಗೆ ದಿನನಿತ್ಯ ಆ ಸ್ಥಳದಲ್ಲಿ ಘಟನೆಗಳು ನಡೆಯುತ್ತಿವೆ. ಪಟ್ಟಣದ ಬಹುತೇಕ ಹೊಸ ಬಡಾವಣೆ, ಹಳೆ ಬಡಾವಣೆ ಪ್ರಮುಖ ರಸ್ತೆ, ವೃತ್ತಗಳಲ್ಲಿ ಇದೆ ಸಮಸ್ಯೆ ಇದ್ದು ವೃದ್ಧರು, ಮಕ್ಕಳು, ವಾಹನ ಚಾಲಕರು ಗೊತ್ತಿಲ್ಲದೇ ಅಂತಹ ಸ್ಥಳಗಳಲ್ಲಿ ಬಿದ್ದರೆ ಯಾರು ಹೊಣೆ ಎಂದು ಜನರು ಪ್ರಶ್ನಿಸುತ್ತಿದ್ದಾರೆ. ಈ ಬಗ್ಗೆ ಪುರಸಭೆ ಎಂಜಿನಿಯರಿಂಗ್ ವಿಭಾಗದ ಅಧಿಕಾರಿಗಳು ಗಮನಹರಿಸಿ ಪರಿಹರಿಸುವ ಕೆಲಸ ಆಗಬೇಕು. ಇಲ್ಲವಾದರೆ ಏನಾದರೂ ಅವಘಡ ಸಂಭವಿಸಿದರೆ ಅವರೇ ಜವಾಬ್ದಾರರು ಎಂದು ಸಾರ್ವಜನಿಕರು ಎಚ್ಚರಿಸಿದ್ದಾರೆ.



ಅನೇಕ ರಸ್ತೆಗಳ ಚರಂಡಿಗಳು ಮೇಲ್ಭಾಗ ತೆರೆದಿದ್ದು, ಜನರು ರಸ್ತೆಯಲ್ಲಿ ಅಡ್ಡಾಡಲು ತೊಂದರೆ ಆಗುತ್ತಿದ್ದು, ಅಧಿಕಾರಿಗಳು ಚರಂಡಿಗಳನ್ನು ಶೀಘ್ರ, ದುರಸ್ತಿಗೊಳಿಸಿ ಜನರಿಗೆ ಅನುಕೂಲ ಮಾಡಿಕೊಡಬೇಕು.
■ **ರವಿ ಪುರಾಣಿಕಮಠ,** ಸ್ಥಳೀಯ ವ್ಯಾಪಾರಸ್ಥ

ಡಾ. ಕುಮಾರಸ್ವಾಮಿ ಹಿರೇಮಠಗೆ ಸನ್ಮಾನ

◆**ಮುಂಡರಗಿ:** ಶ್ರೀ ವೀರಮಾಹೇಶ್ವರ ಜಂಗಮಾಭಿವೃದ್ಧಿ ಸಂಘದ ವತಿಯಿಂದ ಶಿರಹಟ್ಟಿ ಮತಕ್ಷೇತ್ರದ ಬಿಜೆಪಿ ಪಕ್ಷದ ಮುಂಡರಗಿ ಮಂಡಲದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಡಾ. ಕುಮಾರಸ್ವಾಮಿ ಹಿರೇಮಠ ಅವರನ್ನು ಪಟ್ಟಣದ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನ ಮಠದಲ್ಲಿ ಸನ್ಮಾನಿಸಲಾಯಿತು.

ನಿವೃತ್ತ ಪ್ರಾಚಾರ್ಯ ಡಿ.ಸಿ. ಮಠ ಮಾತನಾಡಿ, ಡಾ.ಕುಮಾರಸ್ವಾಮಿಹಿರೇಮಠಅವರುಮುಂಡರಗಿ ಮಂಡಲದ ಅಧ್ಯಕ್ಷರಾಗಿರುವುದು ಸಮಾಜಕ್ಕೆ ಹೆಮ್ಮೆಯ ಸಂಗತಿ. ಅವರು ತಮ್ಮ ನಾಯಕತ್ವದ ಮೂಲಕ ಸಮಾಜದ ಏಕತೆ, ಸಂಘಟಿತ ಶಕ್ತಿ ಮತ್ತು ಅಭಿವೃದ್ಧಿಗೆ ಹೊಸ ದಿಕ್ಕು ತೋರಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಅಮರೇಶ ಹಿರೇಮಠ ಸೇರಿದಂತೆ ಹಲವರು ಮಾತನಾಡಿ, ವೀರಮಹೇಶ್ವರ ಜಂಗಮಾಭಿವೃದ್ಧಿ ಸಮಾಜದ ಸಂಘಟಿತ ಶಕ್ತಿಯೇ ಸಮಾಜದ ಪ್ರಗತಿಯ ಮೂಲವೆಂದು ತಿಳಿಸಿದರು. ಯುವಜನರನ್ನು ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಅಗತ್ಯವನ್ನು ಒತ್ತಿ ಹೇಳಿದರು. ಶಿಕ್ಷಣ, ನೈತಿಕ ಮೌಲ್ಯಗಳು ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳೆಸುವಲ್ಲಿ ಸಂಘದ ಪಾತ್ರ ಮಹತ್ತರವಾಗಿದೆ ಎಂದು ಅಭಿಪ್ರಾಯಪಟ್ಟರು.

ಗೌರವ ಸ್ವೀಕರಿಸಿದ ಡಾ. ಕುಮಾರಸ್ವಾಮಿ ಹಿರೇಮಠ ಮಾತನಾಡಿ, ಸಮಾಜದ ಏಕತೆ ಮತ್ತು ಪ್ರಗತಿಗಾಗಿ ಪ್ರತಿಯೊಬ್ಬರೂ ಜವಾಬ್ದಾರಿಯಿಂದ ಕೆಲಸ ಮಾಡಬೇಕು. ಸಮಾಜದ ಎಲ್ಲಾ ವರ್ಗದ ಜನರನ್ನು ಒಳಗೊಂಡ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಲಾಗುವುದು ಎಂದರು. ಸಮಾಜದ ಒಳಗಿನ ಸಮಸ್ಯೆಗಳನ್ನು ಪರಸ್ಪರ ಸಹಕಾರದಿಂದ ಪರಿಹರಿಸಿಕೊಳ್ಳುವ ಮನೋಭಾವ ಬೆಳೆಸಬೇಕು ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಸಯ್ಯ ಗಿಂಡಿಮಠ ವಹಿಸಿದ್ದರು. ಆರ್.ಬಿ. ಡಂಬಳಮಠ, ಚೆನ್ನವೀರಯ್ಯ ಹಿರೇಮಠ, ಯು.ಸಿ. ಹಂಪಿಮಠ, ವಿ.ಆರ್. ಹಿರೇಮಠ, ಎಫ್.ಆರ್. ಹಿರೇಮಠ, ಬಸಯ್ಯ ಅಮರಗೋಳಹಿರೇಮಠ, ವೀರೇಶ ಶಾಸ್ತ್ರಿಮಠ, ಮಲ್ಲಯ್ಯ ವಿರುಪಾಪುರಮಠ, ಹಾಲಯ್ಯ ಹಿರೇಮಠ,ಯುವ ಘಟಕದ ಅಧ್ಯಕ್ಷ ವಿನಯಕುಮಾರ ಗಂಧದ, ಪ್ರಶಾಂತ ಹಿರೇಮಠ, ಕೊಟ್ರೇಶ ನವಲಿಹಿರೇಮಠ, ಚಂದ್ರು ತಂಬ್ರಳ್ಳಿಮಠ, ಶಿವು ಹಿರೇಮಠ, ಶಿವು ಕುಲಕರ್ಣಿ, ಕೈಲಾಸ್, ಗುರು ಶಿರಹಟ್ಟಿಮಠ, ಪಾಲಾಕ್ಷಗೌಡ ಪಾಟೀಲ, ದೊಡ್ಡನಗೌಡ ಪಾಟೀಲ, ಚನ್ನಬಸಯ್ಯ, ಮಹೇಶ ಹೊಸಮಠ, ಮಹಿಳಾ ಘಟಕದ ಅಧ್ಯಕ್ಷೆ ಶಕುಂತಲಾ ಹಂಪಿಮಠ, ಲಕ್ಷ್ಮೀದೇವಿ ಬೆಳವಟಗಿಮಠ, ಅರುಣಾ ಪಾಟೀಲ, ವಿಮಲಾ ಅಳವಂಡಿಮಠ, ಸರಸ್ವತಿ ಹಿರೇಮಠ, ಲತಾ ಅಮರಗೋಳಹಿರೇಮಠ, ಪಾರಮ್ಮ ಹೊಸಳ್ಳಿಹಿರೇಮಠ ಇತರರಿದ್ದರು. ವಿ.ಜಿ. ಹಿರೇಮಠ ನಿರೂಪಿಸಿ, ವಂದಿಸಿದರು.



ಡಾ. ಅಂಬೇಡ್ಕರ್, ಡಾ. ಬಾಬು ಜಗಜೀವನ ರಾಂ ಜಯಂತಿ ಪೂರ್ವಸಿದ್ಧತಾ ಸಭೆ

◆**ಗದಗ:** ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಡಾ. ಬಾಬು ಜಗಜೀವನ ರಾಂ ಅವರ ಜಯಂತಿಯನ್ನು ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಏ.14ರಂದು ಬೆಳಗ್ಗೆ 11ಕ್ಕೆ ಹಮ್ಮಿಕೊಳ್ಳಲಾಗುತ್ತಿದ್ದು, ಜಯಂತಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಮತ್ತು ಅಚ್ಚುಕಟ್ಟಾಗಿ ಆಚರಿಸಲು ವಿವಿಧ ಇಲಾಖೆಯ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಡಾ. ಬಾಬು ಜಗಜೀವನರಾಂ ಅವರ ಜಯಂತಿ ಕುರಿತು ಜರುಗಿದ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಯಾವುದೇ ಲೋಪದೋಷಗಳಾಗದಂತೆ ನೋಡಿಕೊಳ್ಳಬೇಕು. ಜಯಂತಿ ಕಾರ್ಯಕ್ರಮಕ್ಕೆ ಎಲ್ಲ ಇಲಾಖೆಯ ಅಧಿಕಾರಿಗಳು ಕಡ್ಡಾಯವಾಗಿ ಹಾಜರಾಗಬೇಕು. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಸಮಾಜದ ವಿದ್ಯಾರ್ಥಿಗಳಿಗೆ ಜಯಂತಿ ಕಾರ್ಯಕ್ರಮದಂದು ಸನ್ಮಾನಿಸಲಾಗುವುದು ಎಂದು ತಿಳಿಸಿದರು.

ಜಯಂತಿ ಕಾರ್ಯಕ್ರಮಕ್ಕೂ ಮುನ್ನ ಮೆರವಣಿಗೆಯು ನಗರಸಭೆ ಆವರಣದಿಂದ ಅಂಬೇಡ್ಕರ್ ಭವನದವರೆಗೆ ಬಂದು ತಲುಪುವುದು. ಜಯಂತಿ ಕಾರ್ಯಕ್ರಮದ ಪ್ರಯುಕ್ತ ಏ.8ರಂದು ಜಿಲ್ಲಾಡಳಿತ ಭವನದ ಸಮ್ಮೇಳನ ಸಭಾಂಗಣದಲ್ಲಿ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗುತ್ತಿದೆ ಎಂದರು.



ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ್ರ ಕೋಟೂರ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಎಂ.ಎಂ. ತುಂಬರಮಟ್ಟಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ ಅಮಿತ ಬಿದರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಪದ್ಮಾವತಿ ಜಿ., ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಮಸನಾಯಕ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್.ಎಸ್. ಬುರುಡಿ, ಡಿಡಿಎಲ್‌ಆರ್ ರುದ್ರಣ್ಣಗೌಡ್ರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು. ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಡಾ. ನಂದಾ ಹಣಬರಟ್ಟಿ ಸ್ವಾಗತಿಸಿ, ವಂದಿಸಿದರು.

ಶಿಶುಕ್ಷ ತರಬೇತಿಯಿಂದ ವೃತ್ತಿಪರ ಕೌಶಲ್ಯ ವೃದ್ಧಿ : ಶಾಂತಲಿಂಗ ಶ್ರೀ

◆**ನರಗುಂದ:** ಐಟಿಐ ತರಬೇತಿ ನಂತರ ಅಪ್ರೇಂಟಿಶಿಪ್ ತರಬೇತಿ ಪಡೆದು ಸ್ವಾವಲಂಬಿಗಳಾಗಿ, ದೇಶದ ಅಭಿವೃದ್ಧಿಯಲ್ಲಿ ಪಾಲುದಾರರಾಗಬೇಕು. ಆಧುನಿಕ ತಂತ್ರಜ್ಞಾನ ಈ ಯುಗದ ಮುಖ್ಯ ಅವಶ್ಯಕತೆಯಾಗಿದೆ ಎಂದು ಶಿರೋಳ-ಭೈರನಹಟ್ಟಿ ಮಠದ ಶಾಂತಲಿಂಗ ಸ್ವಾಮೀಜಿ ಹೇಳಿದರು.

ತಾಲೂಕಿನ ಶಿರೋಳ ಗ್ರಾಮದಲ್ಲಿನ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಶ್ರೀ ಮಾದಾರ ಚನ್ನಯ್ಯ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಶಿಶುಕ್ಷ ತರಬೇತಿಯ ಪ್ರಾಮುಖ್ಯತೆ ಮತ್ತು ಅಗತ್ಯತೆ ಬಗ್ಗೆ ಮಾಹಿತಿ ನೀಡಲು ಏರ್ಪಡಿಸಿದ್ದ ಪಾಲಕರ ಸಭೆಯಲ್ಲಿ ಮಾತನಾಡಿದ ಅವರು, ಮಕ್ಕಳನ್ನು ಕೃಷಿ ಚಟುವಟಿಕೆಗಳಿಗೆ ಬಳಸಿಕೊಳ್ಳದೇ ಶೈಕ್ಷಣಿಕ ಬೆಳವಣಿಗೆ ಬಗ್ಗೆ ಕಾಳಜಿವಹಿಸಬೇಕೆಂದು ಹೇಳಿದರು.

ಶಿರಹಟ್ಟಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯ ಎ.ಐ. ರೋಣ ಮಾತನಾಡಿ, ಮಕ್ಕಳನ್ನು ಕಡ್ಡಾಯವಾಗಿ ಅಪ್ರೆಂಟಿಸ್ ತರಬೇತಿಗೆ ಸೇರಿಸಬೇಕು. ಕಲಿಕೆಯ ಜೊತೆಯಲ್ಲಿ ಗಳಿಕೆಗೆ ಅವಕಾಶವಿರುತ್ತದೆ ಎಂದರು. ಐಟಿಐ ಪ್ರಾಚಾರ್ಯ ಬಸವರಾಜ ಸಾಲಿಮಠ ಪ್ರಾಸ್ತಾವಿಕವಾಗಿ ಮಾತನಾಡಿ, ಅಪ್ರೆಂಟಿಸಿಪ್ ತರಬೇತಿ ಪೂರ್ಣಗೊಳಿಸಿದರೆ ಮಾತ್ರ ಐಟಿಐ ತರಬೇತಿ ಪೂರ್ಣಗೊಳಿಸಿದಂತೆ ಎಂದರು. ಕರ್ನಾಟಕ ರಾಜ್ಯ ಜಾನಪದ ಪ್ರಶಸ್ತಿ ವಿಜೇತ ಕೊಣ್ಣೂರ ಗ್ರಾಮದ ಕಾಶೀಂಸಾಬ ಮುಜಾವರ ಅವರನ್ನು ಪೂಜ್ಯರು ಸತ್ಕರಿಸಿದರು. ದ್ಯಾಮಣ್ಣ ತೆಗ್ಗಿ, ಚಂದ್ರಶೇಖರ ಸೊಬರದ, ಸತ್ಯವಾನಪ್ಪ ಚಿಕ್ಕನರಗುಂದ, ರೇವಣಸಿದ್ದಯ್ಯ ಹಿರೇಮಠ, ರಾಜೇಶ್ವರಿ ಯಾವಗಲ್ಲ, ವೀರನಗೌಡ ಮರಿಗೌಡ, ಶ್ರೀಕಾಂತ ದೊಡಮನಿ, ಸೋಮಶೇಖರಪ್ಪ ಗೊರವರ, ಪ್ರಭುಲಿಂಗ ಶಿರಿಯಣ್ಣವರ, ಭೂಪತಿ ಧೋತರದ, ಕಾಳಮ್ಮ ಕಮ್ಮಾರ, ಮಲ್ಲಪ್ಪ ಸಂಗಳದ, ಚಂದ್ರಕಾಂತ ಕಾಡದೇವರಮಠ, ಶಿವಾನಂದ ಪೂಜಾರ, ಗಂಗಾಧರ ಘಾರಗೆ, ಶ್ರೀಧರ ಬೇವಿನಕಟ್ಟಿ ಸ್ವಾಗತಿಸಿದರು. ಎಸ್.ವಿ. ಕುಪ್ಪಸ್ತ ನಿರೂಪಿಸಿದರು.



ನೂತನ ಪಶು ಆಸ್ಪತ್ರೆಗೆ ಉದ್ಘಾಟನೆ ಭಾಗ್ಯ ಯಾವಾಗ?

▸**ಶಿವಲಿಂಗಯ್ಯ ಹೊತಗಿಮಠ**

ದಿಗಂತ ವಿಶೇಷ

◆**ಲಕ್ಷ್ಮೇಶ್ವರ:** ಪಟ್ಟಣದ ನೂತನ ಪಶು ಆಸ್ಪತ್ರೆಯು ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ 2023-24 ನೇ ಸಾಲಿನ ನಬಾರ್ಡ್ ಆರ್‌ಐಡಿಎಫ್ ಯೋಜನೆ ಅಡಿಯಲ್ಲಿ ಸುಮಾರು 50.13 ಲಕ್ಷ ರೂ. ವೆಚ್ಚದಲ್ಲಿ ಮುಖ್ಯ ಪಶು ವೈದ್ಯಾಧಿಕಾರಿಗಳ ಕಚೇರಿ ಕಟ್ಟಡದ ಭೂಮಿಪೂಜೆಯನ್ನು 2023ರಲ್ಲಿ ಶಾಸಕರು ನೇರವೇರಿಸಿದ್ದು ಅಂದಾಜು 2 ವರ್ಷ ಕಳೆದಿದೆ. ಆದರೆ ಹೊಸ ಕಟ್ಟಡದ ಬಿಲ್ಡಿಂಗ್ 9 ತಿಂಗಳ ಹಿಂದೆ ಕಾಮಗಾರಿಯಲ್ಲಿ ಕೆಲವು ಕೆಲಸ ಬಿಟ್ಟು ಗುತ್ತಿಗೆದಾರ ಕೈತೊಳೆದುಕೊಂಡಿದ್ದಾರೆ. ಆ ಕೆಲಸ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ತಿಳಿಸಿ ಉದ್ಘಾಟನೆಗೊಳ್ಳುವುದು ಯಾವಾಗ? ಎಂದು ಸಾರ್ವಜನಿಕರು ಪ್ರಶ್ನಿಸುತ್ತಿದ್ದಾರೆ.

ನೂತನ ಪಶು ಆಸ್ಪತ್ರೆಯಲ್ಲಿ 4 ಕೊಠಡಿಗಳಿದ್ದು, ಮುಖ್ಯಪಶು ವೈದ್ಯಾಧಿಕಾರಿಗಳ ಆಡಳಿತ ಕೊಠಡಿ, ಪಶು ವೈದ್ಯಾಧಿಕಾರಿಗಳ ಕೊಠಡಿ, ಮೀಟಿಂಗ್ ಹಾಲ್, ಸ್ಟೋರ್‌ಗಳನ್ನು ಹೊಂದಿದೆ. ಜನಪ್ರತಿನಿಧಿಗಳು ಹೊಸ ಕಟ್ಟಡ ಉದ್ಘಾಟನೆಗೊಳಿಸಿದರೆ ಪಶು ಆಸ್ಪತ್ರೆಯಲ್ಲಿ ಅಂದಾಜು ತಿಂಗಳಿಗೆ 500 ದನಕರುಗಳು ಚಿಕಿತ್ಸೆ ಪಡೆಯುತ್ತವೆ. ಸದ್ಯ ಟ್ರೇನಿಂಗ್ ಹಾಲ್, ಹಳೆಯ ಆಡಳಿತ ಕಚೇರಿ, ಒಪಿಡಿಯಲ್ಲಿ ವೈದ್ಯರು ಕಾರ್ಯನಿರ್ವಹಿಸುತ್ತಿದ್ದು ಸಿಬ್ಬಂದಿ ಹಾಗೂ ರೈತ ಸಮುದಾಯದ ಜಾನುವಾರಗಳ ಹಿತದೃಷ್ಟಿಯಿಂದ ಹೊಸ ಕಟ್ಟಡ ಸೇವೆಗೆ ಸಜ್ಜಾಗಬೇಕಿದೆ ಎಂಬುದು ರೈತರ ಒತ್ತಾಯವಾಗಿದೆ.



ಗುತ್ತಿಗೆದಾರನಿಗೆ ಕಾಮಗಾರಿ ಮುಗಿಸಲು ಸೂಚನೆ ನೀಡಿದ್ದು, ಆದರೆ ಗುತ್ತಿಗೆದಾರ ಇನ್ನು ಕೆಲವು ಕೆಲಸ ಅರ್ಧಕ್ಕೆ ಬಿಟ್ಟಿದ್ದು, ಪೂರ್ಣಗೊಳಿಸಿ ಉದ್ಘಾಟಿಸಲಾಗುವುದು. ಶೀಘ್ರ, ಪೂರ್ಣಗೊಳಿಸದಿದ್ದರೆ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ.
■ **ಡಾ ಚಂದ್ರು ಲಮಾಣಿ,** ಶಾಸಕ

ಗುತ್ತಿಗೆದಾರ ಕಾಮಗಾರಿ ಕೆಲಸ ಅರ್ಧಕ್ಕೆ ನಿಲ್ಲಿಸಿದ್ದು ಗಮನಕ್ಕೆ ಬಂದಿದೆ. ಗುತ್ತಿಗೆದಾರನಿಗೆ ತಿಳಿಸಿ ಪೂರ್ಣಗೊಳಿಸಲು ಕ್ರಮಗೊಳ್ಳುತ್ತೇವೆ.
■ **ಡಾ. ಎಚ್. ಬಿ. ಹುಲಗಣ್ಣನವರ,** ಪಶುಪಾಲನಾ ಇಲಾಖೆಯ ಜಿಲ್ಲಾ ಉಪನಿರ್ದೇಶಕ

- ಗುತ್ತಿಗೆದಾರ ಸರಿಯಾಗಿ ವಿದ್ಯುತ್ ಕಲೆಕ್ಷನ್ ನೀಡಿಲ್ಲ
- ವಾಟರ್ ಲೀಕೇಜ್ ಆಗುತ್ತಿದ್ದು, ಬೋರಬೇಲ್ ಕಲೆಕ್ಷನ್, ಸೆಪ್ಟಿಕ್ ಟ್ಯಾಂಕ್ ಕಲೆಕ್ಷನ್ ನೀಡಲಿ
- ಎಲೆಕ್ಟ್ರಿಕಲ್ ಕೆಲಸ ಸರಿಯಾಗಿ ಆಗದೆ ಇರುವುದರಿಂದ ಗೋಡೆ ವರೆಗೂ ಸೋರುತ್ತಿರುವ ನೀರು
- ಈ ಹಿಂದೆ ಇರುವ ಹಳೆಯ ತಡೆಗೋಡೆ ಹೊಸ ಕಟ್ಟಡ ಗೋಡೆ ಕಡೆ ಬಿದ್ದಿದ್ದು ಅದನ್ನು ಸ್ವಚ್ಛತೆಗೊಳಿಸಿ ಕೊಡಬೇಕು ಎಂಬುದು ಸಾರ್ವಜನಿಕರ ಆಗ್ರಹ

ಪೌರಕಾರ್ಮಿಕರು ಶ್ರದ್ಧೆ, ಆತ್ಮಸಾಕ್ಷಿಯಿಂದ ಕಾರ್ಯನಿರ್ವಹಿಸಲಿ: ಎಸಿ

ದಿಗಂತ ವರದಿ ಪರಿಣಾಮ

◆**ಲಕ್ಷ್ಮೇಶ್ವರ:** ಪಟ್ಟಣ ಸಂಪೂರ್ಣವಾಗಿ ಸ್ವಚ್ಛತೆಗೊಳ್ಳಬೇಕು. ಪೌರಕಾರ್ಮಿಕರು ಶ್ರದ್ಧೆ ಹಾಗೂ ಆತ್ಮಸಾಕ್ಷಿಯಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾ ಉಪವಿಭಾಗಾಧಿಕಾರಿ ಗಂಗಪ್ಪ ಎಂ. ಹೇಳಿದರು.

ಅವರು ಪಟ್ಟಣದ ಪುರಸಭೆಗೆ ದಿಢೀರನೆ ಭೇಟಿ ನೀಡಿ ಸಭಾಂಗಣದಲ್ಲಿ ಅಧಿಕಾರಿಗಳು ಹಾಗೂ ಪೌರಕಾರ್ಮಿಕರ ಜೊತೆ ಸಭೆ ನಡೆಸಿ ಮಾತನಾಡಿ, ಪಟ್ಟಣವು ಐತಿಹಾಸಿಕ ಸಾಂಸ್ಕೃತಿಕ ಇತಿಹಾಸ ಪ್ರಸಿದ್ಧ ದೇವಸ್ಥಾನಗಳಿದ್ದು, ದಿನನಿತ್ಯ ಸಾವಿರಾರು ಪ್ರವಾಸಿಗರು ಬರುತ್ತಾರೆ. ಆದರೆ ಇಲ್ಲಿ ಸ್ವಚ್ಛತೆ ಎನ್ನುವುದೇ ಮರೀಚಿಕೆಯಾಗಿದೆ. ರಸ್ತೆ, ಚರಂಡಿ, ಪ್ರಮುಖ ವೃತ್ತಗಳು ಕಸದಿಂದ ಕೂಡಿದೆ. ಕಸದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ ಖಾಲಿ ನಿವೇಶನ ಮಾಲೀಕರಿಗೆ ಸ್ವಚ್ಛಗೊಳಿಸಲು ತಿಳಿಸಿ, ಇಲ್ಲವೆಂದರೆ ಸ್ವಚ್ಛತೆಗೊಳಿಸಿ ಉತಾರದ ಮೇಲೆ ಬೋಜಾ ಹಾಕಿ, ರಸ್ತೆಗೆ ಕಸವನ್ನು ಎಸೆಯುವ ವ್ಯಾಪಾರಸ್ಥರಿಗೆ ತಿಳಿ ಹೇಳಿ. ಇಲ್ಲವಾದರೆ ಕಸಹಾಕುವ ವ್ಯಾಪಾರಸ್ಥರಿಗೆ ದಂಡ ಹಾಕಿ. ಏಪ್ರಿಲ್ 17ರೊಳಗೆ ಪಟ್ಟಣ ಸುಂದರವಾಗಿಡಲು ಕ್ರಮ ಕೈಗೊಳ್ಳಿ ಎಂದರು.

ಈ ಬಗ್ಗೆ ಹೊಸ ದಿಗಂತ ದಿನಪತ್ರಿಕೆಯಲ್ಲಿ ಮಾ.30ರಂದು ಗಬ್ಬೆದ್ದು ನಾರುತ್ತಿರುವ ಲಕ್ಷ್ಮೇಶ್ವರ ಪಟ್ಟಣ,ಅಶುಚಿತ್ವ ತಾಣವಾದ ರಸ್ತೆಗಳು, ಎಲ್ಲೆಂದರಲ್ಲಿ ಬಿದ್ದ ಕಸದ ರಾಶಿ ಹಾಗೂ ಏಪ್ರಿಲ್ 6ರಂದು ಅನೈತಿಕ ಚಟುವಟಿಕೆಯಾದ ತಾಣವಾದ ಖಾಲಿ ನಿವೇಶನಗಳು ಉದ್ಯಾನವನಗಳು ಜನರಿಗೆ ರೋಗ ಹರಡುವ ಭೀತಿ ಎಂಬ ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟಿಸಲಾಗಿತ್ತು. ತಹಶೀಲ್ದಾರ್ ಧನಂಜಯ ಎಂ., ಪುರಸಭೆ ಮುಖ್ಯಾಧಿಕಾರಿ ಮಹಾಂತೇಶ ಭೀಳಗಿ, ಹಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ ಮುದಗಲ್ ಇದ್ದರು.



ಪೌರಕಾರ್ಮಿಕರ ಬಯೋಮೆಟ್ರಿಕ್‌ಗೆ ಸೂಚನೆ

ಜಿಲ್ಲಾಧಿಕಾರಿಗಳ ಜೊತೆಗೆ ಮಾತನಾಡಿ ಗುತ್ತಿಗೆ ಆಧಾರದ ಮೇಲೆ ಪೌರಕಾರ್ಮಿಕರನ್ನು ಭರ್ತಿ ಮಾಡಲು ಪ್ರಯತ್ನಿಸುತ್ತೇನೆ. ಬೆಳಗ್ಗೆ 5.45ಕ್ಕೆ ಕೆಲಸಕ್ಕೆ ಬಂದು ಜಿಪಿಎಸ್ ಫೋಟೋ ಹಾಕಬೇಕು, ತದನಂತರ ಪೌರಕಾರ್ಮಿಕರ ಬಯೋಮೆಟ್ರಿಕ್ ತೆಗೆದುಕೊಂಡು ಕೆಲಸಕ್ಕೆ ಕಳಿಸಬೇಕು, ಕಾರ್ಮಿಕರ ವಿಶ್ರಾಂತಿಗೃಹ ಪೂರ್ಣಗೊಳಿಸಬೇಕು ಗ್ರಹಭಾಗ್ಯದಡಿ ಮನೆ ಕಟ್ಟಿಸಿಕೊಂಡವರಿಗೆ ಯಾರಿಗೆ ಹಣ ಬಂದಿಲ್ಲ, ಆ ಬಗ್ಗೆ ಗಮನ ಹರಿಸಿ. ಗುಣಮಟ್ಟದ ಉಪಹಾರ ಕೊಡಿ. ಪೌರಕಾರ್ಮಿಕರಿಗೆ 5ನೇ ತಾರೀಕಿನೊಳಗಡೆ ವೇತನ ಪಾವತಿಸಿ, ಕಾರ್ಮಿಕರಿಗೆ ಸಿಗುವ ಸೌಲಭ್ಯ ಕಲ್ಪಿಸಿ,ಆರೋಗ್ಯ ಪರೀಕ್ಷೆ ಗೊಳಪಡಿಸಿ ಎಂದು ಸೂಚನೆ ನೀಡಿದರು.



ಗಬ್ಬೆದ್ದು ನಾರುತ್ತಿರುವ ಲಕ್ಷ್ಮೇಶ್ವರ ಪಟ್ಟಣ | ಅಶುಚಿತ್ವ ತಾಣವಾದ ರಸ್ತೆಗಳು
ಎಲ್ಲೆಂದರಲ್ಲಿ ಬಿದ್ದ ಕಸದ ರಾಶಿ
ಅನೈತಿಕ ಚಟುವಟಿಕೆ ತಾಣವಾದ ಖಾಲಿ ನಿವೇಶನಗಳು, ಉದ್ಯಾನವನಗಳು
ಜನರಿಗೆ ರೋಗ ಹರಡುವ ಭೀತಿ

ಹಂಪಿ ಅಭಿವೃದ್ಧಿಗೆ 96 ಕೋಟಿ ರೂ.ಅನುದಾನ

ಇಂದು ಕೆಎಂಇಆರ್‌ಸಿ ಎಂಡಿ ತಂಡ ಭೇಟಿ

ವೀರೇಂದ್ರ, ನಾಗಲದಿನ್ನಿ

ದಿಗಂತ ವಿಶೇಷ



ವಿಜಯನಗರ: ವಿಶ್ವ ಪಾರಂಪರಿಕ ತಾಣ ಹಂಪಿ ಮತ್ತು ಕಮಲಾಪುರ ಭಾಗಗಳಲ್ಲಿ ಗಣಿ ಬಾಧಿತ ಪ್ರದೇಶಗಳ ಪುನಶ್ಚೇತನ ಹಾಗೂ ಪ್ರವಾಸೋದ್ಯಮವನ್ನು ಸುಸ್ಥಿರವಾಗಿ ಉತ್ತೇಜಿಸಲು ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ ಮುಂದಾಗಿದೆ. ಹಂಪಿ ಪರಿಸರದಲ್ಲಿ ಪ್ರಮುಖ 9 ಯೋಜನೆಗಳಿಗೆ ಒಟ್ಟು 96 ಕೋಟಿ ರೂ. ವಿನಿಯೋಗಿಸಲು ಮುಂದಾಗಿದ್ದು, ಹಂಪಿ ಚಿತ್ರಣ ಸಂಪೂರ್ಣವಾಗಿ ಬದಲಾಗಲಿದೆ.

ಗಣಿಬಾಧಿತ ಪ್ರದೇಶಗಳ ಸಮಗ್ರ ಪರಿಸರ ಯೋಜನೆ (ಕೆಎಂಇಆರ್‌ಸಿ) ಅಡಿ ಈ ಅನುದಾನ ಬಿಡುಗಡೆಯಾಗಿದೆ.

ಹಂಪಿ ಮತ್ತು ಕಮಲಾಪುರ ಭಾಗಗಳು ಗಣಿ ಚಟುವಟಿಕೆಯಿಂದ ಪರೋಕ್ಷವಾಗಿ ಬಾಧಿತವಾಗಿದ್ದ ಹಿನ್ನೆಲೆಯಲ್ಲಿ ಈ ಭಾಗದ ಪರಿಸರ ರಕ್ಷಣೆ ಮತ್ತು ಸುಸ್ಥಿರ ಪ್ರವಾಸೋದ್ಯಮಕ್ಕೆ ಆದ್ಯತೆ ನೀಡಲಾಗಿದೆ.

ಗಣಿ ಚಟುವಟಿಕೆಗಳಿಂದ ಪರೋಕ್ಷವಾಗಿ ಹಾನಿಗೊಳಗಾದ ಪರಿಸರವನ್ನು ಸುಧಾರಿಸುವುದು ಮತ್ತು ಹಂಪಿಯ ಐತಿಹಾಸಿಕ ಮಹತ್ವವನ್ನು ಉಳಿಸಿಕೊಂಡು ಪ್ರವಾಸಿಗರಿಗೆ ಜಾಗತಿಕ ಮಟ್ಟದ ಸೌಲಭ್ಯ ನೀಡುವುದು ಈ ಯೋಜನೆಯ ಮೂಲ ಉದ್ದೇಶ.

ಪರಿಸರಕ್ಕೆ ಹಾನಿಯಾಗದಂತೆ ಮೂಲಸೌಕರ್ಯ ವೃದ್ಧಿ ಪಡಿಸುವುದು, ಪ್ರವಾಸೋದ್ಯಮದ ಮೂಲಕ ಸ್ಥಳೀಯರ ಬಲವರ್ದನೆ, ಐತಿಹಾಸಿಕ ಸ್ಮಾರಕಗಳ ಸುತ್ತಮುತ್ತಲಿನ ಪರಿಸರ ಕಾಪಾಡುವುದು ಇದರ ಮುಖ್ಯ ಉದ್ದೇಶ.

ಅದರ ಭಾಗವಾಗಿ ಪಾರಂಪರಿಕ ಗ್ರಾಮ ಯೋಜನೆಯಡಿ ವಿಜಯನಗರ ಕಾಲದ ಸಂಸ್ಕೃತಿ ಮತ್ತು ಜೀವನಶೈಲಿ ಪ್ರತಿಬಿಂಬಿಸುವ ಗ್ರಾಮದ ನಿರ್ಮಾಣ, ಹಂಪಿಯ ಇತಿಹಾಸ ಪ್ರವಾಸಿಗರಿಗೆ ಡಿಜಿಟಲ್ ಮತ್ತು ಭೌತಿಕವಾಗಿ ವಿವರಿಸುವ ಕೇಂದ್ರ, ಕಮಲಾಪುರ ಸೇರಿದಂತೆ ಸುತ್ತಮುತ್ತಲಿನ ಪುರಾತನ ಜಲ ಮೂಲಗಳಲ್ಲಿ

ಹೂಳೆತ್ತುವುದು ಮತ್ತು ಸೌಂದರ್ಯೀಕರಣ, ಹಂಪಿ ಭಾಗದಲ್ಲಿ ಮಾಲಿನ್ಯ ತಡೆಗಟ್ಟಲು ವಾಹನ ಮುಕ್ತ ಸಂಚಾರಕ್ಕಾಗಿ ಸೈಕಲ್ ಟ್ರ್ಯಾಕ್‌ಗಳ ನಿರ್ಮಾಣ, ಹಂಪಿಯ ಪ್ರವೇಶ ಮಾರ್ಗಗಳಲ್ಲಿ ವಾಸ್ತುಶಿಲ್ಪ ಶೈಲಿಯ ದ್ವಾರಗಳ ನಿರ್ಮಾಣ, ಪ್ರವಾಸಿಗರ ಅನುಕೂಲಕ್ಕಾಗಿ ಕುಡಿಯುವ ನೀರು, ಶೌಚಾಲಯ ಮತ್ತು ವಿಶ್ರಾಂತಿ ಧಾಮಗಳ ವ್ಯವಸ್ಥೆ ಮಾಡಲಾಗುತ್ತದೆ.

ಆರ್ಥಿಕ ಮತ್ತು ಸಾಮಾಜಿಕ ಲಾಭಗಳು: ಪ್ರವಾಸಿಗರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಈ ಯೋಜನೆ ರೂಪಿಸಲಾಗಿದೆ. 2030ರ ವೇಳೆಗೆ ವಾರ್ಷಿಕ 19.24 ಲಕ್ಷ ಪ್ರವಾಸಿಗರು ಮತ್ತು 2035ರ ವೇಳೆಗೆ ವಾರ್ಷಿಕ 31.19 ಲಕ್ಷ ಪ್ರವಾಸಿಗರು ಭೇಟಿ ನೀಡುವ ನಿರೀಕ್ಷೆಯಿದೆ. ಈ ಯೋಜನೆಯು ಕೇವಲ ಪ್ರವಾಸೋದ್ಯಮಕ್ಕೆ ಸೀಮಿತವಾಗದೆ, ಸಾಮಾಜಿಕ ಬದಲಾವಣೆಗೂ ನಾಂದಿಯಾಗಲಿದೆ.

ಈ ಯೋಜನೆಗಳ ಮೂಲ ಉದ್ದೇಶ ಕೇವಲ ಕಟ್ಟಡ ನಿರ್ಮಾಣವಲ್ಲ, ಬದಲಿಗೆ ಸ್ಥಳೀಯ ಯುವಕರಿಗೆ ಉದ್ಯೋಗ ಒದಗಿಸುವುದಾಗಿದೆ. ಇಲಾಖೆಯ ಅಂದಾಜಿನಂತೆ ಪಾರಂಪರಿಕ ಗ್ರಾಮ ಮತ್ತು ವಿಶ್ಲೇಷಣಾ ಕೇಂದ್ರ, ಕೆರೆ ಅಭಿವೃದ್ಧಿ ಮತ್ತು ನಿರ್ವಹಣೆ, ಪಾದಚಾರಿ ರಸ್ತೆ, ಮಹಾದ್ವಾರ ಮತ್ತು ಸೈಕಲ್ ಪಥ ನಿರ್ಮಾಣದಿಂದ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸುಮಾರು 2 ಸಾವಿರ ಜನರಿಗೆ ಉದ್ಯೋಗ ಸೃಷ್ಟಿಸಲಿದೆ.

> **ಪ್ರವಾಸೋದ್ಯಮಕ್ಕೆ ಈಗ ಹೊಸ ಕಳೆ ಬರಲಿದೆ. ಹಂಪಿಯನ್ನು ಸುಸ್ಥಿರವಾಗಿ ಅಭಿವೃದ್ಧಿ ಮತ್ತು ಸ್ಥಳೀಯರಿಗೆ ಹೆಚ್ಚಿನ ಕೆಲಸ ನೀಡಲು ರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮವು 96 ಕೋಟಿ ರೂ. ವೆಚ್ಚದ 9 ಯೋಜನೆಗಳಿಗೆ ಅನುಮೋದನೆ ನೀಡಿದೆ. ಏ.8ರಂದು ಕೆಎಂಇಆರ್‌ಸಿ ವ್ಯವಸ್ಥಾಪಕ ನಿರ್ದೇಶಕರು ಹಾಗೂ ತಾಂತ್ರಿಕ ತಜ್ಞರ ತಂಡ ಹಂಪಿಗೆ ಭೇಟಿ ನೀಡಲಿದ್ದು, 9 ಯೋಜನೆಗಳಿಗೆ ಸಂಬಂಧಿಸಿ ಸ್ಥಳ ಪರಿಶೀಲನೆ ನಡೆಸುವರು.**
>
> ■ **ಕವಿತಾ ಎಸ್.ಮನ್ನಿಕೇರಿ, ಜಿಲ್ಲಾಧಿಕಾರಿ**

ಲವ್ ಜಿಹಾದ್ ಜಾಲಕ್ಕೆ ಬೀಳದಂತೆ ಎಚ್ಚರಿಕೆ ವಹಿಸಿ: ಚಕ್ರವರ್ತಿ ಸೂಲಿಬೆಲೆ



ಧಾರವಾಡ: ಈಚೆಗೆ ಲವ್ ಜಿಹಾದ್ ಹಾಗೂ ಅಪಹರಣದ ಮೂಲಕ ಹಿಂದು ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ಎಸಗುವ ಜಾಲ ಹೆಚ್ಚಾಗಿದ್ದು, ಆದ್ದರಿಂದ ಹಿಂದು ಯುವತಿಯರು ಇಂತಹ ವ್ಯಕ್ತಿಗಳ ಜಾಲಕ್ಕೆ ಬೀಳದಂತೆ ಎಚ್ಚರಿಕೆ ವಹಿಸಬೇಕು ಎಂದು ಯುವ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಹೇಳಿದರು.

ನಗರದ ಸುಭಾಷ ರಸ್ತೆಯಲ್ಲಿ ಮಂಗಳವಾರ ವಿಶ್ವ ಹಿಂದೂ ಪರಿಷತ್, ಬಜರಂಗದಳ ಹಾಗೂ ಹಿಂದು ಸಂಘಟನೆಗಳ ವತಿಯಿಂದ ಹಿಂದು ಯುವತಿಯರ ಮೇಲೆ ನಡೆಯುತ್ತಿರುವ ಲವ್ ಜಿಹಾದ್ ಖಂಡಿಸಿ ಆಯೋಜಿಸಿದ್ದ ಜನಾಕ್ರೋಶ ಪ್ರತಿಭಟನಾ ಸಮಾವೇಶದಲ್ಲಿ ಅವರು ಮಾತನಾಡಿದರು.

ಇಂದಿನ ದಿನಗಳಲ್ಲಿ ಹಿಂದೂ ಸಮಾಜದ ಹೆಣ್ಣುಮಕ್ಕಳನ್ನು ಮುಸ್ಲಿಂ ಸಮುದಾಯದ ಯುವಕರು ಬೆನ್ನಿಗೆ ಬಿದ್ದು, ಮತಾಂತರ ಮಾಡುತ್ತಿದ್ದಾರೆ. ಏನೂ ಅರಿಯದ ಅಪ್ರಾಪ್ತ ಮಕ್ಕಳ ಇಂತಹ ಕೃತ್ಯಗಳಿಗೆ ಬಲಿಯಾಗಿದ್ದಾರೆ. ಆದ್ದರಿಂದ ಪೊಲೀಸರು ಇಂತಹ ಘಟನೆಗಳನ್ನು ಮರುಕಳಿಸದಂತೆ ಕಠಿಣ ಕ್ರಮ ಕೈಗೊಳಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಹಿಂದು ಸಂಘಟನೆಗಳಿಂದ ದೊಡ್ಡ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಕಳೆದ ದಿನಗಳಲ್ಲಿ ಸಮೀರ್ ಮುಲ್ಲಾ ಎಂಬಾತ ಕೇವಲ ಒಬ್ಬ ಯುವತಿಯನ್ನು ಮಾತ್ರವಲ್ಲದೆ, ಹಲವು ಹಿಂದು ಯುವತಿಯರನ್ನು ಟಾರ್ಗೆಟ್ ಮಾಡುತ್ತಿದ್ದ ಎಂಬ ಮಾಹಿತಿ ಹೊರಬಿದ್ದಿದೆ. ಅವನ ಮೊಬೈನಲ್ಲಿ ಬೇರೆ ಬೇರೆ ಯುವತಿಯರೊಂದಿಗೆ ಇರುವ ಫೋಟೋಗಳು ಹಾಗೂ ವಿಡಿಯೋಗಳು ಸಿಕ್ಕಿರುವ ದಾಖಲೆಯನ್ನು ಹಿಂದು ಕಾರ್ಯಕರ್ತರ ನೀಡಿದ್ದಾರೆ. ಆದರೆ, ಪೊಲೀಸರು ಹಿಂದು ಕಾರ್ಯಕರ್ತರ ಮೇಲೆ ಕೇಸ್ ದಾಖಲಿಸಲಾಗಿದೆ ಎಂದರು.

ಹುಬ್ಬಳ್ಳಿಯ ಕಾಲೇಜಿನಲ್ಲಿ ನೇಹಾ ಹಿರೇಮಠ ಎಂಬುವವರನ್ನು ಮುಸ್ಲಿಂ ಯುವಕ ಫಯಾಜ್ ಎಂಬಾತ ಪ್ರೀತಿಸುವಂತೆ ಪೀಡಿಸಿ ಕೊನೆಗೆ ಹಾಡಹಗಲೇ ಅವಳನ್ನು ಕೊಲೆ ಮಾಡಿದ್ದಾನೆ. ಆದರೆ, ಪೊಲೀಸರಿಗೆ ಇನ್ನೂ ಸರಿಯಾಗಿ ಸಾಕ್ಷಿ ಸಿಗುತ್ತಿಲ್ಲ, ಅವನು ಜೈಲಿನಲ್ಲಿ ಆರಾಮಾಗಿ ದಿನದೂಡುತ್ತಿದ್ದಾನೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಭಜರಂಗದಳ ಉತ್ತರ ಕರ್ನಾಟಕ ರಾಜ್ಯ ಸಹ ಸಂಚಾಲಕ ಶಿವಾನಂದ ಸತ್ತಿಗೇರಿ ಮಾತನಾಡಿ, ಡಾ.ಎಸ್.ಆರ್.ರಾಮನಗೌಡರ, ಮಹೇಶ ಪಾಟೀಲ, ದೀಪಕ ಆಕಳವಾಡಿ ಸೇರಿದಂತೆ ನೂರಾರು ಹಿಂದು ಕಾರ್ಯಕರ್ತರು ಇತರರು ಇದ್ದರು.

ಖರ್ಗೆ ಹೇಳಿಕೆಗೆ ಸೂಲಿಬೆಲೆ ಕಿಡಿ

ಧಾರವಾಡ : ಮಲ್ಲಿಕಾರ್ಜುನ ಖರ್ಗೆ ಅವರು ಸಾರ್ವಜನಿಕವಾಗಿ ಇಸ್ಲಾಂ ಧರ್ಮದ ಆಚರಣೆ ಅಥವಾ ನಮಾಜ್ ಬಗ್ಗೆ ತೋರುತ್ತಿರುವ ಒಲವಿನ ವಿರುದ್ಧ ಪ್ರಖರ ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಅಸಮಾಧಾನ ವ್ಯಕ್ತಪಡಿಸಿದರು. ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಮಲ್ಲಿಕಾರ್ಜುನ ಖರ್ಗೆ ಮತಬ್ಯಾಂಕ್ ಓಲೈಕೆಗಾಗಿ ತಮ್ಮ ಮೂಲ ಸಂಸ್ಕೃತಿಯನ್ನು ಮರೆಯುತ್ತಿದ್ದಾರೆ. ರಾಜಕೀಯ ಲಾಭಕ್ಕಾಗಿ ನಮಾಜ್ ಅಥವಾ ಅಲ್ಪಸಂಖ್ಯಾತರ ತುಷ್ಟೀಕರಣಕ್ಕೆ ಆದ್ಯತೆ ನೀಡುವುದು ದುರದೃಷ್ಟಕರ ಎಂದರು. ಕೊಲ್ಲಿ ನಾಶದ ಹೇಳಿಕೆ ಅತ್ಯಂತ ಹೇಯವಾಗಿದ್ದು, ಶಕುನಿ ಕೌರವರ ಜೊತೆಗಿದ್ದು, ಕೌರವರ ನಾಶ ಪಡಿಸಿದಂತೆ ಮಲ್ಲಿಕಾರ್ಜುನ ಖರ್ಗೆ ಕಾಂಗ್ರೆಸ್ ನಾಶಪಡಿಸಲು ಆ ಪಕ್ಷಕ್ಕೆ ಸೇರಿದ್ದಾರೆ ಆರೋಪ ಮಾಡಿದರು. ಖರ್ಗೆ ಅವರು ಸಂವಿಧಾನದ ಬಗ್ಗೆ ಮಾತನಾಡುತ್ತಾರೆ. ಆದರೆ, ಸಂವಿಧಾನವು ಎಲ್ಲರಿಗೂ ಸಮಾನ ಹಕ್ಕು ನೀಡಿದೆ. ದೇಶದ ಹಿರಿ ನಾಯಕರೊಬ್ಬರು ಕೇವಲ ಒಂದು ವರ್ಗದ ಓಲೈಕೆಯಲ್ಲಿ ತೊಡಗಿದರೆ ದೇಶದ ಐಕ್ಯತೆಗೆ ಧಕ್ಕೆಯಾಗುತ್ತದೆ ಎಂದು ಅವರು ಎಚ್ಚರಿಸಿದರು.

ಕಿರುಸುದ್ದಿ

ನಗರಾಭಿವೃದ್ಧಿ ಕೋಶದ ಎಂಜಿನಿಯರ್ ಮನೆ ಮೇಲೆ ಲೋಕಾ ದಾಳಿ

ಬೆಳಗಾವಿ: ಭ್ರಷ್ಟಾಚಾರ ಆರೋಪದಡಿ ಬೆಳಗಾವಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಎಇಇ ಅಜಯ್ ಸಿಂಗ್ ರಜಪೂತ ಅವರ ಮನೆಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ಮಂಗಳವಾರ ಏಕಕಾಲಕ್ಕೆ ದಾಳಿ ನಡೆಸಿದ್ದಾರೆ. ನಗರದ ಆಂಜನೇಯ ನಗರದಲ್ಲಿರುವ ನಿವಾಸ, ಅಥಣಿ ಹಾಗೂ ಹುಕ್ಕೇರಿ ಪಟ್ಟಣಗಳಲ್ಲಿನ ಆಸ್ತಿಗಳ ಮೇಲೆ ನಡೆದ ದಾಳಿಯಲ್ಲಿ ಪರಿಶೀಲನೆ ವೇಳೆ ಒಂದು ಕೆಜಿಗೂ ಅಧಿಕ ಚಿನ್ನಾಭರಣ ಪತ್ತೆಯಾಗಿದ್ದು, ಬ್ಯಾಂಕ್ ಖಾತೆಗಳಲ್ಲಿ ಸುಮಾರು 2 ಕೋಟಿ ಠೇವಣಿ ಇರುವುದು ಬೆಳಕಿಗೆ ಬಂದಿದೆ. ಇದೇ ವೇಳೆ, ಬೆಳಗಾವಿ ನಗರದಲ್ಲೇ ಅಕ್ಕಪಕ್ಕದಲ್ಲಿರುವ ಮೂರು ಮನೆಗಳನ್ನು ಹೊಂದಿರುವುದು ಅಧಿಕಾರಿಯ ಆಸ್ತಿ ಪ್ರಮಾಣದ ಬಗ್ಗೆ ಅನುಮಾನ ಹುಟ್ಟಿಸಿದೆ. ಅಕ್ರಮ ಆಸ್ತಿ ಹೊಂದಿರುವ ಆರೋಪದಡಿ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ ಎಂದು ತಿಳಿದುಬಂದಿದೆ. ಡಿವೈಎಸ್ಪಿ ಬಿ.ಎಸ್.ಪಾಟೀಲ್ ಹಾಗೂ ಭರತ್ ರೆಡ್ಡಿ ನೇತೃತ್ವದಲ್ಲಿ ನಡೆದ ಈ ಕಾರ್ಯಾಚರಣೆ ಮುಂದುವರಿದಿದ್ದು, ಹೆಚ್ಚಿನ ದಾಖಲೆಗಳ ಪರಿಶೀಲನೆ ನಡೆಯುತ್ತಿದೆ.

ಸಿಮೆಂಟ್ ಟ್ಯಾಂಕರ್ ಡಿಕ್ಕಿ: ತಂದೆ-ಮಗಳ ದುರ್ಮರಣ

ಕಲಬುರಗಿ: ನಗರದ ರಿಂಗ್ ರಸ್ತೆಯಲ್ಲಿ ಮಂಗಳವಾರ ಸಂಜೆ ಸಿಮೆಂಟ್ ಮಿಕ್ಸರ್ ಟ್ಯಾಂಕರ್ ಡಿಕ್ಕಿಯಾದ ರಭಸಕ್ಕೆ ತಂದೆ–ಮಗಳು ಸ್ಥಳದಲ್ಲೇ ಮೃತಪಟ್ಟ ಘಟನೆ ಸೈಯದ್ ಚಿಂಚೋಳಿ ಕ್ರಾಸ್ ಬಳಿ ನಡೆದಿದೆ. ನಗರದ ರಾಣೇಶಪೀರ ದರ್ಗಾ ಪ್ರದೇಶದ ನಿವಾಸಿಗಳಾದ ರಾಜುಕುಮಾರ್ ಮಾನಿಂಗಗೋಳ (45) ಮತ್ತು ಅವರ ಪುತ್ರಿ ಸುಮಾ (14) ಎಂದು ಮೃತಪಟ್ಟಿದ್ದಾರೆ ತಂದೆ–ಮಗಳು ಬೈಕ್ ಮೇಲೆ ಮನೆಗೆ ತೆರಳುತ್ತಿದ್ದಾಗ, ವೇಗವಾಗಿ ಬಂದ ಸಿಮೆಂಟ್ ಮಿಕ್ಸರ್ ಟ್ಯಾಂಕರ್ ಇವರ ವಾಹನಕ್ಕೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಟ್ಯಾಂಕರ್‌ನ ಚಕ್ರದ ಅಡಿಯಲ್ಲಿ ಸಿಲುಕಿ ಸ್ಥಳದಲ್ಲೇ ಪ್ರಾಣ ಬಿಟ್ಟಿದ್ದಾರೆ. ವಿಷಯ ತಿಳಿದ ತಕ್ಷಣ ಸ್ಥಳಕ್ಕೆ ಆಗಮಿಸಿದ ಪೊಲೀಸರು ಪರಿಶೀಲನೆ ನಡೆಸಿ ಆರೋಪಿ ಅಂಧ್ರದ ಸುರೇಶ ಎಂಬ ಚಾಲಕನನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಈ ಕುರಿತು ಸಂಚಾರಿ ಪೊಲೀಸ್ ಠಾಣೆ–2ರಲ್ಲಿ ಪ್ರಕರಣ ದಾಖಲಾಗಿದೆ.

ಆರ್.ಡಿ.ಪಾಟೀಲಗೆ ಮೈಸೂರು ಜೈಲಿಗೆ ವರ್ಗಾಯಿಸಿದ್ದ ಆದೇಶ ರದ್ದು



ಕಲಬುರಗಿ: ಪಿಎಸ್‌ಐ ನೇಮಕಾತಿ ಹಗರಣದ ಪ್ರಮುಖ ಆರೋಪಿ ಕಿಂಗ್‌ಪಿನ್ ರುದ್ರಗೌಡ ಪಾಟೀಲ್ (ಆರ್.ಡಿ.ಪಾಟೀಲ್) ಅವರನ್ನು ಕಲಬುರಗಿ ಕೇಂದ್ರ ಕಾರಾಗೃಹದಿಂದ ಮೈಸೂರು ಜೈಲಿಗೆ ವರ್ಗಾಯಿಸಿದ್ದ ಕೆಳ ಹಂತದ ನ್ಯಾಯಾಲಯದ ಆದೇಶವನ್ನು ಕರ್ನಾಟಕ ಹೈಕೋರ್ಟ್ ರದ್ದುಗೊಳಿಸಿದೆ. ಇದರಿಂದಾಗಿ ಆರ್.ಡಿ. ಪಾಟೀಲ್ ಮತ್ತೆ ಕಲಬುರಗಿ ಜೈಲಿಗೆ ಮರಳಲಿದ್ದಾರೆ.

ಪ್ರಕರಣದ ಹಿನ್ನೆಲೆ ಭದ್ರತಾ ಕಾರಣಗಳನ್ನು ನೀಡಿ ಕಲಬುರಗಿಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಕಳೆದ ಜನವರಿ 27ರಂದು ಆರ್.ಡಿ.ಪಾಟೀಲ್ ಅವರನ್ನು ಮೈಸೂರು ಜೈಲಿಗೆ ಸ್ಥಳಾಂತರಿಸಲು ಅನುಮತಿ ನೀಡಿತ್ತು. ಈ ಆದೇಶವನ್ನು ಪ್ರಶ್ನಿಸಿ ಅವರ ಪತ್ನಿ ಶೋಭಾ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು.

ಅರ್ಜಿದಾರರ ಪರ ವಾದ ಆಲಿಸಿದ ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರ ಪೀಠವು, ವಿಚಾರಣಾಧೀನ ಕೈದಿಯನ್ನು ವರ್ಗಾವಣೆ ಮಾಡುವ ಮುನ್ನ ಅವರಿಗೆ ಆಕ್ಷೇಪಣೆ ಸಲ್ಲಿಸಲು ಅಥವಾ ವಾದ ಮಂಡಿಸಲು ಅವಕಾಶ ನೀಡದಿರುವುದು ನೈಸರ್ಗಿಕ ನ್ಯಾಯದ ಉಲ್ಲಂಘನೆಯಾಗಿದೆ ಎಂದು ಅಭಿಪ್ರಾಯಪಟ್ಟಿದೆ.

ಹೈಕೋರ್ಟ್ ಬೇಸರ ವರ್ಗಾವಣೆಗೆ ಕೇವಲ ಭದ್ರತಾ ಕಾರಣ ಎಂಬ ಅಸ್ಪಷ್ಟ ಪದ ಬಳಸಿರುವುದು ಮತ್ತು ಜಿಲ್ಲಾ ನ್ಯಾಯಾಧೀಶರು ಸರಿಯಾದ ವಿವೇಚನೆ ಬಳಸದೆ ಕೇವಲ ಅನುಮತಿಸಲಾಗಿದೆ ಎಂದು ಸಹಿ ಹಾಕಿರುವುದಕ್ಕೆ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ಸರ್ಕಾರದ ಪರ ವಕೀಲರು ಭದ್ರತೆಯ ದೃಷ್ಟಿಯಿಂದ ಈ ಕ್ರಮ ಅಗತ್ಯವಾಗಿತ್ತು ಎಂದು ವಾದಿಸಿದರೂ, ಕೈದಿಗೆ ತನ್ನ ವಾದ ಮಂಡಿಸಲು ಕಾಲಾವಕಾಶ ನೀಡಿರಲಿಲ್ಲ ಎಂಬ ಅಂಶವನ್ನು ಒಪ್ಪಿಕೊಂಡರು. ಈ ಹಿನ್ನೆಲೆಯಲ್ಲಿ ಹೈಕೋರ್ಟ್ ತಕ್ಷಣವೇ ಆರ್ .ಡಿ. ಪಾಟೀಲ್ ಅವರನ್ನು ಮೈಸೂರಿನಿಂದ ಕಲಬುರಗಿ ಜೈಲಿಗೆ ಮರು ವರ್ಗಾವಣೆ ಮಾಡುವಂತೆ ಸೂಚಿಸಿದೆ.

ಹಿಪ್ಪರಗಿ ಬ್ಯಾರೇಜ್: ಹೊಸ ಗೇಟ್ ಅಳವಡಿಕೆಗೆ ಸಜ್ಜು



ರಬಕವಿ-ಬನಹಟ್ಟಿ: ಕಳೆದ ಜನವರಿ 6ರಂದು ಹಿಪ್ಪರಗಿ ಬ್ಯಾರೇಜ್‌ನ ಗೇಟ್ ನಂ.22ರ 2ನೇ ಭಾಗದ ಅಂಶ ಕಿತ್ತು ಹೋಗಿ ಸಂಭವಿಸಿದ ಅವಘಡದಿಂದ ಸುಮಾರು ಎರಡುವರೆ ಟಿಎಂಸಿಯಷ್ಟು ನೀರು ಪೋಲಾಗಿತ್ತು.

ನಂತರ ತಾತ್ಕಾಲಿಕವಾಗಿ ಗೇಟ್ ಅಳವಡಿಸುವುದರೊಂದಿಗೆ ತಡವಾಗಿ ಯಾದರೂ ಸುಖಾಂತ್ಯ ಕಂಡಿತ್ತು. 1.4 ಕೋಟಿ ರೂ.ಗಳ ವೆಚ್ಚದ ಕಾಮಗಾರಿಯಾಗಿದ್ದ ಈ ಗೇಟ್ ಅಳವಡಿಕೆಗೆ ಜನವರಿ 12ರಂದು ಕಂದಾಯ ಸಚಿವ ಕೃಷ್ಣ ಭೈರೇಗೌಡರು ಟೆಂಡರ್ ಪ್ರಕ್ರಿಯೆಗೆ ಅನುಮೂದಿಸಿ, ಜ.17ರಂದು ಟೆಂಡರ್ ಪ್ರಕ್ರಿಯೆ ನಡೆಸಿದ್ದರು. ಇದೀಗ ಮಂಗಳವಾರ ಖಾಸಗಿ ಕಂಪನಿಯು ಹಿಪ್ಪರಗಿ ಬ್ಯಾರೇಜ್‌ನ ಗೇಟ್ ನಂ.22ರ ಹೊಸ ಗೇಟ್ ಅಳವಡಿಕೆಗೆ ಕಚ್ಚಾ ಸಾಮಗ್ರಿಗಳು ಬಂದಿದ್ದು, ಗೇಟ್‌ನ ಪ್ಲೇಟ್ ಅಳವಡಿಕೆಗೆ ಸಂಬಂಧಿತ ಅನುಭವಿ ತಾಂತ್ರಿಕ ವರ್ಗ, ಯಂತ್ರೋಪಕರಣಗಳು ಕಾರ್ಯ ನಿರ್ವಹಣೆಗೆಸಜ್ಜಾಗಿವೆ.ಬುಧವಾರಬಳಗ್ಗೆ ರಾಜ್ಯದಿಂದ ಅಣೆಕಟ್ಟು ಪರಿವೀಕ್ಷಣಾ ತಂಡವು ಸ್ಥಳಕ್ಕೆ ಆಗಮಿಸಲಿದ್ದು, ಗೇಟ್ ನಂ.22 ಸೇರಿದಂತೆ ಉಳಿದೆಲ್ಲ ಗೇಟ್‌ಗಳ ಬಗ್ಗೆ ಮಾಹಿತಿ ಕಲೆ ಹಾಕುವುದರೊಂದಿಗೆ ಅಣೆಕಟ್ಟು ಸುರಕ್ಷತೆ ಬಗ್ಗೆ ಅವಲೋಕನ ನಡೆಯಲಿದೆ.

ಅಪಘಾತ: ಬಾಲಕ ಸಾವು

ಬೆಳಗಾವಿ: ವೇಗವಾಗಿ ಹಿಂಬದಿಯಿಂದ ಆಗಮಿಸಿ ಟಿಪ್ಪರ್ ಬೈಕ್ ಸವಾರರಿಗೆ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲಿಯೇ ತಂದೆಯ ಮುಂದೆ ನಾಲ್ಕು ವರ್ಷದ ಮಗ ಮೃತಪಟ್ಟ ಘಟನೆ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಮೇಕಲಮರಡಿ ಕ್ರಾಸ್ ಬಳಿ ನಡೆದಿದೆ.

ಚಿಕ್ಕಬೂದನೂರ ಗ್ರಾಮದ ಪುಂಡಲೀಕ ಲಿಂಬಣ್ಣ ಗಿರೆಣ್ಣವರ (4) ಮೃತಪಟ್ಟ ಬಾಲಕ. ತಂದೆ ಮಗ ಬೈಕ್ ಮೇಲೆ ಹೋಗುವಾಗ ಹಿಂಬದಿಯಿಂದ ಟಿಪ್ಪರ್ ಡಿಕ್ಕಿ ಹೊಡೆದಿದೆ ಎನ್ನಲಾಗಿದೆ. ಅಪಘಾತದಲ್ಲಿ ತಂದೆಗೂ ಗಂಭೀರ ಗಾಯವಾಗಿದ್ದು, ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಟಿಪ್ಪರ್ ವಶಕ್ಕೆ ಪಡೆದ ನೇಸರಗಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಏ.11ಕ್ಕೆ ಕಾರಂಜಾ ಸಂತ್ರಸ್ತರ ಬೃಹತ್ ಹಕ್ಕೊತ್ತಾಯ ಸಮಾವೇಶ



ಬೀದರ: ಕಾರಂಜಾ ಮುಳುಗಡೆ ಸಂತ್ರಸ್ತರ ದಶಕಗಳ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ, ಏ.11ರಂದು ನಗರದ ಅಂಬೇಡ್ಕರ್ ವೃತ್ತದಲ್ಲಿ ಬೃಹತ್ ಹಕ್ಕೊತ್ತಾಯ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಕಾರಂಜಾ ಮುಳುಗಡೆ ಸಂತ್ರಸ್ತರ ಹಿತರಕ್ಷಣ ಸಮಿತಿ' ಹಾಗೂ ಬೀದರ್ ಸಮಗ್ರ ಅಭಿವೃದ್ಧಿ ಜಂಟಿ ಕ್ರಿಯಾ ಸಮಿತಿಗಳ ಸಂಯುಕ್ತ ಆಶ್ರಯದಲ್ಲಿ ಈ ಹೋರಾಟ ನಡೆಯಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಂದು ಬೀದರ್ ಜಿಲ್ಲೆಗೆ ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಸಂತ್ರಸ್ತ ರೈತರ ಸಮಸ್ಯೆಗಳು ಸರ್ಕಾರದ ಗಮನಕ್ಕೆ ತರಲು ಈ ಸಮಾವೇಶವನ್ನು ಆಯೋಜಿಸಲಾಗಿದೆ ಎಂದು ಸಮಿತಿಯ ಪದಾಧಿಕಾರಿಗಳು ತಿಳಿಸಿದ್ದಾರೆ.

ಈ ಸಮಾವೇಶದ ಯಶಸ್ಸಿಗಾಗಿ ಈಗಾಗಲೇ ಸಮಿತಿಯ ಮುಖಂಡರು ಕಾರಂಜಾ ಯೋಜನೆಯಿಂದ ಬಾಧಿತವಾಗಿರುವ 28 ಹಳ್ಳಿಗಳಿಗೆ ಭೇಟಿ ನೀಡಿ, ರೈತರನ್ನು ಭೇಟಿಯಾಗಿ ಸಮಾವೇಶಕ್ಕೆ ಆಗಮಿಸುವಂತೆ ಆಹ್ವಾನ ನೀಡಿದ್ದಾರೆ.

ಗ್ರಾಮಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಮಿತಿಯ ಮುಖಂಡರು ಮಾತನಾಡಿ, ಕಾರಂಜಾ ರೈತರು ತಮ್ಮ ಭೂಮಿ ನೀಡಿ ಜಿಲ್ಲೆಯ ಅಭಿವೃದ್ಧಿಗೆ ಸಹಕರಿಸಿದ್ದಾರೆ. ಆದರೆ, ಇಂದು ಅವರೇ ಸಂಕಷ್ಟದಲ್ಲಿದ್ದಾರೆ. ಹಕ್ಕುಗಳಿಗಾಗಿ ಎಲ್ಲರೂ ಒಗ್ಗಟ್ಟಾಗಬೇಕು. ಏ.11ರಂದು ಸಾವಿರಾರು ರೈತರು ಅಂಬೇಡ್ಕರ್ ವೃತ್ತದಲ್ಲಿ ಸೇರಿ ಶಕ್ತಿ ಪ್ರದರ್ಶನ ಮಾಡಬೇಕು ಎಂದು ಮನವಿ ಮಾಡಿದರು.

ಹಕ್ಕೊತ್ತಾಯದ ಪ್ರಮುಖ ಅಂಶಗಳು: ಮುಳುಗಡೆ ಸಂತ್ರಸ್ತರಿಗೆ ಮಾನವೀಯತೆ ಹಾಗೂ ವೈಜ್ಞಾನಿಕ ಮಾನದಂಡದ ಆಧಾರದ ಮೇಲೆ ನ್ಯಾಯಯುತ ಪರಿಹಾರ ಘೋಷಣೆ. ಸಂತ್ರಸ್ತ ಕುಟುಂಬಗಳಿಗೆ ಮೂಲಭೂತ ಸೌಕರ್ಯಗಳನ್ನೊಳಗೊಂಡ ಸಮರ್ಪಕ ಪುನರ್ವಸತಿ ವ್ಯವಸ್ಥೆ.

ದಶಕಗಳಿಂದ ಬಾಕಿ ಇರುವ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಲು ಸರ್ಕಾರದ ಗಮನ ಸೆಳೆಯುವುದು. ಈ ಸಂದರ್ಭದಲ್ಲಿ ಸಮಿತಿಯ ಪದಾಧಿಕಾರಿಗಳಾದ ಚಂದ್ರಶೇಖರ್ ಪಾಟೀಲ್ ಹುಚ್ಚಕ್ಕಳ್ಳಿ, ರಾಜಪ್ಪ, ಸಂಗಾರೆಡ್ಡಿ, ಮಾದಪ್ಪ, ವೀರೇಂದ್ರ ಭತಮುರ್ಗೆ, ಮೊಹಮ್ಮದ್ ಅಹಮದ್, ಯೂಸುಫ್ ಅಲಿ, ಡಾ. ರಾಜಶೇಖರ್ ಹಾಗೂ ಸಾಮಾಜಿಕ ಹೋರಾಟಗಾರರಾದ ವಿನಯ್ ಕುಮಾರ್ ಮಾಳಗೆ, ಜಗದೀಶ್ವರ ಬಿರಾದಾರ, ರೋಹನ್ ಕುಮಾರ್ ಸೇರಿದಂತೆ ವಿವಿಧ ಗ್ರಾಮಗಳ ಪ್ರಮುಖರು ಉಪಸ್ಥಿತರಿದ್ದರು.

ನಿಷ್ಪಕ್ಷಪಾತ ತನಿಖೆ ನಡೆಸಿ: ಜೋಶಿ



ಹುಬ್ಬಳ್ಳಿ: ಹುಬ್ಬಳ್ಳಿ–ಧಾರವಾಡ ಪೊಲೀಸ್ ಆಯುಕ್ತರು ಇತ್ತೀಚೆಗೆ ನಗರದಲ್ಲಿ ನಡೆದ ಯುವತಿಯರ ಮೇಲಿನ ದೌರ್ಜನ್ಯ ಪ್ರಕರಣದ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ತಿಳಿಸಿದ್ದಾರೆ.

ಸಂತ್ರಸ್ತ ಯುವತಿಯ ಮನೆಗೆ ಭೇಟಿ ನೀಡಿ ಕುಟುಂಬದವರಿಂದ ಮಾಹಿತಿ ಪಡೆದ ಸಚಿವರು, ನಂತರ ಮಾಧ್ಯಮದವರ ಜೊತೆ ಮಾತನಾಡಿದ ಅವರು, ಸಂಧಾನ ಹಾಗೂ ಸಮತೋಲನ ಮಾಡಲು ಪ್ರಯತ್ನ ಮಾಡಬಾರದು. ಇದು ಉದ್ವಿಗ್ನತೆಗೆ ಕಾರಣವೂ ಆಗಬಹುದು ಎಂದು ಎಚ್ಚರಿಕೆ ನೀಡಿದರು.

ಅವಳಿನಗರದಲ್ಲಿ ಕೆಲವು ಹೋಟೆಲ್, ಜಿಮ್‌ಗಳು ಲವ್ ಜಿಹಾದ್ ಕೇಂದ್ರಗಳಾಗುತ್ತಿವೆ ಎನ್ನುವ ಆರೋಪ ಪೋಷಕರಿಂದ ಕೇಳಿ ಬಂದಿದೆ. ಈ ಪ್ರಕರಣಗಳ ತನಿಖೆ ಕುರಿತು ಕೆಲವರು ಪೊಲೀಸರ ಮೇಲೆ ಒತ್ತಡ ಹೇರುತ್ತಿದ್ದಾರೆ ಎಂದು ಆರೋಪಿಸಿದರು.

ಸ್ಥಳೀಯ ಪುಡಿ ರಾಜಕಾರಣಿಗಳು ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಯುವತಿಯ ಮುಖವನ್ನು ಮರೆಮಾಚದೆ, ಅವರ ಹಳೆಯ ಹಾಗೂ ಈಗಿನ ವಿಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೆ ಮಾಡುತ್ತಿದ್ದಾರೆ. ಅವರ ವಿರುದ್ಧವೂ ಪ್ರಕರಣ ದಾಖಲಿಸಿ ತನಿಖೆ ನಡೆಸಬೇಕು. ಇದನ್ನು ಯಾರಾದರೂ ಹಿಂದೂ–ಮುಸ್ಲಿಂ ವೋಟ್ ಬ್ಯಾಂಕ್‌ಗೆ ಬಳಸಿಕೊಂಡರೆ ಹೋರಾಟ ನಡೆಸಲಾಗುವುದು ಎಂದರು.

ಆರೋಪಿಯನ್ನು ಹಿಡಿದುಕೊಟ್ಟ 63 ಹಿಂದೂ ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಆದರೆ, ಯುವತಿಯ ಮನೆಗೆ ಬಂದು ಗಲಾಟೆ ಮಾಡಿದವರ ವಿರುದ್ಧ ಈವರೆಗೂ ಪ್ರಕರಣ ದಾಖಲಾಗಿಲ್ಲ. ಹುಬ್ಬಳ್ಳಿ ಹೋರಾಟಕ್ಕೆ ಪ್ರಸಿದ್ಧ ಎನ್ನುವುದನ್ನು ಪೊಲೀಸರು ಮರೆಯಬಾರದು. ಇಲ್ಲಿಂದ ಆರಂಭವಾದ ಹೋರಾಟ ದೊಡ್ಡಮಟ್ಟಕ್ಕೆ ವ್ಯಾಪಿಸಬಹುದು ಎಂದು ಹೇಳಿದರು.

ಬರಿದಾಗಿದ್ದ ಘಟಪ್ರಭೆಗೆ ಜೀವಕಳೆ



ಕಲಾದಗಿ: ಈ ವರ್ಷ ಮಾರ್ಚ್ ತಿಂಗಳಲ್ಲೇ ಬಿಸಿಲಿನ ತಾಪಮಾನ ಪ್ರಾರಂಭವಾಗಿದ್ದು, ಉತ್ತರ ಕರ್ನಾಟಕ ಭಾಗದಲ್ಲಿ ಪ್ರತಿವರ್ಷ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಜನ, ಜಾನುವಾರು, ಪಕ್ಷಿಗಳಿಗೆ ಕುಡಿಯುವ ನೀರಿನ ಅಭಾವ ಉಂಟಾಗಿ ಪರದಾಡುವ ಸ್ಥಿತಿ ನಿರ್ಮಾಣವಾಗುತ್ತಿತ್ತು.

ಈ ಭಾಗದ ಜನರಿಗೆ ಕುಡಿಯುವ ನೀರಿಗಾಗಿ ಹಿಡಕಲ್ ಜಲಾಶಯದಿಂದ ಘಟಪ್ರಭಾ ನದಿಗೆ 2.5ಟಿಎಂಸಿ ನೀರು ಬಿಡಲಾಗಿದ್ದು, ಬತ್ತಿ ಹೋಗಿದ್ದ ಘಟಪ್ರಬಾ ನದಿಗೆ ಮರಳಿ ಜೀವಕಳೆ ಬಂದಿದೆ. ಸದ್ಯ ಕಲಾದಗಿ–ಕಾತರಕಿ ಬ್ಯಾರೇಜಿಗೆ ನೀರು ತಲುಪಿರುವುದರಿಂದ ಈ ನದಿ ಪಾತ್ರದ ರೈತರಿಗೆ ತುಸು ಸಮಾಧಾನವಾಗಿದ್ದು, ಕಲಾದಗಿ, ಶಾರದಾಳ, ಉದಗಟ್ಟಿ, ಅಂಕಲಗಿ, ಹಿರೇ ಸಂಶಿ, ಚಿಕ್ಕ ಸಂಶಿ, ದೇವನಾಳ, ಸೊಕನಾದಗಿ ಸೇರಿದಂತೆ ಹತ್ತಾರು ಗ್ರಾಮಗಳ ನದಿ ದಂಡೆಯಲ್ಲಿರುವ ಬೋರ್‌ವೆಲ್‌ಗಳಲ್ಲಿ ಅಂತರ್ಜಲ ಮಟ್ಟ ಹೆಚ್ಚಲು ಅನುಕೂಲವಾಗಲಿದೆ. ನೀರಿನ ಹರಿವಿನ ಪ್ರಮಾಣ ಹೆಚ್ಚಾಗಿದ್ದು ನಾಳೆಯೊಳಗಾಗಿ ಅನದಿನ್ನಿ ಬ್ಯಾರೇಜ್‌ವರೆಗೂ ತಲುಪಲಿದೆ.

ಈ ವರ್ಷದ ಬೇಸಿಗೆಯ ತಾಪಮಾನದಿಂದಾಗಿ ನದಿ ಕೆರೆಗಳು ಬತ್ತಿ ಹೋಗುತ್ತಿದ್ದು ಪ್ರಾಣಿ, ಪಕ್ಷಿಗಳು, ಜಾನುವಾರುಗಳು ಸೇರಿದಂತೆ ಕುಡಿಯಲು ನೀರಿನ ಅಭಾವ ಉಂಟಾಗಿ ಸಮಸ್ಯೆಯಾಗುತ್ತಿತ್ತು. ಬೀಳಗಿ ಶಾಸಕ ಜೆ.ಟಿ ಪಾಟೀಲರ ಪ್ರಯತ್ನದಿಂದಾಗಿ ಘಟಪ್ರಭಾ ನದಿಗೆ ನೀರು ಬಂದಿದ್ದು ನಮ್ಮೆಲ್ಲ ರೈತರ ಮುಖದಲ್ಲಿ ಮಂದಹಾಸ ಮೂಡಿದೆ ಎಂದು ಅಂಕಲಗಿ ಗ್ರಾಮದ ಯುವ ರೈತ ಮುಖಂಡ ಬಸವರಾಜ ಬಿಲಕೇರಿ ತಿಳಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ನೀರಿನ ಪೈಪ್‌ಲೈನ್ ಒಡೆದು ನೀರು ಪೋಲು



ದಾಂಡೇಲಿ: ದಾಂಡೇಲಿ–ಹಳಿಯಾಳ ರಾಜ್ಯ ಹೆದ್ದಾರಿಯಲ್ಲಿ ಬರುವ ಹಳಿಯಾಳ ರಸ್ತೆಯ 1ನಂ. ಗೇಟ್ ಹತ್ತಿರ ನೀರಿನ ಪೈಪ್‌ಲೈನ್ ಒಡೆದು, ಅಪಾರ ಪ್ರಮಾಣದಲ್ಲಿ ನೀರು ಪೋಲಾದ ಘಟನೆ ಮಂಗಳವಾರ ನಡೆದಿದೆ.

ದಾಂಡೇಲಿಯಿಂದ ಹಳಿಯಾಳದ ಕೆರೆ ಹಾಗೂ ಬಾಂದಾರುಗಳಿಗೆ ನೀರು ತುಂಬಿಸುವ ಯೋಜನೆಗಾಗಿ ಅಳವಡಿಸಲಾದ ಪೈಪ್‌ಲೈನ್ ಇದಾಗಿದೆ ಎಂದು ತಿಳಿದು ಬಂದಿದೆ. ಪೈಪ್‌ಲೈನ್ ಒಡೆದಿರುವ ಕಡೆ ಸಿಮೆಂಟ್ ರಸ್ತೆ ನಿರ್ಮಾಣವಾಗುತ್ತಿದೆ. ಇದೀಗ ಬಾರಿ ಪ್ರಮಾಣದಲ್ಲಿ ನೀರು ರಭಸವಾಗಿ ಹೊರ ಬರುತ್ತಿರುವ ಹಿನ್ನಲೆಯಲ್ಲಿ ಹೊಸದಾಗಿ ನಿರ್ಮಿಸಿದ ಸಿಮೆಂಟ್ ರಸ್ತೆಯ ಬಾಳಿಕೆಗೆ ತೊಂದರೆಯಾಗಲಿದೆ ಎಂದು ಅಂದಾಜಿಸಲಾಗುತ್ತಿದೆ. ಸಂಬಂಧಪಟ್ಟವರು ಈ ಕೂಡಲೇ ಈ ಬಗ್ಗೆ ಅಗತ್ಯ ಕ್ರಮವನ್ನು ಕೈಗೊಳ್ಳಬೇಕಾಗಿದೆ. ಇದೀಗ ಈ ರಸ್ತೆ ನದಿಯ ರೂಪವನ್ನು ಪಡೆದುಕೊಳ್ಳುವ ಸ್ಥಿತಿ ತಲುಪಿದೆ.

ನಡು ರಸ್ತೆಯಲ್ಲಿ ಮಲಗಿದ ಕುಡುಕ!



ದಾಂಡೇಲಿ: ಮನೆಯಲ್ಲಿ ಮಂಚದ ಮೇಲೆ ಮಲಗಿದಂತೆ ಇಲ್ಲೊಬ್ಬ ಕುಡುಕ ಕಂಠಪೂರ್ತಿ ಕುಡಿದು ನಡು ರಸ್ತೆಯಲ್ಲೇ ಬಿಂದಾಸಾಗಿ ಮಲಗಿ, ಪೊಲೀಸರಿಗೂ ಸಂಕಟ ತಂದೊಡ್ಡಿ, ಇತ್ತ ವಾಹನ ಸವಾರರು ಧರ್ಮಸಂಕಟಕ್ಕೊಳಗಾದ ಘಟನೆ ಸುಭಾಷ್ ನಗರ ಹಾಗೂ ಸೋಮಾನಿ ವೃತ್ತದ ಹತ್ತಿರ ನಡು ರಸ್ತೆಯಲ್ಲಿ ಮಂಗಳವಾರ ನಡೆದಿದೆ. ಬಹಳ ಹೊತ್ತು ಈ ಘಟನೆ ನಡೆದಿದ್ದು ಕೆಲವೊಬ್ಬರಿಗೆ ಇದು ಮೋಜು ತಂದರೇ, ಈ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರ ಆಕ್ರೋಶಕ್ಕೂ ಕಾರಣವಾಯಿತು. ಸುದ್ದಿ ತಿಳಿದು ಸ್ಥಳಕ್ಕೆ ಬಂದ ಪೊಲೀಸರು ಕುಡುಕನನ್ನು ನಡುರಸ್ತೆಯಿಂದ ಸರಿಸಲು ಪ್ರಯಾಸ ಪಟ್ಟು ಕೊನೆಗೆ ಯಶಸ್ವಿಯಾದರು. ಆನಂತರ ಸ್ವಲ್ಪ ಹೊತ್ತಿನ ಬಳಿಕ ಮತ್ತೆ ಅದೇ ಹಾಡು ಅದೇ ರಾಗ ಎಂಬಂತೆ ಸೋಮಾನಿ ವೃತ್ತದ ಹತ್ತಿರ ನಡುರಸ್ತೆಯಲ್ಲಿ ಕಾಲ ಮೇಲೆ ಕಾಲು ಹಾಕಿ ಮಲಗಿದ್ದಾನೆ. ಕಾಲ ಮೇಲೆ ಕಾಲು ಹಾಕಿ, ಶಿಸ್ತು ಬದ್ಧವಾಗಿ ಮಲಗಿದ ಈ ಕುಡುಕನ ಈ ಅವತಾರ ಈ ರಸ್ತೆಯಲ್ಲಿ ಹೋಗಿ ಬರುವವರಿಗೆ ಪುಕ್ಕಟ್ಟೆ ಮನೋರಂಜನೆಯನ್ನು ನೀಡುವಂತಿತ್ತು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	58005	68500
ಬಿಳಿಗೋಟು	29009	39399
ಕೆಂಪುಗೋಟು	22101	45099
ಬೆಟ್ಟೆ	30501	51200
ರಾಶಿ	48000	53711
ಚಾಲಿ	45000	50299
ಬಿ.ಕಾಳುಮೆಣಸು	83200	83200

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	64811	64811
ರಾಶಿ	48899	58259
ಬೆಟ್ಟೆ	38969	51315
ಕೆಂಪುಗೋಟು	21069	37969
ಬಿಳಿಗೋಟು	16899	40711
ಚಾಲಿ	38629	50099
ಕೋಕಾ	13000	34969
ಕಾಳುಮೆಣಸು	50599	66666



ಮುಂಡಗೋಡ: ಪಟ್ಟಣದ ತಹಶೀಲ್ದಾರ್ ಕಚೇರಿಯ ಸಭಾಭವನದಲ್ಲಿ ಡಾ.ಬಾಬು ಜಗಜೀವನರಾಮ್ ಅವರ 119ನೇ ಜಯಂತ್ಯುತ್ಸವ ಆಚರಿಸಲಾಯಿತು. ತಹಶೀಲ್ದಾರ್ ಶಂಕರ ಗೌಡಿ, ಪ.ಪಂ.ಮುಖ್ಯಾಧಿಕಾರಿ ಸಂತೋಷಕುಮಾರ ಎಚ್., ರಾಘವೇಂದ್ರ, ಕರೂರ, ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ, ದಲಿತ ಮುಖಂಡ ಬಸವರಾಜ ಸಂಗಮೇಶ್ವರ, ಹನುಮಂತ ಭಜಂತ್ರಿ ಮುಂತಾದವರು ಉಪಸ್ಥಿತರಿದ್ದರು.

ಗಣಪತಿ ದೇವರಿಗೆ ಸಹಸ್ರ ಮೋದಕ ಅರ್ಪಣೆ

ಬನವಾಸಿ: ಚತುರ್ಯುಗ ಪ್ರತಿಷ್ಠಿತ ಕ್ಷೇತ್ರವಾದ ಬನವಾಸಿಯ ಶ್ರೀ ಉಮಾ ಮಧುಕೇಶ್ವರ ದೇವರ ಜಾತ್ರಾ ಮಹೋತ್ಸವವು ಅತ್ಯಂತ ವೈಭವದಿಂದ ಹಾಗೂ ಯಶಸ್ವಿಯಾಗಿ ಸಂಪನ್ನಗೊಂಡಿದೆ. ಈ ಮಹೋತ್ಸವವು ದೈವಿಕ ಬಲದೊಂದಿಗೆ ಯಾವುದೇ ಅಡೆತಡೆಗಳಿಲ್ಲದೆ ಸುಸೂತ್ರವಾಗಿ ನೆರವೇರಿದ ಹಿನ್ನೆಲೆಯಲ್ಲಿ, ಸೋಮವಾರ ಶ್ರೀ ಗಣಪತಿ ದೇವರಿಗೆ ಹರಕೆಯ ರೂಪದಲ್ಲಿ 'ಸಹಸ್ರ ಮೋದಕ'ಗಳನ್ನು ಅರ್ಪಿಸಲಾಯಿತು.

ಜಾತ್ರಾ ಮಹೋತ್ಸವದಲ್ಲಿ ಹಗಲೋತ್ಸವ, ತಿರುಗುಣಿತೇರು ಹಾಗೂ ಹೂವಿನ ರಥೋತ್ಸವಗಳು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆದವು. ವಿಶೇಷವಾಗಿ ದಕ್ಷಿಣ ಭಾರತದ ಅತಿ ಎತ್ತರದ ರಥಗಳಲ್ಲಿ ಒಂದೆಂದು ಖ್ಯಾತಿ ಪಡೆದಿರುವ 'ಮಹಾಸಂದ್ಯನ' ರಥೋತ್ಸವವು ಯಶಸ್ವಿಯಾಗಿ ಸಾಗಿತು. ವೇ.ಮೂ. ಶ್ರೀನಿಧಿ ಭಟ್ ಮಂಗಳೂರು ಅವರ ನೇತೃತ್ವದಲ್ಲಿ ನಡೆದ ಧಾರ್ಮಿಕ ವಿಧಿವಿಧಾನಗಳಲ್ಲಿ ಶ್ರೀ ಮಹಾಗಣಪತಿಗೆ ಸಹಸ್ರ ಮೋದಕಗಳನ್ನು ಅರ್ಪಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ಈ ಮೂಲಕ ಭಕ್ತ ಮಹಾಜನರು ದೇವರಿಗೆ ಹರಕೆ ಸಮರ್ಪಿಸಿದರು. ಬಂದ ಭಕ್ತಾದಿಗಳಿಗೆ ಮೋದಕವನ್ನು ಹಂಚಲಾಯಿತು. ದೇವಸ್ಥಾನದ ಅಧ್ಯಕ್ಷರಾದ ಸುಧಾಕರ ಹೇಮಾದ್ರಿ, ಉಪಾಧ್ಯಕ್ಷ ಪ್ರಕಾಶ ಬಂಗ್ಲೆ, ಕಾರ್ಯದರ್ಶಿ ಲತಾ ಶೆಟ್ಟಿ, ಖಜಾಂಚಿ ಮೇಘರಾಜ ನರೆಗಲ್. ಅರ್ಚಕರಾದ ವಿನಾಯಕ ಮಂಗಳೂರು ಸದಸ್ಯಯರಾದ ಗೀತಾ ಯಜಮಾನ, ಗಣಪತಿ ಹೆಗಡೆ, ಶಿವಾಜಿ ಚನ್ನಯ್ಯ, ಪರಮೇಶ್ವರ ಉಪ್ಪಾರ ರಾಜಶೇಖರ ಒಡೆಯರ್, ಸೇರಿದಂತೆ ಸ್ವಯಂಸೇವಕರು, ತಾಂತ್ರಿಕರು ಬಾಬುದಾರರು, ಉಪಾದಿವಂತರು ಹಾಗೂ ಊರಿನ ಸಮಸ್ತ ಭಕ್ತಾದಿಗಳು ಉಪಸ್ಥಿತರಿದ್ದು ಶ್ರೀ ದೇವರ ಕೃಪೆಗೆ ಪಾತ್ರರಾದರು.



ಭಟ್ಕಳ: ದುರ್ಗಾಪರಮೇಶ್ವರಿ ಅಮ್ಮನವರ ದೇವಸ್ಥಾನ ಮುಂಡಳ್ಳಿ ಇದರ ಅಷ್ಟಬಂಧ ಬ್ರಹ್ಮ ಕಲಶೋತ್ಸವದ ಮೊದಲ ದಿನವಾದ ಭಾನುವಾರ ಉಮೇಶ ಮುಂಡಳ್ಳಿ ಅವರ ನಿನಾದ ಕಲ್ಚರಲ್ ಅಕಾಡೆಮಿ ವತಿಯಿಂದ ಭಾವಗಾನ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ನಂತರ ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷ ಎಸ್.ಬಿ.ಬೊಮ್ಮಾಯ ಹಾಗೂ ಭಾವಗಾನದ ಪ್ರಾಯೋಜಕರಾದ ಸುರೇಶ್ ಮೊಗೇರ ಹಾವಳಿಕಂಠ ಹಾಗೂ ಸರ್ವ ಸದಸ್ಯರು ಸೇರಿ ಉಮೇಶ ಮುಂಡಳ್ಳಿ ಅವರನ್ನು ಗೌರವಿಸಿ ಸನ್ಮಾನಿಸಿದರು.

ಸಾರ್ವಜನಿಕರಿಗೆ ಆರೋಗ್ಯ ಸಮಸ್ಯೆ ಭೀತಿ | ಜೀವ ಭಯದಲ್ಲಿ ಪಾದಚಾರಿಗಳು

ಧೂಳು ಉತ್ಪಾದನಾ ಘಟಕವಾದ ರಾಜ್ಯ ಹೆದ್ದಾರಿ

ಅಂಕೋಲಾ: ಪ್ರತಿದಿನ ನೂರಾರು ವಾಹನಗಳ ಓಡಾಟ ಇರುವ ಗೋಕರ್ಣ ಕ್ರಾಸ್ ಬಳಲೆಯಿಂದ ಹಿಲ್ಲೂರು ವಡ್ಡಿ ಮೂಲಕ ಶಿರಸಿ ಮತ್ತು ಹೊಸಕಂಬಿ ಮೂಲಕ ಹೆಬ್ಬುಳ ಬಳಿ ರಾಷ್ಟ್ರೀಯ ಹೆದ್ದಾರಿ 52ನ್ನು ಸಂಪರ್ಕಿಸುವ ರಾಜ್ಯ ಹೆದ್ದಾರಿ ಸಂಖ್ಯೆ 143 ಹಿಲ್ಲೂರು ಸುತ್ತ ಮುತ್ತಲಿನ ಪ್ರದೇಶ ವ್ಯಾಪ್ತಿಯಲ್ಲಿ ಸಂಪೂರ್ಣ ಹದಗೆಟ್ಟು ಹೋಗಿದ್ದು ಧೂಳು ಉತ್ಪಾದನಾ ಘಟಕವಾಗಿ ಪರಿಣಮಿಸಿದೆ.

ರಾಜ್ಯ ಹೆದ್ದಾರಿಯ ಪಕ್ಕದಲ್ಲಿ ನೂರಾರು ಮನೆಗಳು ಹಲವಾರು ಅಂಗಡಿಗಳಿದ್ದು ರಸ್ತೆ ಕೆಟ್ಟು ಧೂಳಾಗಿ ಹೋಗಿರುವುದರಿಂದ ವಾಹನಗಳ ಸಂಚರಿಸಿದರೆ, ಗಾಳಿ, ಬೀಸಿದರೆ ಮೇಲೇಳುವ ದೂಳು ಮನೆಗಳು ಅಂಗಡಿಗಳಿಗೆ ವ್ಯಾಪಿಸಿ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಿದೆ.

ರಸ್ತೆ ತುಂಬ ನಿರ್ಮಾಣ ಆಗಿರುವ ಹೊಂಡಗಳು ವಾಹನ ಚಾಲಕರಿಗೆ ಅಪಾಯಕಾರಿಯಾಗಿ ಪರಿಣಮಿಸಿದ್ದು ಹಲವಾರು ಜನ ದ್ವಿಚಕ್ರ ವಾಹನ ಚಾಲಕರು ಬಿದ್ದು ಪೆಟ್ಟು ಮಾಡಿಕೊಂಡಿದ್ದಾರೆ. ರಸ್ತೆ ಪಕ್ಕದಲ್ಲಿ ಸಂಚರಿಸುವ ಪಾದಚಾರಿಗಳೂ ಜೀವ ಭಯದಿಂದಲೇ ಸಂಚರಿಸುವಂತಾಗಿದ್ದು ರಸ್ತೆ ಹೊಂಡಗಳನ್ನು ತಪ್ಪಿಸುವ ಬರದಲ್ಲಿ ವಾಹನಗಳು ರಸ್ತೆ ಬದಿಗೆ ಸಂಚರಿಸುವ ಜನರ ಮೈಮೇಲೆ ಬರುವುದು ಪ್ರತಿದಿನದ ವ್ಯಥೆಯಾಗಿದೆ.

ರಸ್ತೆ ಧೂಳಿನಿಂದಾಗಿ ಅಸ್ತಮಾದಂತ ಕಾಯಿಲೆಗಳು ಕಂಡು ಬರತೊಡಗಿದ್ದು ಹಿರಿಯ ನಾಗರಿಕರು, ಶಾಲಾ ವಿದ್ಯಾರ್ಥಿಗಳು ತೊಂದರೆ ಅನುಭವಿಸುವಂತಾಗಿದೆ.

ಹುಬ್ಬಳ್ಳಿಯಿಂದ ಮಂಗಳೂರು ಕಡೆ ಹೋಗಿ ಬರುವ ಜನರಿಗೆ ರಾಷ್ಟ್ರೀಯ ಹೆದ್ದಾರಿ 52 ರಿಂದ ರಾಷ್ಟ್ರೀಯ ಹೆದ್ದಾರಿ 66ಕ್ಕೆ ಸಂಪರ್ಕ ಕಲ್ಪಿಸುವಲ್ಲಿ ಈ ರಾಜ್ಯ ಹೆದ್ದಾರಿ ಮಹತ್ವದ ಪಾತ್ರ ವಹಿಸುತ್ತಿದ್ದು ಹೆಬ್ಬುಳದಿಂದ ಗೋಕರ್ಣ ಕ್ರಾಸಿಗೆ ಬಂದರೆ ಸುಮಾರು 20 ಕಿಲೋಮಿಟರ್ ಗಿಂತ ಹೆಚ್ಚಿನ ಪ್ರಯಾಣ ಕಡಿಮೆ ಆಗುವುದರಿಂದ ಖಾಸಗಿ ಬಸ್ಸುಗಳು ಸೇರಿದಂತೆ ಹಲವಾರು ವಾಹನಗಳ ಓಡಾಟ ಈ ರಸ್ತೆಯಲ್ಲಿದ್ದು ಗೋಕರ್ಣದಿಂದ ವಡ್ಡೀಘಾಟ ಶಿರಸಿ, ಯಾಣ, ಚನಗಾರ ವಿಭೂತಿ ಜಲಪಾತಕ್ಕೆ ಹೋಗುವವರೂ ಇದೇ ರಸ್ತೆಯ ಮೂಲಕ ಸಾಗಬೇಕಿರುವುದರಿಂದ ಪ್ರತಿದಿನ ಈ ರಾಜ್ಯ ಹೆದ್ದಾರಿ ವಾಹನಗಳ ದಟ್ಟನೆಯಿಂದ ಕೂಡಿರುತ್ತದೆ.



- ಏ. 16ರವರೆಗೆ ಕ್ರಮ ಕೈಗೊಳ್ಳದಿದ್ದರೆ ರಸ್ತೆಯಲ್ಲಿ ಕುಳಿತು ಉಪವಾಸ ಸತ್ಯಾಗ್ರಹ ನಡೆಸುವುದಾಗಿ ಗ್ರಾಮಸ್ಥರಿಂದ ಎಚ್ಚರಿಕೆ
- ರಸ್ತೆ ತುಂಬ ನಿರ್ಮಾಣ ಆಗಿರುವ ಹೊಂಡಗಳು ವಾಹನ ಚಾಲಕರಿಗೆ ಅಪಾಯಕಾರಿ

ರಸ್ತೆಯ ದುಃಸ್ಥಿತಿಯ ಕುರಿತಂತೆ ಹಲವು ಬಾರಿ ಸಂಬಂಧಿಸಿದ ಇಲಾಖೆಯ ಗಮನಕ್ಕೆ ತರಲಾದರೂ ಯಾವುದೇ ಪ್ರಯೋಜನ ಆಗಿಲ್ಲ ಎಂದು ಗ್ರಾಮಸ್ಥರು ಆರೋಪಿಸುತ್ತಿದ್ದಾರೆ.

ಮಳೆಗಾಲ ಸಮೀಪಿಸುತ್ತಿದ್ದು ರಸ್ತೆಯ ದುಃಸ್ಥಿತಿ ಹೀಗೆ ಮುಂದುವರಿದರೆ ರಸ್ತೆ ತುಂಬ ರಾಡಿ ಕೆಸರು ತುಂಬಿ ಜನಸಾಮಾನ್ಯರು ಸಂಚರಿಸುವುದೇ ಕಷ್ಟಕರ ಆಗಲಿದ್ದು ರಸ್ತೆಯ ದುರುಸ್ಥಿಗೆ ಸಂಬಂಧಿಸಿದವರು ಏ. 16 ರ ವರೆಗೆ ಕ್ರಮ ಕೈಗೊಳ್ಳದಿದ್ದರೆ ರಸ್ತೆಯಲ್ಲಿ ಕುಳಿತು ಉಪವಾಸ ಸತ್ಯಾಗ್ರಹ ನಡೆಸುವುದಾಗಿ ಗ್ರಾಮಸ್ಥರು ಎಚ್ಚರಿಸಿದ್ದಾರೆ.

ಸಂಸ್ಕೃತಿ, ಪರಂಪರೆ ಸಾರುವ ಜಾತ್ರೆಗಳು

ಹಳಿಯಾಳ: ಜಾತ್ರೆಗಳು ಸನಾತನ ಹಿಂದೂ ಸಂಪ್ರದಾಯ, ಸಂಸ್ಕೃತಿ ಮತ್ತು ಪರಂಪರೆಯನ್ನು ಜಗತ್ತಿಗೆ ಸಾರುವ ಮಹೋತ್ಸವಗಳಾಗಿವೆ. ವಿಶೇಷವಾಗಿ ಸಾಮೂಹಿಕ ಭಕ್ತಿಯನ್ನು ತುಂಬುವ ಜನರ ಸಮೂಹ ನಿರ್ಮಿಸಿ, ದುಶ್ಚಟಗಳಿಂದ ದೂರವಿರಿಸಿ, ಪರಿಸರ ಸ್ವಚ್ಛತೆ, ಸೇವಾ ಮನೋಭಾವನೆ ಬೆಳೆದು ದೇವತ್ವವನ್ನು ಕಾಣುವ ಮೂಲವಾಗಿದೆ ಎಂದು ಬೆಂಗಳೂರಿನ ಗೋಸಾಯಿ ಮಹಾಸಂಸ್ಥಾನ ಮಠ ಭವಾನಿ ಪೀಠದ ಮರಾಠ ಜಗದ್ಗುರು, ವೇದಾಂತಾಚಾರ್ಯ ಶ್ರೀ ಮಂಜುನಾಥ ಭಾರತಿ ಮಹಾಸ್ವಾಮಿಗಳು ಹೇಳಿದರು.

ಹಳಿಯಾಳ ತಾಲೂಕಿನ ಜಾವಳ್ಳಿ ಗ್ರಾಮದಲ್ಲಿ 12 ವರ್ಷಗಳ ನಂತರ ನಡೆಯುತ್ತಿರುವ ಶ್ರೀ ಮಾರೆವ್ವಾ ದೇವಿ ಜಾತ್ರಾ ಮಹೋತ್ಸವದಲ್ಲಿ ಸೋಮವಾರ ಪಾಲ್ಗೊಂಡ ಅವರು ಆಶೀರ್ವಚನ ನೀಡಿದರು.

ಸಮಾಜದ ಯುವಕರು , ನಾಗರೀಕರು ಯಾವತ್ತೂ ತಂದೆ ತಾಯಿಗಳನ್ನು ನಿರ್ಲಕ್ಷಿಸಬೇಡಿ. ದೇಶದ, ಧರ್ಮದ ಚಿಂತನೆಯ ಜೊತೆಗೆ ತಂದೆ,ತಾಯಿ, ಗುರುಗಳ ಕಡೆಗಣನೆ ಯಾವತ್ತೂ ಅಧಃಪತನಕ್ಕೆ ಕೊಂಡೊಯ್ಯುತ್ತದೆ. ಆದ್ದರಿಂದ ಸನ್ಮಾರ್ಗದಲ್ಲಿ ನಡೆಯಲು ನಮ್ಮ ಸನಾತನ ಧರ್ಮ ಎಲ್ಲರನ್ನೂ ಹಾಗೂ ಎಲ್ಲವನ್ನೂ ಒಂದು ಕಡೆ ಸೇರಿ ಚಿಂತನೆಗೊಳಪಡಿಸುವ ಮಾರ್ಗವಾಗಿಯೇ ಇಂತಹ ಜಾತ್ರಾ ಮಹೋತ್ಸವದಂತಹ ಉನ್ನತ ಆಚರಣೆಗಳನ್ನು ಜಾರಿಗೆ ತಂದು ನಮ್ಮ ಹಿರಿಯರು ಇದುವರೆಗೂ ಪಾಲಿಸುತ್ತಾ ಬಂದಿದ್ದು ಇನ್ನು ಮುಂದೆ ಮುಂದಿನ ಪೀಳಿಗೆಯವರು ಪಾಲಿಸಿಕೊಂಡು ಹೋಗುವಂತಹ ದಾರಿಯನ್ನು ಹಾಕಿಕೊಟ್ಟಿದ್ದಾರೆ ಎಂದು ತಮ್ಮ ಪ್ರವಚನದಲ್ಲಿ ಹೇಳಿದರು.

ಗ್ರಾಮಕ್ಕೆ ಆಗಮಿಸಿದ ಸ್ವಾಮೀಜಿಗಳನ್ನು ಗ್ರಾಮಸ್ಥರು ಭಜನಾ ವಾದ್ಯಗಳೊಂದಿಗೆ ಭವ್ಯವಾಗಿ ಸ್ವಾಗತಿಸಿದರು. ಈ ಆಧುನಿಕ ಯುಗದಲ್ಲಿ ಸನಾತನ ಹಿಂದೂ ಸಂಪ್ರದಾಯ, ಸಂಸ್ಕೃತಿ, ಪರಂಪರೆಯನ್ನು ಉಳಿಸಿ ಬೆಳೆಸುವ ಕಾರ್ಯವನ್ನು ಇಂದಿನ ಯುವ ಸಮಾಜ ಮಾಡಬೇಕಿದೆ. ಇದಕ್ಕಾಗಿ ಯುವ ಸಮಾಜ ಯಾವುದೇ ದುಶ್ಚಟಗಳ ದಾಸರಾಗದೆ ಆಧ್ಯಾತ್ಮಿಕತೆಯ ಒಲವು ಹೊಂದಿರುವ ಅವಶ್ಯಕತೆಯೂ ಇದೆ ಎಂದರು. ಗ್ರಾಮಗಳಲ್ಲಿ ನಡೆಯುವ ಜಾತ್ರಾ ಮಹೋತ್ಸವಗಳಲ್ಲಿ ಭವ್ಯ ಹಿಂದೂ ಸಂಸ್ಕೃತಿಯ ಆಚರಣೆಗಳು ಎಲ್ಲರ ಗಮನ ಸೆಳೆಯುತ್ತವೆ. ಇಂದಿನ ಯುವಶಕ್ತಿ ಇಂತಹ ಮಹೋತ್ಸವಗಳಲ್ಲಿ ಹೆಚ್ಚಾಗಿ ಪಾಲ್ಗೊಂಡು ಧರ್ಮ ಮತ್ತು ದೇಶ ಸೇವೆಯಲ್ಲಿ ತೊಡಗಬೇಕು ಎಂದು ಕರೆ ನೀಡಿದರು.



ಉತ್ತರ ಕನ್ನಡದಲ್ಲಿ ಜನಸಂಖ್ಯೆ ಕ್ಷೀಣ: ಶ್ರೀ ಕಳವಳ



ಶಿರಸಿ: ಗ್ರಾಮೀಣ ಭಾಗದಲ್ಲಿ ಸಂಘ–ಸಂಸ್ಥೆಗಳು ಸುದೀರ್ಘ ಕಾಲ ಉಳಿಯಲು ಸದಸ್ಯರ ಬಲ ಅತ್ಯಗತ್ಯವಾಗಿದ್ದು, ಇದಕ್ಕಾಗಿ ಹಳ್ಳಿಗಳಲ್ಲಿ ಜನಸಂಖ್ಯೆ ಉಳಿಸಿಕೊಳ್ಳುವತ್ತ ಗಂಭೀರವಾಗಿ ಯೋಚಿಸಬೇಕಿದೆ ಎಂದು ಸ್ವರ್ಣವಲ್ಲೀ ಮಹಾಸಂಸ್ಥಾನದ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿಗಳು ನುಡಿದರು.

ತಾಲೂಕಿನ ಬಕ್ಕಳದಲ್ಲಿ ಜರುಗಿದ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ 75ನೇ ವರ್ಷದ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದಲ್ಲಿ ಜನಸಂಖ್ಯೆ ಏರಿಕೆಯಾಗುತ್ತಿದ್ದರೂ ಹಳ್ಳಿಗಳ ಜಿಲ್ಲೆಯಾದ ಉತ್ತರ ಕನ್ನಡದಲ್ಲಿ ಜನಸಂಖ್ಯೆ ಕ್ಷೀಣಿಸುತ್ತಿರುವುದು ಕಳವಳಕಾರಿ ಎಂದರು.

ಶಾಸಕ ಹಾಗೂ ಕೆಡಿಸಿಸಿ ಬ್ಯಾಂಕ್ ಅಧ್ಯಕ್ಷ ಶಿವರಾಮ ಹೆಬ್ಬಾರ ಮಾತನಾಡಿ, ಸಹಕಾರಿ ಅತ್ಯಂತ ಪಾವಿತ್ರ್ಯ ಕ್ಷೇತ್ರವಾಗಿದ್ದು, ಆದರೆ ಇತ್ತೀಚಿನ ದಿನಗಳಲ್ಲಿ ಸಹಕಾರಿ ಕ್ಷೇತ್ರಕ್ಕೆ ರಾಜಕೀಯ ಒಳನುಗ್ಗುತ್ತಿರುವುದು ವಿಷಾದನೀಯ ಎಂದು ಹೇಳಿದರು.

ಜಿಲ್ಲಾ ಮಧ್ಯವರ್ತಿ ಕೆಡಿಸಿಸಿ ಬ್ಯಾಂಕ್ 1850ಕ್ಕೂ ಅಧಿಕ ಕೋಟಿ ರೂ. ರೈತರಿಗೆ ಬೆಳೆ ಸಾಲದ ಜತೆ 600 ಕೋಟಿ ರೂ. ಮಧ್ಯಮಾವಧಿ ಸಾಲ ನೀಡಲಾಗಿದ್ದು, ಬ್ಯಾಂಕ್‌ನ 106 ವರ್ಷದ ಸುದೀರ್ಘ ಇತಿಹಾಸದಲ್ಲಿಯೂ ಠೇವಣಿದಾರರ, ಗ್ರಾಹಕರ, ರೈತರ, ಸಹಕಾರಿ ಸಂಘಗಳ ಸಹಾಯದಿಂದ ಪ್ರತಿ ವರ್ಷವೂ ಲಾಭ ಗಳಿಸುತ್ತ ಬಂದಿದೆ ಎಂದು ಹೇಳಿದರು.

ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತ ಹಾಗೂ ಶಿರಸಿ ಟಿಎಂಎಸ್ ಅಧ್ಯಕ್ಷ ಜಿ.ಟಿ.ಹೆಗಡೆ ತಟ್ಟೀಸರ, ಶಿರಸಿ ಟಿಎಸ್‌ಎಸ್ ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ, ಸಹಕಾರಿ ಅಧ್ಯಕ್ಷ ಗಣಪತಿ ನರಸಿಂಹ ಹೆಗಡೆ ನಕ್ಷೆ, ಕೆಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಎಂ.ಎ.ಹೆಗಡೆ, ಸುರೇಶ್ಚಂದ್ರ ಹೆಗಡೆ ಕೆಶಿನ್ಮನೆ, ಸಹಕಾರಿ ಸಂಘಗಳ ಸಹಾಯಕ ನಿಬಂಧಕ ಅಜಿತ ಶಿರಹಟ್ಟಿ ಮತ್ತಿತರರು ಇದ್ದರು.

ಸಂಘದ ಅಧ್ಯಕ್ಷರಾದ ಜಿ.ಎನ್. ಹೆಗಡೆ ನಕ್ಷೆ ಅವರು ಮಾತನಾಡಿದರು. ಸಂಸ್ಥೆಯ ಕಚೇರಿಯಲ್ಲಿ ಶ್ರೀಗಳ ಪಾದಪೂಜೆ ನೆರವೇರಿಸಲಾಯಿತು. ಕೆಕೆ ಸಂಘದ ಅಧ್ಯಕ್ಷ ಗಜಾನನ ಭಟ್ ಬೆಣ್ಣೆಗದ್ದೆ ಹಾಗೂ ಪ್ರಗತಿ ಪ್ರೊಸೆಸಿಂಗ್ ಸಂಘದ ಅಧ್ಯಕ್ಷ ನರಸಿಂಹ ಹೆಗಡೆ ಬಕ್ಕಳ ಉಪಸ್ಥಿತರಿದ್ದರು. ಸುಮನಾ ಭಟ್ ಮತ್ತು ಕವಿತಾ ಹೆಗಡೆ ಪ್ರಾರ್ಥಿಸಿದರೆ, ಸಂಜಯ್ ಭಟ್ ಬೆಣ್ಣೆಗದ್ದೆ ಕಾರ್ಯಕ್ರಮವನ್ನು ನಿರೂಪಿಸಿದರು.

ಶೀಘ್ರ ದುರಸ್ತಿ ಕಾರ್ಯ ಆರಂಭ: ರಾಕೇಶ್

ಬನವಾಸಿ: ಬನವಾಸಿ ದೇವಸ್ಥಾನ ಸೋರಿಕೆ ತಡೆಗಟ್ಟುವಲ್ಲಿ ಸದ್ಯದಲ್ಲಿ ಕೆಲಸ ಆರಂಭವಾಗಲಿದೆ ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಹಾವೇರಿ ಕಚೇರಿಯ ಕನ್ಸರ್ವೇಷನ್ ಅಸಿಸ್ಟೆಂಟ್ ರಾಕೇಶ್ ಬಿ.ಎಸ್. ದೂರವಾಣಿ ಮೂಲಕ ತಿಳಿಸಿದ್ದಾರೆ.

ಈ ಕುರಿತು ಹೋರಾಟ ಸಮಿತಿ ಪದಾಧಿಕಾರಿಗಳೊಂದಿಗೆ ದೂರವಾಣಿಯಲ್ಲಿ ಮಾತನಾಡಿದ್ದಾರೆ. ಕೆಲವೇ ದಿನಗಳಲ್ಲಿ ಬನವಾಸಿಗೆ ಬಂದು ಸೋರಿಕೆ ಎಲ್ಲೆಲ್ಲಿ ಎಂದು ಸರ್ವೆ ನಡೆಯುತ್ತದೆ ತದನಂತರ ದುರಸ್ತಿ ಕಾರ್ಯ ಆರಂಭ ಗೊಳ್ಳಲಿದೆ ಎಂದು ರಾಕೇಶ್ ತಿಳಿಸಿದ್ದಾರೆ ಎಂದು ಬನವಾಸಿ ನೂತನ ತಾಲೂಕು ಹೋರಾಟ ಸಮಿತಿ ಅಧ್ಯಕ್ಷ ಉದಯಕುಮಾರ್ ಕಾನಳ್ಳಿ, ಗೌರವಾಧ್ಯಕ್ಷ ಸಿ.ಎಫ್. ನಾಯಕ ಮಾಳಂಜಿ, ಕಾರ್ಯದರ್ಶಿ ವಿಶ್ವನಾಥ್ ವಡೆಯರ್ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.





ಹಳಿಯಾಳ : ತಾಲೂಕಿನ ಮುಂಡವಾಡ ಗ್ರಾಮದಲ್ಲಿ ಜರುಗುತ್ತಿರುವ ಗ್ರಾಮದೇವಿ ಜಾತ್ರೆಯ ಅಂಗವಾಗಿ ರಥೋತ್ಸವದ ಉದ್ಘಾಟನೆಯನ್ನು ಮರಾಠಾ ಜಗದ್ಗುರು ಬೆಂಗಳೂರು ಗೋಸಾವಿ ಮಠದ ಪೀಠಾಧೀಶ್ವರ ವೇದಾಂತಾಚಾರ್ಯ ಶ್ರೀ ಮಂಜುನಾಥ ಭಾರತೀ ಸ್ವಾಮೀಜಿಯವರು ನೆರವೇರಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು.

ನಾಲ್ಕು ಪ್ರಮುಖ ಅಂಶಗಳೊಂದಿಗೆ ವಿಶ್ವ ಹಿಂದೂ ಪರಿಷತ್ತಿನ ಕಾರ್ಯ ಚಟುವಟಿಕೆ

ಕುಮಟಾ: ಮತಾಂತರ ತಡೆ, ಗೋ ಸಂರಕ್ಷಣೆ, ಸರ್ಕಾರದ ನಿಯಂತ್ರಣದಿಂದ ಹಿಂದೂ ದೇವಾಲಯಗಳ ಮುಕ್ತಿ ಹಾಗೂ ಹಿಂದೂ ಸಮಾಜದ ಕಡುಬಡವರನ್ನು ಬಡತನ ರೇಖೆಯಿಂದ ಮೇಲಕ್ಕೆತ್ತು ವುದು, ಕರಾವಳಿ ಜನರ ಸಂಕಷ್ಟಕ್ಕೆ ಸ್ಪಂದನೆ ಸೇರಿದಂತೆ ನಾಲ್ಕು ಪ್ರಮುಖ ಅಂಶಗಳನ್ನು ಕೈಗೆತ್ತಿಕೊಂಡು ವಿಶ್ವ ಹಿಂದೂ ಪರಿಷತ್ತು ಕಾರ್ಯನಿರ್ವ ಹಿಸುತ್ತಿದೆ ಎಂದು ಸಂಸ್ಥೆಯ ಕೇಂದ್ರೀಯ ಸಂಘಟನಾ ಮಹಾಮಂತ್ರಿ ಮಿಲಿಂದ್ ಪರಾಂಡೆ ತಿಳಿಸಿದ್ದಾರೆ.

ಇಲ್ಲಿನ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಾಲಯವಾದ ಮಾಧವ ಕುಂಜದಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ದೇಶದಲ್ಲಿ ಗೋಹತ್ಯೆಗೆ ಅವಕಾಶವಿಲ್ಲದಿದ್ದರೂ ಕೆಲವು ಕಡೆಗಳಲ್ಲಿ ಗೋಹತ್ಯೆ ನಡೆಯುತ್ತಿರುವುದು ವಿಷಾದನೀಯ ಸಂಗತಿ. ಪ್ರತಿವರ್ಷ ಕಸಾಯಿಖಾನೆಗಳಿಗೆ ಸಾಗಿಸುತ್ತಿರುವ ಸುಮಾರು 2 ಲಕ್ಷಕ್ಕೂ ಅಧಿಕ ಗೋವುಗಳನ್ನು ಪರಿಷತ್ತಿನ ಕಾರ್ಯಕರ್ತರು ರಕ್ಷಿಸುತ್ತಿದ್ದಾರೆ. ಗೋಹತ್ಯೆಯನ್ನು ಸಂಪೂರ್ಣವಾಗಿ ತಡೆಯಲು ಉತ್ತರ ಭಾರತದ ವಿವಿಧ ರಾಜ್ಯಗಳಲ್ಲಿ ಜನಪ್ರತಿನಿಧಿಗಳು ಹಾಗೂ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸುವ ಕಾರ್ಯವೂ ನಡೆಯುತ್ತಿದೆ ಎಂದು ಹೇಳಿದರು.

ಮತಾಂತರ ಚಟುವಟಿಕೆಗಳನ್ನು ತಡೆಯಲು ಪರಿಷತ್ತಿನ ಕಾರ್ಯಕರ್ತರು ವಿವಿಧ ಮಟ್ಟದಲ್ಲಿ ಪ್ರಯತ್ನಗಳನ್ನು ನಡೆಸುತ್ತಿದ್ದಾರೆ. ಕರ್ನಾಟಕದಲ್ಲಿ ಹಿಂದೂ ದೇವಾಲಯಗಳು ಮಾತ್ರ ಸರ್ಕಾರದ ನಿಯಂತ್ರಣದಲ್ಲಿ ಇರುವುದು ಖಂಡನೀಯವಾಗಿದ್ದು, ಇವುಗಳನ್ನು ಮುಕ್ತಿಗೊಳಿಸಲು ಪರಿಷತ್ತು ಮುಂದಾಗಲಿದೆ ಎಂದು ತಿಳಿಸಿದರು. ಇದೇ ಹಿನ್ನೆಲೆ ಕಾರವಾರ ಜಿಲ್ಲೆಯ ವಿಶ್ವ ಹಿಂದೂ ಪರಿಷತ್ತಿನ ವತಿಯಿಂದ ಹೆಗಡೆಯ ಶ್ರೀ ಶಾಂತಿಕಾಂಬಾ ಸಭಾಭವನದಲ್ಲಿ ಒಂದು ದಿನದ ಅಭ್ಯಾಸ ವರ್ಗ ಹಾಗೂ ನೂರು ಗ್ರಾಮ ಸಮಿತಿಗಳ ಉದ್ಘಾಟನಾ ಕಾರ್ಯಕ್ರಮವೂ ನಡೆದಿದ್ದು, ಈ ವಿಷಯಗಳ ಕುರಿತು ಚರ್ಚೆ ನಡೆಯಿತು ಎಂದು ವಿವರಿಸಿದರು.

ವಿಶ್ವ ಹಿಂದೂ ಪರಿಷತ್ತಿನ ಪ್ರಮುಖರಾದ ಲಿಂಗರಾಜು, ವಿಭಾಗೀಯ ಕಾರ್ಯದರ್ಶಿ ಮಂಜುನಾಥ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಮಹಿಳೆಯರು ಜಾಗೃತರಾದರೆ ಸದೃಢ ಭಾರತ ನಿರ್ಮಾಣ ಸಾಧ್ಯ

ಭಟ್ಕಳ: ಪ್ರತಿ ಮನೆಯಲ್ಲಿ ಮಾತೆಯರು ಜಾಗೃತರಾಗಬೇಕು. ಆಗ ಮಾತ್ರ ಸದೃಢ ಭಾರತವನ್ನು ನಾವು ಕಾಣಬಹುದು ಎಂದು ಮಂಗಳೂರಿನ ಗುರುಪುರದ ವಜ್ರದೇಹಿ ಮಠದ ರಾಜಶೇಖರಾನಂದ ಸ್ವಾಮೀಜಿಯವರು ಹೇಳಿದರು.

ಅವರು ಮುಂಡಳ್ಳಿಯ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಅಷ್ಟಬಂಧ ಬ್ರಹ್ಮ ಕಲಶೋತ್ಸವದ ಎರಡನೇ ದಿನ ಸಭಾ ಕಾರ್ಯಕ್ರಮ ಸಾನಿಧ್ಯ ವಹಿಸಿ ಮಾತನಾಡಿದರು. ಜ್ಞಾನಕ್ಕೆ ಭಾರತ ದೇಶ ಹೆಸರುವಾಸಿಯಾಗಿದೆ. ಭಾರತವನ್ನು ತಾಯಿ ಹೆಸರಿಂದ ಕರೆಯಲಾಗುತ್ತದೆ. ಇಲ್ಲಿ ತಂದೆಗಿಂತ ತಾಯಿಗೆ ಹೆಚ್ಚಿನ ಮೌಲ್ಯನೀಡಲಾಗುತ್ತದೆ. ಭಾರತ ಹಿಂದೆಂದೂ ಕಾಣದ ರೀತಿಯಲ್ಲಿ ಅಭೂತಪೂರ್ವವಾಗಿ ಬದಲಾವಣೆ ಕಾಣುತ್ತಿದೆ. ಭಾರತದ ಮುಂದೆ ಜಗತ್ತು ತಲೆಬಾಗಿದೆ. ಭಾರತದ ಮಾರ್ಗದರ್ಶನ ಎಲ್ಲಾ ದೇಶಗಳಿಗೂ ಅಗತ್ಯವಾಗಿದೆ. ಹಿಂದೂ ಸಮಾಜದ ಜಾಗೃತ ಸ್ಥಿತಿಯಿಂದ ಇದು ಸಾಧ್ಯವಾಗಿದೆ. ಮುಂಡಳ್ಳಿ ದುರ್ಗಾಪರಮೇಶ್ವರಿ ದೇವಿಯ ಬ್ರಹ್ಮಕಲಶೋತ್ಸವ ಸಂಭ್ರಮವನ್ನು ಬಹಳ ಅದ್ದೂರಿಯಿಂದ ಮಾಡಲಾಗುತ್ತಿದೆ. ಇದಕ್ಕೆಲ್ಲವೂ ಆ ತಾಯಿಯ ಪ್ರೇರಣೆ, ಕೃಪೆಯೇ ಕಾರಣ ಎಂದರು.

ದೇವಸ್ಥಾನ ಆಡಳಿತ ಮಂಡಳಿಯ ಅಧ್ಯಕ್ಷ ಎಸ್ ಬಿ.ಬೊಮ್ಮಾಯಿ ಮಾತನಾಡಿ, ಮುಂಡಳ್ಳಿಯಲ್ಲಿ ಸಮಸ್ತ ಹಿಂದುಗಳ ಒಗ್ಗಟ್ಟಿನಿಂದ ಇಂತಹ ಒಂದು ಬೃಹತ್ ಕಾರ್ಯಕ್ರಮ ಆಯೋಜನೆ ಸಾಧ್ಯವಾಗಿದೆ ಎಂದರು.

ದೇವಸ್ಥಾನದ ಪ್ರಧಾನ ಅರ್ಚಕ ವೇ.ಮೂ ನಾಗರಾಜ್ ಭಟ್ಟ, ಕುದುರೆಬೀರಪ್ಪ ದೇವಸ್ಥಾನದ ಅಧ್ಯಕ್ಷ ಶಂಕರ ನಾಯ್ಕ, ಅಬ್ಬಿಮಹಾರಾಜ ದೇವಸ್ಥಾನ ಅಧ್ಯಕ್ಷ ಗಣೇಶ ಗುಡಿಮನೆ, ನಾಗಶ್ರೀ ದೇವಸ್ಥಾನ ಅಧ್ಯಕ್ಷ ಪರಮೇಶ್ವರ ಮೊಗೇರ, ಗಣೇಶೋತ್ಸವ ಸಮಿತಿಯ ಅಧ್ಯಕ್ಷ ನಾಗಪಯ್ಯ ಆಚಾರ್ಯ, ಶಾರದೋತ್ಸವ ಸಮಿತಿ ಅಧ್ಯಕ್ಷ ಗೋಪಾಲ ನಾಯ್ಕ ಮುಂತಾದವರಿದ್ದರು. ರೇಷ್ಮಾ ಉಮೇಶ ನಿರ್ವಹಿಸಿದರು. ಯಮುನಾ ದಿನೇಶ ಪ್ರಾರ್ಥಿಸಿದರು. ಬ್ರಹ್ಮಕಲಶೋತ್ಸವದ ಪ್ರಯುಕ್ತ ವಿವಿಧ ಧಾರ್ಮಿಕ ಕಾರ್ಯಕ್ರಮ, ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಸಾವಿರಾರು ಭಕ್ತರು ದೇವಿಯ ದರ್ಶನ ಪಡೆದು ಪ್ರಸಾದ ಭೋಜನ ಸ್ವೀಕರಿಸಿದರು.



ವಿದುಷಿ ಸುಮಾ ಹೆಗಡೆಯವರ ಕಲಾ ಸೇವಾ ಕಾರ್ಯ ಶ್ಲಾಘನೀಯ

ಯಲ್ಲಾಪುರ: ವಿದುಷಿ ಸುಮಾ ಹೆಗಡೆ ನೂರಾರು ಮಕ್ಕಳಿಗೆ ತಾಯಿಯ ಮಮತೆ ತೋರಿಸುವ ಮೂಲಕ ಭರತನಾಟ್ಯ ಕಲೆಯನ್ನು ಧಾರೆ ಎರೆಯುತ್ತಿದ್ದಾರೆ. ಸುಮಾರು 2 ದಶಕದಿಂದ ತಾಲೂಕು ಹಾಗೂ ಜಿಲ್ಲೆಯ ವಿವಿಧೆಡೆ ಭರತನಾಟ್ಯ ತರಬೇತಿಯನ್ನು ನಿರಂತರವಾಗಿ ನೀಡುವ ಮೂಲಕ ಕಲಾರಾಧನೆಯಲ್ಲಿ ತೊಡಗಿಸಿಕೊಂಡಿರುವ ಅವರ ಕಾರ್ಯ ಅನನ್ಯವಾದದ್ದು ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಿಮವತಿ ಭಟ್ಟ ಹೇಳಿದರು.

ಅವರು ಪಟ್ಟಣದ ಎಪಿಎಂಸಿ ಆವಾರದ ಅಡಿಕೆ ಭವನದಲ್ಲಿ ಪಟ್ಟಣದ ಭಾರತಿ ನೃತ್ಯ ಕಲಾಕೇಂದ್ರ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರವಾರ ಇವರ ಆಶ್ರಯದಲ್ಲಿ ನಡೆದ ನೃತ್ಯ ಸಂಭ್ರಮ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕಾನಿಪ ಪತ್ರಕರ್ತರ ಸಂಘದ ಜಿಲ್ಲಾ ಕಾರ್ಯದರ್ಶಿ ಪ್ರಭಾವತಿ ಗೋವಿ ಮಾತನಾಡಿ, ಭರತನಾಟ್ಯದ ವೇಷ ಭೂಷಣದಲ್ಲಿ ಮಕ್ಕಳು ನೃತ್ಯ ಮಾಡುವುದನ್ನು ನೋಡುವುದೇ ಒಂದು ಸೊಗಸು. ನೃತ್ಯ ಪ್ರಸ್ತುತಪಡಿಸುತ್ತಿರುವ ಮಕ್ಕಳೊಂದಿಗೆ ವಿದೂಷಿ ಸುಮಾ ಹಾಗೂ ಪಾಲಕರ ಪರಿಶ್ರಮವಿದೆ. ಮಾನಸಿಕ ನೆಮ್ಮದಿ ನೀಡುವ ಇಂತಹ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವದರಿಂದ ಮಕ್ಕಳಲ್ಲಿ ಖಿನ್ನತೆ ಸುಳಿಯದಂತೆ ಹಾಗೂ ಮೊಬೈಲ್ ಗೀಳಿನಿಂದ ದೂರವಿಡಬಹುದಾಗಿದೆ. ಭರತ ನಾಟ್ಯ ಕಲಿಯುವ ಮಕ್ಕಳು ಸದಾ ಕ್ರಿಯಾಶೀಲದಿಂದ ಲವಲವಿಕೆ ಇರುತ್ತಾರೆ ಎಂದರು.



ವಿಶ್ವದರ್ಶನ ಶಾಲೆಯ ಪ್ರಾಂಶುಪಾಲೆ ಮಹಾದೇವಿ ಭಟ್ಟ ಅಧ್ಯಕ್ಷತೆವಹಿಸಿ ಮಾತನಾಡಿ, ಭರತನಾಟ್ಯ ಕಲೆ ವಿದ್ಯಾಭ್ಯಾಸಕ್ಕೆ ಪೂರಕವಾಗಿದ್ದು ಏಕಾಗ್ರತೆ ಹೆಚ್ಚುತ್ತದೆ. ಸುಮಕ್ಕ ನಂತಹ ಗುರುಗಳು ಸಿಗುವುದು ವಿರಳ. ಈ ಕಲೆ ಮೂಲಕ ನಿಮ್ಮ ಅವಕಾಶ ಗಳನ್ನು ನೀವೇ ಸೃಷ್ಟಿಸಿಕೊಳ್ಳಬಹುದಾಗಿದೆ ಎಂದರು.

ಮಹಿಳಾ ಉದ್ಯಮಿ ಅಪರ್ಣಾ ಘಟ್ಟಿ ಮಾತನಾಡಿ, ಮಹಿಳೆಯರು ಸಂಸಾರ ಜೊತೆ ವೃತ್ತಿ ಜೀವನ ನಡೆಸಿಕೊಂಡು ಹೋಗುವದುವುದು ಕಷ್ಟ ಸಾಧ್ಯವಾದರೂ ಸುಮಾ ಅವರು ಭರತನಾಟ್ಯದಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ. ಭರತನಾಟ್ಯ ಮೂಲಕ ಪೌರಾಣಿಕ ಕಥೆ ಅರಿಯಬಹುದಾಗಿದೆ ಎಂದರು.

ಕೇಂದ್ರದ ನೃತ್ಯ ಗುರು ವಿದುಷಿ ಸುಮಾ ಹೆಗಡೆ ಗುರುವಂದನೆ ಸ್ವೀಕರಿಸಿ ಮಾತನಾಡಿ, ಭರತನಾಟ್ಯ ಕಲೆಗೆ ತಾಳ್ಮೆ ಶ್ರದ್ಧೆ ಬೇಕು. ಕಲಿಕೆ ಒಂದೇ ದಿನಕ್ಕೆ ಬರುವದಿಲ್ಲ ಅನುದಿನವು ಪರಿಶ್ರಮ ಬೇಕು. ಪಾಲಕರು ಮಕ್ಕಳು ನನ್ನ ಮೇಲಿಟ್ಟ ಪ್ರೀತಿ ವಿಶ್ವಾಸಕ್ಕೆ ಚಿರಋಣಿ ಯಾಗಿದ್ದೇನೆ. ಮಕ್ಕಳಿಗೆ ಸಂಸ್ಕಾರಯುತ ಕಲೆಯಾದ ಭರತ ನಾಟ್ಯ ಕಲಿಸಿ ಅರ್ಧಕ್ಕೆ ಬಿಡಿಸಬೇಡಿ ಎಂದರು.

ಶಿಕ್ಷಕಿ ಸವಿತಾ ಭಟ್ಟ ಮಾತನಾಡಿದರು. ಕಲಾಕೇಂದ್ರದ ಅಧ್ಯಕ್ಷ ವಿ.ಟಿ.ಹೆಗಡೆ ಇತರರು ಇದ್ದರು. ನಿರ್ಮಲಾ ಭಾಗವತ ಸ್ವಾಗತಿಸಿದರು. ಪೂಜಾ ನಿರ್ವಹಿಸಿದರು. ರಂಜನಾ ವಂದಿಸಿದರು. ಲಕ್ಷ್ಮಿ ಭಟ್ ಚಿಮ್ನಳ್ಳಿ ಗುರುವಂದನೆ ನಡೆಸಿಕೊಟ್ಟರು. ನಂತರ ಭಾರತೀ ನೃತ್ಯ ಕಲಾಕೇಂದ್ರದ ವಿದ್ಯಾರ್ಥಿಗಳಿಂದ ನಡೆದ ನೃತ್ಯ ಪ್ರದರ್ಶನ ಜನಮನರಂಜಿಸಿತು.

ಕಿರುಸುದ್ದಿ

ಹಸಿರು ಕ್ರಾಂತಿ ಹರಿಕಾರ ಡಾ.ಬಾಬೂಜಿ

ಹಾವೇರಿ: ಡಾ.ಬಾಬು ಜಗಜೀವನರಾಂ ಅವರು ಈ ದೇಶದ ಉಪ ಪ್ರಧಾನಿಯಾಗಿ ಸೇವೆ ಸಲ್ಲಿಸಿದ ಮಹಾನ್ ನಾಯಕ ಹಾಗೂ ಕೃಷಿ ಕ್ಷೇತ್ರದಲ್ಲಿ ಕ್ರಾಂತಿ ಮಾಡಿದ ಹಸಿರು ಕ್ರಾಂತಿ ಹರಿಕಾರ ಎಂದು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್. ಗಾಜಿಗೌಡ್ರ ಅವರು ಬಣ್ಣಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಭಾನುವಾರ ಸಾಂಕೇತಿಕವಾಗಿ ಆಯೋಜಿಸಲಾದ ಡಾ.ಬಾಬು ಜಗಜೀವನರಾಂ ಅವರ 119ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಡಾ.ಬಾಬು ಜಗಜೀವನರಾಂ ಅವರ ಭಾವಚಿತ್ರಕ್ಕೆ ಪುಷ್ಪಾರ್ಚಣೆ ಮಾಡಿ ಅವರು ಮಾತನಾಡಿದರು.ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ಶಿರಕೋಳ, ಜಿ.ಪಂ. ಉಪಕಾರ್ಯದರ್ಶಿ ಡಾ.ಪುನೀತ್, ಉಪ ವಿಭಾಗಾಧಿಕಾರಿ ಕಲ್ಯಾಣಿ ಕಾಂಬ್ಳೆ, ಸಮಾಜ ಕಲ್ಯಾಣ ಇಲಾಖೆ ಜಂಟಿನಿರ್ದೇಶಕರು, ವಿವಿಧ ಇಲಾಖೆ ಅಧಿಕಾರಿಗಳು, ಸಮುದಾಯದ ಮುಖಂಡರು ಇದ್ದರು.

ಏ.14ಕ್ಕೆ ಬಾಬೂಜಿ, ಡಾ.ಅಂಬೇಡ್ಕರ್ ಜಯಂತಿ

ಹಾವೇರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ. ಸಮಾಜ ಕಲ್ಯಾಣ ಇಲಾಖೆ ನಗರ ಸಭೆ ಹಾವೇರಿ ಹಾಗೂ ಪರಿಶಿಷ್ಟ ಜಾತಿಗಳ ಒಕ್ಕೂಟಗಳ ಸಹಯೋಗದಲ್ಲಿ ಏ.14 ರಂದು ಡಾ. ಬಾಬು ಜಗಜೀವನರಾವ್ ಅವರ 119 ಹಾಗೂ ಡಾ. ಬಿ.ಆರ್.ಅಂಬೇಡ್ಕರವರ 135 ನೇ ಜನ್ಮ ದಿನಾಚರಣೆಯನ್ನು ಜಿಲ್ಲಾ ಕೇಂದ್ರದಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ತಿಳಿಸಿದ್ದಾರೆ.ಏ.14 ರಂದು ಬೆಳಿಗ್ಗೆ 9.00 ಗಂಟೆಗೆ ಡಾ. ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಮಹಾನ್ ನಾಯಕರ ಭಾವಚಿತ್ರಗಳ ಮೆರವಣಿಗೆ ಪ್ರಾರಂಭಗೊಂಡು ಸುಭಾಸ ವೃತ್ತ-ಮೇಲಿನ ಪೇಟೆ-ಗಾಂಧಿವೃತ್ತ-ಮೈಲಾರ ಮಹದೇವಪ್ಪ ವೃತ್ತ-ಹೊಸಮನಿ ಸಿದ್ದಪ್ಪ ವೃತ್ತದ ಪಿ.ಬಿ ರಸ್ತೆ ಮೂಲಕ ಜಿ.ಹೆಚ್. ಕಾಲೇಜ್ ಹಿಂಭಾಗದ ಸಿದ್ದಾರೂಢ ಕಾಲೋನಿಯಲ್ಲಿರುವ ಡಾ.ಬಿ.ಆರ್ ಅಂಬೇಡ್ಕರ್ ಭವನಕ್ಕೆ ತಲುಪಲಿದ್ದು, ವೇದಿಕೆ ಕಾರ್ಯಕ್ರಮ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಜರುಗಲಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆ್ಯಪ್ ಬಿಡುಗಡೆ

ಹಾವೇರಿ: ಕರ್ನಾಟಕ ಸರ್ಕಾರ ಇ-ಆಡಳಿತ ಮತ್ತು ಕೃಷಿ ಇಲಾಖೆ ಸಹಯೋಗದೊಂದಿಗೆ 2025-26 ನೇ ಸಾಲಿನ ಬೇಸಿಗೆ ಹಂಗಾಮಿನ ಬೆಳೆ ಸಮೀಕ್ಷೆಗೆ ರೈತರ ಆ್ಯಪ್‌ಬಿಡುಗಡೆ ಮಾಡಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ. ರೈತರು ಗೂಗಲ್ ಪ್ಲೇಸ್ಟೋರ್‌ನಿಂದ '' ಬೇಸಿಗೆ ಹಂಗಾಮಿನ ರೈತರ ಬೆಳೆ ಸಮೀಕ್ಷೆ-2025-26 '' ಆ್ಯಪ್ ಡೌನ್ ಲೋಡ್ ಮಾಡಿಕೊಂಡು ತಾವು ಬೆಳೆದ ಬೆಳೆ ಮಾಹಿತಿಯೊಂದಿಗೆ ಛಾಯಾಚಿತ್ರವನ್ನು ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಈ ಮಾಹಿತಿಯನ್ನು ಬೆಳೆ ವಿಮೆ, ಬೆಳೆ ನಷ್ಟ ಪರಿಹಾರ, ಬೆಂಬಲ ಬೆಲೆ ಮತ್ತು ಸರ್ಕಾರದ ವಿವಿಧ ಯೋಜನೆಯಡಿ ಸವಲತ್ತುಗಳನ್ನು ಒದಗಿಸಲು ಬಳಸಲಾಗುತ್ತದೆ. ಆದ್ದರಿಂದ ರೈತರು ಹೆಚ್ಚಿನ ಆಸಕ್ತಿಯೊಂದಿಗೆ ಬೆಳೆ ಸಮೀಕ್ಷೆಯಲ್ಲಿ ಪಾಲ್ಗೊಂಡು ತಮ್ಮ ಜಮೀನಿನ ಬೆಳೆ ಮಾಹಿತಿಯನ್ನು ರೈತರು ತಾವೇ ಖುದ್ದಾಗಿ ದಾಖಲಿಸಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕಕೇಂದ್ರ ಅಥವಾ ಆಯಾ ಗ್ರಾಮಗಳಿಗೆ ನಿಯೋಜಿಸಿದ ಖಾಸಗಿ ನಿವಾಸಿಗಳ ಸಹಾಯದೊಂದಿಗೆ ಬೆಳೆ ಮಾಹಿತಿಯನ್ನು ದಾಖಲಿಸಲು ತಿಳಿಸಿದ್ದಾರೆ.

ಪ್ರವೇಶ ಪತ್ರ ಪಡೆಯಲು ಸಲಹೆ

ಹಾವೇರಿ: ಜಿಲ್ಲೆಯಲ್ಲಿ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ 8 ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಹಾಗೂ 1 ಡಾ. ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಗೆ 2026-27ನೇ ಸಾಲಿಗೆ 6ನೇ ತರಗತಿ ಪ್ರವೇಶಕ್ಕಾಗಿ ಆನ್‌ಲೈನ್ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳ ಪ್ರವೇಶ ಪತ್ರ ಪಡೆಯಲು ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

ಪ್ರವೇಶ ಪರೀಕ್ಷೆಯ ಪತ್ರಗಳನ್ನು ಇಲಾಖಾ ವೆಬ್ ಸೈಟ್ https://dom.karnataka.gov.in/en ನಲ್ಲಿ ಪಡೆಯಬಹುದಾಗಿದೆ. ಪ್ರವೇಶ ಪರೀಕ್ಷೆ ಏ.12ರಂದು ಹಾವೇರಿ ಜಿಲ್ಲೆಯ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಯನ್ನು ನಡೆಸಲಾಗುವುದು. ಪರೀಕ್ಷಾ ದಿನದಂದು ಪ್ರವೇಶ ಪರೀಕ್ಷೆಯ ಪತ್ರದೊಂದಿಗೆ ಆಧಾರ್ ಕಾರ್ಡ್/ಪಡಿತರ ಚೀಟಿ/ ಶಾಲಾ ಗುರುತಿನ ಚೀಟಿ ಇವುಗಳಲ್ಲಿ ಯಾವುದಾದರು ಒಂದನ್ನು ಹಾಜರುಪಡಿಸವುದು ಕಡ್ಡಾಯವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮತ್ತು ತಾಲ್ಲೂಕು ಮಾಹಿತಿ ಕೇಂದ್ರಗಳನ್ನು ಸಂಪರ್ಕಿಸಲು ಕೋರಲಾಗಿದೆ.



ಹಾವೇರಿ: ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಭಾನುವಾರ ಸಾಂಕೇತಿಕವಾಗಿ ಆಯೋಜಿಸಲಾದ ಡಾ.ಬಾಬು ಜಗಜೀವನರಾಂ ಅವರ 119ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಡಾ.ಬಾಬು ಜಗಜೀವನರಾಂ ಅವರ ಭಾವಚಿತ್ರಕ್ಕೆ ಪುಷ್ಪಾರ್ಚಣೆ ಮಾಡಲಾಯಿತು. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್. ಗಾಜಿಗೌಡ್ರ, ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ಶಿರಕೋಳ, ಮತ್ತಿತರರು ಇದ್ದರು.

ಹಾವೇರಿಯಲ್ಲಿ ದೇವಾಂಗ ಜ್ಯೋತಿಗೆ ಭವ್ಯ ಸ್ವಾಗತ

ಹಾವೇರಿ: ಬೆಳಗಲೆಮ್ಮ ದೇವಾಂಗ ತತ್ವಮತ ಎಂಬ ನಾಮಾಂಕಿತದೊಂದಿಗೆ ದೇವಾಂಗ ಜ್ಯೋತಿ ಹೊತ್ತ ವಾಹನವನ್ನು ದೇವಾಂಗ ಸಮಾಜದ ವತಿಯಿಂದ ಮಂಗಳವಾರ ಅದ್ದೂರಿಯಾಗಿ ಸ್ವಾಗತಿಸಲಾಯಿತು.

ನಗರದ ಶಿವಲಿಂಗ ನಗರದಲ್ಲಿರುವ ಬನಶಂಕರಿದೇವಿ ದೇವಸ್ಥಾನದ ಮುಂಭಾಗದಲ್ಲಿ ದೇವಾಂಗ ಜ್ಯೋತಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ದೇವಸ್ಥಾನ ಆವರಣದಲ್ಲಿ ದೇವಾಂಗ ಜ್ಯೋತಿಯ ವಿಷಯದ ಬಗ್ಗೆ ಜಿಲ್ಲಾ ದೇವಾಂಗ ಸಂಘದ ಗೌರವಾಧ್ಯಕ್ಷ ಸಂಕಪ್ಪ ಮಾರನಾಳ ಸವಿಸ್ತಾರವಾದ ಮಾಹಿತಿ ಒದಗಿಸಿದರು. ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನ ಶಕ್ತಪೀಠ ಬನಶಂಕರಿಯಲ್ಲಿ ಮೇ 9, 10ರಂದು ಜರಗಲಿರುವ ರಾಜ್ಯ ಮಟ್ಟದ ಅಖಿಲ ಭಾರತ ದೇವಾಂಗ ಜಾಗೃತಿ ಸಮಾವೇಶ ಹಾಗೂ ಶ್ರೀ ದಯಾನಂದಪುರಿ ಸ್ವಾಮೀಜಿ ಅವರ ಪಟ್ಟಾಭಿಷೇಕದ 36ನೇ ವಾರ್ಷಿಕೋತ್ಸವ ಸಮಾರಂಭದ ಪ್ರಚಾರ ಹಿನ್ನೆಲೆಯಲ್ಲಿ ಈ ಜ್ಯೋತಿ ಹಾವೇರಿ ಜಿಲ್ಲೆಗೆ ಆಗಮಿಸಿದೆ.ಜಿಲ್ಲಾ ದೇವಾಂಗ ಸಂಘದ ಅಧ್ಯಕ್ಷ ಬಸವರಾಜ ಮೈಲಾರ, ನಗರ ದೇವಾಂಗ ಸಂಘದ ಅಧ್ಯಕ್ಷ ಸೋಮನಾಥ ಕುದರಿ, ತಾಲ್ಲೂಕು ದೇವಾಂಗ ಸಮಾಜದ ಅಧ್ಯಕ್ಷ ಚಿದಂಬರ ಕುದರಿ, ಜಿಲ್ಲಾ ದೇವಾಂಗ ಸಂಘದ ಪದಾಧಿಕಾರಿಗಳಾದ ಲಕ್ಷ್ಮೀಕಾಂತ ಹುಲಗೂರ, ಮಹೇಶ್ ಕುದರಿ, ವಿಶಾಲ ಕೊಪ್ಪಳ, ಶ್ರೀಧರ ಬಳ್ಳಿ, ಸರಸ್ವತಿ ಕುದರಿ, ಮಂಜುಳಾ ಕುದರಿ, ಲಕ್ಷ್ಮೀ ಕುದರಿ, ಮಂಜುಳಾ ಬೆಟಗೇರಿ, ವಂದನಾ ಮತ್ತೂರ, ವಿಜಯಕುಮಾರ್ ಕುದರಿ, ಪ್ರಶಾಂತ ಕೊಳ್ಳಿ, ವಿನಾಯಕ ಕುದರಿ, ನಾರಾಯಣ ಮತ್ತೂರ, ಮಂಜುನಾಥ ಕುದರಿ, ವಿನೋದ ಕುದರಿ, ದೀಪಕ್ ಹುಲ್ಲೂರ ಸೇರಿದಂತೆ ಇತರರು ಇದ್ದರು.



ಹಾವೇರಿ: ನಗರದ ಶಿವಲಿಂಗ ನಗರದಲ್ಲಿರುವ ಬನಶಂಕರಿದೇವಿ ದೇವಸ್ಥಾನದ ಮುಂಭಾಗದಲ್ಲಿ ಬೆಳಗಲೆಮ್ಮ ದೇವಾಂಗ ತತ್ವಮತ ಎಂಬ ನಾಮಾಂಕಿತದೊಂದಿಗೆ ದೇವಾಂಗ ಜ್ಯೋತಿ ಹೊತ್ತ ವಾಹನವನ್ನು ದೇವಾಂಗ ಸಮಾಜದ ವತಿಯಿಂದ ಮಂಗಳವಾರ ಅದ್ದೂರಿಯಾಗಿ ಸ್ವಾಗತಿಸಿ, ವಿಶೇಷ ಪೂಜೆ ಸಲ್ಲಿಸಲಾಯಿತು.

ಸೃಷ್ಟಿಯ ಸಂಪನ್ಮೂಲಗಳ ರಕ್ಷಣೆ ಪ್ರತಿಯೊಬ್ಬರ ಕರ್ತವ್ಯ: ಶ್ರೀಗಳು

ಬಂಕಾಪೂರ: ಪರೋಪಕಾರ ಮನುಷ್ಯನ ಜೀವನದ ಯಶಸ್ಸಿನ ಸಣ್ಣ ಭಾಗ ಇದರಿಂದಾಗಿ ಕೆರೆ ಕಟ್ಟೆ ಹಾಗೂ ಸೃಷ್ಟಿಯ ಸಂಪನ್ಮೂಲಗಳನ್ನು ಕಾಪಾಡಿ ಮುಂದಿನ ಪೀಳಿಗೆಗೆ ಉಳಿಸಿಹೋಗುವುದು ಪಾವಿತ್ರತೆಯ ಕರ್ತವ್ಯ. ಮಣ್ಣಿನ ಉತ್ತಮ ಫಲವತ್ತತೆ, ಗುಣಮಟ್ಟ ಆದರಿಸಿ ಭೂಮಿಯ ಮೌಲ್ಯ ರೈತರಿಗೆ ಕೃಷಿ ಉತ್ಪನ್ನದಲ್ಲಿ ಲಾಭ ತಂದು ಕೊಡುತ್ತದೆ ಎಂದು ಹಾವೇರಿ ಹುಕ್ಕೇರಿಮಠದ ಸದಾಶಿವ ಸ್ವಾಮೀಜಿ ಹೇಳಿದರು.



ಮಂಗಳವಾರ ಸಮೀಪದ ಹೊಸೂರು ಎತ್ತಿನಹಳ್ಳಿ ಮಸಳಿಕೊಪ್ಪ ಭಾಗದ ಮುವತ್ತೈದು ಎಕ್ಕರೆ ವಿಸ್ತೀರ್ಣದಲ್ಲಿನ ಬಳಗಟ್ಟಿ ಕೆರೆಯ ಹೂಳು ತೆಗೆದು ಉಚಿತವಾಗಿ ರೈತರ ಹೊಲಗಳಿಗೆ ಸಾಗಿಸುವ ಕೆಲಸದ ಬನ್ನೂರು ಭರತ ಸಂಸ್ಥೆಯ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಸಾಮಾಜಿಕ ಕಳಕಳಿಯ ಕಾರ್ಯಕ್ಕೆ ಮುಂದಾದ ಬನ್ನೂರು ಭಾರತ ಸಂಸ್ಥೆಯ ಅಧ್ಯಕ್ಷ ಶ್ರೀಕಾಂತ ದುಂಡಿಗೌಡ್ರ, ದೇಶಕ್ಕೆ ಅನ್ನನೀಡುವ ರೈತರ ಬೆನ್ನಿಗೆ ನಿಂತು ಸೃಷ್ಟಿಯ ಸಂಪನ್ಮೂಲ ರಕ್ಷಣೆಯ ಕಾರ್ಯಕ್ಕೆ ಮುಂದಾಗಿದ್ದು ಶ್ಲಾಘನೀಯ, ಅಂತರ್ಜಲ ವೃದ್ಧಿ, ನೀರು ಸಂರಕ್ಷಣೆ, ಜಲಸಂಪನ್ಮೂಲ ವೃದ್ಧಿ, ಮಣ್ಣ ಫಲವತ್ತತೆ ಸಂರಕ್ಷಣೆ, ಪಶುಪಕ್ಷಿ ಪ್ರಾಣಿಗಳ ಜೀವಜಲ ಆಸರೆಯಾಗಲಿದೆ. ಉದ್ಯಮ ವ್ಯಾಪಾರದ ಜೊತೆಗೆ ಶ್ರೀಕಾಂತ ದುಂಡಿಗೌಡ್ರ ದುಡಿಮೆಯ ಆದಾಯದ ಭಾಗದಲ್ಲಿ ಜನರ ಸೇವೆ ಮಾಡುವ ಸಂಕಲ್ಪತೊಟ್ಟವರು. ಸಾಮೂಹಿಕ ವಿವಾಹಗಳು, ಶಿಕ್ಷಣ ಕ್ಷೇತ್ರದ ಅಭಿವೃದ್ಧಿ, ಪ್ರತಿಭಾ ಪುರಸ್ಕಾರದಂತಹ ಸಾಮಾಜಿಕ ಕಾರ್ಯ ವಿಶೇಷ ಸಮದೃಷ್ಟಿ ಗುರಿ ಹರಿಸಿದ್ದಾರೆಂದರು.

ರೈತರಿಗೆ ಉಪಯುಕ್ತತೆಯ ಪ್ರತಿವರ್ಷದ ಕೆರೆ ಹೂಳೆತ್ತಿ ಪರಿಶುದ್ಧ ಫಲವತ್ತತೆಯ ಮಣ್ಣು ರೈತರ ಜಮೀನುಗಳಿಗೆ ಉಚಿತವಾಗಿ ನೀಡುವ ಪರೋಪಕಾರದ ಕೆಲಸದಿಂದ ಪಾವಿತ್ರ ಉಳಿಸಿಕೊಂಡಿದ್ದಾರೆಂದರು.

ಬನ್ನೂರು ಭರತ ಸಂಸ್ಥೆಯ ಅಧ್ಯಕ್ಷ ಶ್ರೀಕಾಂತ ದುಂಡಿಗೌಡ್ರ ಮಾತನಾಡಿ, ತಾಲೂಕಿನಲ್ಲಿ ಐದು ನೂರು ಕೆರೆಗಳಿವೆ. ಪ್ರತಿವರ್ಷ ರೈತರಿಂದ ಹೂಳೆತ್ತುವ ಕಾರ್ಯಕ್ಕೆ ಬೇಡಿಕೆ ಬರುತ್ತಲೇ ಇವೆ. ಜನರ ಅಗತ್ಯಕ್ಕಾಗಿ ತಾಲೂಕಿನ ಪ್ರತಿ ಜಿಪಂ ವ್ಯಾಪ್ತಿಯಲ್ಲಿ ಒಂದು ಕೆರೆಯಂತೆ ಆಯ್ಕೆ ಮಾಡಿ ಹೂಳೆತ್ತಿವ ಕೆಲಸ ಮಾಡಲಾಗುತ್ತಿದೆ. ಸಂಪನ್ಮೂಲ ವೃದ್ಧಿ ಜೊತೆಗೆ ರೈತರ ಜಮೀನುಗಳು ಉತ್ತಮ ಗುಣಮಟ್ಟ ಹೊಂದುತ್ತವೆ. ಇದು ತಾಲೂಕಿನ ರೈತರಿಗೆ ಆರ್ಥಿಕ ಚೇತನ ನೀಡುತ್ತದೆ. ಇದರಿಂದಾಗಿ ಸಮೂದಾಯದ ಎಲ್ಲವರ್ಗದವರ ಮನ್ನಣೆಯೂ ಸಿಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಹಾವೇರಿ ವಿಶ್ವವಿದ್ಯಾಲಯ ಹುಕ್ಕೇರಿಮಠದ ಸದಾಶಿವ ಸ್ವಾಮೀಜಿಗಳಿಗೆ ಗೌರವ ಡಾಕ್ಟರೇಟ್ ಪದವಿ ನೀಡಿದ್ದಕ್ಕೆ ಅಭಿನಂಧಿಸಿ ಗೌರವಿಸಲಾಯಿತು.

ಶಶಿಧರ ಯಲಿಗಾರ, ರವೀಂದ್ರ ಕುಡವಕ್ಕಲಿಗರ, ಶಿವಾನಂದ ರಾಮಗಿರಿ, ದೇವಣ್ಣ ಚಾಕಲಬ್ಬಿ, ಫಕ್ಕೀರಗೌಡ ಪಾಟೀಲ, ರಾಜು ಗಂಜಿಗಟ್ಟಿ, ತಿಪ್ಪಣ್ಣ ಸಾತಣ್ಣವರ, ಶಶಿಧರ ಹೊನ್ನಣ್ಣವರ, ಹೊಸೂರು ಯತ್ತಿನಹಳ್ಳಿ ಗ್ರಾಮದ ಹಿರಿಯರಾದ ಹರ್ಜಪ್ಪ ಲಮಾಣಿ, ಮಲ್ಲಯ್ಯಾ ನಾಗನೂರು ಮಠ, ಧರಣೇಂದ್ರ ಪುಟ್ಟಪ್ಪನವರ, ಸುಧೀರ ಛಬ್ಬಿ, ನಾಗರಾಜ ಸುರಗೊಂಡ ಅಲ್ಲದೇ ನೂರಾರು ರೈತ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ನವೀನ ಸಾಸನೂರು ಕಾರ್ಯಕ್ರಮ ನಿರೂಪಿಸಿ ವಂಧಿಸಿದರು.

ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡಿ

ಬ್ಯಾಡಗಿ: ರಕ್ತದಾನದಿಂದ ರಕ್ತದೊತ್ತಡ ಮಧುಮೇಹದಂತ ರೋಗಗಳು ನಿಯಂತ್ರಣಕ್ಕೆ ಬರುವುದರ ಜೊತೆಗೆ ಆತ್ಮತೃಪ್ತಿ ಸಿಗುತ್ತದೆ ಎಂದು ಮಾಜಿ ಸೈನಿಕ ಹಾಗೂ ಭ್ರಷ್ಟಾಚಾರ ವಿರೋಧಿ ಜನ ಆಂದೋಲನ ನ್ಯಾಸ ಸಮಿತಿ ಅಧ್ಯಕ್ಷ ಮಲ್ಲೇಶಪ್ಪ ಚಿಕ್ಕಣ್ಣನವರ್ ಅಭಿಪ್ರಾಯ ಪಟ್ಟರು.

ಪಟ್ಟಣದ ತಾಲೂಕು ಆಸ್ಪತ್ರೆಯಲ್ಲಿ ಭ್ರಷ್ಟಾಚಾರ ವಿರೋಧಿ ಜನ ಆಂದೋಲನ ನ್ಯಾಸ ಬ್ಯಾಡಗಿ ಹಾಗೂ ಸಾರ್ವಜನಿಕ ಆಸ್ಪತ್ರೆ ಮತ್ತು ರಕ್ತಶೇಖರಣ ಘಟಕ ಹಾಗೂ ಹಾವೇರಿ ಜಿಲ್ಲಾ ರಕ್ತಕೇಂದ್ರ ಹಾಗೂ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಜಿಲ್ಲಾ ಆಸ್ಪತ್ರೆ ಹಾವೇರಿ ಇವರ ಸಹಯೋಗದೊಂದಿಗೆ ನಡೆದ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಉದ್ಘಾಟನೆ ಮಾಡಿ ಮಾತನಾಡಿದವರು.

ರಕ್ತದಾನ ಮನುಷ್ಯನ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತದೆ ದೇಶದಲ್ಲಿ ಪ್ರತಿವರ್ಷ 41 ದಶಲಕ್ಷ ಯೂನಿಟ್ ರಕ್ತದ ಕೊರತೆ ಎದುರಾಗುತ್ತಿದೆ. ಸಮಯಕ್ಕೆ ಸರಿಯಾಗಿ ರಕ್ತ ಸಿಗದೇ ವಿವಿಧ ಕಾಯಿಲೆಗಳಿಂದ ಬಳಲುತಿರುವ ರೋಗಿಗಳು ಅಪಘಾತದ ಮೃತಪಡುತ್ತಿದ್ದಾರೆ. ಅಮೂಲ್ಯವಾದ ಜೀವಗಳನ್ನು ಉಳಿಸಲು ರಕ್ತದಾನ ಮಾಡುವುದು ಅತಿ ಅಗತ್ಯವಾಗಿದ್ದು ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡಬೇಕೆಂದು ಕರೆ ನೀಡಿದರು.

ಇದೇ ವೇಳೆ ರಕ್ತದಾನ ಶಿಬಿರದಲ್ಲಿ ಸಮಾಜ ಸೇವಕ ಎಂಎನ್ ನಾಯಕ್ ರಕ್ತದಾನ ಮಾಡಿ ಮಾತನಾಡಿ, ಜನಸಾಮಾನ್ಯರಲ್ಲಿ ರಕ್ತದಾನದ ಬಗ್ಗೆ ತಪ್ಪು ಕಲ್ಪನೆಗಳಿದ್ದು ಹೋಗಲಾಡಿಸಬೇಕು ಹೆಚ್ಚು ಜನರು ಸೇರುವ ಧಾರ್ಮಿಕ ಕೇಂದ್ರಗಳಲ್ಲಿ ನಿಯಮಿತವಾಗಿ ರಕ್ತದಾನಕ್ಕೆ ಶಿಬಿರ ಆಯೋಜಿಸಿದರೆ ದೇಶದಲ್ಲಿನ ರಕ್ತದ ಕೊರತೆ ನೀಗಿಸಬಹುದು ಧಾರ್ಮಿಕ ಕೇಂದ್ರಗಳು ಪ್ರಾರ್ಥನೆಗಳಿಗೆ ಸೀಮಿತವಾಗಿರದೆ ಸಮಾಜಮುಖಿಯಾಗಿ ಸ್ಪಂದಿಸಬೇಕು ಎಂದರು.

ಒಟ್ಟು ಶಿಬಿರದಲ್ಲಿ 17 ದಾನಿಗಳು ಮತ್ತು ಒಬ್ಬ ಮಹಿಳಾ ದಾನಿ ರಕ್ತದಾನ ಮಾಡಿದರು.

ಕಾರ್ಯಕ್ರಮದಲ್ಲಿ ರಕ್ತಶೇಕರಣ ಘಟಕದ ಅಧಿಕಾರಿ ಶಶಿಕುಮಾರ್ ಶಿವಮೊಗ್ಗಿ, ಡಾ. ಬಸವರಾಜ ತಳವಾರ, ಡಾ.ರಾಮಪ್ಪ ಕಟ್ಟಿ, ಡಾ. ಮಹಾಂತ್, ಸ್ಮಿತಾ ಬಿ, ರೇವಣಸಿದ್ದಪ್ಪ ತೆಂಬದ, ಶ್ರೀಕಾಂತ್ ಹುಣಸಿಮರ, ಫಕೀರಪ್ಪ ಹೊನ್ನಮ್ಮನವರ್, ತಾಲೂಕ್ ಆಸ್ಪತ್ರೆ ಎಲ್ಲಾ ಆರೋಗ್ಯ ಸಿಬ್ಬಂದಿಗಳು ಪ್ಯಾರಾ ಮೆಡಿಕಲ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ರಕ್ತದಾನದಿಂದ ಜೀವ ರಕ್ಷಣೆ: ಪ್ರೊ. ಗೌಡರ


ರಾಣೇಬೆನ್ನೂರ: ರಕ್ತದಾನ ಶ್ರೇಷ್ಠವಾದದ್ದು, ಆದರಿಂದ ಆರೋಗ್ಯವಂತರು ರಕ್ತದಾನ ಮಾಡಿದಾಗ ತಾವು ಮತ್ತೊಬ್ಬರ ಜೀವ ಉಳಿಸಿದಂತಹ ಪುಣ್ಯ ನಿಮ್ಮದಾಗಲಿದೆ ಎಂದು ಪ್ರಾಚಾರ್ಯ ಪ್ರೊ. ಎಸ್.ಪಿ. ಗೌಡರ ಹೇಳಿದರು.

ಅವರು ತಾಲೂಕಿನ ಸುಣಕಲ್ಲಬಿದರಿ ಗ್ರಾಮದ ಆರಳಿ ಸಿದ್ಲಿಂಗಪ್ಪ ಬಸಪ್ಪ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಐ ಕ್ಯೂಎಸಿ, ಎನ್.ಎಸ್. ಎಸ್, ಯುವರೆಡ್ ಕ್ರಾಸ್, ರೆಡ್ ರಿಬ್ಬನ್, ಹಾವೇರಿ ಜಿಲ್ಲಾ ರಕ್ತನಿಧಿ ಕೇಂದ್ರ, ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಹಯೋಗದಲ್ಲಿ ಕಾಲೇಜಿನಲ್ಲಿ ಆಯೋಜಿಸಿದ್ದ,ಉಚಿತ ಆರೋಗ್ಯ ತಪಾಸಣೆ ಹಾಗೂ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ರಕ್ತದಾನ ಮಾಡುವ ಮೂಲಕ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ರಕ್ತದಾನದ ಬಗೆಗೆ ಜನರಲ್ಲಿ ಕೆಲವು ತಪ್ಪು ತಿಳುವಳಿಕೆಗಳಿದ್ದು ಅವುಗಳನ್ನು ನೀವು ಹೋಗಲಾಡಿಸುವ ಮೂಲಕ ವೈಜ್ಞಾನಿಕ ಕಾರಣವನ್ನು ತಿಳಿಹೇಳಬೇಕು ಎಂದರು.

ಹಾವೇರಿ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಆಪ್ತ ಸಮಾಲೋಚಕ ರೇವಣಸಿದ್ದಪ್ಪ ತೆಂಬದ ಮಾತನಾಡಿ, ರಕ್ತವು ತುಂಬಾ ಅವಶ್ಯಕವಾಗಿದ್ದು ಯುವಕರು ಈ ಸ್ವಯಂ ಪ್ರೇರಿತ ರಕ್ತದಾನ ಶಿಬಿರಗಳಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವುದರೊಂದಿಗೆ ಜೀವ ಉಳಿಸಿದ ಮಹತ್ಕಾರ್ಯ ನಿಮ್ಮದಾಗಲಿದೆ ಎಂದರು.

ಕಾಲೇಜಿನ ಎನ್‌ಎಸ್‌ಎಸ್ ಸಂಚಾಲಕ ಡಾ. ನಾಗರಾಜ ಗೋಡಿಹಾಳ ಮಾತನಾಡಿ, ಮುಂದುವರೆದ ಇಂದಿನ ವಿಜ್ಞಾನ ಲೋಕದಲ್ಲಿ ಏನೆಲ್ಲಾ ಸೃಷ್ಟಿಸಬಹುದು ಆದರೆ ರಕ್ತವನ್ನು ತಯಾರಿಸಲು ಸಾಧ್ಯವಿಲ್ಲ. ಹಾಗಾಗಿ ರಕ್ತ ಪವಿತ್ರವಾದದ್ದು, ಆದನ್ನು ನಮ್ಮ ದೇಹದಲ್ಲಿ ಕಾಪಾಡಿಕೊಳ್ಳುವ ಮೂಲಕ ದಾನ ಮಾಡಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಐಕ್ಯೂಎಸಿ ಸಂಚಾಲಕ ಡಾ.ಬಸವರಾಜ ಹುಗ್ಗಿ, ಅಧೀಕ್ಷಕ ಸತೀಶ.ಎಂ, ಪ್ರಧ್ಯಾಪಕರಾದ ರೇವಣಸಿದ್ದಪ್ಪ ಕೆ. ಬಿ, ಮಂಜುನಾಥ. ಬಿ. ಕೆ., ಅಂಬಿಕಾ ಹೊಸಮನಿ,ರವಿಕುಮಾರ ಎಸ್. ಯು., ಉಪನ್ಯಾಸಕರಾದ ಶೋಭಾ ನಂದಿಹಳ್ಳಿ, ಶಂಕರಪ್ಪ ಹರಿಜನ, ಸೋಮೇಶ ಎತ್ತಿನಕೊರಚರ, ವೀರೇಶ ಷಡಕ್ಷರಿಮಠ, ಕುಮಾರ ಕರಿಯಜ್ಜಿ,ಗಂಗವ್ವ ದಾನಪ್ಪನವರ, ಚಂದ್ರನಾಯಕ್.ಎಚ್, ಮೀನಾಕ್ಷಿ ಪೂಜಾರ, ಸತೀಶ ನಾಯಕ.ಬಿ ಇತರರು ಇದ್ದರು.



ಶೇಷಾಚಲ ಸದ್ಗುರುಗಳ ಜಯಂತ್ಯುತ್ಸವ: ಅದ್ಧೂರಿ ರಥೋತ್ಸವ

ಹಾವೇರಿ: ತಾಲೂಕಿನ ಅಗಡಿ ಗ್ರಾಮದ ಆನಂದವನದಲ್ಲಿ ಶ್ರೀ ಶೇಷಾಚಲ ಸದ್ಗುರುಗಳ ಜಯಂತ್ಯುತ್ಸವ ನಿಮಿತ್ತ ಮಂಗಳವಾರ ಶ್ರೀ ಶೇಷಾಚಲ ಸದ್ಗುರುಗಳ ರಥೋತ್ಸವವು ಸಾವಿರಾರು ಭಕ್ತರ ಸಮ್ಮುಖದಲ್ಲಿ ಅತೀ ವಿಜೃಂಭಣೆಯಿಂದ ನಡೆಯಿತು.

ಶ್ರೀ ಶೇಷಾಚಲ ಸದ್ಗುರುಗಳ ಜಯಂತಿ ಅಂಗವಾಗಿ ಆನಂದವನದಲ್ಲಿ ಕಳೆದನಾಲ್ಕೈದು ದಿನಗಳಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಅತ್ಯಂತ ಸಡಗರ ಸಂಭ್ರಮದಿಂದ ಜರುಗಿದವು. ಮಂಗಳವಾರ ಬೆಳಗ್ಗೆ ಸದ್ಗುರುಗಳ ಜನನೋತ್ಸವ ಪ್ರಯುಕ್ತ ಹರಿ ಕೀರ್ತನೆ, ನಂತರ ತೊಟ್ಟಿಲೋತ್ಸವ ನಡೆಯಿತು. ಮಧ್ಯಾಹ್ನದ ವೇಳೆ ಆನಂದವನದ ಆವರಣದಲ್ಲಿ ಸದ್ಗುರು ಶ್ರೀ ಶೇಷಾಚಲ ಸದ್ಗುರುಗಳ ಪಲ್ಲಕ್ಕಿ ಮೆರವಣಿಗೆ ನಡೆದು, ನಂತರ ವಿವಿಧ ಹೂಗಳಿಂದ ಸಿಂಗಾರಗೊಂಡಿದ್ದ ರಥೋತ್ಸವದಲ್ಲಿ ಮೂರ್ತಿಯನ್ನು ಪ್ರತಿಷ್ಠಾಪಿಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.



ಶ್ರೀಮಠದಿಂದ ಆರಂಭವಾದ ರಥೋತ್ಸವದಲ್ಲಿ ಭಜನೆ, ಕೀರ್ತನೆಗಳನ್ನು ಪ್ರಸ್ತುತಪಡಿಸಲಾಯಿತು. ನಂತರ ಸ್ವಲ್ಪ ದೂರದಲ್ಲಿರುವ ಆರಳಿಮರದ ಮಂಟಪಕ್ಕೆ ತೆರಳಿ ಪೂಜೆ ಸಲ್ಲಿಸಿದ ಬಳಿಕ, ಮೂಲ ಸ್ಥಳಕ್ಕೆ ಆಗಮಿಸಿ ವಿರಾಜಮಾನಗೊಂಡಿತು. ಈ ವೇಳೆ ಭಕ್ತರು ಸದ್ಗುರು ಶ್ರೀ ಶೇಷಾಚಲ ಮಹಾರಾಜ್ ಕೀ ಜೈ ಎನ್ನುವ ಘೋಷಣೆಗಳನ್ನು ಮೊಳಗಿಸಿದರು. ಭಕ್ತರು ರಥೋತ್ಸವದ ಕಳಶಕ್ಕೆ ಬಾಳೆಹಣ್ಣು, ಉತ್ತತ್ತಿ ಎಸೆಯುವುದರ ಮೂಲಕ ಭಕ್ತಿಯನ್ನು ಸಮರ್ಪಿಸಿದರು. ನಂತರ ಶ್ರೀ ಮಠಕ್ಕೆ ಆಗಮಿಸಿ ಮಹಾಮಂಗಲೋತ್ಸವನ್ನು ನಡೆಸಲಾಯಿತು. ಬಳಿಕ ಶ್ರೀ ಮಠಕ್ಕೆ ಆಗಮಿಸಿದ ಭಕ್ತರಿಗೆ ಅನ್ನಸಂತರ್ಪಣೆ ನಡೆಯಿತು. ಈ ವೇಳೆ ಶ್ರೀಮಠದ ಪೂಜ್ಯರು ಹಾಗೂ ಗುರುಭಕ್ತರು ಉಪಸ್ಥಿತರಿದ್ದರು.



ಬ್ಯಾಡಗಿ: ಪಟ್ಟಣದ ರಟ್ಟೀಹಳ್ಳಿ ರಸ್ತೆಯಲ್ಲಿ ಇರುವ ಭಾರತ ಪೆಟ್ರೋಲಿಯಂ ಬಂಕ್ ಬಳಿ ಪಟ್ಟಣದ ಇನ್ನರ್ ವ್ಹೀಲ್ ಕ್ಲಬ್ ವತಿಯಿಂದ ಪ್ರಥಮ ಸುಸ್ವಾಗತ ನಾಮ ಫಲಕವನ್ನು ಅಳವಡಿಸಿ ಉದ್ಘಾಟನೆ ಮಾಡಲಾಯಿತು. ಕ್ಲಬ್ ಅಧ್ಯಕ್ಷೆ ಪ್ರತಿಭಾ ಮೇಲಗಿರಿ, ಕಾರ್ಯದರ್ಶಿ ಲಕ್ಷ್ಮೀ ಉಪ್ಪಾರ, ಕ್ಲಬ್ ಪದಾಧಿಕಾರಿಗಳಾದ ಪುಷ್ಪಾ ಇಂಡಿಮಠ, ಜಾನವಿ ಎಲಿ, ಛಾಯಾ ತಂಬಾಕದ, ಪಾರ್ವತಿ ಲೋಕೇಶ ಹಾಗೂ ಇತರರು ಉಪಸ್ಥಿತರಿದ್ದರು.



ಹಾವೇರಿ: ಭಗವಾನ್ ಮಹಾವೀರ ಜಯಂತಿ ಪ್ರಯುಕ್ತ ವೀಣಾ ಚಂದ್ರನಾಥ್ ಕಳಸೂರ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಇಲ್ಲಿಯ ಶ್ರೀಶಕ್ತಿ ವೃದ್ಧಾಶ್ರಮದ ನಿವಾಸಿಗಳಿಗೆ ಸೀರೆ, ಪಂಜೆ. ಹಣ್ಣು, ಬಿಸ್ಕತ್ ಮುಂತಾದವುಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಚಂದ್ರನಾಥ ಕಳಸೂರ, ಸುನಿಧಿ ಪವನ ಕಳಸೂರ, ಧನಂಜಯ ಕಳಸೂರ, ಈರಣ್ಣ ದುಂಡಣ್ಣನವರ ಉಪಸ್ಥಿತರಿದ್ದರು.

ಕೇಂದ್ರ ಸರ್ಕಾರ, ರಾಜ್ಯಪಾಲರ ವಿರುದ್ಧ ಕರವೇ ಆಕ್ರೋಶ

ಹಾವೇರಿ: ಹಿಂದಿ ಸಾಮ್ರಾಜ್ಯಶಾಹಿಗಳ ಪರವಾಗಿ ವರ್ತಿಸುತ್ತಾ, ಕರ್ನಾಟಕ ವಿರೋಧಿ ಧೋರಣೆ ತಳೆದಿರುವ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಕೇಂದ್ರ ಸರ್ಕಾರ ಕೂಡಲೇ ಹಿಂದಕ್ಕೆ ಕರೆಸಿಕೊಳ್ಳಬೇಕೆಂದು ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣಗೌಡ್ರ ಬಣ) ಜಿಲ್ಲಾ ಘಟಕದ ಮುಖಂಡರು ಮಂಗಳವಾರ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದರು.



ನಗರದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಮಂಗಳವಾರ ಪ್ರತಿಭಟನಾಕಾರರು ಕೇಂದ್ರ ಸರ್ಕಾರ ಹಾಗೂ ರಾಜ್ಯಪಾಲರ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಕರವೇ ಜಿಲ್ಲಾಧ್ಯಕ್ಷ ಗಿರೀಶ ಬಾರ್ಕಿ ಮಾತನಾಡಿ, ರಾಜ್ಯ ಸರ್ಕಾರ ಎಸ್ಸೆಸ್ಸೆಲ್ಸಿ ಪರೀಕ್ಷೆಗಳಲ್ಲಿ ತೃತೀಯ ಭಾಷೆಗೆ ಗ್ರೇಡಿಂಗ್ ವ್ಯವಸ್ಥೆ ಜಾರಿಗೆ ತಂದ ನಿರ್ಧಾರವನ್ನು ಮರು ಪರಿಶೀಲಿಸುವಂತೆ ರಾಜ್ಯಪಾಲರು ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದಾರೆ. ಈ ಪತ್ರದ ಹಿಂದೆ ಕರ್ನಾಟಕದಲ್ಲಿ ಹಿಂದಿ ಹೇರಿಕೆಯನ್ನು ಶಾಶ್ವತವಾಗಿ ನಡೆಸುವ ಹುನ್ನಾರವಿದೆ. ರಾಜ್ಯಪಾಲರು ತಮ್ಮ ಕಾರ್ಯವ್ಯಾಪ್ತಿ ಮೀರಿ ಕನ್ನಡಿಗರ ಆಶೋತ್ತರಗಳಿಗೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಹೀಗಾಗಿ ಅವರು ಕರ್ನಾಟಕದಲ್ಲಿ ಒಂದೇ ಒಂದು ನಿಮಿಷವೂ ರಾಜ್ಯಪಾಲರಾಗಿ ಉಳಿಯುವ ನೈತಿಕತೆ ಕಳೆದುಕೊಂಡಿದ್ದಾರೆ ಎಂದು ಆರೋಪಿಸಿದರು.

ರಾಜ್ಯ ಕಾರ್ಯದರ್ಶಿ ಕರಬಸಯ್ಯ ಬಸರಿಹಳ್ಳಿಮಠ ಮಾತನಾಡಿ, ಕರ್ನಾಟಕದ ಶಿಕ್ಷಣ ನೀತಿಯನ್ನು ರಾಜ್ಯ ಸರ್ಕಾರ ತೀರ್ಮಾನಿಸುತ್ತದೆ. ಇದಕ್ಕಾಗಿಯೇ ನಾವು ಸರ್ಕಾರವನ್ನು ಆಯ್ಕೆ ಮಾಡಿ ಕಳಿಸಿದ್ದೇವೆ. ಇದನ್ನು ಪ್ರಶ್ನಿಸಲು ರಾಜ್ಯಪಾಲರು ಯಾರು? ಅವರಿಗೆ ಸಂವಿಧಾನ ಈ ಅವಕಾಶ ನೀಡಿಲ್ಲ. ತೃತೀಯ ಭಾಷೆ ಗ್ರೇಡಿಂಗ್ ವ್ಯವಸ್ಥೆಯ ನಿರ್ಧಾರ ಸರ್ಕಾರ ಕೈಗೊಂಡಿದೆ. ಇದನ್ನು ಬದಲಿಸುವ ಪ್ರಯತ್ನ ಯಾರೇ ಮಾಡಿದರೂ ರಕ್ತಕ್ರಾಂತಿಯಾಗುತ್ತದೆ. ರಾಜ್ಯಪಾಲ ಗೆಹ್ಲೋಟ್ ಹಿಂದಿ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಅಲ್ಲೆಲ್ಲಾ ತೃತೀಯ ಭಾಷೆಯಾಗಿ ಕನ್ನಡ ಕಲಿಸಲು ತಾಕೀತು ಮಾಡಲಿ. ಅಷ್ಟೇ ಯಾಕೆ ಅವರ ಸ್ವಂತ ರಾಜ್ಯವಾದ ಮಧ್ಯಪ್ರದೇಶದಲ್ಲಿ ಈಗಲೂ ಎರಡೇ ಭಾಷೆಗಳನ್ನು ಕಲಿಸಲಾಗುತ್ತಿದೆ. ಮೂರನೇ ಭಾಷೆಯನ್ನಾಗಿ ಕಡ್ಡಾಯವಾಗಿ ಕನ್ನಡ ಕಲಿಸುವಂತೆ ಅಲ್ಲಿನ ಸರ್ಕಾರದ ಮೇಲೆ ಒತ್ತಡ ಹೇರಲಿ ಎಂದು ಆಗ್ರಹಿಸಿದರು.

ಅಪರ ಡಿಸಿ ಎಲ್.ನಾಗರಾಜ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ರಾಜ್ಯ ಸಂಘಟನಾ ಕಾರ್ಯದರ್ಶಿ ಸತೀಶಗೌಡ ಮುದಿಗೌಡ್ರ, ಜಿಲ್ಲಾ ಉಪಾಧ್ಯಕ್ಷ ನಂದೀಶ್ ಗೊಡ್ಡೆಮ್ಮಿ, ತಾಲೂಕಾಧ್ಯಕ್ಷ ಹಾಲೇಶ ಹಾಲಣ್ಣನವರ, ನಾಗರಾಜ ಪೂಜಾರ, ರಮೇಶ ಆರಗೊಳ, ಮಾರುತಿ ಪೂಜಾರ, ಹಸನಸಾಬ ಹತ್ತಿಮತ್ತೂರ, ಕೊಟ್ರೇಶ್ ಗುತ್ತೂರ, ಚನ್ನಪ್ಪ ಹೊನ್ನಮ್ಮನವರ, ಶಿವಾನಂದ ಪೂಜಾರ, ರಾಮಣ್ಣ ಆಗಸರ, ಸತ್ಯವತಿ ಕಡೇರ, ಈರಮ್ಮ ಕಾಡಸಾಲಿ, ಗೌಸಪಾಕ್ ಬಾಲೆಬಾಯಿ, ಫಕ್ರುದ್ದೀನ ಅಂಗಡಿಕಾರ, ಕರಬಸ್ಸು ಕುರಬಗೇರಿ, ಕುಮಾರ ಕುಪ್ಪೆಲೂರು, ಯಲ್ಲಪ್ಪ ಪೊಟೇರ್, ಪ್ರವೀಣ ಗೌಡ್ರ, ಹರೀಶ ಕೋಳೆಪ್ಪನವರ ಉಪಸ್ಥಿತರಿದ್ದರು.

ವಿವಿಧ ಜಯಂತಿಗಳ ಪೂರ್ವಭಾವಿ ಸಭೆ

ಹಾವೇರಿ: ಜಿಲ್ಲಾಡಳಿತದಿಂದ ಶ್ರೀ ಬಸವ ಜಯಂತಿ, ಶ್ರೀ ಶಂಕರಾಚಾರ್ಯ ಜಯಂತಿ ಹಾಗೂ ಶ್ರೀ ಭಗೀರಥ ಜಯಂತಿ ಆಚರಣೆ ಕುರಿತು ಪೂರ್ವಭಾವಿ ಸಭೆ ಏಪ್ರಿಲ್ 8ರಂದು ಮಧ್ಯಾಹ್ನ 12ಗಂಟೆಗೆ ಜಿಲ್ಲಾಧಿಕಾರಿಗಳ ಕೋರ್ಟ್‌ಹಾಲ್‌ನಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮನೆಯ ಮೇಲೆ ವಿದ್ಯುತ್ ತಂತಿ: ತಪ್ಪದ ಭೀತಿ

ಹಾವೇರಿ: ತಾಲೂಕಿನ ಕೋಡಬಾಳ ಗ್ರಾಮದಲ್ಲಿ ವಿದ್ಯುತ್ ತಂತಿ ಸಮಸ್ಯೆಯಿಂದ ಮಹಿಳೆ ಭಯಭೀತಿಯಲ್ಲೇ ಜೀವನ ಸಾಗಿಸುತ್ತಿರುವ ಘಟನೆ ಬೆಳಕಿಗೆ ಬಂದಿದೆ. ಗ್ರಾಮದ ಪ್ಲಾಟ್ ನಿವಾಸಿ ಪುಟ್ಟವ್ವ ಕಾಟೇನಹಳ್ಳಿ ಅವರ ಮನೆಯ ಮೇಲಿಂದ ನೇರವಾಗಿ ವಿದ್ಯುತ್ ತಂತಿ ಹಾದು ಹೋಗಿರುವುದು ಅಪಾಯಕ್ಕೆ ಆಹ್ವಾನ ನೀಡುತ್ತಿದೆ.

ಮನೆಯ ಮೇಲಿನಿಂದ ಹಾದು ಹೋಗುತ್ತಿರುವ ಈ ವಿದ್ಯುತ್ ತಂತಿಯಿಂದ ಯಾವುದೇ ಕ್ಷಣದಲ್ಲಿ ಅಪಘಾತ ಸಂಭವಿಸಬಹುದೆಂಬ ಆತಂಕದಲ್ಲಿ ಪುಟ್ಟವ್ವ ದಿನನಿತ್ಯ ಜೀವನ ನಡೆಸುತ್ತಿದ್ದಾರೆ. ಮಳೆಗಾಲದ ಸಂದರ್ಭದಲ್ಲಿ ಹಾಗೂ ಗಾಳಿಯ ತೀವ್ರತೆ ಹೆಚ್ಚಾದಾಗ ಈ ಭೀತಿ ಇನ್ನಷ್ಟು ಹೆಚ್ಚುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಈ ಸಮಸ್ಯೆ ಕುರಿತು ಸಂಬಂಧಿಸಿದ ಇಲಾಖೆಗೆ ಹಲವು ಬಾರಿ ಅರ್ಜಿ ಸಲ್ಲಿಸಿದ್ದರೂ ಅಧಿಕಾರಿಗಳು ನಿರ್ಲಕ್ಷ ವಹಿಸಿದ್ದಾರೆ ಎಂಬ ಆರೋಪ ವ್ಯಕ್ತವಾಗಿದೆ. ಸಾರ್ವಜನಿಕರ ಸುರಕ್ಷತೆಯನ್ನು ಕಡೆಗಣಿಸುವಂತ ಈ ನಿರ್ಲಕ್ಷ್ಯದಿಂದ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಮಾಜಿಕ ಕಾರ್ಯಕರ್ತ ಲೋಕೇಶ ಕುಬಸದ ಅವರು ತಕ್ಷಣವೇ ವಿದ್ಯುತ್ ತಂತಿಯನ್ನು ಸ್ಥಳಾಂತರಿಸಲು ಅಧಿಕಾರಿಗಳನ್ನು ಆಗ್ರಹಿಸಿದ್ದಾರೆ. ''ಜನರ ಜೀವದೊಂದಿಗೆ ಆಟವಾಡುವಂತ ಪರಿಸ್ಥಿತಿ ನಿರ್ಮಾಣವಾಗಿದೆ. ಅಧಿಕಾರಿಗಳು ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಅವರು ತಿಳಿಸಿದ್ದಾರೆ.



ಇದಕ್ಕೆ ಪ್ರತಿಕ್ರಿಯೆ ನೀಡಿದ ಹೆಸ್ಕಾಂ ಅಧಿಕಾರಿಗಳು, ಪುಟ್ಟವ್ವ ಕಾಟೇನಹಳ್ಳಿ ಅವರ ಮನೆಯ ಮೇಲಿನ ವಿದ್ಯುತ್ ತಂತಿ ಸ್ಥಳಾಂತರಕ್ಕೆ ಈಗಾಗಲೇ ಕ್ರಿಯಾಯೋಜನೆ ಸಿದ್ಧಪಡಿಸಲಾಗಿದೆ. ಶೀಘ್ರದಲ್ಲೇ ತಂತಿಯನ್ನು ಸ್ಥಳಾಂತರಿಸಲಾಗುವುದು ಎಂದು ತಿಳಿಸಿದ್ದಾರೆ.

ಸ್ಥಳೀಯರು ತಕ್ಷಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದು, ಯಾವುದೇ ಅನಾಹುತ ಸಂಭವಿಸುವ ಮುನ್ನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕೆಂದು ಒತ್ತಾಯಿಸಿದ್ದಾರೆ.

ಕಿರುಸುದ್ದಿ

ಅನುದಾನಿತ ಪ್ರಾಥಮಿಕ ಶಾಲೆಗಳಿಂದ ಬಿಇಒ ಕಚೇರಿಗೆ ಪ್ರಿಂಟರ್ ದೇಣಿಗೆ

ಸವದತ್ತಿ: ಅನುದಾನಿತ ಪ್ರಾಥಮಿಕ ಶಾಲೆಗಳಿಂದ ಶಾಲಾ ಶಿಕ್ಷಣ ಇಲಾಖೆ ಕಚೇರಿಗೆ ಪ್ರಿಂಟರ್ ನೀಡಲಾಯಿತು.

ಈ ವೇಳೆ ಕ್ಷೇತ್ರ ಶಿಕ್ಷಣಾಧಿಕಾರಿ ಎ.ಎ. ಖಾಜಿ ಮಾತನಾಡಿ, ಅನುದಾನಿತ ಶಾಲೆಗಳಿಗೆ ಧನ್ಯವಾದ ಹೇಳಿದರು. ಶಿಕ್ಷಣದಿಂದ ಮಾತ್ರ ದೇಶ ಬದಲಾವಣೆ ಹಾಗೂ ಅನುದಾನಿತ ಶಾಲೆಗಳು ಕೂಡ ಶಿಕ್ಷಣ ನೀಡುವುದರಲ್ಲಿ ಮುಂಚೂಣಿ ಪ್ರಮುಖ ಪಾತ್ರ ವಹಿಸುತ್ತವೆ. ಅನುದಾನಿತ ಶಾಲೆಗಳಿಗೆ ಕೆಲಸ ಮಾಡಿಕೊಡಲು ತಾವು ಯಾವಾಗಲೂ ಸಿದ್ಧ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಮಂಜುನಾಥ ತೋರಗಲ, ಡಿ.ಆರ್. ಮಣಸಿನಕಾಯಿ, ದೈಹಿಕ ಶಿಕ್ಷಕರು, ಎಚ್.ಕೆ. ಯತ್ನಟ್ಟಿ ಪ್ರಕಾಶ ಬಾಲೋಜಿ, ಸುಭಾಸ್ ಉದಪುಡಿ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ನಿರ್ದೇಶಕರಾದ ಮಹಾಂತೇಶ ಬ್ಯಾಹಟ್ಟಿ, ಬಾಬಾಜಾನ್ ಮಾಳಗಿ ಕಚೇರಿಯ ಎಲ್ಲ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಉತ್ತಮ ಆರೋಗ್ಯದಿಂದ ನೆಮ್ಮದಿಯ ಜೀವನ



ಗೋಕಾಕ: ಉತ್ತಮ ಆರೋಗ್ಯದಿಂದ ನೆಮ್ಮದಿಯ ಜೀವನದೊಂದಿಗೆ ಸಾಧಕರಾಗಲು ಸಾಧ್ಯ ಎಂದು ಡಾ.ವಿಶ್ವನಾಥ ಶಿಂದೋಳಿಮಠ ಹೇಳಿದರು.

ಮಂಗಳವಾರ ನಗರದ ಶ್ರೀ ಸಿದ್ದಲಿಂಗೇಶ್ವರ ಬಿಸಿಎ ಕಾಲೇಜಿನಲ್ಲಿ ವಿಶ್ವ ಆರೋಗ್ಯ ದಿನ ನಿಮಿತ್ತ ಹಮ್ಮಿಕೊಂಡ ಆರೋಗ್ಯ ರಕ್ಷಣೆ ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪೌಷ್ಠಿಕ ಆಹಾರ ಹಾಗೂ ವ್ಯಾಯಾಮಗಳಿಂದ ಆರೋಗ್ಯ ರಕ್ಷಣೆ ಸಾಧ್ಯ. ದೈಹಿಕ, ಮಾನಸಿಕವಾಗಿ ಸದೃಢರಾಗಲು ಜನರೊಂದಿಗೆ ಉತ್ತಮ ಸಂಬಂಧದಿಂದ ಆರೋಗ್ಯ ಉತ್ತಮ ವಾಗಿರುತ್ತದೆ. ಸಂಬಂಧಿಕರಲ್ಲಿ ಮದುವೆಯಾದರೆ ಹುಟ್ಟುವ ಮಕ್ಕಳಲ್ಲಿ ಆರೋಗ್ಯ ಸಮಸ್ಯೆ ಕಾಡುತ್ತದೆ. ಬಾಲ್ಯ ವಿವಾಹ ತಡೆಗಟ್ಟಿ ರಕ್ತದಾನ ಮಾಡುವಂತೆ ಸಲಹೆ ನೀಡಿದರು.

ಆಡಳಿತಾಧಿಕಾರಿ ಆಡವೀಶ ಗವಿಮಠ, ಉಪನ್ಯಾಸಕಿ ಲತಾ ಪಾಟೀಲ ಇದ್ದರು.

ಭೈರೇಶ್ವರ, ಹನುಮಾನ ಜಾತ್ರಾ ಮಹೋತ್ಸವ



ರಾಯಬಾಗ: ತಾಲೂಕಿನ ಬೊಮ್ಮನಾಳ ಗ್ರಾಮದ ಭೈರೇಶ್ವರ, ಹನುಮಾನ ಹಾಗೂ ಮಲ್ಲಿಕಾರ್ಜುನ ದೇವರುಗಳ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ಜರುಗಿತು. ಜಾತ್ರೆ ನಿಮಿತ್ತ ವಿವಿಧ ಶರ್ಯತ್ತುಗಳು ಜರುಗಿದವು, ವಿಜೇತರಿಗೆ ಸಮಿತಿಯಿಂದ ಬಹುಮಾನ ವಿತರಿಸಲಾಯಿತು.

ವಿವಿಧ ಶರ್ಯತ್ತುಗಳ ವಿವರ: ಕುದುರೆ ಗಾಡಿ ಶರ್ಯತ್ತು: ಸಾಂಗಲಿಯ ಜಾನಪ್ರೇಮಿ ಪ್ರಥಮ, ಬೇಡಕಿಹಾಳದ ವಿಶಾಲ ದೇಸಾಯಿ ದ್ವಿತೀಯ, ಬೋರಗಾಂವದ ಬಿಂದು ತೃತೀಯ, ಭರಮಣ್ಣ ಮಹಾದೇವ ಇಟ್ನೇಕರಿ ಚತುರ್ಥ ಬಹುಮಾನ ಪಡೆದರು. **ಕುದುರೆ ಶರ್ಯತ್ತು:** ಕುಮಾರ ಪೂಜಾರಿ ಪ್ರಥಮ, ಪ್ರಶಾಂತ ಅಮ್ಮ ದ್ವಿತೀಯ, ಅಕ್ಷಯ ರಾಯಬಾಗ ತೃತೀಯ ಹಾಗೂ ಸುರೇಶ ಚಿಂಚಲಿ ಚತುರ್ಥ ಬಹುಮಾನ ಪಡೆದರು. **ಸೈಕಲ್ ಶರ್ಯತ್ತು:** ದರ್ಶನ ದೇಸಾಯಿ ಪ್ರಥಮ, ಮಾರುತಿ ಬಡಿಗೋಳ ದ್ವಿತೀಯ, ಬಾಳು ಹಿರೇಮಠ ತೃತೀಯ ಬಹುಮಾನ ಪಡೆದರು. ಓಡುವ ಶರ್ಯತ್ತು: ಪರಶುರಾಮ ಹಸರ ಪ್ರಥಮ, ಪರಮಾನಂದ ಮಸರಗುಪ್ಪಿ ದ್ವಿತೀಯ, ಕುಮಾರ ಬದರ ತೃತೀಯ ಬಹುಮಾನ ಪಡೆದರು. ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಸತೀಶ ಬಾಗಿ, ಶಿವಾನಂದ ಪಾಟೀಲ, ರಮೇಶ ಪಾಟೀಲ, ಕಲ್ಲೇಶ ಪಾಟೀಲ, ಸಾತಗೌಡ ಪಾಟೀಲ, ಅರುಣ ವಡ್ಡರ, ಧರೆಪ್ಪ ಚೌಗಲಾ, ಬಾಬು ಕರಿಹೋಳಿ, ಸಂತೋಷ ಪಾಟೀಲ, ಈಶ್ವರ ಪಾಟೀಲ, ಅಲಿಸಾಬ ನದಾಫ, ನಿಂಗಪ್ಪ ಪಾಟೀಲ ಹಾಗೂ ಕಮಿಟಿ ಸದಸ್ಯರು ಇದ್ದರು.



ಸವದತ್ತಿ: ಅನುದಾನಿತ ಪ್ರಾಥಮಿಕ ಶಾಲೆಗಳಿಂದ ಶಾಲಾ ಶಿಕ್ಷಣ ಇಲಾಖೆ ಕಚೇರಿಗೆ ಪ್ರಿಂಟರ್ ನೀಡಲಾಯಿತು. ಕ್ಷೇತ್ರ ಶಿಕ್ಷಣಾಧಿಕಾರಿ ಎ.ಎ. ಖಾಜಿ, ಸಂಘದ ಅಧ್ಯಕ್ಷರಾದ ಮಂಜುನಾಥ ತೋರಗಲ, ಡಿ.ಆರ್. ಮಣಸಿನಕಾಯಿ, ದೈಹಿಕ ಶಿಕ್ಷಕರು, ಎಚ್.ಕೆ. ಯತ್ನಟ್ಟಿ ಪ್ರಕಾಶ ಬಾಲೋಜಿ, ಸುಭಾಸ್ ಉದಪುಡಿ ಇದ್ದರು.

ಪಾಲಿಕೆಯ ವಿರುದ್ಧ ಆಕ್ರೋಶ: ಹೋರಾಟಕ್ಕೆ ಸಿದ್ಧತೆ

ಬೆಳಗಾವಿ: ಬೆಳಗಾವಿಯಲ್ಲಿ ಪ್ರಸ್ತುತ ನಗರಸೇವಕರ ವಿರುದ್ಧ ಮಾಜಿ ಮಹಾಪೌರರು ಮತ್ತು ಮಾಜಿ ನಗರಸೇವಕರು ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಪ್ರಸ್ತುತ ನಗರಸೇವಕರು ಜನಹಿತದಲ್ಲಿ ಕೆಲಸಗಳನ್ನು ಮಾಡಬೇಕು. ಮಹಾನಗರ ಪಾಲಿಕೆಗೆ ಬರುವ ಬಾಕಿ ಇರುವಾಗ ಹೆಚ್ಚುವರಿ ಬಜೆಟ್ ಮಂಡಿಸುತ್ತಿರುವುದನ್ನು ಖಂಡಿಸಿದ್ದು ಅಗತ್ಯವಿದ್ದಲ್ಲಿ ತಮ್ಮ ಸಂಚಾಲ ಸಮಿತಿ ಕಾರ್ಯನಿರ್ವಹಿಸಲಿದೆ ಎಂದು ಹೇಳಿದರು. ಮಂಗಳವಾರ ನಗರದಲ್ಲಿ ಪ್ರತಿಕಾಗೋಷ್ಠಿಯಲ್ಲಿ ಮಾತನಾಡಿದ ಮಾಜಿ ಮಹಾಪೌರ ರಮೇಶ್ ಕುಡಚಿ, 1977 ರ ಕಾಯ್ದೆಯ ಪ್ರಕಾರ ಲಭ್ಯವಿರುವ ಹಣ ಮತ್ತು ಬರಬೇಕಾದ ಹಣದ ಕುರಿತು ವಿಶ್ಲೇಷಿಸಿ ಬಜೆಟ್ ಮಂಡಿಸಬೇಕು. ಪ್ರಸ್ತುತ ಮಹಾನಗರ ಪಾಲಿಕೆಗೆ ಬರುವ ಹಣ ಬಾಕಿ ಇರುವಾಗ ಹೆಚ್ಚುವರಿ ಬಜೆಟ್ ಮಂಡಿಸುತ್ತಿರುವುದು ಹೇಗೆ ಎಂದು ಪ್ರಶ್ನಿಸಿದರು. ಪಾಲಿಕೆಯ ಅಧಿಕಾರಿಗಳು ಹೇಳಿದಂತೆಲ್ಲ, ಪರಿಷತ್ ಹೇಳಿದಂತೆ ಅಧಿಕಾರಿಗಳು ನಡೆಯಬೇಕೆಂದು ಸಲಹೆ ನೀಡಿದರು. ಮಹಾನಗರ ಪಾಲಿಕೆ ಕಾನೂನುಗಳನ್ನು ಬದಿಗಿಟ್ಟು ಅಧಿಕಾರಿಗಳು ಅಧಿಕಾರ ಚಲಾಯಿಸುತ್ತಿದ್ದಾರೆ. ಎಸ್.ಎಫ್.ಸಿ ನಿಧಿ ಮಾಹಿತಿಯಿಲ್ಲ, ರಸ್ತೆಗಳ ಮರುಸ್ಥಾಪನ ಬಗ್ಗೆ ತೆರಿಗೆ ವಿಧಿಸಬೇಕು. ಟಾವರ್‌ಗಳಿಂದ ತೆರಿಗೆ ಪಡೆಯಬೇಕು. ಇಲ್ಲದಿದ್ದರೆ, ಮಾಜಿ ನಗರಸೇವಕರು ಹೋರಾಟಕ್ಕೆ ಸಿದ್ಧ ಮಹಾನಗರ ಪಾಲಿಕೆಯಲ್ಲಿ ಹಣವಿಲ್ಲವೆಂದರೆ, ಅಧಿಕಾರಿಗಳ ವೇತನ ಹೇಗೆ ಆಗುತ್ತಿದೆ. ಪೌರ ಕಾರ್ಮಿಕರಿಗೆ ಯಾಕೆ ಇಲ್ಲ ಎಂದರು. ಮಾಜಿ ಮಹಾಪೌರ ನಾಗೇಶ್ ಸಾತೇರಿ, ಮಾಜಿ ಮಹಾಪೌರ ಶಿವಾಜಿರಾವ್ ಸುಂಠಕರ ಮಾತನಾಡಿದರು. ಮಾಜಿ ಮಹಾಪೌರರಾದ ಮಾಲೋಜಿರಾವ್ ಅಷ್ಟೇಕರ, ರೇಣು ಕಿಲ್ಲೇಕರ, ನೇತಾಜಿ ಜಾಧವ್, ರೇಣು ಕಿಲ್ಲೇಕರ, ವಂದನಾ ಬೆಳಗುಂದಕರ, ದೀಪಕ್ ವಾಘೇಲಾ ಸೇರಿದಂತೆ ಇತರರು ಇದ್ದರು.



ಸುರೇಬಾನ: ಸಮೀಪದ ಮನಿಹಾಳ ಗ್ರಾಮದ ಮಾರುತೇಶ್ವರ ರಥೋತ್ಸವವು ಸಾವಿರಾರು ಭಕ್ತಾಧಿಗಳ ಸಮ್ಮುಖದಲ್ಲಿ ಮಂಗಳವಾರ ವಿಜೃಂಭಣೆಯಿಂದ ಜರುಗಿತು. ಪೂರ್ಣಿಮೆಯಾದ ಐದನೇಯ ದಿವಸ ಮಾರುತೇಶ್ವರ ರಥೋತ್ಸವ ನಡೆಯುತ್ತಿದ್ದು, ಸುತ್ತಮುತ್ತಲಿನ ಗ್ರಾಮಗಳ ಭಕ್ತಾಧಿಗಳು ಮನಿಹಾಳ ಗ್ರಾಮದ ಮಾರುತೇಶ್ವರನಿಗೆ ಭಕ್ತಿ, ಶ್ರದ್ಧೆಯಿಂದ ಸಮೀಪದಲ್ಲಿರುವ ಮನಿಗೇರಮ್ಮನ ಪಲ್ಲಕ್ಕಿಯು ಸಹ ಬರುತ್ತಿದೆ. ಗ್ರಾಮದ ತುಂಬೆಲ್ಲ ತಮ್ಮ ತಮ್ಮ ಹಣ್ಣುಗಳನ್ನು ತೂರಿ ಭಕ್ತಿ ಭಾವದಿಂದ ಮಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ಭಕ್ತರು ಪರಾಕಾಷ್ಠೆ ಮೆರೆದರು.

ವಿಶ್ವ ಆರೋಗ್ಯ ದಿನಾಚರಣೆ | ಡಾ.ಚಿದಾನಂದ ಹಿರೇಮಠ ಅಭಿಮತ

ಸಮಗ್ರ ಆರೋಗ್ಯ ಜಾಗೃತಿ ಅಗತ್ಯ

ಹಾರೂಗೇರಿ: ಆರೋಗ್ಯವೆಂಬುದು ಮಾನವನ ಸಮಗ್ರ ಅಭಿವೃದ್ಧಿಗೆ ಆಧಾರಭೂತವಾದ ಮೂಲಸ್ತಂಭವಾಗಿದ್ದು, ಅದು ಕೇವಲ ರೋಗರಹಿತ ಸ್ಥಿತಿಯಲ್ಲದೆ ಶಾರೀರಿಕ, ಮಾನಸಿಕ ಮತ್ತು ಸಾಮಾಜಿಕ ಸಮತೋಲನವನ್ನು ಒಳಗೊಂಡ ಸಮಗ್ರ ಪರಿಕಲ್ಪನೆಯಾಗಿದೆ. ಇಂದಿನ ವೇಗವಾದ ಜೀವನಶೈಲಿ, ಅಸ್ವಸ್ಥ ಆಹಾರ ಪದ್ಧತಿ, ತಂತ್ರಜ್ಞಾನಾಧಾರಿತ ನಿರಾಳ ಜೀವನ ಹಾಗೂ ಮಾನಸಿಕ ಒತ್ತಡಗಳ ಹೆಚ್ಚಳದಿಂದ ಯುವಜನತೆ ಅನೇಕ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿರುವುದು ಗಮನಾರ್ಹ ಸಂಗತಿ ಎಂದು ಆರ್.ಬಿ.ಎಸ್.ಕೆ ವೈದ್ಯಾಧಿಕಾರಿ ಡಾ. ಚಿದಾನಂದ ಹಿರೇಮಠ ಹೇಳಿದರು.

ಸ್ಥಳೀಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಐ.ಕ್ಯು.ಎ.ಸಿ.ಘಟಕದಲ್ಲಿ ಯುವ ರೆಡ್ ಕ್ರಾಸ್ ಹಾಗೂ ಎನ್.ಎಸ್.ಎಸ್. ಘಟಕಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಆರೋಗ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಈ ಹಿನ್ನೆಲೆಯಲ್ಲಿ ವಿಶ್ವ ಆರೋಗ್ಯ ದಿನಾಚರಣೆಯು ಸಮಾಜದಲ್ಲಿ ಆರೋಗ್ಯ ಜಾಗೃತಿಯನ್ನು ಮೂಡಿಸುವುದರೊಂದಿಗೆ, ಆರೋಗ್ಯಕರ ಜೀವನಶೈಲಿಯ ಅಗತ್ಯತೆಯನ್ನು ಬೋಧಿಸುವ ಮಹತ್ವದ ವೇದಿಕೆಯಾಗಿದೆ. ವಿದ್ಯಾರ್ಥಿಗಳು ಸಮಾಜದ ಭವಿಷ್ಯದ ನಾಗರಿಕರಾಗಿರುವುದರಿಂದ, ಅವರಲ್ಲಿ ಆರೋಗ್ಯದ ಬಗ್ಗೆ ವೈಜ್ಞಾನಿಕ ಅರಿವು ಮತ್ತು ಜವಾಬ್ದಾರಿತ ಬೆಳೆಸುವುದು ಅತ್ಯಗತ್ಯವಾಗಿದೆ ಎಂದರು. ಯೋಗ, ಧ್ಯಾನ ಮತ್ತು ನಿಯಮಿತ ವ್ಯಾಯಾಮ ಅತ್ಯಂತ ಪರಿಣಾಮಕಾರಿ ವಿಧಾನಗಳಾಗಿವೆ. ಸಮತೋಲನ ಆಹಾರ ಸೇವನೆಯು ಮೂಲಕ ದೇಹದ ರೋಗನಿರೋಧಕ ಶಕ್ತಿಯನ್ನು ವೃದ್ಧಿಸಬಹುದಾಗಿದೆ. ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಶಿಸ್ತನ್ನು ಅಳವಡಿಸಿಕೊಂಡು ಆರೋಗ್ಯಕರ ಜೀವನ ಶೈಲಿಯನ್ನು ಅನುಸರಿಸಬೇಕು ಎಂದು



ಅವರು ತಿಳಿಸಿದರು. ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಕೀಯ ಆರೋಗ್ಯ ನಿರೀಕ್ಷಕ ಎಂ. ಎಂ. ಆಸಂಗಿ ಮಾತನಾಡಿ, ಗ್ರಾಮೀಣ ಆರೋಗ್ಯ ವ್ಯವಸ್ಥೆಯ ಮಹತ್ವವನ್ನು ವಿವರಿಸಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪಾತ್ರವನ್ನು ಸಮಗ್ರವಾಗಿ ಪರಿಚಯಿಸಿದರು. ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಸೇವೆಗಳ ಲಭ್ಯತೆ ಮತ್ತು ಜಾಗೃತಿಯ ಕೊರತೆ ಪ್ರಮುಖ ಸವಾಲುಗಳಾಗಿವೆ ಎಂದರು.

ಲಸಿಕೆ ಕಾರ್ಯಕ್ರಮಗಳು, ಸ್ವಚ್ಛತಾ ಅಭಿಯಾನಗಳು ಮತ್ತು ಸಾರ್ವಜನಿಕ ಆರೋಗ್ಯ ಸೇವೆಗಳು ಸಮಾಜದ ಆರೋಗ್ಯವನ್ನು ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ವಿದ್ಯಾರ್ಥಿಗಳು ತಮ್ಮ ಸಮುದಾಯದಲ್ಲಿ ಆರೋಗ್ಯ ಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕು. ಸಮಾಜ ಸೇವೆಯ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಯುವ ರೆಡ್ ಕ್ರಾಸ್ ಘಟಕದ ಸಂಚಾಲಕ ಡಾ. ಆರ್. ಬಿ. ಕೊಟಬಾಗಿ ಮಾತನಾಡಿ, ಆರೋಗ್ಯವಂತ ಸಮಾಜದ ನಿರ್ಮಾಣದಲ್ಲಿ ಯುವಜನತೆ ನಿಸ್ವಾರ್ಥಭಾವನೆಯಿಂದ ಸೇವೆಸಲ್ಲಿಸುವ ಅಗತ್ಯತೆ ಇದೆ. ಒಂದು ದೇಶದ ಅಭಿವೃದ್ಧಿ ಆ ದೇಶದ ಜನರ ಆರೋಗ್ಯವನ್ನು ಅವಲಂಬಿಸಿರುತ್ತದೆ. ಆದ್ದರಿಂದ ದೇಶದ ಅಭಿವೃದ್ಧಿಗೆ ಎಲ್ಲ ಜನತೆ ಶಾರೀರಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಮೂಲಕ ಕೈಜೋಡಿಸಬೇಕು. ಇದರಲ್ಲಿ ಸಮುದಾಯ ಮತ್ತು ಯುವಜನತೆಯ ಪಾತ್ರ ಮುಖ್ಯವಾಗಿದೆ. ಪರಿಸರ ಸ್ವಚ್ಛತೆ, ರೋಗಗಳ ಕುರಿತ ಮುನ್ನೆಚ್ಚರಿಕೆ ಕ್ರಮಗಳು ನಂತರದಲ್ಲಿ ಆರೋಗ್ಯ ಸಂಬಂಧಿತ ಕ್ರಮಗಳ ಕುರಿತು ಜಾಗೃತಿ ಕಾರ್ಯಕ್ರಮಗಳ ಅವಶ್ಯಕತೆ ಇದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಪ್ರೊ.ಡಿ.ವೈ.ಕಾಂಬಳೆ, ಡಾ.ಸುಭಾಷ ಕಚಕಲ್ಯಾಣ, ಡಾ.ರೇಖಾ, ರಾಜು ಹುದ್ದಾರ, ಸಂತೋಷ ಚೌಗಲೆ, ಡಾ.ಸದಾಶಿವ ಸಣ್ಣನ, ಸುಬಿದ್ ಜಮಾದಾರ, ರಿಷಿಕೇಶ ಸಿಂಗೆ, ಆನಂದ ಬರ್ಲಿ, ಗೌತಮ ಸಂಕರ, ಪ್ರಶಾಂತ ಮಾವರಕರ, ಲಕ್ಷ್ಮ ಕರಿಗಾರ, ಶಿವಾನಂದ ಮಲ್ಲಪ್ಪನವರ, ಪ್ರದೀಪ ಕೇಂದ್ರಾಳಿ, ದಿಲೀಪ ಕಟಾಟ್ಟಿ, ಶಿವಾನಂದ ಭೋವಿ, ರವೀಂದ್ರ ಕೊಪ್ಪ ಸೇರಿದಂತೆ ಸಿಬ್ಬಂದಿ ವರ್ಗದವರು ಹಾಜರಿದ್ದರು. ಚಂದ್ರಕಾಂತ ಕೊಳ್ಳಿನವರ ಸ್ವಾಗತಿಸಿದರು. ಯಲ್ಲಪ್ಪ ಮುಗಳಖೋಡ ವಂದಿಸಿದರು. ನಿಂಗಪ್ಪ ಸಂಗ್ರೇಜಿಕೊಪ್ಪ ನಿರೂಪಿಸಿದರು.

ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡಿ: ಶಾಸಕ ವಿಶ್ವಾಸ ವೈದ್ಯ

ಸವದತ್ತಿ: ವಿದ್ಯಾರ್ಥಿಗಳನ್ನು ಗ್ರಾಮೀಣ ಭಾಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಸಿಗಬೇಕೆಂಬ ಉದ್ದೇಶದಿಂದ ಸರ್ಕಾರ ಇಂತಹ ಸುಸಜ್ಜಿತ ವಸತಿ ನಿಲಯಗಳನ್ನು ನಿರ್ಮಿಸುತ್ತಿದೆ.

ವಿದ್ಯಾರ್ಥಿಗಳು ಕೇವಲ ವಸತಿ ನಿಲಯದ ಸೌಲಭ್ಯ ಪಡೆಯುವುದಷ್ಟೇ ಅಲ್ಲದೆ, ಅದನ್ನು ಸದುಪಯೋಗಪಡಿಸಿಕೊಂಡು ಗುಣಮಟ್ಟದ ಶಿಕ್ಷಣ ಪಡೆಯಲು ಹೆಚ್ಚಿನ ಆದ್ಯತೆ ನೀಡಬೇಕು ಎಂದು ಶಾಸಕ ವಿಶ್ವಾಸ ವೈದ್ಯ ಹೇಳಿದರು.

ತಾಲೂಕು ಆಡಳಿತ, ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತಿ, ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ

ಪಟ್ಟಣದ ರಾಘವೇಂದ್ರ ನಗರದಲ್ಲಿ ನಿರ್ಮಿಸಲಾದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ನೂತನ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯದ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ, ಶಿಸ್ತು ಮತ್ತು ಕಠಿಣ ಪರಿಶ್ರಮವಿದ್ದರೆ ಮಾತ್ರ ಉನ್ನತ ಗುರಿ ತಲುಪಲು ಸಾಧ್ಯ. ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.

ತಹಶೀಲ್ದಾರ ಮಲ್ಲಿಕಾರ್ಜುನ ಹೆಗ್ಗನ್ನವರ ಮಾತನಾಡಿ, ವಸತಿ ನಿಲಯವು ವಿದ್ಯಾರ್ಥಿಗಳಿಗೆ ಎರಡನೇ ಮನೆಯಿದ್ದಂತೆ. ಇಲ್ಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಂಡು ಅಭ್ಯಾಸದ ಕಡೆಗೆ ಹೆಚ್ಚಿನ ಗಮನ ಹರಿಸಬೇಕು ಎಂದರು.

ತಾಲಾಕು ಅಧಿಕಾರಿ (ಪ್ರಭಾರ) ಎಚ್.ಎ. ಕದ್ರಾಪೂರಕರ ಮಾತನಾಡಿ, ಇಲಾಖೆಯಿಂದ ದೊರೆಯುವ ವಿವಿಧ ವಿದ್ಯಾರ್ಥಿ ವೇತನ ಹಾಗೂ ಇತರ ಸೌಲಭ್ಯಗಳ ಕುರಿತು ವಿದ್ಯಾರ್ಥಿಗಳಿಗೆ ಸಮಗ್ರ ಮಾಹಿತಿಯನ್ನು ನೀಡಿದರು.

ಈ ವೇಳೆ ಆರ್.ಎಲ್.ಕದಂ, ಆರ್. ಆರ್.ಕುಲಕರ್ಣಿ, ಅಮೃತ ಸಾಣಿಕೊಪ್ಪ, ಪಶುವೈದ್ಯಾಧಿಕಾರಿ ಅನಿಲ ಮರಲಿಂಗನವರ, ವೀರಭದ್ರಗೌಡ ಪಾಟೀಲ, ವಿಜಯ ಆಸಂಗಿ, ಬಿ.ಎನ್ ಪ್ರಭುನವರ, ಗದಿಗ್ಯಪ್ಪ ಕುರಿ, ಮಾರುತಿ ಬಸಲಿಗುಂದ, ಜಿಲ್ಲಾ, ತಾಲೂಕು ಮಟ್ಟದ ಅಧಿಕಾರಿಗಳು, ಸ್ಥಳೀಯ ನಗರಸಭೆ ಸದಸ್ಯರು, ಪ್ರಮುಖ ಮುಖಂಡರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಗ್ರಾಹಕರೊಂದಿಗೆ ಉತ್ತಮ ಬಾಂಧವ್ಯ: ಭರಮಪ್ಪ

ಹುಕ್ಕೇರಿ: ತಾಲೂಕಿನ ಹುಲ್ಲೋಳಿ ಗ್ರಾಮದ ಅರಿಹಂತ ಸೌಹಾರ್ದ ಸಹಕಾರಿ ಬ್ಯಾಂಕ್ ಈ ಸಾಲಿನಲ್ಲಿ ಗಮನಾರ್ಹ ಸಾಧನೆ ಮಾಡಿದ್ದು, ರೂ.7 ಕೋಟಿ 32 ಲಕ್ಷ ನಿವ್ವಳ ಲಾಭ ಗಳಿಸಿ ಹೊಸ ಮೈಲುಗಲ್ಲು ಸಾಧಿಸಿದೆ ಎಂದು ಬ್ಯಾಂಕ ಅಧ್ಯಕ್ಷ ಭರಮಪ್ಪ ಚೌಗಲಾ ಹೇಳಿದರು.


ಹುಲ್ಲೋಳಿ ಅರಿಹಂತ ಸೌಹಾರ್ದ ಸಹಕಾರಿ ಸಂಘದ ಸಭಾಭವನದಲ್ಲಿ ಹಮ್ಮಿಕೊಂಡ ಪತ್ರಿಕಾಗೋಷ್ಠಿ ಯಲ್ಲಿ ಮಾತನಾಡಿ, 1999ರಲ್ಲಿ ಸ್ಥಾಪನೆ ಯಾದ ನಮ್ಮ ಸಂಘ ಘಟಪ್ರಭಾ, ಹುಕ್ಕೇರಿ, ಮುಗಳಖೋಡ, ಘೋಡಗೇರಿ, ಉಗಾರ ಬುದ್ರುಕ್, ಚಿಕ್ಕೋಡಿ, ದರೂರ್, ಮುನವಳ್ಳಿ, ಶೇಡಬಾಳ, ಅಥಣಿ ಹಾಗೂ ಬೆಳಗಾವಿ ಶಾಖೆಗಳಾಗಿ ಉತ್ತಮ ಕಾರ್ಯ ನಿರ್ವಹಿಸುತ್ತಿವೆ. ಸಹಕಾರ ಶ್ರೀ, ಆದರ್ಶ ಸಂಸ್ಥೆ ಪುರಸ್ಕಾರ, ಉತ್ತಮ ಸೌಹಾರ್ದ ಸಹಕಾರಿ ಪ್ರಶಸ್ತಿಗಳನ್ನು ಪಡೆದುಕೊಂಡಿದೆ ಎಂದರು.

ಬ್ಯಾಂಕ್ ತನ್ನ ಗ್ರಾಹಕರೊಂದಿಗೆ ಸದಾ ಸ್ನೇಹಪರ ಮತ್ತು ನಂಬಿಕೆಯ ಬಾಂಧವ್ಯದ ಜೊತೆಗೆ 20367ಸದಸ್ಯರ ಸಂಖ್ಯೆ ಹೊಂದಿದೆ. 1ಕೋಟಿ 30ಲಕ್ಷ ವಸೂಲಾದ ಶೇರ ಬಂಡವಾಳ, ಕಾಯ್ದಿಟ್ಟನಿಧಿ ಮತ್ತು ಇತರ ನಿಧಿಗಳು 35 ಕೋಟಿ 23 ಲಕ್ಷ, ಠೇವುಗಳು 342 ಕೋಟಿ 30ಲಕ್ಷ, ಸಾಲಗಳು260 ಕೋಟಿ 8ಲಕ್ಷ, ಗುಂತಾವಣೆಗಳು112ಕೋಟಿ 77ಲಕ್ಷ, ದುಡಿಯುವ ಬಂಡವಾಳ 378 ಕೋಟಿ 57ಲಕ್ಷ, 3058ಕೋಟಿ 58ಲಕ್ಷ ಒಟ್ಟು ವಹಿವಾಟು ವಾಗಿರುವ ನಮ್ಮ ಸಂಘದಲ್ಲಿ 7ಕೋಟಿ 32 ಲಕ್ಷ ನಿವ್ವಳ ಲಾಭ ಗಳಿಸಿದೆ ಎಂದವರು ತಿಳಿಸಿದರು.

ಉಪಾಧ್ಯಕ್ಷ ಬಾಹುಬಲಿ ನಾಗನೂರಿ ಮಾತನಾಡಿ, ಗ್ರಾಮೀಣ ಪ್ರದೇಶದ ಜನರಿಗೆ ಸರಳ ಹಾಗೂ ವೇಗವಾದ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುವ ಮೂಲಕ ಬ್ಯಾಂಕ್ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿಕೊಂಡಿದೆ.

ಗ್ರಾಹಕರ ವಿಶ್ವಾಸವೇ ನಮ್ಮ ಶಕ್ತಿ. ಅವರ ಸಹಕಾರದಿಂದಲೇ ಇಂತಹ ದೊಡ್ಡ ಮಟ್ಟದ ಲಾಭ ಗಳಿಸಲು ಸಾಧ್ಯವಾಗಿದೆ ಎಂದರು.

ಪ್ರಧಾನ ಕಾರ್ಯದರ್ಶಿ ಅನಂದ ಬಿ ಚೌಗಲಾ, ಹಿರಿಯ ನ್ಯಾಯವಾದಿ ಚೌಗಲಾ, ರವೀಂದ್ರ ಚೌಗಲಾ, ಅಶೋಕ ಚೌಗಲಾ, ಶ್ರುತಿ ಪಾಟೀಲ, ಬಸವರಾಜ ಪಾಟೀಲ, ರಾಮಪ್ಪ ಗೋಟೂರಿ, ಪ್ರಕಾಶ ಚೌಗಲಾ, ಸುಮತಿ ಚೌಗಲಾ, ಬಾಳಪ್ಪ ಸಂಕೇಶ್ವರಿ, ಚಿನ್ನಪ್ಪ ಸಪ್ತಸಾಗರ, ಪದ್ಮನಾಭ ಚೌಗಲಾ, ಮಾಯಪ್ಪ ಹೊಳೆಪ್ಪಗೋಳ, ಅರುಣ ಚೌಗಲಾ ಸೇರಿದಂತೆ ಸಂಘದ ಸಿಬ್ಬಂದಿ ಉಪಸ್ಥಿತರಿದ್ದರು.



ಜಾತ್ರೆಗಳಿಂದ ದೇಸಿಯ ವೈಭವ: ಶಾಸಕ ಜಾರಕಿಹೊಳಿ

ಮೂಡಲಗಿ: ಜನ ಹಾಗೂ ಜಾನುವಾರುಗಳಿಗೆ ರೋಗ ರುಜಿನಗಳು ಬರದೇ ಇರುವ ಹಾಗೇ ಹಳೆಯ ಕಾಲದ ಹಿರಿಯರು ಗ್ರಾಮದ ತುಂಬೆಲ್ಲ ಭಂಡಾರ (ಹುದ್ದ ಆರಿಷಿಣ ಪುಡಿ)ವನ್ನು ಎರಚಿ ಜಾತ್ರೆಯನ್ನು ಮಾಡುವ ಪದ್ಧತಿಯನ್ನು ಈಗಲೂ ನಮ್ಮ ಹಿರಿಯರು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಈ ಮೂಲಕ ಎಲ್ಲ ಜಾತಿಯವರು ಕೂಡಿಕೊಂಡು ಗ್ರಾಮ ದೇವತೆಯರ ಜಾತ್ರೆಯನ್ನು ಯಶಸ್ವಿಯಾಗಿ ನೆರವೇರಿಸುತ್ತಿದ್ದಾರೆ ಎಂದು ಶಾಸಕ ಬಾಲಚಂದ್ರ ಜಾರಕಿಹೊಳಿ ಹೇಳಿದರು.

ಸೋಮವಾರ ತಾಲೂಕಿನ ನಾಗನೂರು ಪಟ್ಟಣದಲ್ಲಿ ಜರುಗಿದ ಆರಣ್ಯ ಸಿದ್ದೇಶ್ವರ ಜಾತ್ರಾ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ಜಾತ್ರೆಗಳು ನಮ್ಮ ದೇಶಿಯ ವೈಭವವನ್ನು ಬಿತ್ತರಿಸುತ್ತವೆ ಎಂದರು. ಹಿಂದಿನ ಕಾಲದಲ್ಲಿ ಪ್ಲೇಗ್, ಕಾಲರಾ ಮುಂತಾದ ಸಾಂಕ್ರಾಮಿಕ ರೋಗಗಳು ಹರಡುತ್ತಿದ್ದವು. ಜಾನುವಾರುಗಳಿಗೆ ಕಾಲುಬೇನೆ, ಬಾಯಿ ಬೇನೆ ಬರುತ್ತಿದ್ದವು. ಇವುಗಳನ್ನು ಹೋಗಲಾಡಿಸಲು ಜನರು ದೇವರಿಗೆ ಮೊರೆ ಹೋಗುತ್ತಿದ್ದರು. ಎಲ್ಲಾ ಜಾತಿಯ ಜನರು ಒಟ್ಟಾಗಿ ಸೇರಿಕೊಂಡು ಗ್ರಾಮ ದೇವತೆಯರ ಜಾತ್ರೆಗಳನ್ನು ಅದ್ದೂರಿಯಾಗಿ ಮಾಡುತ್ತಿದ್ದರು.

ಹಿರಿಯರು ಹಾಕಿಕೊಟ್ಟ ಸಂಪ್ರದಾಯಗಳನ್ನು ಈಗಿನ ಪೀಳಿಗೆಯವರು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ನಮ್ಮ ದೇಶದ ಆಚಾರ, ವಿಚಾರಗಳು ಇಡೀ ವಿಶ್ವಕ್ಕೆ ಮಾದರಿಯಾಗಿವೆ ಎಂದು ಹೇಳಿದರು. ಶಾಸಕ ಬಾಲಚಂದ್ರ ಜಾರಕಿಹೊಳಿಯವರನ್ನು ಜಾತ್ರಾ ಕಮಿಟಿಯ ಸದಸ್ಯರು ಸತ್ಕರಿಸಿದರು.

ಈ ಸಂದರ್ಭದಲ್ಲಿ ಲಕ್ಕ ಪರಿಶೋಧಕ ಸೈದಪ್ಪ ಗದಾಡಿ, ಮುಖಂಡರಾದ ಚಂದ್ರು ಬೆಳಗಲಿ, ಸುಭಾಸ ಬೆಳಗಲಿ (ವಡೆದಲ್ಲಿ), ಗಣಪತಿ ದೇಸಾರ, ರಮೇಶ ಬೆಟಗೇರಿ, ನಾಗಪ್ಪ ಬೆಳಕೂಡ, ಹಣಮಂತ ಕತ್ತೂರ, ಸಿದ್ದಪ್ಪ ಯಡ್ರಾವಿ, ಸಿದ್ದಪ್ಪ ಗುಡ್ಡೆನ್ನವರ, ಸಿದ್ದಲಿಂಗ ವಾಳೆ, ಸದಾಶಿವ ಯಡ್ರಾವಿ, ಕೆಂಚಪ್ಪ ಗೌಡೆಣ್ಣಿ, ಸಿದ್ದಪ್ಪ ಗೋರೋಜಿ, ಯಲ್ಲಪ್ಪ ಮಾಚೇರಿ, ಸಿದ್ದಪ್ಪ ಯಡ್ರಾವಿ, ಶ್ರೀಶೈಲ ಕತ್ತೂರ ಮತ್ತಿತರರು ಉಪಸ್ಥಿತರಿದ್ದರು.



ಕುಡಿಯುವ ನೀರಿಗಾಗಿ ಮೈಕ್ರೋಪ್ಲಾನ್ ರೂಪಿಸಿ

ಬೆಳಗಾವಿ: ಏಪ್ರಿಲ್ ನಿಂದ ರಾಜ್ಯದಲ್ಲಿ ಬೇಸಿಗೆ ಆರಂಭಗೊಂಡಿರುವುದರಿಂದ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆ ಪ್ರಾರಂಭವಾಗಿದ್ದು, ಕುಡಿಯುವ ನೀರಿನ ಪರಿಹಾರದ ಬಗ್ಗೆ ಸಮ್ಯಾಕ್ತ ಗ್ರಾಮಗಳನ್ನು ಗುರುತಿಸಿ, ಸಮೀಪದ ಖಾಸಗಿ ಬೋರವೆಲ್‌ಗಳ ಸಹಾಯದಿಂದ ನೀರು ಸರಬರಾಜು ಮಾಡಲು ಮೈಕ್ರೋಪ್ಲಾನ್ ರೂಪಿಸುವಂತೆ ಪ್ರಾದೇಶಿಕ ಆಯುಕ್ತ ಜಾನಕಿ ಕೆ.ಎಂ. ಬೆಳಗಾವಿ ವಿಭಾಗದ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.



ಬೆಳಗಾವಿ ವಿಭಾಗದ ಜಿಲ್ಲಾಧಿಕಾರಿಗಳ ಸಭೆಯಲ್ಲಿ ಶನಿವಾರ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಮಾತನಾಡಿ, ಆಯಾ ಗ್ರಾಮಗಳಲ್ಲಿ ಗ್ರಾಮ ವ್ಯಾಪ್ತಿಯಲ್ಲಿ ಅಗತ್ಯವಿದ್ದಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಸಲು ಹಾಗೂ ಪ್ರತ್ಯೇಕ ನಿರ್ವಹಣೆಯ ಪ್ರತಿ ವಾರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸುವಂತೆ ಆದೇಶಿಸಿದರು. ಅದರ ಜೊತೆಗೆ ಜನಗಣತಿ ಕಾರ್ಯವನ್ನು ಯಶಸ್ವಿಗೊಳಿಸಲು ಗ್ರಾಮೀಣ ಭಾಗದಲ್ಲಿ ನಗರ ಪ್ರದೇಶಗಳಲ್ಲಿಯೂ ವಿಡಿಯೋ ಪ್ರದರ್ಶನಗಳ ಮೂಲಕ ಜಾಗೃತಿ ಮೂಡಿಸಬೇಕು. ಸರ್ಕಾರದ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿದರು.

ಇ-ಪೌತಿ ಸಂಬಂಧಿಸಿದಂತೆ ಸರ್ಕಾರದ ಮಾರ್ಗಸೂಚಿಗಳನ್ನು ಸರಳೀಕರಿಸಲಾಗಿದ್ದು, ಅದರ ಪ್ರಗತಿಯನ್ನು ವೇಗಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು. ಸರ್ಕಾರಿ ಜಮೀನುಗಳ ನಿರ್ವಹಣೆಯಲ್ಲಿ ಗುತ್ತಿಗೆ ನೀಡಿರುವ ಜಮೀನುಗಳ ಪರಿಶೀಲನೆ ನಡೆಸಿ, ಅವುಗಳನ್ನು ಸಂಬಂಧಿಸಿದ ವರ್ಗೀಕರಿಸಿ ಸ್ಪಷ್ಟ ವರದಿ ಮಾಡುವಂತೆ ಸೂಚಿಸಿದರು. ಬೆಳಗಾವಿ ವಿಭಾಗದಲ್ಲಿ ಬಾಕಿ ಇರುವ ಸರ್ಕಾರಿ ಜಮೀನು ಮತ್ತು ಕೆರೆಗಳ ಒತ್ತುವರಿಯನ್ನು ತ್ವರಿತವಾಗಿ ತೆರವುಗೊಳಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಇದಲ್ಲದೆ, ಗ್ರಾಮಾಡಳಿತಾಧಿಕಾರಿ ಮತ್ತು ಗ್ರಾಮ ಪಂಚಾಯತಿಗಳ ಟ್ಯಾಗಿಂಗ್ ಪ್ರಕ್ರಿಯೆಯನ್ನು ಶೀಘ್ರ ಪೂರ್ಣಗೊಳಿಸುವಂತೆ ಸೂಚಿಸಲಾಯಿತಲ್ಲದೆ ಬಾಕಿ ಇರುವ ಕಂದಾಯ ನ್ಯಾಯಾಲಯ ಪ್ರಕರಣಗಳನ್ನು ಕೂಡಲೇ ಇತ್ಯರ್ಥಪಡಿಸುವಂತೆ ಅಧಿಕಾರಿಗಳಿಗೆ ಆದೇಶಿಸಿದ್ದಾರೆ.

ಪ್ರಶಿಕ್ಷಣ ಅಭಿಯಾನಕ್ಕೆ ರಮೇಶ ಜಾರಕಿಹೊಳಿ ಚಾಲನೆ

ಗೋಕಾಕ: ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಪಂಡಿತ ದೀನದಯಾಳ ಉಪಾಧ್ಯಾಯರು ಸ್ಥಾಪಿಸಿದ ಸಂಘಟನೆ ಇಂದು ಜಗತ್ತಿನಲ್ಲಿ ಬಲಿಷ್ಠ ಸಂಘಟನೆಯನ್ನು ಹಿಡಿದಿದೆ ಎಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದರು.



ಅವರು, ಮಂಗಳವಾರ ತಾಲೂಕಿನ ಅಂಕಲಗಿ ಪಟ್ಟಣದಲ್ಲಿ ಭಾರತೀಯ ಜನತಾ ಪಾರ್ಟಿ ನಗರ ಹಾಗೂ ಗ್ರಾಮೀಣ ಮಂಡಲ ಮಟ್ಟದ ಪ್ರಶಿಕ್ಷಣ ಅಭಿಯಾನವನ್ನು ಉದ್ಘಾಟಿಸಿ ಮಾತನಾಡಿದರು.

ದೀನದಯಾಳ ಉಪಾಧ್ಯಾಯರ ನಂತರ ಡಾ.ಶ್ಯಾಮಪ್ರಸಾದ ಮುಖರ್ಜಿ ಇವರು ಜನ ಸಂಘದ ಅಧ್ಯಕ್ಷರಾಗಿ ಸಂಘವನ್ನು ಮತ್ತಷ್ಟು ಬಲಿಷ್ಠಗೊಳಿಸಿದರು. 1980ರಲ್ಲಿ ಸ್ಥಾಪನೆಗೊಂಡ ಬಿಜೆಪಿ ಪಕ್ಷ ಅಟಲಬಿಹಾರಿ ವಾಜಪೇಯಿ ಅವರ ನೇತೃತ್ವದಲ್ಲಿ ಬಲಿಷ್ಠ ರಾಜಕೀಯ ಪಕ್ಷವಾಗಿ ಬೆಳೆಯುತ್ತ ದೇಶದಲ್ಲಿ ಅಧಿಕಾರಕ್ಕೆ ಬಂದಿತು. ಈಗಿನ ನರೇಂದ್ರ ಮೋದಿ ಸರಕಾರವು ಪಂಡಿತ ದೀನದಯಾಳ ಉಪಾಧ್ಯಾಯ ಅವರ ಸಿದ್ಧಾಂತ ಹಾಗೂ ಆದರ್ಶಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತ ದೇಶವನ್ನು ವಿಶ್ವಗುರುವನ್ನಾಗಿಸಲು ಶ್ರಮಿಸುತ್ತಿದೆ ಎಂದರು. ಜನಸಂಘ ಹಾಗೂ ಆರ್ ಎಸ್‌ಎಸ್ ಸಂಘಟನೆಗಳು ಸೇರಿದಂತೆ ಎಲ್ಲರ ಸಹಕಾರದಿಂದ ದೇಶಕ್ಕೆ ಸ್ವಾತಂತ್ರ್ಯ ದೊರೆತಿದೆ. ಭಾರತೀಯ ಜನತಾ ಪಕ್ಷ ರಾಷ್ಟ್ರ ಸಂರಕ್ಷಣೆ ಹಾಗೂ ಅಭಿವೃದ್ಧಿಯ ಗುರಿಯೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಕಾರ್ಯಕರ್ತರು ಪಕ್ಷವನ್ನು ಮತ್ತಷ್ಟು ಬಲಿಷ್ಠಗೊಳಿಸಲು ಶ್ರಮಿಸುವಂತೆ ಕರೆ ನೀಡಿದರು.

ವೇದಿಕೆಯ ಮೇಲೆ ಬಿಜೆಪಿ ಗ್ರಾಮೀಣ ಮಂಡಲ ಅಧ್ಯಕ್ಷ ರಾಜೇಂದ್ರ ಗೌಡಪ್ಪಗೋಳ, ನಗರ ಮಂಡಲ ಅಧ್ಯಕ್ಷ ಭೀಮಶಿ ಭರಮಣ್ಣವರ, ಮಾಜಿ ಶಾಸಕ ಎಂ.ಎಲ್. ಮುತ್ತೆನ್ನವರ, ಒಬಿಸಿ ಮೋರ್ಚಾ ರಾಜ್ಯೀಯ ಕಾರ್ಯಕಾರಿಣಿ ಸದಸ್ಯ ಲಕ್ಷ್ಮಣ ತಪಸಿ, ಪ್ರಶಿಕ್ಷಣ ವರ್ಗ ಪ್ರಮುಖ ನಿತಿನ ಚೌಗಲೆ, ಜಿಲ್ಲಾ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಆನಂದ ಅತ್ತುಗೋಳ, ಪಕ್ಷದ ಹಿರಿಯ ಮುಖಂಡ ಪ್ರಮೋದ ಜೋಶಿ, ಬಾಳೇಶ ಗಿಡ್ಡನವರ, ಸುರೇಶ ಪತ್ತಾರ ಇದ್ದರು.

ಕಾಮಗಾರಿಗೆ ಶಾಸಕ ಐಹೊಳೆ ಭೂಮಿಪೂಜೆ

ಕಬ್ಬೂರು: ಕಬ್ಬೂರ ಹಾಗೂ ಜೋಡಕುರಳಿ ಗ್ರಾಮದಲ್ಲಿ 32 ಲಕ್ಷ ರೂ. ಗಳ ಕಾಮಗಾರಿಗೆ ಮಂಗಳವಾರ ಶಾಸಕ ದುರ್ಯೋಧನ ಐಹೊಳೆ ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಕಬ್ಬೂರ ಪಟ್ಟಣದ ಮುಲ್ಲಾನಹೋಡಿಯ ರಸ್ತೆ ಅಭಿವೃದ್ಧಿಗೆ ಲ್ಯಾಂಡ್ ಆರ್ಮಿ ಇಲಾಖೆಯಿಂದ 25ಲಕ್ಷ ರೂ.ಗಳು ಹಾಗೂ ಜೋಗನ್ಯಾನಟ್ಟಿ-ವಿಜಯನಗರ ಗ್ರಾಮದ ಚಿಕ್ಕೋಡಿ ತೋಟ ಕಾಲುವೆ ನಿರಾವರಿ ಇಲಾಖೆಯಿಂದ 17ಲಕ್ಷ ರೂ. ಗಳ ಅನುದಾನದಲ್ಲಿ ಸಿಡಿ ನಿರ್ಮಿಸಲು ಚಾಲನೆ ನೀಡಲಾಗಿದೆ. ಗುತ್ತಿಗೆದಾರರಿಂದ ಗುಣಮಟ್ಟದ ರಸ್ತೆ ಹಾಗೂ ಸಿಡಿ ನಿರ್ಮಿಸಿಕೊಳ್ಳಬೇಕು. ಈ ಭಾಗದ ರೈತರ ಬಹುದಿನಗಳ ಬೇಡಿಕೆಯಾಗಿತ್ತು. ಉಳಿದಂತೆ ಕ್ಷೇತ್ರದ ಅಭಿವೃದ್ಧಿಯನ್ನು ಹಂತಹಂತವಾಗಿ ಮಾಡಿಕೊಡಲಾಗುವುದು ಎಂದರು. ಈ ವೇಳೆ ಹಿರಾ ಶುಗರ ನಿರ್ದೇಶಕ ಸುರೇಶ ಬೆಲ್ಲದ, ಕಲ್ಲಪ್ಪ ಕರಗಾಂವ, ಬಸಲಿಂಗ ಕಾಡೇಶಗೋಳ, ಮಂಜು ಪಾಟೀಲ, ಅಪ್ಪಾಸಾಹೇಬ, ಶಾಬುಮುಲ್ಲಾ, ಅರತಿ ನಾರಾಯಣಕರ, ರಾಮಾ ಶಿವಾಯಗೋಳ, ಮಹಾಂತೇಶ ಶಿರಗೂರ, ಮಲ್ಲಪ್ಪ ರಂಗಾಪೂರಿ, ಶಿವಗೌಡ ರುದ್ರನ್ನವರ, ಸತ್ಯಪ್ಪ ಗುರುಸಿದ್ದನವರ, ಕಿರಣ ಗುರುಸಿದ್ದನವರ, ಮಹೇಶ ಪಾಟೀಲ, ಶಿವಾನಂದ ಗುಡಸ, ಬೀರಪ್ಪ ಪೂಜೇರಿ, ಮುಂದಗೇರ ಮಾಳಗಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.



ಬೇಸಿಗೆಯಲ್ಲಿ ಆರೋಗ್ಯ ಕಾಳಜಿ ಅವಶ್ಯ: ಸಂಗಮೇಶ

ಮುಗಳಖೋಡ: ಪಟ್ಟಣದ ಶ್ರೀ ಚ ವಿ ವ ಸಂಘದ ಡಾ. ಸಿ. ಬಿ. ಕುಲಿಗೋಡ ಪದವಿ ಮಹಾವಿದ್ಯಾಲಯದ ರೆಡ್ ಕ್ರಾಸ್ ಘಟಕದ ಆಡಿಯಲ್ಲಿ ಮಂಗಳವಾರ ವಿಶ್ವ ಆರೋಗ್ಯ ದಿನಾಚರಣೆ ಆಚರಿಸಲಾಯಿತು.

ಈ ವೇಳೆ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ಹಾಗೂ ಸಾಂಸ್ಕೃತಿಕ ಘಟಕದ ಮುಖ್ಯಸ್ಥ ಸಂಗಮೇಶ ಹಿರೇಮಠ ಮಾತನಾಡಿ, ವಿಶ್ವ ಆರೋಗ್ಯ ಸಂಸ್ಥೆಯ ಉಗಮ, ಮಹತ್ವ ಉದ್ದೇಶ ಹಾಗೂ ಕಾರ್ಯಗಳ ಕುರಿತು ಮಾತನಾಡಿದರು. ಬೇಸಿಗೆಯಲ್ಲಿ ಜನರ ಆರೋಗ್ಯದ ಮೇಲೆ ಬೀರುವ ತಾಪಮಾನದ ಪರಿಣಾಮಗಳು ಮತ್ತು ಅವುಗಳ ಪರಿಹಾರೋಪಾಯಗಳನ್ನು. ಬೇಸಿಗೆ ನೀರಿನ ಬಳಕೆ, ಆಹಾರ ಪದ್ಧತಿ, ಉಡುಪುಗಳ ಬಳಕೆ, ಹಣ್ಣುಗಳ ಸೇವನೆ, ವಿಶ್ರಾಂತಿ ಸೇರಿದಂತೆ ಆರೋಗ್ಯದ ಕುರಿತು ಮಕ್ಕಳಿಗೆ ತಿಳಿಸಿ ಬೇಸಿಗೆಯಲ್ಲಿ ಆರೋಗ್ಯದ ಕಾಳಜಿ ಬಹಳ ಅವಶ್ಯಕವಾದದ್ದು ಎಂದರು.



ಕನ್ನಡ ಉಪನ್ಯಾಸಕ ಡಾ. ಪಿ.ಬಿ.ಕೊರವಿ ಮಾತನಾಡಿ, ಆರೋಗ್ಯವೇ ಭಾಗ್ಯ ಆರೋಗ್ಯವನ್ನು ಕಾಪಾಡಿಕೊಳ್ಳಿ ಎಂದು ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಉಪನ್ಯಾಸಕ ಎಚ್. ಎಂ. ಶಂಕರವಾಡಿ ಸೋರ್ತೋಪೂಜೆ ನೆರವೇರಿಸಿ ಕೊಟ್ಟರು. ಕಾರ್ಯಕ್ರಮದ ಮುಖ್ಯಸ್ಥ, ರೆಡ್ ಕ್ರಾಸ್ ಘಟಕದ ಸಂಯೋಜಕ ಪ್ರದೀಪ್ ನಾಯಿಕ ಎಲ್ಲರನ್ನೂ ಸ್ವಾಗತಿಸಿ ವಂದಿಸಿದರು.

ಈ ಸಂದರ್ಭದಲ್ಲಿ ಉಪನ್ಯಾಸಕ ಆರ್. ಎಸ್.ಶೇಗುಣಸಿ, ಪಿ.ಬಿ.ಕೊರವಿ, ಪಿ.ಎ.ನಾಯಿಕ, ಎಸ್.ವಿ.ಹಿರೇಮಠ, ಎಚ್. ಎಂ.ಶಂಕರವಾಡಿ, ಕುಮಾರಿ ರಶ್ಮಾ ಹೊತಗೌಡರ, ಅಶ್ವಿನಿ ಗುರವ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

ಕಿರುಸುದ್ದಿ

ರಸ್ತೆ ಸುಧಾರಣೆ ಕಾಮಗಾರಿಗೆ ಭೂಮಿಪೂಜೆ



ಚಿಕ್ಕೋಡಿ: ತಾಲೂಕಿನ ಕಬ್ಬೂರ ಪಟ್ಟಣದ ಹೊರವಲಯದ ಮುಲ್ಲಾನಖೋಡಿಯಲ್ಲಿ ರೂ. 25 ಲಕ್ಷ ಹಾಗೂ ವಿಜಯನಗರದಲ್ಲಿ ರೂ. 17 ಲಕ್ಷ ಅನುದಾನದಲ್ಲಿ ರಸ್ತೆ ಸುಧಾರಣೆ ಕಾಮಗಾರಿಗೆ ರಾಯಬಾಗ ಶಾಸಕ ದುರ್ಯೋಧನ ಐಹೊಳೆ ಮಂಗಳವಾರ ಚಾಲನೆ ನೀಡಿದರು. ಮುಲ್ಲಾನಖೋಡಿಯಲ್ಲಿ ಅಲ್ಪಸಂಖ್ಯಾತರ ಇಲಾಖೆಯಿಂದ ಬಿಡುಗಡೆಯಾದ ರೂ. 25 ಲಕ್ಷ ಹಾಗೂ ವಿಜಯನಗರದ ಬಾಗೇವಾಡಿ ರಸ್ತೆಯಲ್ಲಿ ನೀರಾವರಿ ಇಲಾಖೆಯಿಂದ ಬಿಡುಗಡೆಯಾದ ರೂ. 17 ಲಕ್ಷ ಅನುದಾನದಲ್ಲಿ ಶಾಸಕ ದುರ್ಯೋಧನ ಐಹೊಳೆ ಭೂಮಿಪೂಜೆಯನ್ನು ನೆರವೇರಿಸಿದರು. ಹಿರಾ ಶುಗರ್ ನಿರ್ದೇಶಕ ಸುರೇಶ ಬೆಲ್ಲದ, ಕಲ್ಲಪ್ಪ ಕರಗಾಂವ, ಬಸಲಿಂಗ ಕಾಡೇಶಗೋಳ, ಮಂಜು ಪಾಟೀಲ, ಅಬ್ಬಾಸ ನದಾಫ್, ಶಾಬು ಮುಲ್ಲಾ, ಆರತಿ ನಾರಾಯಕರ, ರಾಮಾ ಶಿವಾಯಗೋಳ, ಮಹಾಂತೇಶ ಶಿರಗೂರ, ಮಲ್ಲಪ್ಪ ರಂಗಾಪೂರೆ, ಶಿವಗೌಡ ರುದ್ರನ್ನವರ, ಸತ್ತೆಪ್ಪ ಗುರಸಿದ್ದನವರ, ಕಿರಣ ಗುರಸಿದ್ದನವರ, ಮಹೇಶ ಪಾಟೀಲ, ಶಿವರಾಜ ಗುಡಸ, ಬೀರಪ್ಪ ಪೂಜೇರಿ, ಮುರುಗೇಶ ಮಾಳಗೆ ಇತರರು ಇದ್ದರು.

ನಾಟಕಗಳಿಂದ ಯುವ ಪ್ರತಿಭೆ ಅನಾವರಣ



ನೇಸರಗಿ: ಗ್ರಾಮೀಣ ಮಟ್ಟದಲ್ಲಿ ಯುವ ಪ್ರತಿಭೆಗಳು ಮುಂದೆ ಬರಲು ಜಾತ್ರೆ, ಸಭೆ, ಸಮಾರಂಭಗಳಲ್ಲಿ ನಾಟಕ ಅಭಿನಯದಿಂದ ಮುಂದೆ ಬರಲು ಸಾಧ್ಯ ಎಂದು ಮಾಜಿ ಶಾಸಕರು ಹಾಗೂ ಬಿಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಮಹಾಂತೇಶ ದೊಡ್ಡಗೌಡರ ಹೇಳಿದರು. ಅವರು ಸೋಮವಾರ ಸಮೀಪದ ಮದನಬಾವಿ ಗ್ರಾಮದ ಶ್ರೀ ಗ್ರಾಮದೇವತೆ ಜಾತ್ರೆ ನಿಮಿತ್ಯವಾಗಿ ನಡೆದ ಸಮಾಜ ರೂಪಿಸಿದ ರೌಡಿ ಸುಂದರ ಸಾಮಾಜಿಕ ನಾಟಕ ಪ್ರದರ್ಶನ ಉದ್ಘಾಟನೆ ನೆರವೇರಿಸಿ ಮಾತನಾಡಿ, ಗ್ರಾಮೀಣ ಯುವಕರು ನಾಟಕ, ಕ್ರೀಡೆ, ಗಾಯನ, ಸಾಂಸ್ಕೃತಿಕ ಅನೇಕ ಹವ್ಯಾಸಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮುಂದೆ ಬನ್ನಿ ಎಂದು ಯುವಕರಿಗೆ ಸಲಹೆ ನೀಡಿದರು. ಸಾನಿಧ್ಯ ವಹಿಸಿ ಮಾತನಾಡಿದ ಮಲ್ಲಾಪೂರ-ನೇಸರಗಿ ಗಾಳೇಶ್ವರ ಮಠದ ಚಿದಾನಂದ ಮಹಾಸ್ವಾಮಿಗಳು, ಯುವ ಪ್ರತಿಭೆಗಳು ತಮ್ಮ ಸಾಮರ್ಥ್ಯವನ್ನು ಇಂತಹ ನಾಟಕಗಳಲ್ಲಿ ಪ್ರದರ್ಶಿಸಿ ವಾಹಿನಿಗಳ ಮುಖಾಂತರ ಮುಂದೆ ಬರಬೇಕು ಎಂದರು. ಈ ಸಂದರ್ಭದಲ್ಲಿ ಜಾತ್ರಾ ಕಾಮಿಟಿಯ ಎಲ್ಲ ಸದಸ್ಯರು, ನಾಟಕ ನಿರ್ದೇಶಕರು, ನಟರು, ಗ್ರಾಮದ ಹಿರಿಯರು, ಗ್ರಾಮಸ್ಥರು ಭಾಗವಹಿಸಿದ್ದರು.

ಹತ್ಯೆ: ಆರೋಪಿಗಳ ಬಂಧನ

ಬೆಳಗಾವಿ: ಬೈಲಹೊಂಗಲ ತಾಲೂಕಿನ ಹಣ್ಣಿಕೇರಿ ಗ್ರಾಮದಲ್ಲಿ ಸಂಭ್ರಮದ ಜಾತ್ರೆಯ ನಡುವೆಯೇ ರಕ್ತದ ಹೋಕುಳಿ ಹರಿದಿದೆ. ಹಳೇ ರಾಜಕೀಯ ವೈಷಮ್ಯ ದಿಂದಾಗಿ ಸಂಗನಗೌಡ ಪಾಟೀಲ್ ಎಂಬುವವರನ್ನು ಎದುರಾಳಿ ಗುಂಪು ಭೀಕರವಾಗಿ ಹತ್ಯೆ ಮಾಡಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಎಂಟು ಜನರನ್ನು ಬಂಧಿಸಿರುವುದಾಗಿ ಮಾಹಿತಿ ನೀಡಿದ್ದಾರೆ. ಹಣ್ಣಿಕೇರಿ ಗ್ರಾಮದ ನಿವಾಸಿ 50 ವರ್ಷದ ಸಂಗನಗೌಡ ಪಾಟೀಲ್ ಕೊಲೆಯಾದ ದುರ್ದೈವಿ. ಕಳೆದ ಕೆಲವು ವರ್ಷಗಳಿಂದ ಗ್ರಾಮದ ಎರಡು ಕುಟುಂಬಗಳ ನಡುವೆ ರಾಜಕೀಯ, ವೈಯಕ್ತಿಕ ವೈಷಮ್ಯ ಮನೆಮಾಡಿತ್ತು. ಭಾನುವಾರ ಜಾತ್ರೆಯ ಮೆರವಣಿಗೆ ಸಾಗುತ್ತಿದ್ದಾಗ ಸಂಗನಗೌಡ ಅವರು ರಾಜಕೀಯ ವಿರೋಧಿಗಳ ಮನೆ ಮುಂದೆ ಕುಣಿಯುತ್ತಿದ್ದರು ಎನ್ನಲಾಗಿದೆ. ಈ ವೇಳೆ ಆರೋಪಿಗಳು ನಮ್ಮ ಮನೆ ಮುಂದೆ ಕುಣಿಯಬೇಡ, ಮುಂದೆ ಹೋಗು ಎಂದು ವಾಗ್ವಾದ ನಡೆಸಿದ್ದಾರೆ. ಈ ಸಣ್ಣ ಜಗಳವೇ ವಿಕೋಪಕ್ಕೆ ತಿರುಗಿ ಕೊಲೆಯಲ್ಲಿ ಅಂತ್ಯವಾಗಿದೆ. ಕೊಲೆ ಮಾಡಲು ಮೊದಲೇ ಸಜ್ಜಾಗಿದ್ದ ಆರೋಪಿಗಳ ಗುಂಪು ಸಂಗನಗೌಡ ಅವರ ಮೇಲೆ ಏಕಾಏಕಿ ಮುಗಿ ಬಿದ್ದಿದೆ. ನೇಸರಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಪ್ರಕರಣ ದಾಖಲಾಗಿದೆ. ಪೊಲೀಸರು ಕ್ಷಿಪ ಕಾರ್ಯಾಚರಣೆ ನಡೆಸಿ ಎಂಟು ಜನ ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತರನ್ನು ದೇಮಪ್ಪ ಬಳಗನ್ನವರ, ಮಂಜುನಾಥ ಬಳಗನ್ನವರ, ರುದ್ರಪ್ಪ ಬಳಗನ್ನವರ, ವಿಜಯ ಬಳಗನ್ನವರ, ಸೂರಪ್ಪ ಬಳಗನ್ನವರ, ಸಿದ್ದಪ್ಪ ಸಿಂಗಾಡಿ, ನಾಗರಾಜ ಬಳಗನ್ನವರ, ಬಸವಂತಪ್ಪ-ಬಳಗನ್ನವರ ಎಂದು ಗುರುತಿಸಲಾಗಿದೆ. ಸದ್ಯ ಗ್ರಾಮದಲ್ಲಿ ಶಾಂತಿ ಕಾಪಾಡಲು ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ.



ಹುಕ್ಕೇರಿ: ಸ್ಥಳೀಯ ಹಡಪದ ಸಮಾಜ ತಾಲೂಕಾ ಘಟಕದವರು ಬೀದರ ಜಿಲ್ಲೆಯ ಬಸವಕಲ್ಯಾಣ ಅನುಭವ ಮಂಟಪದ ಬಳಿ ಇದ್ದ ಹಡಪದ ಅಪ್ಪಣ್ಣನವರ ಮೂರ್ತಿ ತೆರವು ಖಂಡಿಸಿ ಪುನಃ ಅಲ್ಲಿಯೇ ಮೂರ್ತಿ ಪ್ರತಿಷ್ಠಾಪನೆಗೆ ಆಗ್ರಹಿಸಿ ತಹಶೀಲ್ದಾರ ಬಲರಾಮ ಕಟ್ಟಿಮನಿ ಮೂಲಕ ರಾಜ್ಯ ಸರಕಾರಕ್ಕೆ ಮನವಿ ಸಲ್ಲಿಸಿದರು. ತಾಲೂಕಾಧ್ಯಕ್ಷ ಆನಂದ ಕುರ್ಲಿ, ಜಿಲ್ಲಾ ಉಪಾಧ್ಯಕ್ಷ ಸಂತೋಷ ನಾವಿ, ರಮೇಶ ನಾವಿ, ರವಿ ಕೋರೆ, ರಮೇಶ ನಾವಿ, ರವಿ ನನದಿ. ಕಿರಣ ನನದಿ, ಮಹಾಂತೇಶ ಖಾನಾಪುರ, ಶಿವರುದ್ರ ನಾವಿ. ಬಸು ನಾವಿ, ಅಪ್ಪಣ್ಣಾ ಕುರ್ಲಿ, ಸಂಜೀವ್ ಕುರಬೇಟ ಸೇರಿದಂತೆ ಅನೇಕರಿದ್ದರು.

ವಚನ ಸಾಹಿತ್ಯದ ಕೊಡುಗೆ ಅಪಾರ

ಚನ್ನಮ್ಮನ ಕಿತ್ತೂರ: ಕನ್ನಡ ಸಾಹಿತ್ಯಕ್ಕೆ ವಚನ ಸಾಹಿತ್ಯದ ಕೊಡುಗೆ ಅಪಾರವಾಗಿದ್ದು ಭಾಷೆ ಮತ್ತು ಭಾವನಾತ್ಮಕ ಸಂಬಂಧಗಳನ್ನು ಬೆಳೆಸುವಲ್ಲಿ 12 ನೇ ಶತಮಾನದ ಬಸವಾದಿ ಶರಣರ ಕೊಡುಗೆ ಅಪಾರ ಎಂದು ಕನ್ನಡ ಸಾಹಿತ್ಯ ಪರಿಷತ್ ಕಿತ್ತೂರು ತಾಲೂಕಾ ಘಟಕದ ಗೌರವ ಕಾರ್ಯದರ್ಶಿ ಮಂಜುನಾಥ ಕಳಸಣ್ಣವರ ಹೇಳಿದರು.

ಸೋಮವಾರ ಸಂಜೆ ಸಮೀಪದ ಬೈಲೂರು ಗ್ರಾಮದ ನಿಷ್ಕಲ ಮಂಟಪದ ಹರ್ಡೇಕರ ಮಂಜಪ್ಪ ಸಭಾಭವನದಲ್ಲಿ ಕಿತ್ತೂರಿನ ಕೆ.ಎನ್.ವ್ಹಿ.ವ್ಹಿ ಸಂಘದ ಪದವಿ ಮಹಾವಿದ್ಯಾಲಯದ ಎನ್.ಎಸ್.ಎಸ್ ವಾರ್ಷಿಕ ವಿಶೇಷ ಶಿಬಿರದ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ, ಸಮಾಜದ ಕಟ್ಟಕಡೆಯ ವ್ಯಕ್ತಿಯು ಆಧ್ಯಾತ್ಮದ ಅರಿವನ್ನು ಪಡೆದುಕೊಳ್ಳಲು ವಚನ ಸಾಹಿತ್ಯ ಮಹತ್ತರ ಪಾತ್ರ ವಹಿಸಿದೆ ಎಂದರು. ಸಮಾಜ ಸೇವಕ ಶಿವಾನಂದ ಹನುಮಸಾಗರ ಮಾತನಾಡಿ, ಯುವಜನತೆಯಲ್ಲಿ ಸೇವಾ ಮನೋಭಾವನೆಯನ್ನು ಬೆಳೆಸುವಲ್ಲಿ ಈ ಶಿಬಿರ ಪರಿಣಾಮಕಾರಿಯಾಗಲಿದೆ ಎಂದರು. ಗ್ರಾಪಂ ಸದಸ್ಯ ಸಂಗಮೇಶ ಹಿರೇಮಠ ಮಾತನಾಡಿದರು. ಶಿಕ್ಷಕ ವಿವೇಕ ಕುರಗುಂದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಶಿಬಿರಾಧಿಕಾರಿ ಎಸ್.ವಿ. ಹೊನ್ನರಾಜು, ರವಿ ಅಗ್ನಿಹೋತ್ರಿ, ಗಂಗಾಧರ ಹನುಮಸಾಗರ, ಆನಂದ ಕರೆಪ್ಪನವರ, ವಿನಾಯಕ ಹುಬ್ಬಳ್ಳಿ, ಪ್ರಕಾಶ ಶಿವನವ್ವನವರ, ನಾಗೇಶ ಬೆಣ್ಣಿ, ವಿಜಯ ನೇಗಿನಹಾಳ ಹಾಗೂ ಇತರರು ಇದ್ದರು. ಶಿಬಿರಾರ್ಥಿಗಳಾದ ಕೀರ್ತಿ ಪಾಟೀಲ ನಿರೂಪಿಸಿ, ಲಕ್ಷ್ಮೀ ಬಡಿಗೇರ ಸ್ವಾಗತಿಸಿ, ಕೀರ್ತಿ ಚಿಕ್ಕಮಠ ವಂದಿಸಿದರು.



ಚನ್ನಮ್ಮನ ಕಿತ್ತೂರ : ಬೈಲೂರು ಗ್ರಾಮದ ನಿಷ್ಕಲ ಮಂಟಪದ ಹರ್ಡೇಕರ ಮಂಜಪ್ಪ ಸಭಾಭವನದಲ್ಲಿ ಕಿತ್ತೂರಿನ ಕೆ.ಎನ್.ವ್ಹಿ.ವ್ಹಿ ಸಂಘದ ಪದವಿ ಮಹಾವಿದ್ಯಾಲಯದ ಎನ್.ಎಸ್.ಎಸ್ ವಾರ್ಷಿಕ ವಿಶೇಷ ಶಿಬಿರದ ಉಪನ್ಯಾಸ ಕಾರ್ಯಕ್ರಮ ನಡೆಯಿತು. ಕನ್ನಡ ಸಾಹಿತ್ಯ ಪರಿಷತ್ ಕಿತ್ತೂರು ತಾಲೂಕಾ ಘಟಕದ ಗೌರವ ಕಾರ್ಯದರ್ಶಿ ಮಂಜುನಾಥ ಕಳಸಣ್ಣವರ, ಸಮಾಜ ಸೇವಕ ಶಿವಾನಂದ ಹನುಮಸಾಗರ, ಗ್ರಾಪಂ ಸದಸ್ಯ ಸಂಗಮೇಶ ಹಿರೇಮಠ, ಕ್ಷಕ ವಿವೇಕ ಕುರಗುಂದ, ಶಿಬಿರಾಧಿಕಾರಿ ಎಸ್.ವಿ. ಹೊನ್ನರಾಜು, ರವಿ ಅಗ್ನಿಹೋತ್ರಿ ಸೇರಿದಂತೆ ಇತರರಿದ್ದರು.

ಕನ್ನಡ ಕಾವ್ಯ ಪರಂಪರೆ ಅರಿತುಕೊಳ್ಳುವ ಸೃಜನಶೀಲತೆ ಬೆಳೆಸಿಕೊಳ್ಳಿ: ಗುರುದೇವಿ

ಮೂಡಲಗಿ: ಕವಿತೆಗಳು ಮಾನವನ ಭಾವನೆಗಳ ಪ್ರತಿಬಿಂಬವಾಗಿದ್ದು, ಸಮಾಜದ ಸತ್ಯವನ್ನು ಸೌಂದರ್ಯಪೂರ್ಣವಾಗಿ ವ್ಯಕ್ತಪಡಿಸುವ ಶಕ್ತಿ ಹೊಂದಿದ್ದು, ಇಂದಿನ ಯುವ ಸಾಹಿತಿಗಳು ಕನ್ನಡ ಕಾವ್ಯ ಪರಂಪರೆಯನ್ನು ಅರಿತುಕೊಂಡು ಸೃಜನಶೀಲತೆಯನ್ನು ಬೆಳೆಸಿಕೊಳ್ಳಬೇಕು ಎಂದು ಹಿರಿಯ ಸಾಹಿತಿ ಡಾ. ಗುರುದೇವಿ. ಹುಲೆಪ್ಪನ್ನವರಮಠ ಹೇಳಿದರು.

» ಜಿಲ್ಲಾ ಮಟ್ಟದ ಕಾವ್ಯ ಕಮ್ಮಟ ಕಾರ್ಯಕ್ರಮ

ಕನ್ನಡ ಸಾಹಿತ್ಯ ಪರಿಷತ್ತು ಹಾಗು ಜ್ಞಾನದೀಪ್ತಿ ಸಾಹಿತ್ಯ ಪ್ರತಿಷ್ಠಾನ, ಮೂಡಲಗಿ ಇವುಗಳ ಸಹಯೋಗದಲ್ಲಿ ಚೈತನ್ಯ ವಸತಿ ಶಾಲೆಯಲ್ಲಿ ಜರುಗಿದ ಜಿಲ್ಲಾ ಮಟ್ಟದ ಕಾವ್ಯ ಕಮ್ಮಟ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮುಖ್ಯ ಅತಿಥಿ ಬಿ .ಸಿ. ಹೆಬ್ಬಾಳ ಮಾತನಾಡಿ, ಕಾವ್ಯದ ರೂಪ, ಛಂದಸ್ಸು, ಅಲಂಕಾರ, ಭಾವಸಂಪತ್ತು ಹಾಗೂ ನಾಡಿನ ಶ್ರೀಮಂತ ಕಾವ್ಯ ಪರಂಪರೆ. ಕಾವ್ಯವು ಮಾನವನ ಮನಸ್ಸನ್ನು ಶುದ್ಧಗೊಳಿಸುವ ಪವಿತ್ರ ಸಾಧನವೆಂದು ಹೇಳಿದರು.



ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಾಹಿತಿ ಶಿವಾನಂದ ಬೆಳಕೂಡ ಮಾತನಾಡಿ, ಕಾವ್ಯಕಮ್ಮಟಗಳು ಕನ್ನಡ ಸಾಹಿತ್ಯವನ್ನು ಜೀವಂತವಾಗಿಡುವ ಪವಿತ್ರ ವೇದಿಕೆಗಳಾಗಿವೆ ಎಂದು ಹೇಳಿದರು.

ಶಿಕ್ಷಕ ವೈ.ಬಿ.ಪಾಟೀಲ ಕಾರ್ಯಕ್ರಮ ಉದ್ಘಾಟಿಸಿದರು.

ಕಸಾಪ ಅಧ್ಯಕ್ಷ ಡಾ. ಸಂಜಯ ಶಿಂಧಿಹಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧ ಭಾಗಗಳಿಂದ ಸುಮಾರು 50ಕ್ಕೂ ಹೆಚ್ಚು ಆಗಮಿಸಿದ್ದ ಕವಿಗಳಿಗೆ ಹಾಗೂ ಅತಿಥಿಗಳಿಗೆ ಸನ್ಮಾನ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಎಸ್.ಎಂ.ಕಮದಾಳ, ಸಂಧ್ಯಾ ಪಾಟೀಲ, ಎ. ಎಚ್.ಒಂಟಗೂಡಿ , ಬಿ.ವೈ. ಶಿವಾಪುರ, ಮಹಾವೀರ ಸಲ್ಲಾಗೋಳ, ಬಿ.ಪಿ. ಬಂದಿ, ಮಹದೇವ ಜಿಡಿಮಣಿ, ಸಿದ್ರಾಮ ದ್ಯಾಗಾನಟ್ಟಿ, ವಾಯ್.ಬಿ .ಕಳ್ಳಿಗುದ್ದಿ, ಬಿ.ಎಂ. ನಂದಿ, ದುರ್ಗಪ್ಪ ದಾಸನ್ನವರ, ಚಿದಾನಂದ ಹುಗಾರ, ಶಿರೀಷಾ ಬೆಳ್ಳಕ್ಕಿ, ಭಾಗೀರಥಿ ಕುಳಲಿ, ಶೈಲಜಾ ಬಡಿಗೇರ, ಗೋದಾವರಿ ದೇಶಪಾಂಡೆ ಉಪಸ್ಥಿತರಿದ್ದರು.

ಉಪನ್ಯಾಸಕ ಸುರೇಶ ಲಂಕೆಪ್ಪನ್ನವರ ಸ್ವಾಗತಿ ನಿರೂಪಿಸಿದರು. ಬಿ .ಆರ್. ತರಕಾರ ವಂದಿಸಿದರು.

ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮ

ನೇಸರಗಿ: ಐಸಿಎಆರ್-ಕೆಎಲ್ಇ ಕೃಷಿ ವಿಜ್ಞಾನ ಕೇಂದ್ರ, ಮತ್ತಿಕೊಪ್ಪ ಹಾಗೂ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು ಇವರ ಸಹಯೋಗದಲ್ಲಿ ಜಲಾನಯನ ಮತ್ತು ತೋಟಗಾರಿಕೆ ಇಲಾಖೆ ಪ್ರೋತ್ಸಾಹಿತ ರೈತ ಉತ್ಪಾದಕ ಕಂಪನಿಗಳ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಆಡಳಿತ ಮಂಡಳಿ ನಿರ್ದೇಶಕರಿಗೆ ಎರಡು ದಿನಗಳ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಕೇಂದ್ರದ ಆವರಣದಲ್ಲಿ ಹಮ್ಮಿಕೊಳ್ಳಲಾಯಿತು.

ಈ ವೇಳೆ ಬೆಳಗಾವಿ ಜಿಲ್ಲೆಯ ಕೃಷಿ ಇಲಾಖೆ, ಜಂಟಿಕೃಷಿನಿರ್ದೇಶಕ ಹೆಚ್.ಡಿ. ಕೋಳೆಕರ ಮಾತನಾಡಿ, ಜಿಲ್ಲೆಯಲ್ಲಿ ಅನೇಕ ರೈತ ಉತ್ಪಾದಕ ಸಂಸ್ಥೆಗಳು ರಚನೆಗೊಂಡು ಕಾರ್ಯ ಪ್ರವೃತ್ತವಾಗಿವೆ. ಆದಾಗ್ಯೂ ನಿರೀಕ್ಷಿತ ಮಟ್ಟದಲ್ಲಿ ರೈತ ಉತ್ಪಾದಕ ಗುಂಪುಗಳು ಸ್ವಾವಲಂಬನೆ ಸಾಧಿಸುವಲ್ಲಿ ಹಿಂದುಳಿದಿವೆ. ಈ ಕುರಿತು ನಿರ್ದೇಶಕ ಮಂಡಳಿಗಳು ರೈತ ಉತ್ಪಾದಕ ಕಂಪನಿಗಳ ಉತ್ಕೃಷ್ಟ ಕೇಂದ್ರವು ಕಾಲಕಾಲಕ್ಕೆ ನೀಡುವ ತರಬೇತಿಗಳ ಮೂಲಕ ಕೌಶಲ್ಯಯುಕ್ತವಾಗಿ ಆಡಳಿತ ಸುಧಾರಣೆಗಳನ್ನು ತಂದು ಸೂಕ್ತ ಕ್ರಮಗಳನ್ನು ಅನುಸರಿಸಿ ಸ್ವಾವಲಂಬನೆ ಸಾಧಿಸಬೇಕು ಎಂದರು.

ಬೆಂಗಳೂರಿನ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಹಿರಿಯ ಸಲಹೆಗಾರ ಜಯಣ್ಣ ವೈ. ಆರ್. ಮಾತನಾಡಿ, ರೈತ ಉತ್ಪಾದಕ ಸಂಸ್ಥೆಗಳ ಕಾರ್ಯಕ್ಷಮತೆಯನ್ನು ಬಲಪಡಿಸಲು ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ವತಿಯಿಂದ ರೈತ ಉತ್ಪಾದಕ ಕಂಪನಿಗಳ ರಚನೆ, ಜವಾಬ್ದಾರಿಗಳು, ಆಡಳಿತಾತ್ಮಕ ನಿರ್ವಹಣೆ ಹಾಗೂ ಮೌಲ್ಯ ಸರಪಳಿ ವಿಶ್ಲೇಷಣೆ ಕುರಿತು ರಾಜ್ಯದ ರೈತ ಉತ್ಪಾದಕ ಸಂಸ್ಥೆಗಳಿಗೆ ತರಬೇತಿಯನ್ನು ಕಾಲಕಾಲಕ್ಕೆ ಹಮ್ಮಿಕೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ವಿಜಯಪುರ ರೈತ ಉತ್ಪಾದಕ ಕಂಪನಿಗಳ ಒಕ್ಕೂಟದ ಉಪಾಧ್ಯಕ್ಷ ಮದನ ಲೋಣಿ, ಕೇಂದ್ರದ ಮುಖ್ಯಸ್ಥ ಡಾ. ಮಂಜುನಾಥ ಚೌರಡ್ಡಿಯವರು ಮಾತನಾಡಿದರು.

ಕೇಂದ್ರದ ವಿಜ್ಞಾನಿ ಎಸ್. ಎಂ. ವಾರದ ಸ್ವಾಗತಿಸಿ, ವಿಜ್ಞಾನಿ ಡಾ. ಎಸ್. ಎಸ್. ಹಿರೇಮಠ ವಂದಿಸಿದರು. ರೈತ ಉತ್ಪಾದಕ ಕಂಪನಿಗಳ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಆಡಳಿತ ಮಂಡಳಿ ನಿರ್ದೇಶಕರು ಸೇರಿದಂತೆ ಒಟ್ಟು 63 ಜನ ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದರು.



ಉಚಿತ ಆರೋಗ್ಯ ತಪಾಸಣಾ ಶಿಬಿರ ನಾಳೆ

ಯಮಕನಮರಡಿ: ಹಿಂಡಾಲ್ಕೋ, ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಮಹಿಳಾ ಕಲ್ಯಾಣ ಸಂಸ್ಥೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ, ದಡ್ಡಿ ಇವರ ಸಂಯುಕ್ತ ಆಶ್ರಯದಲ್ಲಿ ಕೆಎಲ್ಇ ಸಂಸ್ಥೆಯ ಡಾ. ಸಂಪತ್ ಕುಮಾರ ಎಸ್ ಶಿವಣಗಿ ಕ್ಯಾನ್ಸರ್ ಆಸ್ಪತ್ರೆಯ ಸಹಯೋಗದಲ್ಲಿ ಏ.9ರಂದು ಬೆಳ್ಳಿಗ್ಗೆ 10. ಗಂಟೆಯಿಂದ ಮಧ್ಯಾಹ್ನ 3.00 ಗಂಟೆಯವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ದಡ್ಡಿಯಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದ ಉದ್ಘಾಟಕರಾಗಿ ಹುಕ್ಕೇರಿ ತಾಲೂಕಾ ಆರೋಗ್ಯ ಅಧಿಕಾರಿಗಳಾದ ಡಾ. ಉದಯಕುಮಾರ ಕುಡಚಿ ಆಗಮಿಸುವರು. ಅಧ್ಯಕ್ಷತೆಯನ್ನು ಮಹಿಳಾ ಕಲ್ಯಾಣ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ವೈಜಯಂತಿ ಎಂ. ಚೌಗಲಾ ವಹಿಸುವರು. ಮುಖ್ಯ ಅತಿಥಿಗಳಾಗಿ ಇಂಡಿಯನ ಕ್ಯಾನ್ಸರ್ ಸೊಸೈಟಿಯ ಪಾಂತೀಯ ವ್ಯವಸ್ಥಾಪಕರಾದ ಸಂತೇನಿ ದಂಡಿನ, ದಡ್ಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾದಿಕಾರಿಗಳಾದ ಶೀಮಾ ಶಿ. ಢಂಗ, ದಡ್ಡಿ ಗ್ರಾಮ ಪಂಚಾಯತನ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಾದ ಮಾರುತಿ ಕಾಂಬಳೆ ಹಾಗೂ ಖೋತ-ದಡ್ಡಿ ಅಂಗನವಾಡಿ ಮೇಲ್ವಿಚಾರಕರಾದ ಆಯೀಷಾ ಎ ಮುಲ್ಲಾ ಆಗಮಿಸುವರು ಎಂದು ಗೌರವ ಕಾರ್ಯದರ್ಶಿಗಳು ಮಹಿಳಾ ಕಲ್ಯಾಣ ಸಂಸ್ಥೆ ಬೆಳಗಾವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಧಾರ್ಮಿಕ ಆಸ್ತಿ ತಿದ್ದುಪಡಿ ರದ್ದುಗೊಳಿಸಲು ಮನವಿ

ಯರಗಟ್ಟಿ: ಪಟ್ಟಣದ ಹೃದಯ ಭಾಗದಲ್ಲಿರುವ ಬಾಬಾಬುಡನ್ ಶಾವಲಿ ದರ್ಗಾ ಟ್ರಸ್ಟ್ ಕಮೀಟಿ ಜಮೀನಿನ ಕ್ಷೇತ್ರದ ತಿದ್ದುಪಡಿ ಮಾಡಿದ್ದು ಹಿಂಪಡೆಯುವಂತೆ ಆಗ್ರಹಿಸಿ ಮುಸ್ಲಿಂ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಸ್ಥಳೀಯ ತಹಶೀಲ್ದಾರ ಕಚೇರಿ ಎದುರು ಪ್ರತಿಭಟನಾ ಸಮಾವೇಶ ನಡೆಯಿತು.

ಈ ವೇಳೆ ಮಾತನಾಡಿದ ಮುಸ್ಲಿಂ ಮುಖಂಡ ಅಮೀರ್ ದೇವಡಿ ನಮ್ಮ ಪೂರ್ವಜರ ಕಾಲದಿಂದಲೂ ಬಾಬಾಬುಡನ್ ಶಾವಲಿ ದರ್ಗಾ ಟ್ರಸ್ಟ್ ಜಾಗ 8 ಗುಂಟೆ ಇದ್ದ ಜಮೀನನ್ನು 5 ಗುಂಟೆ ಅಂತಾ ಕಾಣದ ಕೈಗಳು ತಿದ್ದುಪಡಿ ತಂದಿರುವುದು ಹಿಂದೂ ಮುಸ್ಲಿಮರ ಧಾರ್ಮಿಕ ಆಸ್ತಿ ಕಬಳಿಸುವ ತಂತ್ರವಾಗಿದೆ. ಕೂಡಲೇ ಈ ತಿದ್ದುಪಡಿ ರದ್ದು ಮಾಡಬೇಕು ಇಲ್ಲವೇ ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ದಿವಂಗತ ಸೋಮಲಿಂಗಪ್ಪ ಜಕಾತಿ ಅವರು ಬಾಬಾಬುಡನ್ ಶಾವಲಿ ದರ್ಗಾ ಹೆಸರಿನಲ್ಲಿ ಪೂರ್ವಜರಿಗೆ ಅರ್ಪಿಸಲಾದ ಆಸ್ತಿಯಾಗಿದೆ. ಸೂಫೀ ಸಂತರ ಕಾಲದಿಂದಲೂ ಹಾಗೂ ತಲ-ತಲಾಂತರದಿಂದ ಹಿಂದೂ ಮುಸ್ಲಿಂ ಸಮಾಜ ಬಾಂಧವರಿಂದ ಭಾವೈಕ್ಯತೆಯ ಸಂಕೇತವಾಗೀ ಬಾಬಾಬುಡನ್ ಶಾವಲಿ ದರ್ಗಾ ಉರುಸು(ಜಾತ್ರೆ) ಮಾಡಿಕೊಂಡು ನಿರ್ವಹಣೆ ಇದನ್ನು ಕಬಳಿಸಲು ಹುನ್ನಾರ ನಡೆಸುತ್ತಿದೆ ಎಂದು ದೂರಿದರು.

> ಇದರ ಬಗ್ಗೆ ಸಮಾಜದ ಹಿರಿಯರ ಜೊತೆ ಚರ್ಚೆ ಮಾಡಿದ್ದು, ಕಂದಾಯ ಇಲಾಖೆ ದಾಖಲೆಗಳನ್ನು ಇನ್ನೊಂದು ಸಾರಿ ಪರಿಶೀಲನೆ ನಡೆಸಿ ನ್ಯಾಯಸಮ್ಮತವಾದ ನಿರ್ಣಯ ಕೈಗೊಳ್ಳಲಾಗುವುದು.
> ■ ಎಂ. ವ್ಹಿ. ಗುಂಡಪ್ಪಗೋಳ, ತಹಶೀಲ್ದಾರ, ಯರಗಟ್ಟಿ

ನಂತರ ತಹಶೀಲ್ದಾರ ಎಂ.ವ್ಹಿ. ಗುಂಡಪ್ಪಗೋಳ ಮೂಲಕ ಬೈಲಹೊಂಗಲ ಉಪವಿಭಾಗಾಧಿಕಾರಿ ಹಾಗೂ ಬೆಳಗಾವಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.ಇಮಾಮಸಾಬ ಹುಸೇನಾಯ್ಕರ, ಕಾಶಿಮ ಹೊರಟ್ಟಿ, ಇಮಾಮಸಾಬ ಮನಿಯಾರ, ಹುಸೇನಸಾಬ ದಿಲಾವರನಾಯ್ಕ, ಪೈಗಂಬರ ನದಾಫ, ಸಲೀಂಬೇಗ ಜಮಾದಾರ, ಫಿರೋಜ್ ಖಾದ್ರಿ, ಗೋರೆಸಾಬ ಕರ್ನಾಚಿ, ಪುಟ್ಟು ನದಾಫ, ಮುಕ್ತರ ನದಾಫ, ಬಾಬುಲಾಲ ಶಿಕ್ಕಲಗಿ, ಇಮ್ತಿಯಾಜ್ ಖಾದ್ರಿ, ಮುನ್ನಾ ಶಾಬಾಜಖಾನ, ಆಸೀಫ್ ಗೋಕಾಕ, ದುದನಾನಾ ಪತ್ತುನಾಯ್ಕ, ಹುಸೇನ್ ಅನ್ಸಾರಿ, ಮಕ್ಬೂದ ಉಗರಗೋಳ, ಮಲೀಕ ಚಾಂದಖಾನ್ನವರ, ರಜಾಕ ದಿಲಾವರನಾಯ್ಕ, ಜಾವೀದ ಮುಗಟಖಾನ, ಸಲೀಂ ಮನಿಯಾರ, ನಜೀರ ನದಾಫ, ಮಲೀಕಸಾಬ ಬಾಗವಾನ, ಎಂ. ಕೆ. ಜಮಾದಾರ, ಫಾರುಕ ಅತ್ತಾರ, ಅನೇಕರು ಮುಸ್ಲಿಂ ಬಾಂಧವರು ಇದ್ದರು.



ಸ್ಮಶಾನ ಭೂಮಿ ಒತ್ತುವರಿ ತೆರವಿಗೆ ಆಗ್ರಹ

ಯರಗಟ್ಟಿ: ಪಟ್ಟಣದ ಹಿಂದೂ ಸಮುದಾಯಕ್ಕೆ ಮೀಸಲಿರುವ ಸ್ಮಶಾನ ಭೂಮಿಯನ್ನು ಕೆಲವರು ಒತ್ತುವರಿ ಮಾಡಿಕೊಳ್ಳುತ್ತಿದ್ದು, ಕೂಡಲೇ ಒತ್ತುವರಿ ತೆರವುಗೊಳಿಸುವಂತೆ ಮತ್ತು ಸ್ಮಶಾನದಲ್ಲಿ ಅಧಿಕೃತ ರಸ್ತೆ ಕಾಮಗಾರಿ ಮಾಡುತ್ತಿರುವುದನ್ನ ಆಗ್ರಹಿಸಿ ವೀರಶೈವ ಲಿಂಗಾಯತ ಸಮುದಾಯದಿಂದ ಮಂಗಳವಾರ ಪಟ್ಟಣದ ತಾಲೂಕು ಕಚೇರಿ ಬಳಿ ಪ್ರತಿಭಟನೆ ನಡೆಸಿದರು.

ಈ ಪಟ್ಟಣದಲ್ಲಿ ಹಿಂದೂ ಸಮುದಾಯಕ್ಕೆ ಸುಮಾರು 6 ಎಕರೆ ಸ್ಮಶಾನ ಜಾಗ ಮೀಸಲಿದ್ದು, ಇದರಲ್ಲಿ 4 ಎಕರೆ ಮಾತ್ರ ಸ್ಮಶಾನಕ್ಕೆ ಜಾಗ ಉಳಿದಿದೆ. ಇದರಲ್ಲಿ 2ಎಕರೆ ಜಾಗವನ್ನು ಕೆಲವರು ಒತ್ತುವರಿ ಮಾಡಿಕೊಂಡಿದ್ದು, ಕೂಡಲೇ ಇದನ್ನು ತೆರವುಗೊಳಿಸಬೇಕು ಎಂದು ಆಗ್ರಹಿಸಿದರು.

ಲಿಂಗಾಯತ ಸಮಾಜದ ಮುಖಂಡ ಕುಮಾರ ಹಿರೇಮಠ ಮಾತನಾಡಿ, ಹಿಂದೂ ಸಮಾಜದ ಸ್ಮಶಾನದಲ್ಲಿ ಪಟ್ಟಣ ಪಂಚಾಯತಿಯಿಂದ ರಸ್ತೆ ಕಾಮಗಾರಿಗೆ ಪ್ರಾರಭಿಸಿದ್ದು ಕೂಡಲೇ ಕಾಮಗಾರಿ ಸ್ಥಗಿತಗೊಳಿಸಬೇಕ ಹಾಗೂ ವೀರಶೈವ ಲಿಂಗಾಯತ ಸಮುದಾಯಕ್ಕೆ ಮಿಸಲಿಟ್ಟ ಸ್ಮಶಾನ ಜಾಗ ಗುರುತಿಸಿ ಹದ್ದುಬಸ್ತ ಮಾಡಬೇಕು ಎಂದು ಹೇಳಿದರು.



> ಸ್ಮಶಾನ ಭೂಮಿ ದೊರೆಯುವುದು ಈಗ ಕಷ್ಟವಾಗುತ್ತಿರುವುದರಿಂದ ಸ್ಮಶಾನ ಭೂಮಿಗಳ ಒತ್ತುವರಿ ಸರ್ವೆ ನಡೆಸಿ, ಟೇಲಿ ಅಳವಡಿಸಿ ಹದ್ದುಬಸ್ತ್ ಮಾಡಿಸಲಾಗುವುದು.
> ■ ಎಂ.ವ್ಹಿ ಗುಂಡಪ್ಪಗೋಳ, ತಹಶೀಲ್ದಾರ

ಮಹಾಂತೇಶ ಜಕಾತಿ, ಶಶಿಕಾಂತ ಹಾದಿಮನಿ, ಶಿವಾನಂದ ಯರಗಣವಿ, ರಾಜೇಂದ್ರ ವಾಲಿ, ವಿರೂಪಾಕ್ಷ ಜಕಾತಿ, ದುಂಡಪ್ಪ ಉಪ್ಪಿನ, ಸುರೇಶ ತಲ್ಲೂರ, ಶಿವಾನಂದ ಪಟ್ಟಣಶೆಟ್ಟಿ, ರಾಜು ಕತ್ತಿಶೆಟ್ಟಿ, ದುಂಡಯ್ಯ ಹಿರೇಮಠ, ತಮ್ಮಣ್ಣಾ ವಾಲಿ, ಬಸವರಾಜ ಮಲಶೆಟ್ಟಿ, ಬಸವಪ್ರಭು ಪಾಟೀಲ, ಸಿದ್ದಲಿಂಗಪ್ಪ ಗಲಗಲಿ, ಶಿವಿನಂದ ಉಪ್ಪಿನ, ಬಾಲಕೃಷ್ಣ ಹಡಪದ, ಶ್ರೀಶೈಲ ಹಾರುಗೇರಿ, ಪ್ರವೀಣ ಬೆಣ್ಣಿ, ಶ್ರೀಧರ ಉಪ್ಪಿನ, ರಾಜು ಬೆಣ್ಣಿ, ರಮೇಶ ಮುರಗೋಡ, ವಿನಾಯಕ ಅಂತನ್ನವರ ಇದ್ದರು.

ಸಮುದಾಯ ಕಲಿಕಾ ಕೇಂದ್ರ ಉದ್ಘಾಟನೆ

ಯಮಕನಮರಡಿ: ಸದೃಢ ಸಮಾಜದ ನಿರ್ಮಾಣದಲ್ಲಿ ಇಂದಿನ ಮಕ್ಕಳ ಪಾತ್ರ ಅತೀ ಮುಖ್ಯವಾಗಿದೆ. ಶಿಕ್ಷಣದ ಜೊತೆಗೆ ಮಕ್ಕಳು ವಿವಿಧ ಸಮಾಜಮುಖಿ ಚಟುವಟಿಕೆಗಳಲ್ಲಿ ಪಾಲ್ಗೊಂಡು ಅವರ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ವಾತಾವರಣ ನಿರ್ಮಿಸಿಕೊಳ್ಳಬೇಕೆಂದು ಮಹಿಳಾ ಕಲ್ಯಾಣ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ವೈಜಯಂತಿ ಚೌಗಲಾ ಹೇಳಿದರು.

ಬೆಂಗಳೂರಿನ ವಿಹಾನ್ ಸಂಸ್ಥೆ ಹಾಗೂ ಬೆಳಗಾವಿಯ ಮಹಿಳಾ ಕಲ್ಯಾಣ ಸಂಸ್ಥೆಯ ಸಹಕಾರದೊಂದಿಗೆ ಹುಕ್ಕೇರಿ ತಾಲೂಕಿನ ಕರಗುಪ್ಪಿ ಹಾಗೂ ಬಸ್ಸಾಪೂರ ಗ್ರಾಮಗಳಲ್ಲಿ ನಿಧಾನ ಕಲಿಕಾ ಮಕ್ಕಳನ್ನು ಗುರುತಿಸಿ ಅವರ ಅಭಿವೃದ್ಧಿಗಾಗಿ ಪ್ರಾರಂಭಿಸಿರುವ ಸಮುದಾಯ ಕಲಿಕಾ ಕೇಂದ್ರಗಳನ್ನು ಉದ್ಘಾಟಿಸಿ ಮಾತನಾಡಿ, ಪ್ರತಿಯೊಬ್ಬ ಮಕ್ಕಳಲ್ಲಿ ವಿಶೇಷ ಕೌಶಲ್ಯಗಳು ಇರುತ್ತವೆ ಅವುಗಳನ್ನು ಗುರುತಿಸಿ ಅವರ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವುದು ನಮ್ಮ ಕರ್ತವ್ಯವಾಗಿದೆ ಎಂದರು.

ವಿಹಾನ್ ಸಂಸ್ಥೆಯ ಸಂಯೋಜಕರಾದ ರೇಖಾ ಬೆನಿವಾಡ ಮಾತನಾಡಿ, ವಿಹಾನ್ ಸಂಸ್ಥೆಯ ಚಟುವಟಿಕೆಗಳನ್ನು ವಿವರಿಸಿ ಸಮುದಾಯ ಕಲಿಕಾ ಕೇಂದ್ರಗಳನ್ನು ಪ್ರಾರಂಭಿಸುತ್ತಿರುವುದರ ಮೂಲ ಉದ್ದೇಶಗಳನ್ನು ತಿಳಿಸಿದರು ಇದರ ಜೊತೆಗೆ ಕಲಿಕೆಯಲ್ಲಿ ಹಿಂದುಳಿದ ಶಾಲಾ ಮಕ್ಕಳಿಗೆ ಸಮುದಾಯ ಕಲಿಕಾ ಕೇಂದ್ರಗಳ ಮೂಲಕ ಉಚಿತವಾಗಿ ಶಿಕ್ಷಣ ಹಾಗೂ ಪಠ್ಯೇತರ ಚಟುವಟಿಕಳನ್ನು ಆಯೋಜಿಸಿ ಅವರನ್ನು ಮುಖ್ಯವಾಹಿನಿಗೆ ತರಲಾಗುವುದು ಎಂದರು.



ಕಾರ್ಯಕ್ರಮದಲ್ಲಿ ಮಹಿಳಾ ಕಲ್ಯಾಣ ಸಂಸ್ಥೆಯ ಸಂಯೋಜಕರಾದ ಎಂ. ಎಸ್. ಚೌಗಲಾ, ಯೋಜನಾ ನಿರ್ದೇಶಕರಾದ ಸುರೇಖಾ ಪಾಟೀಲ ಹಾಗೂ ಯರಗಟ್ಟಿ ಸರಕಾರಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ಕಿರಣ ಚೌಗಲಾ, ಕರಗುಪ್ಪಿ ಸರಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಎ.ಜಿ. ಮುನ್ನೋಳ್ಳಿ, ಬಸ್ಸಾಪೂರ ಸರಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಮೊಮಿನ ಉಪಸ್ಥಿತರಿದ್ದರು.

ಏ.26ರಿಂದ ಕೊಪ್ಪಳ ಶ್ರೀಗಳಿಂದ ಪ್ರವಚನ



ಗೋಕಾಕ: ತಾಲೂಕಿನ ಬೆಟಗೇರಿ ಗ್ರಾಮದಲ್ಲಿ ಬಸವ ಜಯಂತಿ ನಿಮಿತ್ಯ ಏ.26 ರಿಂದ ಏ.29 ರವರೆಗೆ ಹೊಸಳ್ಳಿ ಮತ್ತು ಕೊಪ್ಪಳ ಶ್ರೀಗಳಿಂದ ಪ್ರವಚನ ಹಮ್ಮಿಕೊಂಡಿರುವ ಪ್ರಯುಕ್ತ ಬೆಟಗೇರಿ ಪಿಕೆಪಿಎಸ್ ಸಭಾಂಗಣದಲ್ಲಿ ಇತ್ತೀಚೆಗೆ ಸ್ಥಳೀಯರಿಂದ ಪೂರ್ವಭಾವಿ ಸಭೆ ಜರುಗಿತು.

ಹೊಸಳ್ಳಿ ಮತ್ತು ಕೊಪ್ಪಳ ಶ್ರೀಗಳಿಂದ ನಡೆಯಲಿರುವ ಪ್ರವಚನ ಆಯೋಜನೆ ಸಮಿತಿ ಸಂಚಾಲಕ ಈಶ್ವರ ಬಳಿಗಾರ ಮಾತನಾಡಿ, ಏ.26 ರಿಂದ ಏ.29 ರವರೆಗೆ ಹೊಸಳ್ಳಿಯ ಅಭಿನವ ಬೂದೀಶ್ವರ ಸ್ವಾಮೀಜಿ ಅವರಿಂದ ಐದು ದಿನಗಳ ಕಾಲ ಪ್ರತಿ ದಿನ ಸಂಜೆ 7 ಗಂಟೆಯಿಂದ 8 ಗಂಟೆಯವರೆಗೆ ಪ್ರವಚನ, ಏ.30ರಂದು ಬೆಳಗ್ಗೆ 10ಕ್ಕೆ ಕೊಪ್ಪಳ ಗವಿಸಿದ್ಧೇಶ್ವರ ಮಠದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಅವರಿಂದ ಬೆಟಗೇರಿ ಗ್ರಾಮದಲ್ಲಿ ಪ್ರವಚನ ಜರುಗಲಿದೆ. ಸ್ಥಳೀಯರ ಸಹಾಯ, ಸಹಕಾರ ನೀಡಬೇಕೆಂದು ಮನವಿ ಮಾಡಿಕೊಂಡರು.

ಸ್ಥಳೀಯ ಪಿಕೆಪಿಎಸ್ ಅಧ್ಯಕ್ಷ ಬಸವಂತ ಕೋಣಿ ಮಾತನಾಡಿ, ಹೊಸಳ್ಳಿ ಮತ್ತು ಕೊಪ್ಪಳ ಶ್ರೀಗಳಿಂದ ಬೆಟಗೇರಿ ಗ್ರಾಮದಲ್ಲಿ ಹಮ್ಮಿಕೊಂಡಿರುವ ಪ್ರವಚನ ಆಯೋಜನೆಗೆ ಅಗತ್ಯವಾದ ಸಕಲ ಕಾರ್ಯಕ್ಕೆ ಸಹಾಯ, ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಬೆಟಗೇರಿ ಗ್ರಾಪಂ ಗ್ರಂಥಾಲಯ ಮತ್ತು ಅರಿವು ಕೇಂದ್ರದ ಮೇಲ್ವಿಚಾರಕ ಬಸವರಾಜ ಪಣದಿ ಪ್ರವಚನ ಆಯೋಜನೆಯ ಹಲವಾರು ಮಹತ್ವದ ವಿಷಯಗಳ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಸ್ಥಳೀಯ ವೇಧಮೂರ್ತಿ ಈರಯ್ಯ ಹಿರೇಮಠ, ಸಂಗಯ್ಯ ಹಿರೇಮಠ ಸಮ್ಮುಖ ವಹಿಸಿದ್ದರು.

ಲಕ್ಷ್ಮಣ ನೀಲಣ್ಣವರ, ಲಕ್ಷ್ಮಣ ಸೋಮಗೌಡ್ರ, ಗೌಡಪ್ಪ ದೇಯಣ್ಣವರ, ಈಶ್ವರಚಂದ್ರ ಬೆಟಗೇರಿ, ಈರಸಂಗಪ್ಪ ದೇಯಣ್ಣವರ, ಈರಣ್ಣ ಬಳಿಗಾರ, ಶ್ರೀಧರ ದೇಯಣ್ಣವರ, ಹಜರತ ಮಿರ್ಜಾನಾಯ್ಕ, ಈರಪ್ಪ ದೇಯಣ್ಣವರ, ಹನುಮಂತ ವಗ್ಗರ, ರಾಮಣ್ಣ ನೀಲಣ್ಣವರ, ದುಂಡಪ್ಪ ಕಂಬಿ, ಅಡಿವೆಪ್ಪ ಮುರಗೋಡ, ಮಲ್ಲಪ್ಪ ಪಣದಿ, ಸುಭಾಷ ಕರೆಣ್ಣವರ, ಸುರೇಶ ಬಾಣಸಿ, ಭೀಮಶೆಪ್ಪ ಹೊಂಗಲ ಸೇರಿದಂತೆ ಕೊಪ್ಪಳ ಮತ್ತು ಹೊಸಳ್ಳಿ ಶ್ರೀಗಳಿಂದ ಹಮ್ಮಿಕೊಂಡಿರುವ ಪ್ರವಚನ ಆಯೋಜನೆ ಸಮಿತಿ ಪದಾಧಿಕಾರಿಗಳು, ಸದಸ್ಯರು, ಯುವಕರು, ಸ್ಥಳೀಯ ಹಿರಿಯ ನಾಗರಿಕರು ಇದ್ದರು.

ಶ್ರೀಶೈಲ ಮಲ್ಲಿಕಾರ್ಜುನನ ಭಕ್ತರಿಗೆ ಸ್ವಾಗತ

ತೆಲಸಂಗ: ಹೋಳಿ ಹುಣ್ಣಿಮೆಯಂದು ಗ್ರಾಮದಿಂದ ಶ್ರೀಶೈಲ ಮಲ್ಲಿಕಾರ್ಜುನನ ಕಂಬಿ ಹೊತ್ತು ಪಾದಯಾತ್ರೆ ಹೊರಟಿದ್ದ ಭಕ್ತಾದಿಗಳು, ಯುಗಾದಿಯಂದು ಶ್ರೀಶೈಲ ಮಲ್ಲಯ್ಯನ ದರ್ಶನ ಪಡೆದು ಯಶಸ್ವಿಯಾಗಿ ಸ್ವಗ್ರಾಮಕ್ಕೆ ಮರಳಿದ್ದಾರೆ. ಪಾದಯಾತ್ರೆಯ ಮೂಲಕವೇ ಮರಳಿ ಬಂದ ಭಕ್ತ ಸಮೂಹಕ್ಕೆ ಗ್ರಾಮಸ್ಥರು ಭವ್ಯ ಸ್ವಾಗತ ಕೋರಿದರು.

ಪಾದಯಾತ್ರಿಗಳು ಮೊದಲು ಗ್ರಾಮದ ಹೊರವಲಯದ ಬನದ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಆಗಮಿಸಿ ರಾತ್ರಿ ಇಡೀ ಅಲ್ಲಿ ವಾಸ್ತವ್ಯ ಹೂಡಿದ್ದರು. ಬೆಳಿಗ್ಗೆ ಗ್ರಾಮದ ಪ್ರಮುಖ ರಸ್ತೆಗಳ ಮೂಲಕ ಮೆರವಣಿಗೆಯೊಂದಿಗೆ ಪಾದಯಾತ್ರಿಗಳು ಗ್ರಾಮ ಪ್ರವೇಶಿಸಿದರು. ಪದ್ಧತಿಯಂತೆ ದಿನವಿಡೀ ಶರಣರ ಬಾವಿಯ ತೋಟದಲ್ಲಿ ತಂಗಿದ್ದ ಕಂಬಿಗಳಿಗೆ ಭಕ್ತರು ಗುಂಪು ಗುಂಪಾಗಿ ಬಂದು ನೈವೇದ್ಯ ಅರ್ಪಿಸಿ ದರ್ಶನ ಪಡೆದರು.

ದಿನವಿಡೀ ತೋಟದಲ್ಲಿ ಪೂಜೆ ಸಲ್ಲಿಸಿಕೊಂಡನಂತರಸಂಜೆಗ್ರಾಮದಮುಖ್ಯ ಬಜಾರ್ ಮೂಲಕ ಮೆರವಣಿಗೆಯೊಂದಿಗೆ ಸಾಗಿ ಗ್ರಾಮದೊಳಗಿನ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಕಂಬಿಗಳು ಮರಳಿ ಸ್ಥಾಪನೆಯಾದವು. ದೀರ್ಘಕಾಲದ ಪಾದಯಾತ್ರೆ ಮುಗಿಸಿ ಬಂದ ಭಕ್ತರ ಭಕ್ತಿ ಗ್ರಾಮಸ್ಥರ ಸಂಭ್ರಮದಿಂದ ಇಡೀ ಊರಿನಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು.



ಸಿದ್ಧೇಶ್ವರ ಶ್ರೀಗಳ ಆದರ್ಶ ಅಳವಡಿಸಿಕೊಳ್ಳಿ: ಐಹೊಳೆ



ರಾಯಬಾಗ: ವಿಜಯಪುರದ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರು ತಮ್ಮ ಕೊನೆಯ ದಿನಗಳನ್ನು ಕಳೆದ ಈ ಪುಣ್ಯ ಭೂಮಿಯನ್ನು ಪವಿತ್ರ ಕ್ಷೇತ್ರವನ್ನಾಗಿ ಮಾಡಲು ಎಲ್ಲರೂ ಕೈಜೋಡಿಸಬೇಕೆಂದು ಶಾಸಕ ಡಿ.ಎಂ.ಐಹೊಳೆ ಹೇಳಿದರು.

ಮಂಗಳವಾರ ತಾಲೂಕಿನ ಚಿಂಚಲಿ ಪಟ್ಟಣದ ವೇದಾಂತ ಕೇಸರಿ ಶ್ರೀ ಮಲ್ಲಿಕಾರ್ಜುನ ಗುರುದೇವ ಆಶ್ರಮ ಆವರಣದಲ್ಲಿ ಜಿ.ಪಂ.ಇಲಾಖೆಯಿಂದ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿ ಮಂಜೂರಾದ 15 ಲಕ್ಷ ರೂ.ಅನುದಾನದಲ್ಲಿ ಮಂಟಪ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಭಾರತ ದೇಶ ಕಂಡ ಶ್ರೇಷ್ಠ ಸಂತರಾದ ಸಿದ್ದೇಶ್ವರ ಸ್ವಾಮಿಜೀಯವರ ಜೀವನ ಆದರ್ಶಗಳನ್ನು ನಾವೆಲ್ಲರೂ ಅಳವಡಿಸಿಕೊಂಡು, ಸನ್ಮಾರ್ಗದಲ್ಲಿ ನಡೆಯೋಣ ಎಂದರು.

ವಿಜಯಪುರ ಜ್ಞಾನ ಯೋಗಾಶ್ರಮದ ಅಧ್ಯಕ್ಷ ಬಸವಲಿಂಗ ಸ್ವಾಮಿಜೀ, ಗುರುದೇವ ಆಶ್ರಮದ ಸಿದ್ಧಪ್ರಸಾದ ಸ್ವಾಮೀಜಿ, ಅಂಕುಶ ಜಾಧವ, ತುಕಾರಾಮ ಟೊನ್ನೆ, ಸುಭಾಷ ಕೋರೆ, ರಮೇಶ ಹಾರೂಗೇರಿ, ಕುಮಾರ ಖೋತ, ಮಹಾವೀರ ಹಾರೂಗೇರಿ, ಅಶೋಕ ಕುಲಗುಡೆ, ಸದಾಶಿವ ದಂಡಾಪೂರೆ, ನಿಜಗುಣಿ ಶಿವಪೂರೆ, ಪ್ರಕಾಶ ಪಡೋಲಕರ, ಮಹೇಶ್ವರ ಖೊಂಬೆನ್ನವ್ವರ, ಮಲ್ಲಪ್ಪ ಕಮತೆ, ಬಸಪ್ಪ ಕಳ್ಳಿಗುದ್ದಿ, ಜಗನ್ನಾಥ ಪಾಟೀಲ, ಮಹಾದೇವ ದಂಡಾಪೂರೆ, ಬಾಳು ಕಾಗವಾಡೆ ಸೇರಿ ಅನೇಕರು ಇದ್ದರು.

ಕಿರುಸುದ್ದಿ

ಕಳಸಾರೋಹಣ ಇಂದು

ಕೆರೂರ: ಸಮೀಪದ ಹುಲ್ಲಿಕೇರಿ ಗ್ರಾಮದ ಭಕ್ತರ ಆರಾಧ್ಯ ದೇವತೆ ಗದ್ದೆವ್ವದೇವಿ ದೇವಸ್ಥಾನದ ನೂತನ ಗೋಪುರ ಉದ್ಘಾಟನೆ ಹಾಗೂ ಕಳಸಾರೋಹಣವು ಏ.8ರಂದು ನಡೆಯಲಿದೆ. ಬೆಳಗ್ಗೆ ದೇವಸ್ಥಾನದ ವಿಶೇಷ ಪೂಜೆ, ಹೋಮ-ಹವನ, ವಿವಿಧ ಧಾರ್ಮಿಕ ಪೂಜಾ ಕಾರ್ಯಗಳು ನಡೆಯಲಿವೆ.ಗ್ರಾಮದ ಪ್ರಮುಖ ಬೀದಿಗಳಲ್ಲಿ ಕುಂಭ ಮೇಳದೊಂದಿಗೆ ಕಳಸದ ಮೆರವಣಿಗೆ ಸಂಚರಿಸಿ ನಂತರ ದೇವಸ್ಥಾನ ತಲುಪಿ,ಸಂಜೆ ಗೋಧೂಳಿ ಮುಹೂರ್ತದಲ್ಲಿ ನೂತನ ಗೋಪುರದ ಉದ್ಘಾಟನೆ ಹಾಗೂ ಕಳಸಾರೋಹಣ ನಡೆಯಲಿದೆ.ಏ.22ರಂದು ಗ್ರಾಮದ ದ್ಯಾಮವ್ವ ಹಾಗೂ ದುರ್ಗಮ್ಮ ದೇವಿಗೆ ಉಡಿ ತುಂಬುವುದು. ಏ.24ರಂದು ಗದ್ದೆವ್ವದೇವಿಗೆ ಉಡಿ ತುಂಬುವುದು ಎಂದು ದೇವಸ್ಥಾನದ ಸಮಿತಿಯವರು ತಿಳಿಸಿದ್ದಾರೆ.

ವಾಹನ ಸೌಲಭ್ಯ

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಗೆ ಸಂಬಂಧಿಸಿದಂತೆ ಏಪ್ರೀಲ್ 9 ರಂದು ಮತದಾನ ನಡೆಯಲಿದ್ದು, ವಿಕಲಚೇತನರಿಗೆ, ಹಿರಿಯ ನಾಗರಿಕರಿಗೆ ಹಾಗೂ ಅನಾರೋಗ್ಯ ಪೀಡಿತರಿಗೆ ಬಾಗಲಕೋಟೆ ನಗರಸಭೆ ವ್ಯಾಪ್ತಿಯಲ್ಲಿ ತಮ್ಮ ಮತಗಟ್ಟೆಗೆ ತೆರಳಿ ಮತ ಚಲಾಯಿಸಲು ಬಾಗಲಕೋಟೆ ನಗರಸಭೆಯಿಂದ ವಾಹನಗಳ ವ್ಯವಸ್ಥೆ ಮಾಡಲಾಗಿದೆ. ವಾಹನ ಅವಶ್ಯಕತೆವುಳ್ಳವರು ರಾಜೇಶ ಕೊಟಬಾಗಿ (7019772949), ರೇಣುಕಾರ ಐಕೂರ (7349446087), ಪರವೀನಬಾನು ಎಸ್ ಮಲ್ಲಾಬಾದಿ (8431102513) ಇವರನ್ನು ಸಂಪರ್ಕಿಸಿ, ವಾಹನ ಸೌಲಭ್ಯ ಪಡೆದುಕೊಂಡು ಮತದಾನ ಮಾಡುವಂತೆ ನಗರಸಭೆ ಪೌರಾಯುಕ್ತ ವಾಸಣ್ಣ ಆರ್. ತಿಳಿಸಿದ್ದಾರೆ.

ಸಂತೆ ರದ್ದು

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ ಹಿನ್ನಲೆಯಲ್ಲಿ ಏ.9ರಂದು ಚುನಾವಣೆ ನಡೆಯುತ್ತಿರುವದರಿಂದ ಬಾಗಲಕೋಟೆ ನಗರಸಭೆ ವ್ಯಾಪ್ತಿಯಲ್ಲಿ ಜರುಗವ ಎಲ್ಲ ಸಂತೆಗಳನ್ನು ರದ್ದು ಪಡಿಸಲಾಗಿದೆ ಎಂದು ನಗರಸಭೆ ಪೌರಾಯುಕ್ತ ವಾಸಣ್ಣ ಆರ್.ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಪ ಚುನಾವಣೆ: ವೇತನ ಸಹಿತ ರಜೆ ಘೋಷಣೆ

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಗೆ ಏ.9ರಂದು ಮತದಾನ ನಡೆಯಲಿದ್ದು, ಉಪ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಎಲ್ಲ ಸರಕಾರಿ ಕಚೇರಿಗಳಿಗೆ, ಶಾಲಾ ಕಾಲೇಜುಗಳಿಗೆ (ಅನುದಾನಿತ ಶಿಕ್ಷಣ ಸಂಸ್ಥೆ ಒಳಗೊಂಡಂತೆ) ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳು, ಜೀವವಿಮಾ ನಿಗಮ, ಹಣಕಾಸು ಸಂಸ್ಥೆಗಳು ಹಾಗೂ ಇನ್ನಿತರೇ ಔದ್ಯಮಿಕ ಸಂಸ್ಥೆಗಳಲ್ಲಿ ಖಾಯಂ ಆಗಿ ಅಥವಾ ದಿನಗೂಲಿ ಮೇಲೆ ಕೆಲಸ ನಿರ್ವಹಿಸುತ್ತಿರುವ ಎಲ್ಲ ಅರ್ಹ ಮತದಾರರಿಗೆ ಸೀಮಿತವಾದಂತೆ ಹಾಗೂ ಮತದಾನ ಮಾಡಲು ಅನುಕೂಲವಾಗುವಂತೆ ಕಲಂ 25ರಡಿ ಮತ್ತು ಕಲಂ 135ಬಿ ಅಡಿಯಲ್ಲಿನ ಎಲ್ಲ ಉಪಬಂಧಗಳನ್ವಯ ಒಂದು ದಿನದ ವೇತನ ಸಹಿತಿ ರಜೆ ಮಂಜೂರು ಮಾಡಲು ಅಧಿಕಾರವುಳ್ಳ ಅಧಿಕಾರಿಗಳು ಮಂಜೂರು ಮಾಡತಕ್ಕದ್ದು ಎಂದು ಎಂಬ ಷರತ್ತಿಗೆ ಒಳಪಟ್ಟು ಒಂದು ದಿನ ವೇತನ ಸಹಿತ ರಜೆ ನೀಡುವಂತೆ ಸರ್ಕಾರದ ಅಧೀನ ಕಾರ್ಯದರ್ಶಿಗಳು ಆದೇಶಿಸಿದ್ದಾರೆ.

ಆಕ್ಷೇಪಣೆಗೆ ಆಹ್ವಾನ

ಬಾದಾಮಿ: 2024-25ನೇ ಸಾಲಿನ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಬಾದಾಮಿ ಮತ್ತು ಗುಳೇದಗುಡ್ಡ ತಾಲೂಕಿನ ರೈತರು ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆಯಡಿ ತಿರಸ್ಕೃತ ಅರ್ಜಿಗಳಿಗೆ ಆಕ್ಷೇಪಣೆ ಆಹ್ವಾನಿಸಲಾಗಿದೆ. ಬಾದಾಮಿ ತಾಲೂಕಿನಿಂದ ಮುಂಗಾರು ಹಂಗಾಮಿನಲ್ಲಿ 43 ಹಾಗೂ ಹಿಂಗಾರು ಹಂಗಾಮಿನಲ್ಲಿ 232 ಮತ್ತು ಗುಳೇದಗುಡ್ಡ ತಾಲೂಕಿನಿಂದ ಮುಂಗಾರು ಹಂಗಾಮಿನಲ್ಲಿ 6 ಅರ್ಜಿಗಳು, ಹಿಂಗಾರು ಹಂಗಾಮಿನಲ್ಲಿ 45 ಅರ್ಜಿಗಳು ವಿಮಾ ಸಂಸ್ಥೆಯಿಂದ ತಿರಸ್ಕೃತಗೊಂಡಿವೆ. ರೈತರ ವಿವರವನ್ನು ಬಾದಾಮಿ ತಾಲೂಕಿನ ಕೃಷಿ, ತೋಟಗಾರಿಕೆ ಇಲಾಖೆ ಹಾಗೂ ರೈತಸಂಪರ್ಕ ಕೇಂದ್ರ, ಬಾದಾಮಿ, ಕುಳಗೇರಿ, ಕೆರೂರ ಮತ್ತು ಗುಳೇದಗುಡ್ಡ ಕಛೇರಿಗಳ ಸೂಚನಾ ಫಲಕಗಳ ಮೇಲೆ ಅಳವಡಿಸಲಾಗಿದೆ. ರಶೀದಿ ದಾಖಲೆಗಳೊಂದಿಗೆ ಆಕ್ಷೇಪಣೆಗಳು ಇದ್ದಲ್ಲಿ ಮರು ಪರಿಶೀಲನೆಗೆ ರೈತರು ಪ್ರಕಟಣೆಯ ದಿನಾಂಕದಿಂದ 15 ದಿನದೊಳಗಾಗಿ ಆಕ್ಷೇಪಣೆ ಸಲ್ಲಿಸಬೇಕೆಂದು ಸಹಾಯಕ ಕೃಷಿ ನಿರ್ದೇಶಕರು ಅಶೋಕ ತಿರಕನ್ನವರ ತಿಳಿಸಿದ್ದಾರೆ.

ಅಂಬುಬಾಯಿ ಬದಿ ನಿಧನ



ಗುಳೇದಗುಡ್ಡ: ಪಟ್ಟಣದ ಎಸ್ ಎಸ್‌ಕೆ ಸಮಾಜದ ಅಂಬುಬಾಯಿ ಮೋಹನಸಾ ಬದಿ (65) ಸೋಮವಾರ ನಿಧನರಾದರು. ಮೃತರಿಗೆ ಪತಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು-ಬಳಗ ಇದ್ದಾರೆ.



ರಬಕವಿ-ಬನಹಟ್ಟಿ: ದಿ.ಎಂ.ಎಸ್.ಮುನ್ನೊಳ್ಳಿಯವರ 100ನೇ ಜನ್ಮ ದಿನೋತ್ಸವದ ಅಂಗವಾಗಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಉತ್ತಮ ಶಿಕ್ಷಕರಿಗೆ ಕಾಯಕಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಜಯವಂತ ಕಾಡದೇವರ, ಮಲ್ಲಿಕಾರ್ಜುನ ಹುಲಗಬಾಳಿ, ಬಿ.ಎಂ. ಜಾಡಗೌಡ, ಶಶಿಕಾಂತ ಹುನ್ನೂರ, ಶೇಖರ ಜವಳಗಿ, ಓಂಪ್ರಕಾಶ ಕಾಬರಾ, ಶೇಖರ ಮುನ್ನೊಳ್ಳಿ, ಶಂಕರ ಜುಂಜಪ್ಪನವರ, ಮಲ್ಲಿಕಾರ್ಜುನ ಕಕಮರಿ, ಶಿವಾನಂದ ದಾಶ್ಯಾಳ ಸೇರಿದಂತೆ ಮುನ್ನೊಳ್ಳಿ ಗುರುಗಳ ಶಿಷ್ಯ ಬಳಗದವರು ಇದ್ದರು.

ಆದರ್ಶ ಬದುಕು ನಮ್ಮದಾಗಲಿ: ಶ್ರೀ

ರಬಕವಿ-ಬನಹಟ್ಟಿ: ಇಂದಿನ ದಿನಗಳಲ್ಲಿ ನಮ್ಮದು ಪ್ರದರ್ಶನದ ಬದುಕಾಗದೆ ಆದರ್ಶದ ಬದುಕಾಗಬೇಕು. ಪ್ರಶಸ್ತಿಗಳು ಅರ್ಹರಿಗೆ ದೊರೆತಾಗ ಮಾತ್ರ ಪ್ರಶಸ್ತಿಗಳ ಮೌಲ್ಯ ಹೆಚ್ಚಾಗುತ್ತದೆಯೆಂದು ರಬಕವಿಯ ಗುರುದೇವ ಬ್ರಹ್ಮಾನಂದ ಆಶ್ರಮದ ಗುರುಸಿದ್ದೇಶ್ವರ ಸ್ವಾಮೀಜಿ ತಿಳಿಸಿದರು. ಇಲ್ಲಿನ ಬಂಗಾರೆವ್ವ ತಟ್ಟಿಮನಿ ಸಮುದಾಯ ಭವನದಲ್ಲಿ ನಿವೃತ್ತ ಪ್ರಾಚಾರ್ಯ ಎಂ.ಎಸ್.ಮುನ್ನೊಳ್ಳಿಯವರ ಅಭಿಮಾನಿ ಬಗಳದವರು ಹಮ್ಮಿಕೊಂಡ 100 ನೇ ಜನ್ಮ ದಿನೋತ್ಸವ ಮತ್ತು ಕಾಯಕಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು. ಬನಹಟ್ಟಿಯ ಹಿರೇಮಠದ ಶರಣಬಸವ ಶಿವಾಚಾರ್ಯರು ಮಾತನಾಡಿ, ಪ್ರತಿಯೊಬ್ಬರು ಮುನ್ನೊಳ್ಳಿಯವರ ಆದರ್ಶಗಳನ್ನು ತಮ್ಮ ಶಿಕ್ಷಕ ವೃತ್ತಿಯಲ್ಲಿ ಮತ್ತು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು. ಹಿರಿಯರಾದ ಸುರೇಶ ಕೋಲಾರ ಮಾತನಾಡಿದರು. ಶಿಕ್ಷಕರಾದ ಎಂ.ಬಿ.ಶೆಟ್ಟಿ, ಆರ್.ಎಸ್.ಬಸಗೊಂಡನವರ, ಡಿ.ಪಿ.ಸಾವಳಗಿ, ಶೋಭಾ ಶೀಲವಂತ, ಪಿ.ಎನ್.ಕೋಪರ್ಡೆ ಅವರಿಗೆ ಕಾಯಕಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಂಗೀತಾ ಮುನ್ನೊಳ್ಳಿ ಮತ್ತು ಮಹಾನಂದ ಕುಳ್ಳಿ ಭಕ್ತಿ ಗಾಯನ ನಡೆಸಿದರು. ಕಾರ್ಯಕ್ರಮದಲ್ಲಿ ವೈ.ಬಿ.ಕೊರಡೂರ, ಅಂತಾರಾಷ್ಟ್ರೀಯ ಚಿತ್ರಕಾರ ಜಯವಂತ ಮುನ್ನೊಳ್ಳಿ ಮಾತನಾಡಿದರು. ಶ್ರೀಶೈಲ ಧಬಾಡಿ ಅಧ್ಯಕ್ಷತೆ ವಹಿಸಿದ್ದರು. ಜೆಎಸ್‌ಎಸ್ ಸಂಘದ ಉಪಾಧ್ಯಕ್ಷ ಬಸವರಾಜ ಭದ್ರನವರ, ಸಿದ್ದನಗೌಡ ಪಾಟೀಲ, ಡಿ.ಎ.ಬಾಗಲಕೋಟ, ರಾಮಣ್ಣ ಭದ್ರನವರ ಇದ್ದರು.



ಬಾಗಲಕೋಟೆ: ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ ಅವರ ಪರವಾಗಿ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಬೃಹತ್ ಬೈಕ್ ರ್‍ಯಾಲಿ ನಡೆಯಿತು. ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥಗೌಡ ನೇತೃತ್ವದಲ್ಲಿ ಅಬಕಾರಿ ಸಚಿವ ತಿಮ್ಮಾಪುರ ಅವರು ಬೈಕ್ ಜಾಥಾಕ್ಕೆ ಚಾಲನೆ ನೀಡಿದರು. ಪೌರಾಡಳಿತ ಸಚಿವ ರಹೀಮ್ ಖಾನ್ ಇದ್ದರು. ಶಾಸಕರಾದ ಬಸವನಗೌಡ ಬಾದರ್ಲಿ, ರಾಷ್ಟ್ರೀಯ ಯುವ ಕಾಂಗ್ರೆಸ್ ಕಾರ್ಯದರ್ಶಿ ತಾರಿಕ್ ಭಗವಾನ್, ರಾಜ್ಯ ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಶಿವಕುಮಾರ ಭಾಗವಹಿಸಿದ್ದರು.

ಹಿಂದುತ್ವ ರಕ್ಷಣೆಗೆ ಬಿಜೆಪಿ ಗೆಲ್ಲಿಸಿ: ಚರಂತಿಮಠ

ಬಾಗಲಕೋಟೆ: ಹಿಂದುತ್ವ ರಕ್ಷಣೆಗೆ, ಮಹಿಳೆಯರ ಭದ್ರತೆಗೆ ಮತ್ತು ಅಭಿವೃದ್ಧಿಗಾಗಿ ಬಿಜೆಪಿಯನ್ನು ಗೆಲ್ಲಿಸಬೇಕು. ಚುನಾವಣೆ ಸಂದರ್ಭದಲ್ಲಿ ಕೇಸರಿ ಶಾಲು ಹಾಕುವ ಕಾಂಗ್ರೆಸ್ ನಕಲಿ ಹಿಂದುಗಳ ನಾಟಕ ನಡೆಯುವುದಿಲ್ಲ ಎಂದು ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಹೇಳಿದರು.

ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಉಪಚುನಾವಣೆ ನಿಮಿತ್ತ ಬಿಜೆಪಿ ಪ್ರಚಾರ ಜೋರಾಗಿದ್ದು ಎಲ್ಲೆಡೆ ಭಾರಿ ಬೆಂಬಲ ವ್ಯಕ್ತವಾಗಿದೆ. ಕಾಂಗ್ರೆಸ್ ಪಕ್ಷದಲ್ಲಿ ನೀತಿ ಮತ್ತು ನೇತೃತ್ವ ಇಲ್ಲ ಇದರಿಂದ ಜನರಲ್ಲಿ ನಿರಾಸಕ್ತಿ ಮೂಡಿದೆ. ಚುನಾವಣೆ ಬಂದಾಗ ಕೇಸರಿ ಶಾಲು ಹಾಕುವ ನಕಲಿ ಹಿಂದುಗಳು ಮುಸ್ಲಿಂರ ಓಲೈಕೆ ಬಿಟ್ಟು ಚುನಾವಣೆ ಮಾಡಿ ತೋರಿಸಲಿ ಎಂದರು.

ಮೆಡಿಕಲ್ ಕಾಲೇಜು ಜಪ ಮಾಡುವ ಕಾಂಗ್ರೆಸ್ ಪಕ್ಷಕ್ಕೆ ನಾಚಿಕೆಯಾಗಬೇಕು. ಹಿಂದಿನ ನನ್ನ ಅಧಿಕಾರ ಅವಧಿಯಲ್ಲಿ 300 ಹಾಸಿಗೆಯ ಆಸ್ಪತ್ರೆ ನಿರ್ಮಾಣ, ಸರಕಾರಿ ಆಸ್ಪತ್ರೆಯ ಅಭಿವೃದ್ಧಿ ಮಾಡಿದ್ದೇನೆ. ಈಗ ಚುನಾವಣೆ ಗಿಮಿಕ್ ಮಾಡಲು ಶಾಪಿಂಗ್ ಕಾಂಪ್ಲೆಕ್ಸ್, ಮೆಡಿಕಲ್ ಕಾಲೇಜು ನಿರ್ಮಾಣ ಮಾಡುವ ಸುಳ್ಳು ಭರವಸೆ ಕೊಡುವ ಕೆಲಸ ಮಾಡುತ್ತಿದ್ದಾರೆ. ಇದರಿಂದ ಜನ ರೋಸಿಹೋಗಿದ್ದು ಕಾಂಗ್ರೆಸ್ ಸೋಲಿಸಲು ದಿಟ್ಟ ನಿರ್ಧಾರ ಮಾಡಿದ್ದಾರೆ. ಬಿಜೆಪಿ ಕಾರ್ಯಕರ್ತರ ಉತ್ಸಾಹ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ ಬಿಜೆಪಿ ಬಹುಮತಗಳ ಅಂತರದಲ್ಲಿ ಗೆಲ್ಲಲಿದೆ ಎಂದರು.

ಬಿಟಿಡಿಎದಲ್ಲಿ ಮಿತಿಮೀರಿದ ಭ್ರಷ್ಟಾಚಾರ ನಡೆಯುತ್ತಿದೆ. ಮುಳುಗಡೆ ಸಂತ್ರಸ್ತರಿಗೆ ನ್ಯಾಯ ಸಿಗುತ್ತಿಲ್ಲ. ಈ ಸ್ವತ್ತು ನೀಡುತ್ತಿಲ್ಲ, ನಾವಿದ್ದಾಗ 2100 ಜನರಿಗೆ ಹಕ್ಕುಪತ್ರ ಕೊಟ್ಟಿದ್ದೆವು. 3 ವರ್ಷದಲ್ಲಿ ಒಂದೇ ಒಂದು ಹಕ್ಕುಪತ್ರ ಕೊಟ್ಟಿಲ್ಲ. ಯೋಜನೆಗಳು ಕುಂಟುತ್ತಲೇ ಸಾಗಿವೆ ಎಂದು ತಿಳಿಸಿದರು.

ಹಿಂದೂಗಳಿಗೆ ರಕ್ಷಣೆ ಇಲ್ಲ: ನವನಗರದಲ್ಲಿ ಹಿಂದೂ ಮಹಿಳೆಯರ ಜೊತೆ ಅಸಭ್ಯವಾಗಿ ಮಾತನಾಡುತ್ತಿರುವ ಕುರಿತು ವಿಷಯ ತಿಳಿದಿದ್ದು ಈ ಬಗ್ಗೆ ದೂರು ನೀಡಲಾಗಿದೆ. ಚುನಾವಣಾ ಗಿಮಿಕ್‌ಗಾಗಿ ವೈದ್ಯಕೀಯ ಕಾಲೇಜು, ಗಾಂಧಿ ಭವನ ಮೊದಲಾದ ಭರವಸೆ ನೀಡುತ್ತಿದ್ದಾರೆ ಎಂದು ಆಕ್ಷೇಪಿಸಿದರು.



ಬಿಜೆಪಿ ಅಭ್ಯರ್ಥಿ ಗೆಲುವು: ಪೂಜಾರ

ಬಾಗಲಕೋಟೆ: ಬಾಗಲಕೋಟೆ ಮತಕ್ಷೇತ್ರದ ಉಪಚುನಾವಣೆಯ ಪ್ರಚಾರದಲ್ಲಿ ಗ್ರಾಮೀಣ ಮತ್ತು ನಗರಮಟ್ಟದಲ್ಲಿ ಜನರ ಒಲವು ಬಿಜೆಪಿ ಪರವಾಗಿದ್ದು ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ 10 ಸಾವಿರ ಮತಗಳ ಅಂತರದಿಂದ ಗೆಲುವು ದಾಖಲಿಸಲಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ ತಿಳಿಸಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಕೇವಲ ಭಾಷಣಕ್ಕಷ್ಟೇ ಸೀಮಿತವಾಗಿದೆ. ನೀರಾವರಿಗೆ ಸಾಕಷ್ಟು ಹಣವನ್ನು ಬಜೆಟ್‌ನಲ್ಲಿ ಮೀಸಲಿಡುತ್ತಿಲ್ಲ ಎಂದು ಟೀಕಿಸಿದರು.

ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಸರ್ಕಾರ ಮರೆತುಬಿಟ್ಟಿದೆಯೇನೋ ಎಂದು ಬಸವರಾಜ ರಾಯರೆಡ್ಡಿಯವರೇ ಹೇಳಿದ್ದಾರೆ ಎಂದು ವಿವರಿಸಿದರು. ಬಜೆಟ್‌ನಲ್ಲಿ ಹೆಚ್ಚು ಹಣ ಕೊಡುವ ಭರವಸೆ ಕೊಟ್ಟಿದ್ದರು. ಈಗ ಬಜೆಟ್‌ನಲ್ಲಿ ಕೇವಲ 2600 ಕೋಟಿ ಮಾತ್ರ ಮೀಸಲಿಟ್ಟಿದ್ದಾರೆ ಎಂದು ದೂರಿದರು.

ಹೀಗೆ ಹಣ ತೆಗೆದಿಟ್ಟರೆ ಯೋಜನೆಗೆ 20-25 ವರ್ಷ ಬೇಕಾದೀತು ಎಂದು ಕಳವಳ ವ್ಯಕ್ತಪಡಿಸಿದರು. ಸರಕಾರ ಬಂದು 3 ವರ್ಷ ಆಗಿದೆ. ಕೆಲಸ ಆಗುತ್ತಿಲ್ಲವೆಂದು ಜನರು ನಿರಾಶರಾಗಿದ್ದಾರೆ ಎಂದು ವಿವರಿಸಿದರು. ಕ್ಷೇತ್ರದ ಎಲ್ಲೆಡೆ ಬಿಜೆಪಿ ಪರವಾದ ಅಲೆ ಇದೆ. ಹಣ, ಹೆಂಡದ ಆಮಿಷಕ್ಕೆ ಜನರು ಬಲಿ ಆಗುವುದಿಲ್ಲ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಮತದಾನ ಮಹತ್ವ ತಿಳಿಸಿದ ಜಿಪಂ ಸಿಇಒ ಕುರೇರ
ಬಸ್ ಪ್ರಯಾಣಿಕರಲ್ಲಿ ಮತದಾನ ಜಾಗೃತಿ

ಬಾಗಲಕೋಟೆ: ಮತದಾನ ಜಾಗೃತಿ ಅಭಿಯಾನದಡಿ ಮತದಾನದ ಮಹತ್ವವನ್ನು ಸಾರುವ ನಿಟ್ಟಿನಲ್ಲಿ ಜಿಪಂ ಸಿಇಒ ಹಾಗೂ ಜಿಲ್ಲಾ ಸ್ವೀಪ್ ನೋಡಲ್ ಅಧಿಕಾರಿ ಶಶಿಧರ ಕುರೇರ ನವನಗರದ ಬಸ್ ನಿಲ್ದಾಣದಲ್ಲಿ ಬಸ್ ಏರಿ ಪ್ರಯಾಣಿಕರಿಗೆ ಕರಪತ್ರ ಹಂಚುವ ಮೂಲಕ ಎಲ್ಲರ ಗಮನ ಸೆಳೆದರು.

ಜಿಲ್ಲಾ ಸ್ವೀಪ್ ಹಾಗೂ ಎನ್‌ಡಬ್ಲ್ಯುಕೆಎಸ್‌ಆರ್‌ಟಿಸಿ ಸಹಯೋಗದಲ್ಲಿ ನವನಗರದ ಬಸ್ ನಿಲ್ದಾಣದಲ್ಲಿ ಹಮ್ಮಿಕೊಂಡ ಮತದಾನ ಜಾಗೃತಿ ಅಭಿಯಾನದ ಅಂಗವಾಗಿ ಬಸ್ ಏರಿ ಬಸ್‌ನಲ್ಲಿದ್ದ ಪ್ರಯಾಣಿಕರಿಗೆ ಮತದಾನದ ಮಹತ್ವ ವಿವರಿಸಿ ಕಡ್ಡಾಯವಾಗಿ ಮತ ಚಲಾಯಿಸುವಂತೆ ಮನವಿ ಮಾಡಿದರು.

ಕರ ಪತ್ರಗಳನ್ನು ಹಂಚುವ ಮೂಲಕ ಪ್ರತಿ ಮತವೂ ಅಮೂಲ್ಯ ಜವಾಬ್ದಾರಿ ನಾಗರಿಕರಾಗೋಣ-ಮತದಾನ ಮಾಡೋಣ ಎಂಬ ಸಂದೇಶಗಳನ್ನು ಸಾರಿದರು. ಪ್ರಯಾಣಿಕರು ಉತ್ತಮ ಸ್ಪಂದನೆ ನೀಡಿದ್ದು, ಜಾಗೃತಿ ಅಭಿಯಾನಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಇದರ ಜೊತೆಗೆ ಬಸ್ ನಿಲ್ದಾಣದಕ್ಕೆ ಆಗಮಿಸಿದ ಪ್ರಯಾಣಿಕರು, ಸಾರ್ವಜನಿಕರು, ವೃದ್ದರು ಹಾಗೂ ಯುವಕರಿಗೆ ಮತದಾನದ ಅಗತ್ಯತೆ, ತಮ್ಮ ಮತದಾನದ ಹಕ್ಕನ್ನು ಕಡ್ಡಾಯವಾಗಿ ಚಲಾಯಿಸುವ ಮಹತ್ವದ ಕುರಿತು ಜಾಗೃತಿ ಮೂಡಿಸಲಾಯಿತು.

ನೆರೆದ ಜನರಿಗೆ ಜಿ.ಪಂ ಸಿಇಒ ಕುರೇರ ಮತದಾನ ಜಾಗೃತಿಯ ಪ್ರತಿಜ್ಞಾವಿಧಿ ಬೋಧಿಸಿದರು. ನಂತರ ಮಾನವ ಸರಪಳಿ ನಿರ್ಮಾಣ ಮಾಡುವ ಮೂಲಕ ಮೇಣದ ಬತ್ತಿ ಹಚ್ಚಿಕೊಂಡು ನೆರದ ಪ್ರಯಾಣಿಕರ ಗಮನಸೆಳೆಯಲಾಯಿತು. ಜಿಪಂ ಮುಖ್ಯ ಯೋಜನಾಧಿಕಾರಿ ಅಲ್ಲಮಪ್ರಭು, ಸಹಾಯಕ ಯೋಜನಾಧಿಕಾರಿ ಭೀಮಪ್ಪ ತಳವಾರ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಸುಭಾಷ ಸಂಪಗಾವಿ, ಜಿಲ್ಲಾ ಸಂಚಾರಿ ಅಧಿಕಾರಿ ಕೆ.ಕೆ.ಲಮಾಣಿ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಸಮೀರವಾಡಿ ಕಾರ್ಖಾನೆ ಏಷ್ಯಾಗೆ ಪ್ರಥಮ

ಮಹಾಲಿಂಗಪುರ: ಪ್ರಸಕ್ತ ಸಾಲಿನಲ್ಲಿ ಸಮೀರವಾಡಿ ಗೋದಾವರಿ ಸಕ್ಕರೆ ಕಾರ್ಖಾನೆಯ ಒಂದೇ ಯೂನಿಟ್‌ದಿಂದ 25 ಲಕ್ಷ 18 ಸಾವಿರ ಮೆಟ್ರಿಕ್ ಟನ್ ಕಬ್ಬು ನುರಿಸಿ ಏಷ್ಯಾ ಖಂಡದಲ್ಲಿಯೆ ಪ್ರಥಮ ಸ್ಥಾನ ಪಡೆಯಲು ಸಹಕರಿಸಿದ ನಮ್ಮೆಲ್ಲ ರೈತರು, ಕಾರ್ಮಿಕರು ಆಡಳಿತ ಮಂಡಳಿಯ ಸದಸ್ಯರೆಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಸಮೀರವಾಡಿ ಸಕ್ಕರೆ ಕಾರ್ಖಾನೆಯ ಮಾಲೀಕ ಸಮೀರ ಶಾಂತಿಲಾಲ ಸೋಮೈಯಾ ಹೇಳಿದರು.

ಸಮೀಪದ ಸಮೀರವಾಡಿ ಸಕ್ಕರೆ ಕಾರ್ಖಾನೆಯ ಆವರಣದಲ್ಲಿ ನಡೆದ ಗೋದಾವರಿ ಸಕ್ಕರೆ ಕಾರ್ಖಾನೆಯ 2025-26ನೇ ಸಾಲಿನ ಕಬ್ಬು ನುರಿಸುವ ಹಂಗಾಮು ಮುಕ್ತಾಯ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಮ್ಮ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುವರೆಲ್ಲರು ನಮ್ಮ ಕುಟುಂಬದ ಸದಸ್ಯರು, ನಮ್ಮ ಕಾರ್ಖಾನೆಯ ಇಂದಿನ ಹೆಗ್ಗಳಿಕೆಗೆ ನೀವೇ ಕಾರಣ ಎಂದರು. ಕಾರ್ಖಾನೆ ಕಾರ್ಯನಿರ್ವಾಹಕ ನಿರ್ದೇಶಕ ಬಿ.ಆರ್.ಭಕ್ಷಿ ಮಾತನಾಡಿ, ಸತತ 3ನೇ ವರ್ಷವೂ ಅತೀ ಹೆಚ್ಚು ಕಬ್ಬು ನುರಿಸಿ ದಾಖಲೆ ಮಾಡಿದ್ದನ್ನು ಕಂಡು ಸಕ್ಕರೆ ಸಚಿವರಾದ ಶಿವಾನಂದ ಪಾಟೀಲ ಅವರು ದೂರವಾಣಿ ಮೂಲಕ ಶುಭಾಶಯ ತಿಳಿಸಿ ಅತೀ ಹೆಚ್ಚು ಕಬ್ಬು ನೂರಿಸಿ ದಾಖಲೆ ಪಟ್ಟಿಯಲ್ಲಿ ಸೇರಿದ್ದು ಹೆಮ್ಮೆಯ ಸಂಗತಿ ಎಂದಿದ್ದಾರೆ ಎಂದರು.

ಕಬ್ಬು ವಿಭಾಗದ ಮುಖ್ಯಸ್ಥ ವಿ.ಎಸ್. ಕಣಬೂರ ಮಾತನಾಡಿ, ನಮ್ಮ ಕಾರ್ಖಾನೆ 1970 ರಲ್ಲಿ ಪ್ರಾರಂಭವಾದಾಗ 1200 ಟನ್ ಕಬ್ಬು ನುರಿಸುವ ಸಾಮರ್ಥ್ಯವಿತ್ತು ಆದರೆ ಇಂದು 18000 ಮೆಟ್ರಿಕ್ ಟನ್ ಕಬ್ಬು ನುರಿಸುವ ಸಾಮರ್ಥ್ಯ ಹೊಂದಿದ್ದು, ನಮ್ಮ ಕಾರ್ಖಾನೆಯ ಮಾಲೀಕರಿಗೆ ಕಳೆದ ವರ್ಷ ಕಬ್ಬು ಹೆಚ್ಚು ನುರಿಸಿದಕ್ಕೆ ಸರಕಾರದಿಂದ ಇಂಟರ್ ನ್ಯಾಷನಲ್ ಶುಗರ್ ಪ್ರಶಸ್ತಿ ದೊರೆತಿದ್ದು ಹೆಮ್ಮೆಯ ಸಂಗತಿಯಾಗಿದೆ ಎಂದರು.

ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ರಾಮನಗೌಡ ಪಾಟಿಲ, ಕಾರ್ಯದರ್ಶಿ ರಂಗನಗೌಡ ಪಾಟೀಲ, ಸುಭಾಸ ಗೋಡಿ, ವಿ.ಕೆ.ಕಿಲಾರಿ, ಎಂ.ರಾಮಚಂದ್ರ, ವಿ.ಎಸ್ ಕಣವಿ, ಅಮಿತತ್ರಿಪಾಠಿ, ಆನಂದಕೊಟಬಾಗಿ, ಸೂರ್ಯಬಾಬು, ಅಶೋಕ ಗುಣದಾಳ, ರವಿ ಕೂರಬರ, ಗುರುಸಿದ್ದಯ್ಯ ಹಿರೇಮಠ, ಬಿ.ಜಿ.ಹೊಸೂರ.ಪರಸಪ್ಪ ಗಣಿ, ಪಾಟಿಲ, ಲಕ್ಷ್ಮಣ ಹುಚ್ಚರಡ್ಡಿ, ಭೀಮಶಿ ಮಗದುಮ, ಕೆಂಗಾಲಿ, ಹನಮಂತ ತೇರದಾಳ, ಭೀಮಪ್ಪ ಹೊಸಟ್ಟಿ, ಕೆಂಪಣ್ಣ ಮುಧೋಳ, ಮುರಿಗೆಪ್ಪ ಮಾಲಗಾರ, ಲಕ್ಷ್ಮಣ ಕೂಡಲಗಿ ಇದ್ದರು.



ಪ್ರತಿದಿನ ಡಾ.ಅಂಬೇಡ್ಕರ್‌ನ್ನು ಸ್ಮರಿಸೋಣ: ಶಾಸಕ ಯತ್ನಾಳ

ಕಮತಗಿ: ಡಾ.ಅಂಬೇಡ್ಕರ್ ಅವರು ನೀಡಿದಂಥಹ ಸಂವಿಧಾನ ಎಲ್ಲ ಜಾತಿವರ್ಗದವರು ಆ ಮಹಾತ್ಮನನ್ನು ಬರೀ ಒಂದು ದಿವಸ ಸ್ಮರಿಸುವ ಬದಲು ದಿನನಿತ್ಯ ಸ್ಮರಿಸಬೇಕು ಎಂದು ಬಸನಗೌಡ ಪಾಟೀಲ ಯತ್ನಾಳ್ ಹೇಳಿದರು.

ಪಟ್ಟಣದಲ್ಲಿ ಬಹಿರಂಗಸಭೆಯಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ಸಂವಿಧಾನ ರಚಿಸದೆ ಹೋಗಿದ್ದರೆ ಅಂದಿನ ಕಾಂಗ್ರೆಸ್ ಪಕ್ಷದ ಪ್ರಧಾನಮಂತ್ರಿ ಜವಹರಲಾಲ್ ನೆಹರು ಅವರು ಭಾರತವನ್ನು ಪಾಕಿಸ್ತಾನಕ್ಕೆ ಮಾರಿಬಿಡುತ್ತಿದ್ದರು ಎಂದು ಹೇಳಿದರು. ಏ.9ರಂದು ನಡೆಯಲಿರುವ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾದ ವೀರಣ್ಣ ಸಿ ಚರಂತಿಮಠ ಅವರನ್ನು ಪ್ರಚಂಡ ಬಹುಮತದಿಂದ ಆರಿಸಿ ತರಲು ಎಲ್ಲ ಕಾರ್ಯಕರ್ತರು ಹಿರಿಯರು ಮಹಿಳೆಯರು ಅತಿ ಶ್ರಮವಹಿಸಿ ಆರಿಸಿ ತರಬೇಕೆಂದು ತಮ್ಮಲ್ಲಿ ವಿನಂತಿ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ ಎಂದರು.



ಈ ಚುನಾವಣೆಯ ಫಲಿತಾಂಶ 2028 ರ ಫಲಿತಾಂಶ ಎಂದು ಮುನ್ನುಡಿ ಬರೆಯುತ್ತದೆ. ನಮ್ಮ ಹಿಂದೂಗಳ ಮೇಲೆ ದಬ್ಬಾಳಿಕೆ ಮಾಡಿದ ಈ ಕಾಂಗ್ರೆಸ್ ಸರ್ಕಾರ ಹಾಗೂ ಮುಸ್ಲಿಮರು ನಮ್ಮ ದೇವಸ್ಥಾನಗಳಿಗೆ ಹಾಗೂ ಗಣಪತಿಯ ಮೆರವಣಿಗೆ ವೇಳೆ ಕಲ್ಲು ಹಾಗೂ ಚಪ್ಪಲಿ ತೂರಿದವರನ್ನು,ನಾವು 2028 ರ ಚುನಾವಣೆಯ ನಂತರ ತಕ್ಕ ಪಾಠ ಕಲಿಸುತ್ತೇವೆ ಎಂದು ಗುಡುಗಿದರು.

ಶಾಸಕ ಸಿದ್ದು ಸವದಿ, ಸಂಗಪ್ಪ ಗಾಣಿಗೇರ್ ಗಂಗಾಧರ್ ಕ್ಯಾದಿಗ್ಗೇರಿ, ಮಹಾಂತೇಶ್ ಬಿಸನಾಳ, ಸಾಗರ್ ವಸ್ತ್ರದ, ಹರ್ಷ ದೇಸಾಯಿ, ಹಾಗೂ ಬಿಜೆಪಿ ಪಕ್ಷದ ಎಲ್ಲ ಮುಖಂಡರು ಸುತ್ತಮುತ್ತ ಗ್ರಾಮದ ಎಲ್ಲಾ ಕಾರ್ಯಕರ್ತರು ಭಾಗವಹಿಸಿದ್ದರು.

ಬಸ್‌ನಲ್ಲಿ ಸಿಕ್ಕ ಬಂಗಾರ ಮರಳಿಸಿದ ಚಾಲಕ, ನಿರ್ವಾಹಕ

ಬೀಳಗಿ ಪಟ್ಟಣದ ಬಸ್ ನಿಲ್ದಾಣದಲ್ಲಿ ಶಿರಗುಂಪಿಯ ವಿಜಯಲಕ್ಷ್ಮೀ ಚಂದ್ರಶೇಖರ ಇಲ್ಯಾಳವರಿಗೆ ಸೇರಿದ ಬಸ್‌ನಲ್ಲಿ ಸಿಕ್ಕ 5 ಗ್ರಾಂ ಬಂಗಾರವನ್ನು ಬೀಳಗಿ ಘಟಕದ ನಿರ್ವಾಹಕ ವಿಠ್ಠಲ ಗುರಪ್ಪ ಹೆರಕಲ್, ಚಾಲಕ ಆರ್.ಪಿ.ಮಾದರ ಅವರು ಘಟಕ ವ್ಯವಸ್ಥಾಪಕ ಆರ್.ಸಿ.ಖೇಡದ ಸಲಹೆ ಪ್ರಕಾರ ಸಾರಿಗೆಯ ನಿಯಂತ್ರಕ ಎಸ್.ಕೆ.ಚೌಧರಿ, ವೆಂಕಣ್ಣ ರಾಕುಂಪೇಟೆ ಹಾಗೂ ಹೊಸರೊಳ್ಳಿ ಗ್ರಾಮಸ್ಥರ ಸಮ್ಮುಖದಲ್ಲಿ ಬಂಗಾರದ ಮಾಲಿಕರಾದ ವಿಜಯಲಕ್ಷ್ಮೀಗೆ ಮರಳಿ ಒಪ್ಪಿಸಿ ಪ್ರಾಮಾಣಿಕತೆಗೆ ಸಾಕ್ಷಿಯಾಗಿದ್ದಾರೆ.

ಬಾಗಲಕೋಟೆಯಿಂದ ವಿಜಯಪೂರಕ್ಕೆ ಹೊರಟಿದ್ದ ಮಾರ್ಗಸಂಖ್ಯೆ 73 ಬೀಳಗಿ ಸಾರಿಗೆ ಘಟಕದ ಕೆ.ಎ. 28 ಎಫ್.1464 ಬಸ್‌ನಲ್ಲಿ ವಿಜಯಲಕ್ಷ್ಮಿ ಇಲ್ಯಾಳ ತವರು ಮನೆ ರೊಳ್ಳಿ ಗ್ರಾಮಕ್ಕೆ ಪ್ರಯಾಣ ಮಾಡುತ್ತಿದ್ದ ಸಂದರ್ಭದಲ್ಲಿ ಬೀಳಗಿ ಬಸ್ ನಿಲ್ದಾಣದಲ್ಲಿ ಕೆಳಕ್ಕೆ ಇಳಿಯುವಾಗ ಬಂಗಾರ ಬೋರಮಾಳ ಸರ, ಕರವಸ್ತ್ರದಿಂದ ಜಾರಿ ಬಸ್‌ನಲ್ಲಿ ಬಿದ್ದಿದೆ. ಬಸ್ ಇಳಿದ ನಂತರ ಬೋರಮಾಳದ ಕಡೆ ಗಮನಹರಿಸಿದ್ದಾಳೆ, ಅದು ಎಲ್ಲಿ ಬಿದ್ದಿದೆ ಎಂದು ಹುಡುಕಾಡಿದಾಗ ಸಿಗದೆ ಇದ್ದಾಗ ಬಸ್‌ನಲ್ಲಿ ಬಿದ್ದಿರಬಹುದು ಎಂದು ತಿಳಿದುಕೊಂಡು ಯಾರದೋ ದ್ವಿಚಕ್ರ ಸವಾರರಿಗೆ ವಿನಂತಿಸಿಕೊಂಡು ಬಸ್ ಹಿಂಬಾಲಿಸಿದರೂ ಬಸ್ ಸಿಗದೆ ಇದ್ದಾಗ ಬಾಡಗಂಡಿ ಬಸ್ ನಿಲ್ದಾಣದಲ್ಲಿದ್ದ ಸಾರಿಗೆ ನಿಯಂತ್ರಕ ಎಸ್.ಕೆ.ಚೌಧರಿಯವರಿಗೆ ಬಂಗಾರ ಬಸ್‌ನಲ್ಲಿ ಬಿದ್ದ ಬಗ್ಗೆ ತಿಳಿಸಿದ್ದಾರೆ.



ತಕ್ಷಣ ಅವರು ನಿರ್ವಾಹಕ ವಿಠ್ಠಲ ಅವರಿಗೆ ದೂರವಾಣಿ ಕರೆ ಮಾಡಿ ಒಬ್ಬರು ಬಂಗಾರ ಕಳೆದುಕೊಂಡಿದ್ದಾರೆ. ಬಸ್‌ನಲ್ಲಿ ಇದ್ದರೆ ಪರಿಶೀಲನೆ ನಡೆಸುವಂತೆ ಸೂಚಿಸಿದ್ದಾರೆ. ನಿರ್ವಾಹಕ ಹಾಗೂ ಚಾಲಕರ ಕಾರ್ಯವನ್ನು ಸಾರಿಗೆ ಸಿಬಂದ್ದಿ ಹಾಗೂ ಸಾರ್ವಜನಿಕರು ಶ್ಲಾಘಿಸಿದರು. ರೊಳ್ಳಿ ಗ್ರಾಮದ ಹಿರಿಯರಾದ ಭಾರತೀಯ ಕಿಸಾನ ಸಂಘದ ಜಿಲ್ಲಾಧ್ಯಕ್ಷ ವಿರುಪಾಕ್ಷಯ್ಯ ಹಿರೇಮಠ, ಹುಸೇನಸಾಬ ಅಣ್ಣೋಜಿ ಸೇರಿದಂತೆ ಮತ್ತಿತರಿದ್ದರು.

ಮನೆ ಮನೆಗೆ ತೆರಳಿ ಮತಯಾಚನೆ



ಜಮಖಂಡಿ: ಬಾಗಲಕೋಟೆ ವಿಧಾನಸಭೆಯ ಉಪಚುನಾವಣೆ ಸಂದರ್ಭದಲ್ಲಿ ಬಾಗಲಕೋಟೆ ನಗರದ ವಾರ್ಡ್ ನಂ.3ರಲ್ಲಿ ಭಾರತೀಯ ಜನತಾ ಪಕ್ಷದ ಅಭ್ಯರ್ಥಿ ವೀರಣ್ಣ ಚರಂತಿಮಠ ಪರವಾಗಿ ಜಮಖಂಡಿ ಶಾಸಕ ಜಗದೀಶ ಗುಡಗುಂಟಿ ಮನೆ ಮನೆಗೆ ತೆರಳಿ ಮತಯಾಚನೆ ಮಾಡಿದರು.

ರಾಜ್ಯ ಸರ್ಕಾರದ ಎರಡೂ ಕ್ಷೇತ್ರಗಳನ್ನು ಗೆಲ್ಲಲು ಇನ್ನಿಲ್ಲದ ಕಸರತ್ತು ನಡೆಸುತ್ತಿದೆ. ಕಳೆದ 3 ವರ್ಷದಲ್ಲಿ ಕೇವಲ ಭ್ರಷ್ಟಾಚಾರ, ದುರಾಡಳಿತ, ಹಾಗೂ ಓಲೈಕೆ ರಾಜಕಾರಣಮಾಡುತ್ತಾ ಬಂದಿದ್ದು ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡದೆ, ಗ್ಯಾರಂಟಿಯನ್ನೇ ಅಭಿವೃದ್ಧಿ ಎಂದು ಬಿಂಬಿಸಿ ರಾಜ್ಯದ ಜನತೆಗೆ ಮೋಸಮಾಡುತ್ತಿದೆ. ಜನರು ಕಾಂಗ್ರೆಸ್ ಆಡಳಿತದ ಬಗ್ಗೆ ಆಕ್ರೋಶಗೊಂಡಿದ್ದಾರೆ. ಹೀಗಾಗಿ ಈ ಬಾರಿಯ ಉಪಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಕಡಿವಾಣ ಬೀಳಲಿದೆ. ಬಾಗಲಕೋಟೆ ಮತಕ್ಷೇತ್ರದ ಜನರಿಂದ ಅಪಾರ ಬೆಂಬಲ ವ್ಯಕ್ತವಾಗುತ್ತಿದೆ, ಅಭಿವೃದ್ಧಿಗಾಗಿ ಬಿಜೆಪಿ ಅಭ್ಯರ್ಥಿಗೆ ಜನ ಮತ ನೀಡಿ ಎರಡು ಕ್ಷೇತ್ರಗಳಲ್ಲಿ ಭಾರತೀಯ ಜನತಾ ಪಕ್ಷದ ಅಭ್ಯರ್ಥಿಗಳು ಜಯಶಾಲಿಗಳಾಗಲಿದ್ದಾರೆ ಎಂದು ತಿಳಿಸಿದರು. ವಾರ್ಡ್ ಪ್ರಮುಖರು ಹಾಗೂ ಕಾರ್ಯಕರ್ತರು ಇದ್ದರು.

ನೀರಿನ ಅರವಟ್ಟಿಗೆ ಸ್ಥಾಪನೆ: ಪ್ರಶಂಸೆ

ಕಲಾದಗಿ: ಬೇಸಿಗೆಯ ತಾಪಮಾನ ಹೆಚ್ಚಾಗಿದ್ದು, ಗ್ರಾಮದ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗಾಗಿ ನೀರಿನ ವ್ಯವಸ್ಥೆ ಕಲ್ಪಿಸಲು ಪ್ರಕಟವಾಗಿದ್ದ ನೀರಿನ ಅರವಟ್ಟಿಗೆ ಪ್ರಾರಂಭಕ್ಕೆ ಸಾರ್ವಜನಿಕರ ಆಗ್ರಹ ಬಸ್ ನಿಲ್ದಾಣದಲ್ಲಿ ಕುಡಿಯುವ ನೀರಿಲ್ಲದೇ ಪ್ರಯಾಣಿಕರ ಪರದಾಟ? ಎಂಬ ಶೀರ್ಷಿಕೆಯಡಿ ಮಾ.6ರಂದು ಹೊಸದಿಗಂತ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಸುದ್ದಿಗೆ ಸ್ಪಂದಿಸಿರುವ ಕಲಾದಗಿ ಗ್ರಾಪಂನ ಪಿಡಿಒ ಕೆ.ಎಚ್.ಮುಲ್ಲಾ ಹಾಗೂ ಸಿಬ್ಬಂದಿ ಮಂಗಳವಾರ ಗ್ರಾಮದ ಬಸ್ ನಿಲ್ದಾಣದಲ್ಲಿ ತಂಪು ನೀರಿನ ವ್ಯವಸ್ಥೆ ಮಾಡಿದ್ದಾರೆ.

ಒಟ್ಟು 10 ತಂಪು ನೀರಿನ ಕ್ಯಾನಗಳ ಅರವಟ್ಟಿಗೆಯನ್ನು ನಿರ್ಮಿಸಿ ವ್ಯವಸ್ಥಿತವಾಗಿ ಇಟ್ಟು ಸ್ಥಳೀಯ ವ್ಯಾಪಾರಿಗಳು, ವಾಹನ ಚಾಲಕರು ಹಾಗೂ ಪ್ರಯಾಣಿಕರ ಸಮ್ಮುಖದಲ್ಲಿ ಪೂಜೆ ನೆರವೇರಿಸಿ ಅರವಟ್ಟಿಗೆ ಪ್ರಾರಂಭಿಸಲಾಗಿದ್ದು ಅದನ್ನು ನಿರ್ವಹಿಸಲು ಸಹ ಗ್ರಾಪಂನಿಂದ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಗಾಪಂನ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಾರ್ಯಕ್ಕೆ ಪ್ರಯಾಣಿಕರಿಂದ ಪ್ರಶಂಸೆ ವ್ಯಕ್ತವಾಗುತ್ತಿದೆ. ಪಿಡಿಒ ಮಾತನಾಡಿ, ಕೆ.ಎಚ್. ಮುಲ್ಲಾ ಪ್ರಯಾಣಿಕರ ಬಾಯಾರಿಕೆ ತಣಿಸಲು ಗ್ರಾಮದ ಬಸ್ ನಿಲ್ದಾಣದಲ್ಲಿ ತಂಪು ನೀರಿನ ಅರವಟ್ಟಿಗೆಯನ್ನು ಪ್ರಾರಂಭಿಸಲಾಗಿದ್ದು, ಅದರ ನಿರ್ವಹಣೆಗಾಗಿ ಗ್ರಾಪಂನಿಂದ ಸಿಬ್ಬಂದಿ ನಿಯೋಜಿಸಲಾಗಿದೆ. ನೀರನ್ನು ಕುಡಿಯಲು ಮಾತ್ರ ಉಪಯೋಗಿಸಬೇಕು ಬಾಟಲಿಗಳಲ್ಲಿ ಮತ್ತು ಇತರೆ ಅನ್ಯ ಕಾರ್ಯಕ್ಕೆ ಬಳಸದೇ ನೀರಿನ ಸದ್ಬಳಕೆ ಮಾಡಿಕೊಳ್ಳಬೇಕೆಂದು ಮನವಿ ಮಾಡಿದರು.



ಬಸ್‌ಗೆ ಕಾದು ಸುಸ್ತಾದ ವಿದ್ಯಾರ್ಥಿಗಳು



ಕೆರೂರ: ಪಟ್ಟಣದಿಂದ ಬಾಗಲಕೋಟೆಗೆ ನಿತ್ಯ ಸಂಚರಿಸುವ ಬಸ್ ಬಾರದ ಕಾರಣ ಹುಬ್ಬಳ್ಳಿ-ಬಾಗಲಕೋಟೆ ಬಸ್‌ಗಾಗಿ ವಿದ್ಯಾರ್ಥಿಗಳು ಕಾದು ಕಾದು ಸುಸ್ತಾಗಿರುವ ಘಟನೆ ಮಂಗಳವಾರ ನಡೆಯಿತು.

ಪಟ್ಟಣದಿಂದ ನಿತ್ಯ 7 ಗಂಟೆಗೆ ಹೊರಡುವ ಬಾಗಲಕೋಟೆ-ಕೆರೂರ ಬಸ್ಸನ್ನು ಏಕಾಏಕಿ ಬಂದ ಮಾಡಿದ್ದರಿಂದ ವಿದ್ಯಾರ್ಥಿಗಳು ಹಾಗೂ ನೌಕರರು ಬಸ್ಸಿಗಾಗಿ ಒಂದು ಗಂಟೆಗೂ ಹೆಚ್ಚು ಕಾಲ ಕಾದು ಕಾದು ಸುಸ್ತಾದರು. ಈಗ ಪರೀಕ್ಷಾ ಸಮಯವಿರುವದರಿಂದ ಬಸ್ ತಡವಾಗಿ ಬಂದಿರುವುದು ವಿದ್ಯಾರ್ಥಿಗಳಿಗೆ ತಲೆನೋಲಾಗಿದೆ,ಒಂದು ದಿನ ಹೀಗಾದರೆ ಸರಿ ನಿತ್ಯ ಹೀಗಾದರೆ ಹೇಗೆ ಎನ್ನುವುದು ವಿದ್ಯಾರ್ಥಿಗಳ ಗೋಳಾಗಿದೆ.

ಕೇವಲ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳ ಪರೀಕ್ಷೆ ಮಾತ್ರ ಮುಗಿದಿದೆ. ಡಿಗ್ರಿ ಕಾಲಜೀನ ವಿದ್ಯಾರ್ಥಿಗಳ ಪರೀಕ್ಷೆ ಪ್ರಾರಂಭವಾಗಿರುವುದಲ್ಲಿ ಬಸ್ ತಡವಾಗಿ ಬಂದರೆ ಸರಿಯಾದ ಸಮಯಕ್ಕೆ ತರಗತಿ ತಲುಪಲು ಆಗುವುದಿಲ್ಲ ಎಂದು ವಿದ್ಯಾರ್ಥಿಗಳು ತಮ್ಮ ಅಳಲನ್ನ ತೊಡಿಕೊಂಡರು. ನಿತ್ಯ ಬೆಳಗ್ಗೆ 7 ಗಂಟೆಗೆ ಹೊರಡುವ ಕೆರೂರ - ಬಾಗಲಕೋಟ ಬಸ್ಸನ್ನು ಪುನಃ ಪ್ರಾರಂಭಿಸಬೇಕು ಎಂದು ವಿದ್ಯಾರ್ಥಿಗಳು ಸಂಬಂದ ಪಟ್ಟ ಅಧಿಕಾರಿಗಳಿಗೆ ಒತ್ತಾಯಿಸಿದರು.

ಕಾಂಗ್ರೆಸ್‌ನಲ್ಲಿ ಅಂಬಿಗೇರ ಸಮಾಜಕ್ಕೆ ಸ್ಥಾನ

ಬಾಗಲಕೋಟೆ: ಅಂಬಿಗರ ಸಮಾಜಕ್ಕೆ ಕಾಂಗ್ರೆಸ್ ಪಕ್ಷ ಸೂಕ್ತ ಸ್ಥಾನಮಾನ ನೀಡಿದ್ದು, ಚುನಾವಣೆಯಲ್ಲಿ ಸಮಾಜ ಬಾಂಧವರು ಕಾಂಗ್ರೆಸ್ ಅಭ್ಯರ್ಥಿ ಬೆಂಬಲಿಸಬೇಕು ಎಂದು ಮಾಜಿ ಶಾಸಕ ಶರಣಪ್ಪ ಸುಣಗಾರ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಬಾಗಲಕೋಟೆ ವಿಧಾನಸಭೆಕ್ಷೇತ್ರದಲ್ಲಿ ನಮ್ಮ ಸಮಾಜದ ಅಂದಾಜು 30 ಸಾವಿರ ಮತದಾರರಿದ್ದಾರೆ. ಈಗಾಗಲೇ ಸಮಾಜದ ಸಾಕಷ್ಟು ಜನಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದಾರೆ. ಸಮಾಜದ ಎಲ್ಲ ಬಂಧುಗಳು ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸಬೇಕು ಎಂದುಕೋರಿದರು.ವಿಧಾನ ಪರಿಷತ್ ಸದಸ್ಯ ತಿಪ್ಪಣ್ಣಪ್ಪ ಕಮಕನೂರ ಮಾತನಾಡಿ,ರಾಜ್ಯ ಸರಕಾರ ಸಮಾಜ ಬಂಧುಗಳ ಅಭಿವೃದ್ಧಿಗೆ ಸಾಕಷ್ಟು ಸಹಕಾರ ನೀಡಿದೆ. ಮುಂದಿನ ದಿನಗಳಲ್ಲಿ ಸಮಾಜದ ಕೋಳಿ, ಕಬ್ಬಲಿಗ, ಬೆಸ್ತ, ಅಂಬಿಗ ಮತ್ತು ಬಾರಿಕ ವರ್ಗದವರನ್ನು ಪರಿಶಿಷ್ಟ ಜನಾಂಗಕ್ಕೆ ಸೇರಿಸುವಂತೆ ಶಿಫಾರಸ್ಸು ಮಾಡುವ ಭರವಸೆ ನೀಡಿದೆ.ಸಮಾಜ ಬಂಧುಗಳನ್ನು ಎಸ್ಟಿಗೆ ಸೇರಿಸಿ ಪ್ರಮಾಣ ಪತ್ರ ನೀಡುವ ಭರವಸೆಯನ್ನು ಸಂಬಂಧಿಸಿದ ಸಚಿವರು ಹಾಗೂ ಪಕ್ಷದ ಮುಖಂಡರು ತಿಳಿಸಿದ್ದಾರೆ.ಸಮಾಜದ ಅಭಿವೃದ್ಧಿಗೆ ಬದ್ಧವಾದ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡುವಂತೆ ಸಮಾಜ ಬಂಧುಗಳಲ್ಲಿ ಕೋರಿದರು. ಕರ್ನಾಟಕರಾಜ್ಯ ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾ ನಾರಾಯಣರಾವ್ ಮಾತನಾಡಿ, ಸಮಾಜದ ಮುಖಂಡರು ಕಾಂಗ್ರೆಸ್ ಬೆಂಬಲಿಸುವುದಾಗಿ ಈಗಾಗಲೇ ಭರವಸೆ ನೀಡಿದ್ದಾರೆ. ಎಲ್ಲರೂ ಕೈ ಅಭ್ಯರ್ಥಿ ಉಮೇಶ ಮೇಟಿ ಅವರ ಗೆಲುವಿಗೆ ಶ್ರಮಿಸೋಣ ಎಂದರು.



ಹೊಸ ದಿಗಂತ
ರಾಷ್ಟ್ರ ಜಾಗೃತಿಯ ಪತ್ರಿಕೆ

ಕಿರುಸುದ್ದಿ

ಸಚಿವ ಎಂಬಿಪಾ ಜಿಲ್ಲಾ ಪ್ರವಾಸ ಇಂದು

ವಿಜಯಪುರ: ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಅವರು ಏ.8ರಂದು ಬುಧವಾರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಅಂದು ಬೆಳಿಗ್ಗೆ 12.30 ಗಂಟೆಗೆ ಜಿಲ್ಲಾ ಪಂಚಾಯತಿ ಕಾರ್ಯಾಲಯ ಆವರಣದಲ್ಲಿ ಪವರ ಗ್ರಿಡ್ ಸಿಎಸ್‌ಆರ್ ಅನುದಾನದ ಆರೋಗ್ಯ ಇಲಾಖೆ ಸಲಕರಣೆಗಳು, ಶಿಕ್ಷಣ ಇಲಾಖೆಗೆ 2500 ಮೆಟಾಲಿಗ್ ವಿತರಿಸಲಿದ್ದಾರೆ. ನಂತರ ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣಕ್ಕೆ ಲೈಟಿಂಗ್ ವ್ಯವಸ್ಥೆ ಅಳವಡಿಕೆ, ಪ್ರವಾಸೋದ್ಯಮ ಇಲಾಖೆ ಎಸ್.ಸಿ.ಪಿ, ಟಿಎಸ್‌ಪಿ ಯೋಜನೆಯಡಿ ಆರು ಫಲಾನುಭವಿಗಳಿಗೆ ಮೊಬೈಲ್ ಕ್ಯಾಂಟೀನ್, ಜಿಲ್ಲಾ ಪಂಚಾಯತಿ ನಿರ್ಬಂಧಿತ ಅನುದಾನದಡಿ ಮೀಸಲಿರಿಸಿದ 33ಲಕ್ಷ ರೂ. ಅನುದಾನದಲ್ಲಿ ವಿಕಲಚೇತನರಿಗಾಗಿ ಸಾಧನ ಸಲಕರಣೆ ಹಾಗೂ ಶಿಕ್ಷಣ ಇಲಾಖೆಯ ಅಗತ್ಯ ಸಾಮಗ್ರಿ ಖರೀದಿ ಅನುದಾನದಡಿ ರೂ. 40 ಲಕ್ಷ ರೂ. ಅನುದಾನದಲ್ಲಿ 20 ಹೈಸ್ಕೂಲ್ ಗಳಿಗೆ ಸ್ಮಾರ್ಟ್ ಕ್ಲಾಸ್ ಉಪಕರಣ ವಿತರಿಸಲಿದ್ದಾರೆ. ನಂತರ ಮಧ್ಯಾಹ್ನ 1.30 ಗಂಟೆಗೆ ಧನರ್ಗಿ ಗ್ರಾಮದಲ್ಲಿ ಅಲ್ಪಸಂಖ್ಯಾತರ ಸಮುದಾಯದ ಶಾದಿಮಹಲ್ ಕಟ್ಟಡ ಉದ್ಘಾಟಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಬೆಂಬಲ ಬೆಲೆಯಡಿ ಕುಸುಬೆ ಖರೀದಿ: ಜಿಲ್ಲಾಧಿಕಾರಿ

ವಿಜಯಪುರ: 2026ನೇ ಸಾಲಿನ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಹಿಂಗಾರು ಹಂಗಾಮಿನ ಎಫ್.ಎ.ಕ್ಯೂ ಗುಣಮಟ್ಟದ ಕುಸುಬೆ ಉತ್ಪನ್ನಕ್ಕೆ ಪ್ರತಿ ಕ್ವಿಂಟಾಲ್‌ಗೆ 6540.ರೂ. ಗಳಂತೆ ಖರೀದಿ ಮಾಡಲಾಗುತ್ತಿದೆ ಎಂದು ಜಿಲ್ಲಾಧಿಕಾರಿಗಳಾದ ಕನಿಷ್ಠ ಬೆಂಬಲ ಬೆಲೆ ಕಾರ್ಯಪಡೆಯ ಸಮಿತಿ ಅಧ್ಯಕ್ಷ ಡಾ.ಆನಂದ.ಕೆ ಅವರು ತಿಳಿಸಿದ್ದಾರೆ. ಕುಸುಬೆ ಉತ್ಪನ್ನವನ್ನು ಪ್ರತಿ ಎಕರೆಗೆ 5 ಕ್ವಿಂಟಲ್‌ನಂತೆ ಪ್ರತಿ ರೈತರಿಂದ ಗರಿಷ್ಠ 20 ಕ್ವಿಂಟಾಲ್ ಖರೀದಿಸಲಾಗುತ್ತದೆ. ನೋಂದಣಿ ಅವಧಿ 80 ದಿನಗಳವರೆಗೆ ಇದೆ. ಖರೀದಿ ಅವಧಿ 90 ದಿನ ಇರುತ್ತದೆ. ನೋಂದಣಿಯೊಂದಿಗೆ ಖರೀದಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುತ್ತದೆ. ತಾಲೂಕಿನ ಕುಸುಬೆ ಖರೀದಿ ಕೇಂದ್ರ: ಬಬಲೇಶ್ವರ ತಾಲೂಕು ಎಣ್ಣೆಬೀಜ ಬೆಳೆಗಾರರ ಸಹಕಾರಿ ಸಂಘ ಬಬಲೇಶ್ವರ, ಸವನಹಳ್ಳಿ, ಬೆಳ್ಳುಳ್ಳಿ, ತಾಜಪುರ, ವಿಜಯಪುರ ಟಿ.ಎ.ಪಿ.ಸಿ.ಎಂ.ಎಸ್ ವಿಜಯಪರ, ಮುದ್ದೇಬಿಹಾಳ ತಾಲೂಕಿನ ಎಣ್ಣೆಬೀಜ ಬೆಳೆಗಾರರ ಸಹಕಾರಿ ಸಂಘ ತಂಗಡಗಿ, ಟಿ.ಎ.ಪಿ.ಸಿ.ಎಂ.ಎಸ್ ಮುದ್ದೇಬಿಹಾಳ, ತಾಳಿಕೋಟೆ, ಇಂಡಿ ತಾಲೂಕಿನ ಎಣ್ಣೆಬೀಜ ಬೆಳೆಗಾರರ ಸಹಕಾರಿ ಸಂಘ ಹಲಸಂಗಿ, ಚಡಚಣ ಹಾಗೂ ಟಿ.ಎ.ಪಿ.ಸಿ.ಎಂ.ಎಸ್ ಇಂಡಿಯಲ್ಲಿ ಖರೀದಿ ಕೇಂದ್ರ ತೆರೆಯಲಾಗಿದೆ ಎಂದವರು ತಿಳಿಸಿದ್ದಾರೆ.

ಲೋಹಾನಿಗೆ ಪಿಎಚ್‌ಡಿ

ವಿಜಯಪುರ: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯವು ಶಿರಿನಸುಲ್ತಾನ ಅಲಿಯಾಸ ಬಾನುಬಿ ಲೋಹಾನಿ ಅವರು ಸಲ್ಲಿಸಿದ್ದ ಎ ಸ್ಟಡಿ ಆನ್ ಮೆಂಟಲ್ ಹೆಲ್ತ್ ಆಫ್ ಮುಸ್ಲಿಂ ವ್ಯೂಮೆನ್ ಕುರಿತು ಸಲ್ಲಿಸಿದ್ದ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ನೀಡಿದೆ. ಶಿರಿನಸುಲ್ತಾನ ಅಲಿಯಾಸ ಬಾನುಬಿ ಲೋಹಾನಿ ಅವರು ಸಮಾಜಕಾರ್ಯ ವಿಭಾಗದ ಡಾ. ರಮೇಶ ಎಂ ಸೋನಕಾಂಬಳೆ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದರು. ಡಾಕ್ಟರೇಟ್ ಪದವಿ ಪಡೆದಿರುವ ಶಿರಿನಸುಲ್ತಾನ ಅಲಿಯಾಸ ಬಾನುಬಿ ಲೋಹಾನಿ ಅವರನ್ನು ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಬಿ.ಎಲ್.ಲಕ್ಕಣ್ಣನವರ ಅಭಿನಂದಿಸಿದ್ದಾರೆ.



ಏ.12ರಂದು ಪೂರ್ವಭಾವಿ ಸಭೆ

ವಿಜಯಪುರ: ಜಿಲ್ಲಾ ಉಪ್ಪಾರ ಸಮಾಜ ಸೇವಾ ಸಂಘದ ನೇತೃತ್ವದಲ್ಲಿ ಏ.12ರಂದು ಭಾನುವಾರ ಭಗೀರಥ ಜಯಂತಿ ಹಿನ್ನೆಲೆ ಉಪ್ಪಾರ ಸಮಾಜದ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದೆ. ನಗರದ ಶಿಕಾರಖಾನೆಯಲ್ಲಿನ ವೆಂಕಟೇಶ್ವರ ದೇವಾಲಯದಲ್ಲಿ ಅಂದು ಬೆಳಗ್ಗೆ 11 ಗಂಟೆಗೆ ಸಭೆ ನಡೆಯಲಿದ್ದು, ಈ ಸಭೆಯಯಲ್ಲಿ ಏ.23ರಂದು ಭಗೀರಥ ಜಯಂತಿ ಆಚರಣೆ ಮಾಡುವ ಕುರಿತು ಚರ್ಚೆ ಮಾಡಲಾಗುತ್ತಿದ್ದು, ಜಿಲ್ಲಾ ಉಪ್ಪಾರ ಸಮಾಜದ ಕುಲಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಸಲಹೆ ಸೂಚನೆ ನೀಡಬೇಕು. ಈ ಸಭೆಯಲ್ಲಿ ಜಿಲ್ಲಾ ಉಪ್ಪಾರ ಸಮಾಜದ ಅಧ್ಯಕ್ಷ ಜಕ್ಕಪ್ಪ ಯಡವೆ, ಯಲ್ಲಪ್ಪ ಬಂಡಿ, ಭೀಮಣ್ಣ ಉಪ್ಪಾರ, ಮುತ್ತಪ್ಪ ಶಿವಣ್ಣವರ, ಕಾರ್ಯದರ್ಶಿ ಸಿದ್ದು ಗೇರಡೆ, ಅನಿಲ ಅವಳಿ, ರಾಜು ಕಸ್ತೂರಿ, ಪುಂಡಲೀಕ ಉಪ್ಪಾರ, ಜೆ.ಎಲ್.ಕಸ್ತೂರಿ (ವಕೀಲರು), ಶ್ರೀನಿವಾಸ ಅಂಬಲಿ ಭಾಗವಹಿಸಲಿದ್ದಾರೆ.



ಇಂಡಿ: ನಗರದ ಆಡಳಿತ ಸೌಧದಲ್ಲಿ ಹಮ್ಮಿಕೊಂಡ ಡಾ.ಅಂಬೇಡ್ಕರ್ 125ನೇ ಜಯಂತಿ ಪೂರ್ವಭಾವಿ ಸಭೆಯು ತಹಶೀಲ್ದಾರ್ ಬಿ.ಎಸ್. ಕಡಕಬಾವಿ ಅಧ್ಯಕ್ಷತೆಯಲ್ಲಿ ನಡೆಯಿತು. ದಲಿತ ಮುಖಂಡರಾದ ವಿನಾಯಕ ಗುಣಸಾಗರ, ಸುರೇಶ ನಡಗಡ್ಡಿ, ಭೀಮಾಶಂಕರ ತಳವಾರ, ನಿಂಗಪ್ಪ ಶರ್ಮಾ, ಬಾಬು ಗುಡಮಿ, ಚಂದ್ರಶೇಖರ ಹೊಸಮನಿ, ಪೀರಪ್ಪ ಕಟ್ಟಿಮನಿ, ಲಕ್ಷ್ಮಿಕಾಂತ ಎಳಗಿ, ಶಿವಾನಂದ ಬಾಗಲಕೋಟ ಸೇರಿದಂತೆ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

ಏ.14ರಂದು ಅಂಬೇಡ್ಕರ್ ಜಯಂತಿ

ಇಂಡಿ: ಪ್ರತಿ ಗ್ರಾಮದ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವಂತಹ ಅಂಬೇಡ್ಕರ್ ವೃತ್ತ ಸ್ವಚ್ಛಗೊಳಿಸಿ ಅಲ್ಲಿನ ವಾತಾವರಣ ಸರಿಯಾಗಿ ನೋಡಿಕೊಳ್ಳುವುದು ಗ್ರಾಮ ಪಂಚಾಯತಿ ಪ್ರಮುಖ ಜವಾಬ್ದಾರಿಯಾಗಿದೆ ತಹಶೀಲ್ದಾರ್ ಬಿ.ಎಸ್.ಕಡಕಬಾವಿ ಸೂಚನೆ ನೀಡಿದರು. ನಗರದ ಆಡಳಿತ ಸೌಧದಲ್ಲಿ ಹಮ್ಮಿಕೊಂಡ ಡಾ.ಅಂಬೇಡ್ಕರ್ 125ನೇ ಜಯಂತಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಎಲ್ಲ ಇಲಾಖೆಯ ಕಚೇರಿಗಳಲ್ಲಿ ಯಾವುದೆ ಜಯಂತಿ, ಆಚರಣೆಗಳಾಗಲಿ ಎಲ್ಲರ ಸಮ್ಮುಖದಲ್ಲಿ, ಎಲ್ಲರಿಗೆ ಕಾಣುವಂತೆ ಆಚರಣೆ ಮಾಡಬೇಕು. ಎಲ್ಲ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಆಚರಣೆ ಮಾಡಬೇಕು. ಯಾವುದೆ ತರಹದ ಅಹಿತಕರ ಘಟನೆಗಳು ಆಗದಂತೆ ಪೊಲೀಸ್ ಇಲಾಖೆ ನೋಡಿಕೊಳ್ಳಬೇಕು ಎಂದರು. ಭಾರತ ರತ್ನ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಏ.14ರಂದು ಆಚರಣೆ ಮಾಡುವುದು. ಎಲ್ಲಾ ತಾಲೂಕು ಮಟ್ಟದ ಅಧಿಕಾರಿಗಳು ಕಚೇರಿಯಲ್ಲಿ ಆಚರಣೆ ಮಾಡಿ 9ಗಂಟೆಗೆ ತಹಶೀಲ್ದಾರ್ ಕಚೇರಿಯಲ್ಲಿ ಪೂಜಾ ಕಾರ್ಯಕ್ರಮ ನಂತರ 9.30ಕ್ಕೆ ಪ್ರವಾಸಿ ಮಂದಿರದಿಂದ ಭಾವಚಿತ್ರದ ಮೆರವಣಿಗೆಯಲ್ಲಿ ಕಲಾತಂಡ ತಂಡಗಳಿಂದ ಆಮಂತ್ರಿಸುವುದು. ಹಾಗೆ ಆಮಂತ್ರಣ ಪತ್ರಿಕೆ ಮುದ್ರಿಸುವುದು ಪರಿಶಿಷ್ಟ ಜಾತಿಯ ತಾಲೂಕಿನ ಅತಿ ಹೆಚ್ಚು ಅಂಕ ಪಡೆದ ಪಿಯುಸಿ ವಿದ್ಯಾರ್ಥಿಗಳಿಗೆ, ಕಾರ್ಯಕ್ರಮ ಪರಿಶಿಷ್ಟ ಜಾತಿಯ ಉನ್ನತ ಹುದ್ದೆ ಪಡೆದ ಸಾಧಕರಿಗೆ ಸನ್ಮಾನ ಮಾಡಲಾಗುವುದು ಎಂದರು.



ಬಸವನಬಾಗೇವಾಡಿ: ಬಸವನಬಾಗೇವಾಡಿಯಿಂದ ಬಸವ ಜ್ಯೋತಿ ಜನಜಾಗೃತಿ ಸೈಕಲ್ ಯಾತ್ರೆಗೆ ಚಾಲನೆ ದೊರಕಿದ್ದು ಮಹಾರಾಷ್ಟ್ರದ ಸೋಲಾಪುರ ಜಿಲ್ಲೆಯ ಮಂಗಳವೇಡೆಯಲ್ಲಿ ಬಸವ ಸ್ಮಾರಕ ನಿರ್ಮಾಣವಾಗಬೇಕೆಂದು ಸಂಕಲ್ಪಿಸಿರುವ ಈ ಯಾತ್ರೆ, ಹೊರಟು ಮುಂಜಾನೆ ಮನಗೂಳಿ ಪಟ್ಟಣ ತಲುಪಿತು. ಬಸವಾಭಿಮಾನಿ ಮುಖಂಡ ಸೋಮನಗೌಡ (ಅಪ್ಪುಗೌಡ) ಪಾಟೀಲ ಯಾತ್ರೆಗೆ ಸ್ವಾಗತಿಸಿ ಬೀಳ್ಕೊಟ್ಟರು. ಡಾ.ಮಹಾಂತೇಶ ಜಾಲಗೇರಿ, ಮಂಗಳವೇಡೆಯ ಸತೀಶ, ದತ್ತು, ಬಾಬು ಯಾದವಾಡ, ಮಹಾಂತೇಶ ಬೀಳೂರ, ಸಂಗಪ್ಪ ಹುಣಶಿಕಟ್ಟಿ, ರಾಮಗೊಂಡ ಹಿಪ್ಪರಗಿ, ಬಸಪ್ಪ ದಡ್ಡಿ, ನಿಂಗನಗೌಡ ಬಿರಾದಾರ ಇದ್ದರು.

ಆಲಮಟ್ಟಿ, ನಾರಾಯಣಪುರ ಜಲಾಶಯಕ್ಕೆ ನೀರು ಪೂರೈಸುವ ಯೋಜನೆ

ಜಲಧಾರೆ ಯೋಜನೆ ಶೀಘ್ರ ಪೂರ್ಣಗೊಳಿಸಿ

ವಿಜಯಪುರ: ಜಲಧಾರೆ ಯೋಜನೆ ಅನುಷ್ಠಾನದಲ್ಲಿ ವಿಳಂಬ ಸಲ್ಲದು. ಬೇರೆ ಬೇರೆ ಇಲಾಖೆಯ ಅಧಿಕಾರಿಗಳು ಸಮನ್ವಯತೆಯಿಂದ ಕೆಲಸ ಮಾಡುವ ಮೂಲಕ ಯೋಜನೆ ಪೂರ್ಣಗೊಳಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಆನಂದ ಕೆ. ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಜಲಧಾರೆ ಯೋಜನೆ ಕುರಿತು ನಡೆದ ಸಭೆಯಲ್ಲಿ ಅವರು ಮಾತನಾಡಿದರು. ಆಲಮಟ್ಟಿ ಹಾಗೂ ನಾರಾಯಣಪುರ ಹಿನ್ನೀರಿನ ಮೂಲಕ ನೀರು ಪೂರೈಸುವ ಮಹತ್ವಾಕಾಂಕ್ಷೆಯ ಈ ಯೋಜನೆ ನಮ್ಮ ಜಿಲ್ಲೆಗೆ ವರದಾನವಾಗಿದೆ. ಯೋಜನೆ ಅನುಷ್ಠಾನದಲ್ಲಿ ವಿಳಂಬ ಸಲ್ಲದು. ಈ ಯೋಜನೆ ಅನುಷ್ಠಾನ ಪ್ರಕ್ರಿಯೆಯಲ್ಲಿ ವಿಳಂಬವಾಗಿದ್ದು, ಅಧಿಕಾರಿಗಳು ಯುದ್ಧೋಪಾದಿಯಲ್ಲಿ ಯೋಜನೆ ಪೂರ್ಣಗೊಳಿಸಬೇಕು ಎಂದರು. ಯೋಜನೆ ಅನುಷ್ಠಾನಕ್ಕೆ ಅನುದಾನದ ಕೊರತೆ ಇಲ್ಲ, ಸಮಸ್ಯೆ ಎಲ್ಲಿದೆ ಗುರುತಿಸಿ, ಜಾಗ ಗುರುತಿಸುವಿಕೆ ಪೈಪ್‌ಲೈನ್ ಅಳವಡಿಸಲು ಅಧಿಕಾರಿಗಳು ಸಮನ್ವಯತೆಯಿಂದ ಕೆಲಸ ಮಾಡಬೇಕು ಎಂದರು.

44 ಸೈಟಿನಲ್ಲಿ ಯಾವುದೇ ಸಮಸ್ಯೆ ತಲೆದೋರದಂತೆ ಎಲ್ಲರೂ ನೋಡಿಕೊಳ್ಳಬೇಕು. ಎಲ್ಲ ಇಲಾಖೆಯವರ ಸಮನ್ವಯ ಅತ್ಯಂತ ಮುಖ್ಯವಾಗಿದೆ ಎಂದು ಜಿಲ್ಲಾಧಿಕಾರಿಗಳು ಪುನರ್ ಉಚ್ಚರಿಸಿದರು.

ಅರಣ್ಯ ಭೂಮಿ ಸಮಸ್ಯೆ ನಿವಾರಿಸಿಕೊಂಡು ಕಾಮಗಾರಿಗೆ ವೇಗದ ಸ್ಪರ್ಶ ನೀಡಿ, ತಕ್ಷಣ ಯೋಜನೆ ಹಸ್ತಾಂತರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಡಿಎಫ್ಒ ಅವರು ಎರಡು ಪ್ರಸ್ತಾವನೆ ಸರ್ಕಾರಕ್ಕೆ ಕಳಿಸಿದ್ದು, 4ಕಿ.ಮೀ ಅರಣ್ಯ ಇಲಾಖೆಯ ಸಮಸ್ಯೆಯನ್ನು ಅರಣ್ಯ ಇಲಾಖೆಯವರು ಬಗೆಹರಿಸಿಕೊಳ್ಳಬೇಕು ಎಂದರು.



ಈ ಸಭೆ ಕರೆದಿರುವ ಉದ್ದೇಶ ಎಲ್ಲ ತಾಲೂಕು ಇಒ, ತಹಶೀಲ್ದಾರರು, ಸಂಬಂಧಿಸಿದ ಇಲಾಖೆಯ ಅಧಿಕಾರಿಗಳನ್ನೆಲ್ಲಾ ಒಟ್ಟಾಗಿ ನಿಗದಿತ ಯೋಜನೆ ಅನುಷ್ಠಾನಕ್ಕೆ ಚುರುಕಾಗಿ ಕೆಲಸ ಮಾಡಿ ಯೋಜನೆ ಮುಗಿಸಿಕೊಡಬೇಕು ಎಂದರು.

ಯಾವ ತಾಲೂಕಿನಲ್ಲಿ ಯಾವ ಹಳ್ಳಿಯಲ್ಲಿ ಸಮಸ್ಯೆ ಇದೆ ಎಂಬುದನ್ನು ಗುರುತಿಸಿಕೊಂಡು ಅಧಿಕಾರಿಗಳು ಗಮನಹರಿಸಬೇಕು. ಆಗಾಗ ಮೈಕ್ರೋ ಸಭೆ ನಡೆಸಿ ಪರಿಹರಿಸಬೇಕು. ಸಮಸ್ಯೆ ಪೂರ್ಣಗೊಳ್ಳುವವರೆಗೆ ತೊಡಗಿಸಿಕೊಳ್ಳಬೇಕು. ಎಲ್ಲೆಲ್ಲಿ ಸಮಸ್ಯೆ ಇದೆ. ಅಲ್ಲಿ ಖುದ್ದು ಸ್ಥಳಕ್ಕೆ ಧಾವಿಸಿ, ಸಮಸ್ಯೆ ಪರಿಹರಿಸಬೇಕು ಎಂದು ಸೂಚಿಸಿದರು.

ಜಲಧಾರೆ ಯೋಜನೆಯ ಹಂತ.1ರ ಕಾಮಗಾರಿ ಬಹುಮುಖ್ಯವಾಗಿದೆ. ಈ ಯೋಜನೆ ಬೇಗ ಪೂರ್ಣಗೊಳಿಸಲು ಸೂಚಿಸಿದರು. ಈ ಕಾಮಗಾರಿಗೆ ಸಂಬಂಧಿಸಿದಂತೆ ವಿದ್ಯುತ್ ಸಮಸ್ಯೆಯನ್ನು ಹೆಸ್ಕಾಂ ಅಧಿಕಾರಿಗಳು ತಕ್ಷಣ ಬಗೆಹರಿಸಬೇಕು.

ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಿಷಿ ಆನಂದ ಮಾತನಾಡಿ, ಗ್ರಾಮದ ಒಎಚ್‌ಟಿ ನೀರಿನ ಟ್ಯಾಂಕ್ ಇದ್ದಲ್ಲಿ ಗ್ರಾಪಂ ವ್ಯಾಪ್ತಿಯ ಅಧಿಕಾರಿಗಳು ಹಾಗೂ ಇಒಗಳು ಒಎಸ್‌ಟಿ ಲ್ಯಾಂಡ್ ಸಮಸ್ಯೆಯನ್ನು ಮುಂಬರುವ ಸಭೆಯೊಳಗಾಗಿ ಪೂರ್ಣಗೊಳಿಸಬೇಕು ಎಂದರು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಲ್ಲಿನ ಈ ಯೋಜನೆಗೆ ಸಂಬಂಧಿಸಿದ ಸಮಸ್ಯೆ ಬಗೆಹರಿಸಿಕೊಳ್ಳಬೇಕು. ಈ ಯೋಜನೆ ಸ್ಥಳೀಯ ಸಂಸ್ಥೆಯ ವ್ಯಾಪ್ತಿಗೂ ಇಳಪಡಲಿದ್ದು, ಅಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಸ್ಥಳೀಯ ಮಟ್ಟದಲ್ಲಿ ನಿವಾರಿಸಿಕೊಡಲು ಅಧಿಕಾರಿಗಳು ಗಮನಹರಿಸಬೇಕು ಎಂದರು.

ಎಡಿಸಿ ಡಾ.ಔದ್ರಾಮ, ವಿಜಯಪುರ ಉಪವಿಭಾಗಾಧಿಕಾರಿ ಗುರುನಾಥ ದಡ್ಡೆ ಇದ್ದರು.

ಸಮಸ್ಯೆ ಪರಿಹಾರವಾಗಲಿ

ವಿಜಯಪುರದಲ್ಲಿ ಸೈಟ್ ಸಮಸ್ಯೆ ಅಧಿಕಾರಿಗಳು ಮುತುವರ್ಜಿ ವಹಿಸಬೇಕು. ಸಮಸ್ಯೆ ಪರಿಹಾರವಾಗಬೇಕು. ಇದು ಅವರ ಕೆಲಸ ಅಂತ ನಿರ್ಲಕ್ಷ್ಯ ವಹಿಸಬಾರದು. ನೀವು ಆಸಕ್ತಿ ವಹಿಸಿ, ಯೋಜನೆ ಅನುಷ್ಠಾನದತ್ತ ಗಮನಹರಿಸಬೇಕು ಎಂದರು. ಗ್ರಾಮೀಣ ಜನರಿಗೋಸ್ಕರ ಇರುವ ಈ ಯೋಜನೆ ಶುದ್ಧ ಕುಡಿಯುವ ನೀರು ಪೂರೈಸುವುದಾಗಿದೆ. ಹಾಗಾಗಿ ಎಲ್ಲರೂ ಆಸಕ್ತಿ ವಹಿಸಿ ಯುದ್ಧೋಪಾದಿಯಲ್ಲಿ ಕೆಲಸ ಮಾಡಬೇಕು ಎಂದರು. ಆರ್‌ಡಬ್ಲ್ಯೂಎಸ್ ಅಭಿಯಂತರರು ಸಭೆ ಕರೆದು ಚರ್ಚಿಸಿ, ಸಮಸ್ಯೆಗಳನ್ನು ಸಿಇಒ ಅವರ ಗಮನಕ್ಕೆ ತಂದು ಎಲ್ಲೆಲ್ಲಿ ಸೈಟ್ ಸಮಸ್ಯೆ ಇದೆ ಎಂಬುದನ್ನು ಸಿಇಒ ಗಮನಕ್ಕೆ ತರಬೇಕು.

ಕಲ್ಯಾಣದೇಶ್ವರ ಜಾತ್ರೆ ಯಶಸ್ಸಿಗೆ ಶ್ರಮಿಸಿ

ಸಿಂದಗಿ: ಸಂಪ್ರದಾಯ ಮತ್ತು ಶಿಸ್ತು ಪಾಲನೆಯೊಂದಿಗೆ ಕಾರ್ಯಕ್ರಮಗಳು ನಡೆಯಬೇಕು. ಭಕ್ತರೆಲ್ಲರು ಜಾತ್ರೆಯ ಯಶಸ್ಸಿಗೆ ಶ್ರಮಿಸಬೇಕು ಎಂದು ಶ್ರೀಮಠದ ಒಡೆಯ ಕಲ್ಯಾಣದಯ್ಯ ವೀರಘಂಟಯ್ಯ ಗದ್ದುಗೆಮಠ ಸ್ವಾಮೀಜಿ ಹೇಳಿದರು.

ತಾಲೂಕಿನ ಸುಕ್ಷೇತ್ರ ಹೊನ್ನಳ್ಳಿ-ಬ್ರಹ್ಮದೇವನಮಡು ಗ್ರಾಮದ ಕಲ್ಯಾಣದೇಶ್ವರ ಮಠದ ಆವರಣದಲ್ಲಿ ಕಲ್ಯಾಣದೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ಹಮ್ಮಿಕೊಂಡ ಪೂರ್ವಭಾವಿ ಸಭೆ ಸಾನ್ನಿಧ್ಯ ವಹಿಸಿ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಗ್ರಾಮಸ್ಥರು ಹಾಗೂ ಭಕ್ತರು ಪರಸ್ಪರ ಸಹಕಾರದಿಂದ ಕಾರ್ಯನಿರ್ವಹಿಸಬೇಕು ಎಂದರು.

ಏ.9ರಿಂದ 19ರವರೆಗೆ ಪ್ರತಿದಿನ 7:30ಕ್ಕೆ ಜೀವನ ದರ್ಶನ ಪ್ರವಚನ ಕಾರ್ಯಕ್ರಮ ಪ್ರಾರಂಭಗೊಳ್ಳಲಿದೆ. ಮಸೂತಿಯ ಪ್ರವಚನಕಾರ ಡಾ.ಶಿವಲಿಂಗಯ್ಯ ಶರಣರು ಪುರಾಣಿಕಮಠ ಪ್ರವಚನ ನೀಡಲಿದ್ದಾರೆ. ಚೇರಟಗಿಯ ಶಿವಯ್ಯಸ್ವಾಮಿ ಸಂಗೀತ ಸೇವೆಗೆ ಸೋಮಶೇಖರ ಮುದ್ನೂರ ತಬಲ್‌ಸಾಥ್ ನೀಡುವರು. ಏ.14ರಂದು ಗ್ರಾಮದೇವಿಗೆ ಹಾಗೂ ಮುತ್ತೈದೆಯರ ಉಡಿತುಂಬುವ ' ಕಾರ್ಯಕ್ರಮ ನಡೆಯಲಿದೆ. ಏ.19ರಂದು ಬೆಳಗ್ಗೆ 10ಗಂಟೆಗೆ ರಕ್ತದಾನ ಶಿಬಿರ ಹಾಗೂ ಉಚಿತ ಆರೋಗ್ಯ ತಪಾಸಣೆ ಕಾರ್ಯಕ್ರಮ ನಡೆಯಲಿದೆ. ಏ.19ರಂದು ರಾತ್ರಿ 8ಗಂಟೆಗೆ ಧರ್ಮಸಭೆ, ಪ್ರವಚನ ಮಂಗಲ ಕಾರ್ಯಕ್ರಮ ನಡೆಯಲಿದೆ. ಏ.20ರಂದು ಬೆಳಗ್ಗೆ ಲಿಂಗೈಕ್ಯ ಶ್ರೀಗಳ ಕತ್ರ ಗದ್ದುಗೆಗೆ ಮಹಾರುದ್ರಾಭಿಷೇಕ, ಸಂಜೆ 6ಗಂಟೆಗೆ ಕಲ್ಯಾಣದೇಶ್ವರ ಮಹಾರಥೋತ್ಸವ ಜರುಗಲಿದೆ.

ಚನ್ನಮಲ್ಲಯ್ಯ ಹಿರೇಮಠ, ಬಿ.ವೈ. ಅಮರಗೋಳ, ಗುರುಲಿಂಗಪ್ಪ ಸಜ್ಜನ, ಬಸವರಾಜ ಮಾನಶೇಟ್ಟಿ, ಮಲ್ಲಪ್ಪ ಮನಗೂಳಿ, ಸಿದ್ದನಗೌಡ ಪಾಟೀಲ, ಡಿ.ಬಿ.ಸೀತನೂರ, ಬಸವರಾಜ ಕಾಟಿ, ಗುರಣ್ಣ ಖ್ಯಾಡ, ಸೋಮಣ್ಣ ಕೊಡಂಗಲ್, ಬಸಲಿಂಗಪ್ಪಗೌಡ ಪಾಟೀಲ, ಗುರುಸಿದ್ದಪ್ಪ ಮನಗೂಳಿ, ಪತ್ರಕರ್ತ ಮಲ್ಲು ಕೆಂಭಾವಿ, ದೇವಿಂದ್ರ ಮನಗೂಳಿ, ಯಮುನಪ್ಪ ಅಮರಗೋಳ, ಮಡಿವಾಳಪ್ಪ ಕರಿಕಲ್ಲ್, ಲಾಲಸಾ ರಾಜಾಕೋಳ, ದವಲಸಾಬ ಹುಣಶ್ಯಾಳ, ಅಮಿನಸಾಬ ಹೊಸಮನಿ, ನಿಂಗನಗೌಡ ಪಾಟೀಲ, ಬಸವರಾಜ ಅಮರಗೋಳ, ಬಸವರಾಜ ಕೋರವಾರ, ಶರಣು ಮನಗೂಳಿ, ಬಾಲಚಂದ್ರ ಕರಿಕಲ್ಲ್, ಈರಣ್ಣ ಕಡಕೋಳ, ಗೊಲ್ಲಾಳಪ್ಪ ಯಂಟಮಾನ, ಲಾಲಸಾಬ ಸೀತನೂರ, ರವಿ ಕೆಂಭಾವಿ ಸೇರಿದಂತೆ ಭಕ್ತರು ಇದ್ದರು.



ರಾಷ್ಟ್ರಾಭಿಮಾನ ಉಸಿರಾಗಿಸಿಕೊಂಡ ಬಿಜೆಪಿ

ವಿಜಯಪುರ: ನಗರದ ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಭಾರತೀಯ ಜನತಾ ಪಕ್ಷದ ಸಂಸ್ಥಾಪನಾ ದಿನಾಚರಣೆ ಆಚರಿಸಲಾಯಿತು. ಭಾರತಮಾತೆ ಹಾಗೂ ಪಕ್ಷದ ಸಂಸ್ಥಾಪನೆ ಮಾಡಿದ ಮಹನೀಯರ ಭಾವಚಿತ್ರಗಳಿಗೆ ಪುಷ್ಪಾಂಜಲಿ ಸಲ್ಲಿಸಲಾಯಿತು.

ಸಂಸದ ರಮೇಶ ಜಿಗಜಿಣಗಿ ಮಾತನಾಡಿ, ರಾಷ್ಟ್ರಾಭಿಮಾನವನ್ನೇ ಉಸಿರಾಗಿಸಿಕೊಂಡಿರುವ ಬಿಜೆಪಿ ಇಂದು ವಿಶ್ವದಲ್ಲಿಯೇ ಅತ್ಯಂತ ದೊಡ್ಡ ರಾಜಕೀಯ ಪಕ್ಷವಾಗಿದೆ, ಶ್ಯಾಂ ಪ್ರಸಾದ್ ಮುಖರ್ಜಿ, ಪಂ.ದೀನದಯಾಳ ಉಪಾಧ್ಯಾಯ ಅವರಂತಹ ಶ್ರೇಷ್ಠ ಚಿಂತನೆಯ ಸ್ವರೂಪದಲ್ಲಿ ಉದಯಿಸಿದ ಬಿಜೆಪಿ ಇಂದಿಗೂ ಜನ ಸೇವೆ ಉಸಿರಾಗಿಸಿಕೊಂಡಿದೆ. ಬಿಜೆಪಿಯ ದೇಶನಿಷ್ಠೆಯ ಫಲವಾಗಿಯೇ ಇಂದು ಎಲ್ಲ ರಾಜ್ಯಗಳಲ್ಲಿ ಬಿಜೆಪಿ ಅರಳಿದೆ, ಉತ್ತಮ ಆಡಳಿತ ನೀಡುವ ಮೂಲಕ ಕೇಂದ್ರದ ಬಿಜೆಪಿ ಸರ್ಕಾರ ವಿಶ್ವದಲ್ಲಿಯೇ ದೊಡ್ಡ ಹೆಸರು ಮಾಡಿದೆ ಎಂದರು.

ಬಿಜೆಪಿ ಪಕ್ಷ ನಮ್ಮ ಉಸಿರು, ಕಾರ್ಯಕರ್ತರು ನಮ್ಮ ಆಸ್ತಿ, ಈ ಪವಿತ್ರ ಪಕ್ಷದಲ್ಲಿರುವ ಅವಕಾಶ ನನಗೆ ಒದಗಿ ಬಂದಿರುವುದು ನನ್ನ ಪೂರ್ವಜನ್ಮದ ಪುಣ್ಯ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ ಮಾತನಾಡಿ, ಭಾರತೀಯ ಸಂಸ್ಕೃತಿ, ಅದಮ್ಯ ದೇಶಭಕ್ತಿ, ದೇಶಕ್ಕಾಗಿ ಸಮರ್ಪಣಾ ಮನೋಭಾವ, ಸ್ವದೇಶಿ, ಸ್ವಾಭಿಮಾನ, ಆತ್ಮ ನಿರ್ಭರ ಈ ಎಲ್ಲ ತತ್ವಗಳು ಬಿಜೆಪಿಯ ಆಧಾರ ಸ್ತಂಭಗಳಾಗಿವೆ, ಉಳಿದ ರಾಜಕೀಯ ಪಕ್ಷಗಳಂತೆ ಬಿಜೆಪಿ ಅಲ್ಲ, ಬಿಜೆಪಿ ಜನ ಹಿತ, ರಾಷ್ಟ್ರ ಹಿತವೇ ಆದ್ಯ. ಬಿಜೆಪಿ ಪಕ್ಷ ಇಂದು ವಿಶ್ವದಲ್ಲಿಯೇ ಅತ್ಯಂತ ಹೆಚ್ಚು ಸದಸ್ಯರನ್ನು ಹೊಂದಿರುವುದೇ ಬಿಜೆಪಿಯ ಬದ್ಧತೆಯ ಒಂದು ಸಾಕ್ಷಿ ಎಂದರು.

ಬಿಜೆಪಿ ಮುಖಂಡ ಚಂದ್ರಶೇಖರ ಕವಟಗಿ ಮಾತನಾಡಿದರು. ವಿಜುಗೌಡ ಪಾಟೀಲ, ಸಂಜೀವ ಐಹೊಳೆ, ವಿವೇಕಾನಂದ ಡಬ್ಬಿ, ವಿಜಯಕುಮಾರ ಕೊಡಗಿನೂರ, ಸಂಜಯ ಪಾಟೀಲ ಕನಮಡಿ, ಮಳುಗೌಡ ಪಾಟೀಲ, ಈರಣ್ಣ ರಾವೂರ, ಮಹೇಂದ್ರಕುಮಾರ ನಾಯಕ, ಎಸ್.ಎ.ಪಾಟೀಲ, ಬಸವರಾಜ ಬೈಚಬಾಳ, ಉಮೇಶ ಕೊಳಕೂರ, ರಮೇಶ ಬಿದನೂರ, ಮಲ್ಲಿಕಾರ್ಜುನ ಜೋಗೂರ, ಸ್ವಪ್ನಾ ಕಣಮುಚನಾಳ, ಮಲ್ಲು ಕಲಾದಗಿ, ಸಂದೀಪ ಪಾಟೀಲ, ಸಿದ್ದನಗೌಡ ಬಿರಾದಾರ, ವಿಜಯ ಜೋಶಿ, ಹರ್ಷಗೌಡ ಪಾಟೀಲ, ಪಾಪುಸಿಂಗ ರಜಪೂತ, ಭರತ ಕೋಳಿ, ಶರಣಬಸಪ್ಪ ಕುಂಬಾರ, ವಿನಾಯಕ ದಹಿಂಡೆ, ಅಪ್ಪು ಕುಂಬಾರ, ವಿಕಾಸ ಪದಕಿ, ಮಹಾದೇವ ದರ್ಗಾ, ಕಲ್ಮೇಶ ಹಿರೇಮಠ, ವಾರೀಶ ಕುಲಕರ್ಣಿ ಇದ್ದರು.



ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕ್ರಮ ವಹಿಸಿ: ಶಾಸಕ ರಾಜುಗೌಡ

ದೇವರಹಿಪ್ಪರಗಿ: ಬೇಸಿಗೆ ಆರಂಭವಾಗಿರುವ ಹಿನ್ನೆಲೆ ಎಲ್ಲ ಗ್ರಾಮಗಳಲ್ಲಿ ಸಮರ್ಪಕವಾಗಿ ಕುಡಿಯುವ ನೀರು ಪೂರೈಕೆ ಮಾಡಬೇಕು. ಸಮರ್ಪಕವಾಗಿ ನೀರು ಹರಿಸದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ರಾಜುಗೌಡ ಪಾಟೀಲ ಕುದರಿಸಾಲವಾಡಗಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಶಾಸಕ ರಾಜುಗೌಡ ಪಾಟೀಲ ಕುದರಿಸಾಲವಾಡಗಿ ಅಧ್ಯಕ್ಷತೆಯಲ್ಲಿ ಮತಕ್ಷೇತ್ರದ ತಾಲೂಕು ಆಡಳಿತ, ಪಂಚಾಯತಿಗಳ ಅಭಿವೃದ್ಧಿ ಅಧಿಕಾರಿಗಳ, ಆಡಳಿತ ಅಧಿಕಾರಿಗಳ ಟಾಸ್ಕ್‌ಫೋರ್ಸ್ ಸಮಿತಿಯ ಸಭೆ ನಡೆಸಿ ಮಾತನಾಡಿದ ಅವರು, ಈಗಾಗಲೇ ಬೇಸಿಗೆ ಕಾಲ ಆರಂಭವಾಗಿದೆ. ಗ್ರಾಮ ಪಂಚಾಯಿತಿಗಳಲ್ಲಿ ಆಡಳಿತದ ಅವಧಿ ಮುಗಿದಿದೆ. ಆಡಳಿತಾಧಿಕಾರಿಗಳು ಮತ್ತು ಪಂಚಾಯತಿ ಅಧಿಕಾರಿಗಳು ಸೇರಿ ಕುಡಿಯುವ ನೀರಿನ ಜೊತೆಗೆ ಗ್ರಾಮೀಣ ಪ್ರದೇಶದ ಜನರಿಗೆ ಅಗತ್ಯ ಸೌಲಭ್ಯ ಕಲ್ಪಿಸಬೇಕು. ತಾಲೂಕಿನ ಕೆಲ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಶೀಘ್ರವೇ ಶಾಶ್ವತ ಪರಿಹಾರ ಕಲ್ಪಿಸಬೇಕು. ಕೊಳವೆಬಾವಿ ದುರಸ್ತಿ ಮಾಡಿಸಬೇಕು. ಕೊಳವೆಬಾವಿಗಳಿಂದ ತಾತ್ಕಾಲಿಕವಾಗಿ ಕುಡಿಯುವ ನೀರು ಸರಬರಾಜು ಮಾಡಬೇಕು. ಗ್ರಾಮಗಳಲ್ಲಿನ ತೊಟ್ಟಿಗಳಲ್ಲಿ ನೀರು ಸಂಗ್ರಹಿಸಬೇಕು ಎಂದು ಸೂಚಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಮತಕ್ಷೇತ್ರದ ಅಧಿಕಾರಿಗಳ ಟಾಸ್ಕ್ ಫೋರ್ಸ್ ಸಮಿತಿಯ ಸಭೆ ನಡೆದ ಸಂದರ್ಭದಲ್ಲಿ ಸುಮಾರು 10ಕ್ಕೂ ಹೆಚ್ಚು ಸಲ ವಿದ್ಯುತ್ ಕಣ್ಣು ಮುಚ್ಚಾಲೆ ಆಟದಿಂದ ಬೆಳಕು ಗಾಳಿ ಇಲ್ಲದೆ ಎಲ್ಲರೂ ಪರದಾಡವಂತಾಗಿತ್ತು. ಈ ಕುರಿತು ಹೆಸ್ಕಾಂ ಅಧಿಕಾರಿ ಉಮೇಶ ಪಟ್ಟಣ ಅವರನ್ನು ಶಾಸಕರು ತರಾಟೆಗೆ ತೆಗೆದುಕೊಂಡ ಘಟನೆ ನಡೆಯಿತು.

ತಹಶೀಲ್ದಾರ್ ನಿಂಗಪ್ಪ ಬಿರಾದಾರ, ತಾಪಂ ಇಒ ಭಾರತಿ ಚಲುವಯ್ಯ, ಪಪಂ ಮುಖ್ಯಾಧಿಕಾರಿ ಅಪ್ರೋಜ ಅಹಮದ ಪಟೇಲ, ಬಾಗೇವಾಡಿ ತಹಶೀಲ್ದಾರ್ ಎ.ಡಿ.ಅಮರವಾಡಗಿ, ತಾಳಿಕೋಟಿ ತಹಶೀಲ್ದಾರ್ ವಿನಯಾ ಹೂಗಾರ, ಬಾಗೇವಾಡಿ ಇಒ ವೆಂಕಟೇಶ ವಂದಾಲ, ತಾಳಿಕೋಟೆ ಇಒ ಅನಸುಯ ಚಲವಾದಿ, ಎಇಇ ಅರುಣಕುಮಾರ ವಡಗೇರಿ, ಕೃಷಿ ಇಲಾಖೆ ಅಧಿಕಾರಿ ಶರಣಗೌಡ ಬಿರಾದಾರ, ಕುಡಿಯುವ ನೀರು ನೈರ್ಮಲ್ಯ ಇಲಾಖೆಯ ಎಇಇ ತಾರಾನಾಥ ರಾಠೋಡ ಸೇರಿದಂತೆ ಅಧಿಕಾರಿಗಳು ಇದ್ದರು.



42ನೇ ದಿನಕ್ಕೆ ಮುಂದುವರಿದ ತಾಳಿಕೋಟೆ ಧರಣಿ: ಸಚಿವರ ಮೌನಕ್ಕೆ ಆಕ್ರೋಶ

ತಾಳಿಕೋಟೆ: ತಾಲೂಕಿನ ಮೈಲೇಶ್ವರ ಗ್ರಾಮದ ಸಮೀಪ ಪ್ರಜಾಸೌಧ ನಿರ್ಮಾಣಕ್ಕೆ ಗುರುತಿಸಲಾದ ಸ್ಥಳದ ವಿರುದ್ಧ ಹಾಗೂ ಪಟ್ಟಣದ ವ್ಯಾಪ್ತಿಯಲ್ಲಿಯೇ ಕಟ್ಟಡ ನಿರ್ಮಿಸಬೇಕೆಂದು ಆಗ್ರಹಿಸಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಮಂಗಳವಾರ 42ನೇ ದಿನಕ್ಕೆ ಕಾಲಿಟ್ಟಿದ್ದು, ಹೋರಾಟ ದಿನದಿಂದ ದಿನಕ್ಕೆ ಮತ್ತಷ್ಟು ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದ್ದು, ಗಡಿಸೋಮನಾಳ ಗ್ರಾಮದ ನೂರಾರು ಗ್ರಾಮಸ್ಥರು, ಹಿರಿಯರು, ಯುವಕರು ಹೋರಾಟಕ್ಕೆ ಬಲ ತುಂಬಿದರು.

ಮುಖಂಡ ನಿಂಗನಗೌಡ ಬಿರಾದಾರ ಮತ್ತು ಚಂದ್ರಶೇಖರ ದುಳೆಕಾರ ಮಾತನಾಡಿ, ಪ್ರಜಾಸೌಧವು ಜನಸೇವೆಗಾಗಿ ನಿರ್ಮಾಣವಾಗಬೇಕೇ ಹೊರತು ಜನರಿಂದ ದೂರವಿರುವ ನಿರ್ಜನ ಪ್ರದೇಶದಲ್ಲಿ ಅಲ್ಲ, ಪ್ರಸ್ತುತ ಆಯ್ಕೆ ಮಾಡಿದ ಜಾಗವು ಪಟ್ಟಣದಿಂದ ದೂರವಿದ್ದು, ಸುರಕ್ಷತೆ ಮತ್ತು ಪ್ರವೇಶದ ಸಮಸ್ಯೆ ಉಂಟಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಸಚಿವರು ಕೇವಲ ಒಂದು ಕ್ಷೇತ್ರಕ್ಕೆ ಮಾತ್ರ ಸೀಮಿತವಲ್ಲ, ಇಡೀ ಜಿಲ್ಲೆಯ ಹೊಣೆಗಾರರು. 42 ದಿನಗಳಿಂದ ಜನರು ಬಿಸಿಲು-ಮಳೆ ಎನ್ನದೆ ರಸ್ತೆ ಮೇಲೆ ಕುಳಿತಿದ್ದರೂ ಅವರ ಮೌನ ಅಸಹ್ಯಕರ. ಇನ್ನೂ ನಿರ್ಲಕ್ಷ್ಯ ಮುಂದುವರಿದರೆ ಹೋರಾಟ ಇನ್ನಷ್ಟು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.



ಭೀಮನಗೌಡ ತಂಗಡಗಿ, ಪರಶುರಾಮ ನಾಯಕ, ಚಂದು ಹಾರಿವಾಳ, ಆನಂದ ನಾಯಕ, ಬಸವರಾಜ ನಾಯಕ, ಸಿದ್ದನಗೌಡ ಬಿರಾದಾರ, ಲಕ್ಷ್ಮಣ ನಾಯಕ, ಕಾಶಿಪತಿ ವಡವಡಗಿ, ಚಂದ್ರಶೇಖರ ದುಳೆಕಾರ, ರಾಮನಗೌಡ ಕಾಚಾಪುರ, ಶಾಂತಗೌಡ ತಂಗಡಗಿ, ಮಲ್ಲಿಕಾರ್ಜುನ ಕಚನೂರ, ಜಗದೀಶ ಹುಲಗಬಾಳ, ಬಸವರಾಜ ವಡವಡಗಿ, ಯಮುನಪ್ಪ ಹರಿಜನ, ಸಂಗು ಹಾರಿವಾಳ, ಮುದಕಪ್ಪದೇಸಾಯಿ, ಸಿದ್ದನಗೌಡ ಪಾಟೀಲ, ಮುತ್ತು ದುಳೆಕಾರ ಸೇರಿದಂತೆ ಹೋರಾಟ ಸಮಿತಿಯ ಪದಾಧಿಕಾರಿಗಳು ಹಾಜರಿದ್ದರು.

ಪ್ರಿ ಕ್ವಾಟರ್ ಫೈನಲ್‌ಗೆ ಖೋಖೋ ತಂಡ



ವಿಜಯಪುರ: ದಾವಣಗೆರೆ ವಿವಿಯಲ್ಲಿ ಏ.1ರಿಂದ 4 ರ ವರೆಗೆ ನಡೆದ ದಕ್ಷಿಣ ವಲಯ ಅಂತರ್ ಮಹಾವಿದ್ಯಾಲಯಗಳ ಖೋಖೋ ಪಂದ್ಯದಲ್ಲಿ ರಾಜ್ಯ ಅಕ್ಕಮಹಾದೇವಿ ವಿವಿ ತಂಡ ಪ್ರಿ ಕ್ವಾಟರ್ ಫೈನಲ್ ಪ್ರವೇಶಿಸಿ ವಿವಿ ಕೀರ್ತಿ ಹೆಚ್ಚಿಸಿದೆ. ತಂಡದ ಸಾಧನೆಗೆ ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಆಂಧ್ರದ ತಿರುಪತಿ ವಿವಿ, ತಮಿಳುನಾಡಿನ ಭಾರತೀಯರ ವಿವಿ ಹಾಗೂ ಕೇರಳದ ಕಣ್ಣೂರು ವಿವಿ ವಿರುದ್ಧ ಪಂದ್ಯದಲ್ಲಿ ಮಹಿಳಾ ವಿವಿ ತಂಡ ಜಯಗಳಿಸುವ ಮೂಲಕ ರಾಜ್ಯ ಪ್ರತಿನಿಧಿಸಿ ಸಾಧನೆ ಮೆರೆದಿದೆ.

ತಂಡದ ನಾಯಕಿ, ಎಂಪಿಇಡಿ ವಿದ್ಯಾರ್ಥಿನಿ ದೀಪಾ ಸಂತಿವರ್, ತರಬೇತುದಾರ ಶಿವಪ್ರಕಾಶ್ ಎಲಿ, ವ್ಯವಸ್ಥಾಪಕ ಸಿಂದಗಿಯ ಪೂಜಾರ್, ಟೂರ್ನಾಮೆಂಟ್ ವೀಕ್ಷಕರಾಗಿ ಭಾಗವಹಿಸಿದ ಪ್ರೊ.ಶ್ರೀನಿವಾಸ ಮತ್ತು ಪ್ರೊ. ರಾಜಕುಮಾರ್ ಮಾಲಿ ಪಾಟೀಲ್ ಅವರಿಗೆ ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ, ಕುಲಸಚಿವ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ. ಬಸವರಾಜ ಲಕ್ಕಣ್ಣನವರ, ಆರ್ಥಿಕ ಅಧಿಕಾರಿ ರಾಮಣ್ಣ ಅಥಣಿ, ದೈಹಿಕ ಶಿಕ್ಷಣ ನಿರ್ದೇಶಕ ಪ್ರೊ. ಹನುಮಂತಯ್ಯ ಪೂಜಾರ, ಉಪನಿರ್ದೇಶಕ ಡಾ.ವಿಶ್ವನಾಥ ನಡಕಟ್ಟಿ ಅಭಿನಂದನೆ ಸಲ್ಲಿಸಿದ್ದಾರೆ.

ಆರೋಪಿಗಳ ಬಂಧನಕ್ಕೆ ಒತ್ತಾಯಿಸಿ ಮನವಿ

ಚಡಚಣ: ಹಾಸನ ಜಿಲ್ಲೆಯ ಸಕಲೇಶಪುರ ಪಟ್ಟಣದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಫೋಟೋಗ್ರಾಫರ್ ಮೇಲೆ ನಡೆದ ಹಲ್ಲೆ ಪ್ರಕರಣವು ರಾಜ್ಯದಾದ್ಯಂತ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಈ ಘಟನೆಗೆ ವಿವಿಧ ಛಾಯಾಚಿತ್ರಗ್ರಾಹಕರ ಸಂಘಗಳು ಖಂಡನೆ ವ್ಯಕ್ತಪಡಿಸಿವೆ.

ಚಡಚಣ ತಾಲೂಕು ಛಾಯಾಚಿತ್ರಗ್ರಾಹಕರ ಸಂಘ(ರಿ) ಕೂಡ ಈ ಘಟನೆ ಖಂಡಿಸಿ, ಸಂಬಂಧಿಸಿದ ಆರೋಪಿಗಳನ್ನು ತಕ್ಷಣ ಬಂಧಿಸಿ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳುವಂತೆ ಸರ್ಕಾರ ಹಾಗೂ ಪೊಲೀಸ್ ಇಲಾಖೆಯನ್ನು ಆಗ್ರಹಿಸಿದೆ.

ಫೋಟೋಗ್ರಾಫರ್‌ಗಳು ತಮ್ಮ ಜೀವನೋಪಾಯಕ್ಕಾಗಿ ದುಡಿದುಕೊಂಡು ಜೀವನಸಾಗಿಸುತ್ತಿರುವ ಈ ಸಂದರ್ಭದಲ್ಲಿ ಅವರ ಮೇಲೆ ದೌರ್ಜನ್ಯ ನಡೆಯುತ್ತಿರುವುದು ಅಸಹ್ಯಕರವಾಗಿದೆ. ಇಂತಹ ಘಟನೆಗಳು ಮರುಕಳಿಸದಂತೆ ಫೋಟೋಗ್ರಾಫರ್‌ಗಳಿಗೆ ಸೂಕ್ತ ಭದ್ರತೆ ಒದಗಿಸಬೇಕೆಂದು ಸಂಘ ಒತ್ತಾಯಿಸಿದೆ. ಮತ್ತು ದುಷ್ಕರ್ಮಿಗಳಿಂದ ಹಾನಿಗೊಳಗಾದ ಕ್ಯಾಮರಾ ಸೇರಿದಂತೆ ಇನ್ನಿತರ ಫೋಟೋಪಕರಣಗಳು ದುಷ್ಕರ್ಮಿಗಳಿಂದ ಮರಳಿ ಕೊಡಿಸುವಂತೆ ಆಗ್ರಹಿಸಿದ್ದಾರೆ. ಈ ಪ್ರಕರಣದ ಕುರಿತು ತ್ವರಿತ ಕ್ರಮ ಕೈಗೊಳ್ಳುವಂತೆ ಚಡಚಣ ತಾಲೂಕಾ ಛಾಯಾಚಿತ್ರಗ್ರಾಹಕರ ಸಂಘದ ಅಧ್ಯಕ್ಷರಾದ ಸಂಜಯ ರೇವೆ ಹಾಗೂ ಎಲ್ಲ ಪದಾಧಿಕಾರಿಗಳು, ಫೋಟೋಗ್ರಾಫರಗಳು ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದರು.



ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ



ಮುದ್ದೇಬಿಹಾಳ: ನಗರದ ಅಹಿಲ್ಯಾಬಾಯಿ ಹೋಳ್ಕರ್ ಸಂಸ್ಥೆಯ ಅಭ್ಯುದಯ ಪದವಿಪೂರ್ವ ಕಾಲೇಜಿನ ವಾರ್ಷಿಕ ಪ್ರತಿಭಾ ಪುರಸ್ಕಾರ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಏರ್ಪಡಿಸಲಾದ ಪ್ರವೇಶ ಪರೀಕ್ಷೆಯ ಸಮಾರಂಭ ಸಾಬ್ರಾರು ವಿದ್ಯಾರ್ಥಿಗಳ ಭಾಗಿದಾರಿಕೆಯೊಂದಿಗೆ ನಡೆಯಿತು. ಅಧ್ಯಕ್ಷತೆ ವಹಿಸಿ ಮಾತನಾಡಿದ ಹೋಳ್ಕರ್ ಸಂಸ್ಥೆಯ ಕಾರ್ಯದರ್ಶಿ ಮಲ್ಲಿಕಾರ್ಜುನ ಮದರಿ, ಸಂಸ್ಥೆಯ ಅಡಿಯಲ್ಲಿ ಬರುವ ಎಲ್ಲಾ ಶಾಲೆಗಳಲ್ಲಿ ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ಮತ್ತು ನೆರವಿನ ಭರವಸೆ ನೀಡುತ್ತೇವೆ, ಸಂಸ್ಥೆ ಗ್ರಾಮೀಣ ಮತ್ತು ಹಿಂದುಳಿದ ವಿದ್ಯಾರ್ಥಿಗಳಿಗೆ ಸದಾಕಾಲ ಪ್ರೋತ್ಸಾಹಿಸುತ್ತಾ ಬಂದಿದೆ ಎಂದು ಹೇಳಿದರು. ಪದವಿ ಪೂರ್ವ ಕಾಲೇಜಿನ ಪ್ರವೇಶ ಪರೀಕ್ಷೆಯಲ್ಲಿ ಭಾಗವಹಿಸಿದ್ದ ನೂರಾರು ಮಕ್ಕಳು ಉತ್ಸಾಹದಿಂದ ಪರೀಕ್ಷೆಯನ್ನು ಬರೆದರು. ಸ್ಪರ್ಧೆಯಲ್ಲಿ ವಿಜೇತರಾದ 20 ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಹಾಗೂ ವಿದ್ಯಾರ್ಥಿ ವೇತನದ ಘೋಷಣೆಯನ್ನು ಮಾಡಲಾಯಿತು. ಬಿಪಿಎಲ್ ಕಾರ್ಡ್ ಹೊಂದಿದವರಿಗೆ, ವಿಕಲಚೇತನ, ಅನಾಥ ಮಕ್ಕಳಿಗೆ ಆರ್ಥಿಕವಾಗಿ ಹಿಂದುಳಿದವರಿಗೆ ಉಚಿತ ಶಿಕ್ಷಣ ನೀಡುವುದಾಗಿ ತಿಳಿಸಲಾಯಿತು. ಆಡಳಿತಾಧಿಕಾರಿ ಬಿ.ಜಿ.ಬಿರಾದಾರ, ಶ್ರೀದೇವಿ ಮಾದರಿ, ಕಿರಣ್ ಮದರಿ, ರವಿ ಜಗಲಿ, ಶಿಕ್ಷಕರಾದ ಗೀತಾ ಹುರಕಡ್ಲಿ, ಮಧುಚಂದ್ರ, ದನ್ನೂರು, ಅಬೂಬಕರ್ ಬುವಾಜಿ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಎನ್‌ಎಸ್‌ಎಸ್ ಸಹಕಾರಿ

ತಾಳಿಕೋಟೆ: ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಮಹತ್ವದ ಪಾತ್ರ ವಹಿಸುತ್ತದೆ ಎಂದು ವಿವಿ ಸಂಘದ ಅಧ್ಯಕ್ಷ ವಿ.ಸಿ.ಹಿರೇಮಠ ಹೇಳಿದರು.

ಸ್ಥಳೀಯ ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯದ ವತಿಯಿಂದ ಆಶ್ರಯ ಕಾಲೋನಿ ದತ್ತು ಗ್ರಾಮದಲ್ಲಿ ಆಯೋಜಿಸಿದ್ದ ಏಳು ದಿನಗಳ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರ ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು ಶ್ರಮದ ಮಹತ್ವವನ್ನು ಅರಿತು ಅದಕ್ಕೆ ಗೌರವ ನೀಡುವ ಗುಣ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಯೋಜನಾಧಿಕಾರಿ ರಾಜು ಕಪಾಲಿ ಮಾತನಾಡಿ, ಎನ್‌ಎಸ್‌ಎಸ್ ಎಂದರೆ 'ನಾನು ಸೇವೆಗೆ ಸದಾ ಸಿದ್ಧ' ಎಂಬ ಮನೋಭಾವ. ವಿದ್ಯಾರ್ಥಿಗಳು ಶ್ರಮದಾನದಲ್ಲಿ ತೊಡಗಿ ಪರಿಸರ ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯವೆಂದು ತಿಳಿಯಬೇಕು'' ಎಂದರು.

ಕಾರ್ಯಕ್ರಮಾಧಿಕಾರಿ ಎ.ಎ. ಗಂಗನಗೌಡ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ.ಆರ್.ಎಂ.ಬಂಟನೂರ ಮಾತನಾಡಿದರು. ವಿವಿ ಸಂಘದ ವೈಸ್ ಚೇರ್ಮನ್ ಕಾಶಿನಾಥ ಎಸ್.ಮುರಾಳ, ಎಂ.ಎಸ್. ವೀರಕ್ತಮಠ ಕಾವೇರಿ, ಕಲ್ಪನಾ ಕಟ್ಟಿಮನಿ, ನಿವೇದಿತಾ, ದೀಪಿಕಾ, ಕೀರ್ತಿ ಹಂದ್ರಾಳ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಕಿರುಸುದ್ದಿ

ತೆರಿಗೆ ಪಾವತಿಸಿ ಪಪಂ ಅಭಿವೃದ್ಧಿಗೆ ಶ್ರಮಿಸಿ

◆**ಯಲಬುರ್ಗಾ:** ಪಟ್ಟಣ ಪಂಚಾಯಿತಿ (ಪಪಂ) ವ್ಯಾಪ್ತಿಯ ಆಸ್ತಿ ಮಾಲೀಕರು 2026-27ನೇ ಸಾಲಿನ ಆರ್ಥಿಕ ವರ್ಷದ ಚಾಲ್ತಿ ಸಾಲಿನ ಆಸ್ತಿ ತೆರಿಗೆಯನ್ನು ಸಕಾಲದಲ್ಲಿ ಪಾವತಿಸಿ ಸರ್ಕಾರ ನೀಡಿರುವ ರಿಯಾಯಿತಿ ಸೌಲಭ್ಯವನ್ನು ಪಡೆದುಕೊಳ್ಳುವುದರ ಜೊತೆಗೆ ಪಟ್ಟಣದ ಸಮಗ್ರ ಅಭಿವೃದ್ಧಿಗೆ ಕೈಜೋಡಿಸುವಂತೆ ಪಪಂ ಮುಖ್ಯಾಧಿಕಾರಿ ನಾಗೇಶ್ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ. ಈ ಕುರಿತು ಪತ್ರಿಕೆ ಪ್ರಕಟಣೆ ನೀಡಿರುವ ಅವರು, ಸರ್ಕಾರದ ಆದೇಶದನ್ವಯ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 2026-27ನೇ ಸಾಲಿನ ಆಸ್ತಿ ತೆರಿಗೆಯನ್ನು ಏ.30, 2026ರೊಳಗಾಗಿ ಪಾವತಿಸಿದಲ್ಲಿ ಶೇ.5ರಷ್ಟು ರಿಯಾಯಿತಿ ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ. ಇದರ ಸದುಪಯೋಗವನ್ನು ಪ್ರತಿಯೊಬ್ಬ ಆಸ್ತಿ ಮಾಲೀಕರು ಪಡೆಯಬೇಕು ಎಂದು ಅವರು ಹೇಳಿದರು.



ಆಸ್ತಿ ಮಾಲೀಕರು ತಮ್ಮ ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ಏ.30ರೊಳಗೆ ಪಾವತಿಸಿ ರಿಯಾಯಿತಿ ಸೌಲಭ್ಯ ಪಡೆದುಕೊಳ್ಳುವುದರೊಂದಿಗೆ ದಂಡ ತಪ್ಪಿಸಿಕೊಳ್ಳಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಪಟ್ಟಣದ ಅಭಿವೃದ್ಧಿಗೆ ಮುಂದಾಗಿ: ಸಮಯಕ್ಕೆ ತೆರಿಗೆ ಪಾವತಿಸುವುದರಿಂದ ಮಾತ್ರ ಪಟ್ಟಣ ಪಂಚಾಯಿತಿಗೆ ಅಗತ್ಯ ಆದಾಯ ಲಭ್ಯವಾಗುತ್ತದೆ. ಇದರಿಂದ ಹೊಸ ಕಾಮಗಾರಿಗಳನ್ನು ಕೈಗೊಳ್ಳಲು ಹಾಗೂ ಹಳೆಯ ಮೂಲಸೌಕರ್ಯಗಳನ್ನು ಸುಧಾರಿಸಲು ಸಾಧ್ಯವಾಗುತ್ತದೆ.ಹೀಗಾಗಿ ಪ್ರತಿಯೊಬ್ಬ ನಾಗರಿಕರು ತಮ್ಮ ಹೊಣೆಗಾರಿಕೆಯನ್ನು ಅರಿತು ತೆರಿಗೆ ಪಾವತಿಸುವಂತೆ ಅವರು ಮನವಿ ಮಾಡಿದರು.

ಆಕ್ಷೇಪಣೆಗೆ ಅವಕಾಶ

◆**ಸಿಂಧನೂರು:** ತುರ್ವಿಹಾಳ ಯೋಜನಾ ವ್ಯಾಪ್ತಿಗೆ ಬರುವ ಸಿಂಧನೂರು ಮತ್ತು ಮಸ್ಕಿ ತಾಲೂಕಿನ ತುರ್ವಿಹಾಳ ಶಿಶು ಅಭಿವೃದ್ಧಿ ಯೋಜನೆಯಡಿ ಈ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ 2 ಹಾಗೂ ಅಂಗನವಾಡಿ ಸಹಾಯಕಿಯರ 15 ಹುದ್ದೆಗಳಿಗೆ ಭರ್ತಿ ಮಾಡಿ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟವಾಗಿದ್ದು,ಆಕ್ಷೇಪಣೆಗಳಿದ್ದಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ತುರ್ವಿಹಾಳ ಶಿಶು ಅಭಿವೃದ್ಧಿ ಯೋಜನೆ ಕಚೇರಿಗೆ ಸಲ್ಲಿಸಿ ಎಂದು ಸಿಡಿಪಿಒ ಅಶೋಕ ಎಂ.ಪತ್ರಿಕೆ ಪ್ರಕಟಣೆಯಲ್ಲಿ ತಿಳಿಸಿದರು.

ಈ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆಗಳನ್ನು ಸೂಕ್ತ ದಾಖಲಾತಿಗಳೊಂದಿಗೆ ಏ.13ರ ವರೆಗೆ ಕಚೇರಿ ವೇಳೆಯಲ್ಲಿ ಸಮಯ ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನ 1.30ರೊಳಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ ತುರುವಿಹಾಳ ಯೋಜನೆ ಕಛೇರಿ,ತಾ. ಸಿಂಧನೂರು ಪಿಡಬ್ಲ್ಯೂಡಿ ಕ್ಯಾಂಪ್ ರಾಯಚೂರು ಮುಖ್ಯ ರಸ್ತೆ ಸಿಂಧನೂರು ಇಲ್ಲಿ ಸಲ್ಲಿಸಬಹುದಾಗಿದೆ ತಿಳಿಸಿದ್ದಾರೆ.

ನರಸಪ್ಪಗೆ ರತ್ನ ಪ್ರಶಸ್ತಿ

◆**ಕುರುಗೋಡು:** ತಾಲೂಕಿನ ಜನತೆಗೆ ಸಕಾಲದಲ್ಲಿ ಸೇವೆ ಸಿಗುವಂತೆ ಮಾಡಿ, ರಾಜ್ಯದಲ್ಲಿಯೇ ಕುರುಗೋಡು ತಾಲೂಕು ಪ್ರಥಮ ಸ್ಥಾನ ಪಡೆಯುವ ಕೆಲಸ ನಿರ್ವಹಿಸಿದ ನಮ್ಮ ತಹಶೀಲ್ದಾರ್ ನರಸಪ್ಪ ಅವರಿಗೆ ಕರ್ನಾಟಕ ಪತ್ರಕರ್ತರ ಸಂಘ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಕುರುಗೋಡು ವತಿಯಿಂದ ಇಂದು ಗೌರವಪೂರ್ವಕವಾಗಿ 'ಕಾಯಕ ರತ್ನ' ಎನ್ನುವ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಇವರು ಈ ಹಿಂದೆ ರಾಜ್ಯದಲ್ಲಿ ಕೆಲವು ಗಂಟೆಗಳಲ್ಲಿ ಸಕಾಲ ಇತರೆ ಸರಕಾರ ಯೋಜನೆಯಲ್ಲಿ ಸಾರ್ವಜನಿಕರಿಗೆ ಅರ್ಜಿಯಲ್ಲಿ ತಮ್ಮದೇ ಆದ ಕೆಲಸ ಕಾರ್ಯದಲ್ಲಿ ಪ್ರಜಾಭುತ್ವದಲ್ಲಿ ಉತ್ತಮ ಸೇವೆ ರಾಜ್ಯ ಪ್ರಶಂಸೆ ವ್ಯಕ್ತವಾಗಿತ್ತು ತಿಳಿದು ಬಂದಿದೆ.

ನಿಧನ ಸುದ್ದಿ

ಮೌನೇಶ್ ಕಮ್ಮಾರ

◆**ಕೊಪ್ಪಳ:** ಮೀಡಿಯಾ ಕ್ಲಬ್ ಪ್ರಧಾನ ಕಾರ್ಯದರ್ಶಿ ದತ್ತು ಕಮ್ಮಾರ ಅವರ ಸಹೋದರ ಮೌನೇಶ ಕಮ್ಮಾರ ಅವರು ಮಂಗಳವಾರ ನಿಧನರಾಗಿದ್ದಾರೆ.



ತಾಲೂಕಿನ ಮುದ್ದಾಬಳ್ಳಿ ಗ್ರಾಮದ ನಿವಾಸಿ ಮೌನೇಶ ತಂ. ಹನುಮಂತಪ್ಪ ಕಮ್ಮಾರ(41) ಅವರು ಮಂಗಳವಾರ ಮಧ್ಯಾಹ್ನ 12.04 ಗಂಟೆಗೆ ಇಹಲೋಕ ತ್ಯಜಿಸಿದರು. ಮೃತರು ತಾಯಿ, ಮೂವರು ಸಹೋದರರು ಸೇರಿ ಅಪಾರ ಬಂಧು ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸಂಜೆ 5 ಗಂಟೆಗೆ ನೆರವೇರಿತು ಎಂದು ಕುಟುಂಬದವರು ತಿಳಿಸಿದ್ದಾರೆ.



ಮಸ್ಕಿ: ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಆಚರಣೆ ಕುರಿತು ಸೋಮವಾರ ತಹಶಿಲ್ ಕಾರ್ಯಾಲಯದಲ್ಲಿ, ತಹಶೀಲ್ದಾರ ಮಂಜುನಾಥ ಭೋಗಾವತಿ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆಯನ್ನು ಹಮ್ಮಿಕೊಳ್ಳಲಾಯಿತು.

ಅಪ್ಪಣ್ಣನವರ ಮೂರ್ತಿ ಪ್ರತಿಷ್ಠಾಪಿಸಿ

◆**ಕುಷ್ಟಗಿ:** ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿರುವ ಅನುಭವ ಮಂಟಪದ ತ್ರಿಪುರಾಂತಕ ಕೆರೆ ಹತ್ತಿರ ಶಿವಶರಣ ಹಡಪದ ಅಪ್ಪಣ್ಣನವರ ಮೂರ್ತಿ ಪ್ರತಿಷ್ಠಾಪಿಸುವಂತೆ ಪಟ್ಟಣದ ಹಡಪದ ಅಪ್ಪಣ್ಣ ಸಮಾಜದವರಿಂದ ಉಪ ತಹಶೀಲ್ದಾರ್ ಮೂಲಕ ಸಿಎಂಗೆ ಮಂಗಳವಾರ ಮನವಿ ಸಲ್ಲಿಸಿದರು.

ಶಿವಶರಣ ಹಡಪದ ಅಪ್ಪಣ್ಣನವರ ಅರಿವಿನ ಗವಿಯನ್ನು ಬಸವೇಶ್ವರ ದೇವಸ್ಥಾನದ ಪಂಚಕಮಿಟಿ ಅವರು ಅಕ್ರಮವಾಗಿ ಹಸ್ತಕ್ಷೇಪ ಮಾಡಿ, ಅನ್ಯ ಶರಣರ ಮೂರ್ತಿ ಪ್ರತಿಷ್ಠಾಪನೆ ಮಾಡಿರುವುದು ಗಮನಾರ್ಹ ಇದರಿಂದ ಶಿವಶರಣ ಹಡಪದ ಅಪ್ಪಣ್ಣನವರಿಗೆ ಮತ್ತು ನಮ್ಮ ಸಮುದಾಯದ ಭಕ್ತಿಭಾವನೆಗಳಿಗೆ ಅನ್ಯಾಯವಾಗಿದ್ದು, ನಮ್ಮ ಇತಿಹಾಸದ ಮೌಲ್ಯ ಕುಗ್ಗುವಂತಾಗಿದೆ. ಹಡಪದ ಅಪ್ಪಣ್ಣನವರ ವಂಶಸ್ಥರು ಮತ್ತು ಸಮಾಜದ ಭಕ್ತರಾದ ನಾವು, ನಮ್ಮ ಶರಣರ ಹಾಗೂ ಅರಿವಿನ ಗವಿಯನ್ನು ಕಳೆದುಕೊಳ್ಳುವ ಪ್ರಶ್ನೆಯೇ ಇಲ್ಲ. ಈ ಘಟನೆ ನಮ್ಮಗೆ ನೋವು ಉಂಟುಮಾಡಿದೆ. ಸೂಕ್ತ ಕ್ರಮ ಕೈಗೊಂಡು, ಯಥಾಸ್ಥಿತಿಗೆ ತರಬೇಕು. ಹಾಗೆಯೇ ಹಡಪದ ಅಪ್ಪಣ್ಣನವರ ಅರಿವಿನ ಗವಿಯಲ್ಲಿ ಅವರ ಮೂರ್ತಿಯನ್ನು ಪುನಃ ಪ್ರತಿಷ್ಠಾಪನೆ ಮಾಡಿ, ಆ ಸ್ಥಳವನ್ನು ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿಸಿ ಸಮರ್ಪಕವಾಗಿ ಅಭಿವೃದ್ಧಿ ಪಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಕರ್ನಾಟಕ ರಾಜ್ಯ ಹಡಪದ ಅಪ್ಪಣ್ಣ ಸಮಾಜದ ಭಾಂದವರು ಮನವಿ ಮಾಡಿದರು.



ಕುಷ್ಟಗಿ: ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿರುವ ಅನುಭವ ಮಂಟಪದ ತ್ರಿಪುರಾಂತಕ ಕೆರೆ ಹತ್ತಿರ ಶಿವಶರಣ ಹಡಪದ ಅಪ್ಪಣ್ಣನವರ ಮೂರ್ತಿ ಪ್ರತಿಷ್ಠಾಪಿಸುವಂತೆ ಪಟ್ಟಣದ ಹಡಪದ ಅಪ್ಪಣ್ಣ ಸಮಾಜದವರಿಂದ ಉಪ ತಹಶೀಲ್ದಾರ್ ಮೂಲಕ ಸಿಎಂಗೆ ಮಂಗಳವಾರ ಮನವಿ ಸಲ್ಲಿಸಿದರು. ಸಮಾಜದ ಮುಖಂಡರು ಹಾಗೂ ತಾಲೂಕು ಅಧ್ಯಕ್ಷ ಶಿವಪುತ್ರಪ್ಪ ಹಡಪದ, ದೊಡ್ಡಪ್ಪ ಹೊಸೂರು, ಮಹಾಂತೇಶ ಅಮರಾವತಿ, ಎಸ್.ಎಸ್.ಹಡಪದ, ಪಂಪಣ್ಣ, ಬಸವರಾಜ, ಶರಣಪ್ಪ ಇದ್ದರು.

ಗಡಿ ಪ್ರದೇಶದಲ್ಲಿನ ಕನ್ನಡ ಶಾಲಾ ಮಕ್ಕಳ ಸಮಸ್ಯೆ | ಎಡಿಸಿ ಹೇಳಿಕೆ

ಸರ್ಕಾರದ ಗಮನಕ್ಕೆ ತರುವೆ

◆**ರಾಯಚೂರು:** ಕರ್ನಾಟಕ ಗಡಿ ಭಾಗಕ್ಕೆ ಹೊಂದಿಕೊಂಡಿರುವ ಕೃಷ್ಣ ಗ್ರಾಮದ ಕನ್ನಡ ಶಾಲೆಗೆ ರಾಯಚೂರಿನ ಅಪರ ಜಿಲ್ಲಾಧಿಕಾರಿ ಶಿವಾನಂದ ಭೇಟಿ ನೀಡಿ, ಹಳೆ ವಿದ್ಯಾರ್ಥಿಗಳು ಹಾಗೂ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದು, ಗಡಿ ಪ್ರದೇಶದಲ್ಲಿನ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದು ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದರು.



ಕೃಷ್ಣವರೆಗೆ ಬಸ್ ವ್ಯವಸ್ಥೆ ಕಲ್ಪಿಸಲಾಗುವುದು. ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆಯಲ್ಲಿ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಸಂಬಂಧ ಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಿ, ಸೂಕ್ತ ಪರಿಹಾರ ಆಗುವಂತೆ ನೋಡಿಕೊಳ್ಳುತ್ತೇವೆ. ಪ್ರವೇಶಕ್ಕಾಗಿ ವಲಸೆ ಪ್ರಮಾಣ ಪತ್ರ ಹಾಗೂ ಇತರೆ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಹುಡುಕಿ ವಿದ್ಯಾರ್ಥಿಗಳಿಗೆ ಸಹಕಾರ ನೀಡಲಾಗುವುದು. ಉದ್ಯೋಗದಲ್ಲಿ ಶೇ.5ರಷ್ಟು ಮೀಸಲಾತಿ ಬಗ್ಗೆ ಮುಖ್ಯಮಂತ್ರಿಗಳಿಗೆ ಪತ್ರದ ಮೂಲಕ ತಿಳಿಸುತ್ತೇವೆ ಎಂದು ಅಪರ ಜಿಲ್ಲಾಧಿಕಾರಿಹೇಳಿದರು.

ಗಡಿ ಶಾಲಾ ಮಕ್ಕಳು ಸುಮಾರು 51 ವರ್ಷಗಳಿಂದ 10ನೇ ತರಗತಿ ನಂತರ ಪ್ರವೇಶಕ್ಕಾಗಿ, ವಲಸೆ ಪ್ರಮಾಣ ಪತ್ರಕ್ಕಾಗಿ, ಹಾಸ್ಟೆಲ್, ಬಸ್ ಪಾಸ್, ಜಾತಿ ಪ್ರಮಾಣ ಪತ್ರ, ಶಿಷ್ಯ ವೇತನ, ಉದ್ಯೋಗಕ್ಕೆ ಸಂಬಂದ ಪಟ್ಟಂತೆ ಸಾಕಷ್ಟು ಸಮಸ್ಯೆಗಳು ಕಂಡು ಬರುತ್ತಿವೆ. ಕರ್ನಾಟಕ ಸರಕಾರ ಇದರ ಬಗ್ಗೆ ಕಾಳಜಿ ವಹಿಸಬೇಕು ಎಂದು ಕೃಷ್ಣಾ ಮಂಡಲದ ವಿದ್ಯಾಧಿಕಾರಿ ನಿಜಾಮುದ್ದೀನ್, ಗಡಿನಾಡು ಕನ್ನಡದ ಅಧ್ಯಕ್ಷರು ಮತ್ತು ಗೌರವ ಅಧ್ಯಕ್ಷ ಅಮರ್ ದೀಕ್ಷಿತ್, ರಾಮಲಿಂಗಪ್ಪ ಕುನ್ನಿ ಅಪರ ಜಿಲ್ಲಾಧಿಕಾರಿ ಗಮನಕ್ಕೆ ತಂದರು.

ರಾಯಚೂರು ತಹಶೀಲ್ದಾರ್ ಸುರೇಶ್ ವರ್ಮಾ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸೋಮಶೇಖರಪ್ಪ ಹೋಕ್ರಾಣಿ, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಪ್ರವೀಣ, ಸಾರ್ವಜನಿಕ ಶಿಕ್ಷಣ ಇಲಾಖೆಯ ರಂಗಸ್ವಾಮಿ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಶಿವಮಾನಪ್ಪ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಸುನೀತಾ, ರಾಯಚೂರು ಬಿಇಒ ಈರಣ್ಣ ಕೋಸಗಿ, ಕೃಷ್ಣಾ ಮಂಡಲದ ತಹಶೀಲ್ದಾರ್ ಶ್ರೀನಿವಾಸ, ಕೃಷ್ಣಾಪ್ರೌಢ ಶಾಲೆಯ ಮುಖ್ಯಗುರು ಕಿಶೋರ ಕುಮಾರ, ಶಾಲೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು, ಕೃಷ್ಣಾ ಗ್ರಾಮದ ಅಧ್ಯಕ್ಷರು ಎಸ್.ನಾಗೇಂದ್ರ ಹಾಗೂ ಶಾಲೆ ಹಳೆ ವಿದ್ಯಾರ್ಥಿಗಳು ಸೇರಿದಂತೆ ಇತರರಿದ್ದರು.

ಖರ್ಗೆ ಬದಲು, ಶರಣಪ್ರಕಾಶ್‌ಗೆ ನೇಮಿಸಿ

◆**ಕಲಬುರಗಿ:** ಕಲ್ಯಾಣ ಕರ್ನಾಟಕದ 371(ಜೆ) ವಿಶೇಷ ಪ್ರಾವಧಾನ್ಯದ ಉಪ ಸಮಿತಿಯ ಅಧ್ಯಕ್ಷ ಸ್ಥಾನದಿಂದ ಸಚಿವ ಪ್ರಿಯಾಂಕ್ ಖರ್ಗೆಯವರನ್ನು ಬದಲಿಸಿ, ಆ ಸ್ಥಾನಕ್ಕೆ ರಾಜ್ಯದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಅವರನ್ನು ನಿಯುಕ್ತಿಗೊಳಿಸಬೇಕೆಂದು ಹೈದರಾಬಾದ್ ಕರ್ನಾಟಕ ಹೋರಾಟ ಸಮಿತಿಯ ಡಾ.ರಾಜು ಕುಳಗೇರಿ ಒತ್ತಾಯಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸ್ಥಾನಕ್ಕೆ ಸಂಬಂಧಿಸಿದಂತೆ ಹೈದರಾಬಾದ್ ಕರ್ನಾಟಕ ಭಾಗದ ಕೆಲವು ಸಂಘಟನೆಗಳು ಅಸಮಾಧಾನ ವ್ಯಕ್ತಪಡಿಸಿ ಬದಲಾವಣೆಗೆ ಒತ್ತಾಯಿಸಿವೆ. ಪ್ರಸ್ತುತ ಉಪ ಸಮಿತಿಯ ಅಧ್ಯಕ್ಷರಾದ ಸಚಿವ ಪ್ರಿಯಾಂಕ್ ಖರ್ಗೆ ಅವರು ಈ ಭಾಗದ ಸಮಗ್ರ ಅಭಿವೃದ್ಧಿಯ ಕಡೆ ತಕ್ಕ ಮಟ್ಟಿನ ಗಮನ ಹರಿಸುತ್ತಿಲ್ಲ ಎಂದು ಆರೋಪಿಸಿದ್ದಾರೆ. ಈ ಭಾಗದ ಯುವಕರ ಭವಿಷ್ಯ, ಉದ್ಯೋಗ ಹಾಗೂ ಮೂಲಭೂತಸೌಕರ್ಯಗಳ ಅಭಿವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಬದಲು, ಅವರು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವಿಚಾರಗಳಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದಾರೆ ಎಂದರು.

ಇದರಿಂದಾಗಿ 371(ಜೆ) ಯೋಜನೆಯ ಉದ್ದೇಶವೇ ಅಲ್ಪವಾಗುತ್ತಿರುವ ಭಾವನೆ ಜನರಲ್ಲಿ ಮೂಡಿದೆ. ಆದ್ದರಿಂದ, ಈ ಭಾಗದ ಅಭಿವೃದ್ಧಿಗೆ ಹೆಚ್ಚಿನ ಕಾಳಜಿ ವಹಿಸಿ ದುಡಿಯುತ್ತಿರುವ ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಅವರನ್ನು 371(ಜೆ) ಉಪ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಡಿಸಿ ಮೂಲಕ ರಾಜ್ಯದ ಸಿಎಂಗೆ ಮನವಿ ಸಲ್ಲಿಸಿರುವುದಾಗಿ ತಿಳಿಸಿದರು. ನಾಗರಾಜ್ ಸ್ವಾದಿ, ಸಾಮಾಜಿಕ ಕಾರ್ಯಕರ್ತ ಹಣಮಂತ ಶೇರಿ ಉಪಸ್ಥಿತರಿದ್ದರು.

> 371 ಜೆ ಉಪ ಸಮಿತಿಯ ಅಧ್ಯಕ್ಷರಾಗಿ ಭಾಗದ ಅಭಿವೃದ್ಧಿಗೆ ಒತ್ತು ನೀಡದೆ. ಕೇವಲ ಆರೆಸ್ಸೆಸ್ ಹಾಗೂ ಅಂತಾರಾಷ್ಟ್ರೀಯ ವಿಚಾರಗಳಿಗೆ ಹೆಚ್ಚಿನ ಒತ್ತು ನೀಡುತ್ತಿದ್ದಾರೆ. ಹೀಗಾಗಿ ಅವರಿಗೆ ರಾಷ್ಟ್ರ ರಾಜಕಾರಣದಲ್ಲಿ ಹೆಚ್ಚಿನ ಜವಾಬ್ದಾರಿ ಕೊಡಬೇಕು. ಕಲಬುರಗಿಯನ್ನು ಹೆಲ್ತ್ ಹಬ್ ಮಾಡುವಲ್ಲಿ ಶ್ರಮಿಸುತ್ತಿರುವ ಸಚಿವ ಡಾ.ಶರಣಪ್ರಕಾಶ್ ಪಾಟೀಲ ಅವರಿಗೆ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಬೇಕು.
>
> ■ ಡಾ.ರಾಜು ಕುಳಗೇರಿ, ಹೈ.ಕ.ಹೋರಾಟ ಸಮಿತಿ



ಡಾ.ಅಂಬೇಡ್ಕರ್ ಜಯಂತಿ ಅರ್ಥಪೂರ್ಣ ಆಚರಣೆಗೆ ನಿರ್ಧಾರ

◆**ಮಸ್ಕಿ:** ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಆಚರಣೆ ಕುರಿತು ಸೋಮವಾರ ತಹಶಿಲ್ ಕಾರ್ಯಾಲಯದಲ್ಲಿ, ತಹಶೀಲ್ದಾರ ಮಂಜುನಾಥ ಭೋಗಾವತಿ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆಯನ್ನು ಹಮ್ಮಿಕೊಳ್ಳಲಾಯಿತು. ತಹಶೀಲ್ದಾರ್ ಮಂಜುನಾಥ ಭೋಗಾವತಿ ಮಾತನಾಡಿ, ಏ.14ರಂದು ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಮತ್ತು ಬಾಬು ಜಗಜೀವನರಾಮ್ ಜಯಂತಿಯನ್ನು ಕೂಡಿ ಆಚರಣೆ ಮಾಡಲಾಗುತ್ತದೆ. ಭಾವಚಿತ್ರ ಮೆರವಣಿಗೆಯನ್ನು ಗಾಂಧಿನಗರದ ಡಾ.ಅಂಬೇಡ್ಕರ ಸರ್ಕಲ್‌ದಿಂದ ಬೆಳಗ್ಗೆ 8 ಘಂಟೆಯಿಂದ ಆರಂಭ ಮಾಡಿ ಭ್ರಮರಾಂಬ ದೇವಸ್ಥಾನದ ವರೆಗೂ ಮೆರವಣಿಗೆ ಸಾಗುತ್ತದೆ. ಮೆರವಣಿಗೆಯಲ್ಲಿ ಎರಡು ಕಲಾ ತಂಡಗಳು ಭಾಗವಹಿಸಲಿವೆ. ಎಂದು ತಿಳಿಸಿದರು. ಮಸ್ಕಿ ತಾಪಂ ಇಒ ಅಮರೇಶ ಯಾದವ್, ಲಿಂಗಸುಗೂರ ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ರವೀಂದ್ರ ಉಪ್ಪಾರ, ಊರಿನ ಮುಖಂಡರು, ಸಮಾಜದ ಇತರರಿದ್ದರು.

ಛತ್ರಪತಿ ಶಿವಾಜಿ ಮಹಾನ್ ರಾಷ್ಟ್ರಪ್ರೇಮಿ


◆**ಸಿಂಧನೂರು:** ಭಾರತದ ಇತಿಹಾಸದ ಚರಿತ್ರೆಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರು ಓರ್ವ ಧೀಮಂತ ಯೋಧ, ರಾಷ್ಟ್ರ ಭಕ್ತ, ಹಿಂದು ಧರ್ಮದ ಸಂರಕ್ಷರಾಗಿದ್ದರು ಅಷ್ಟೇ ಅಲ್ಲದೆ ಭಾರತದ ಪಶ್ಚಿಮ ಭಾಗದಲ್ಲಿ ಮರಾಠಾ ಸಾಮ್ರಾಜ್ಯವನ್ನು ಸ್ಥಾಪಿಸಿದ ಮಹಾನ್ ರಾಷ್ಟ್ರ ಪ್ರೇಮಿ ಛತ್ರಪತಿ ಶಿವಾಜಿ ಮಹಾರಾಜರು ಎಂದು ಪಿ.ಜಿ.ಆರ್ ಸಿಂಧ್ಯಾ ಹೇಳಿದರು.

ನಗರದ ಕನಕದಾಸ ಕಲ್ಯಾಣ ಮಂಟಪದಲ್ಲಿ ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ಬೆಂಗಳೂರು ಹಾಗೂ ರಾಯಚೂರು ಶಾಖೆ, ತಾಲೂಕು ಘಟಕದ ವತಿಯಿಂದ ಹಮ್ಮಿಕೊಂಡಿದ್ದ ಛತ್ರಪತಿ ಶಿವಾಜಿ ಮಹಾರಾಜ ಅವರ 399ನೇ ಜಯಂತ್ಯುತ್ಸವ ಹಾಗೂ ಜಿಲ್ಲಾ ಸಮಾವೇಶವನ್ನು ಉದ್ಘಾಟಿಸಿ ಪಿ.ಜಿ.ಆರ್ ಸಿಂಧ್ಯಾ ರಾಜ್ಯ ಮುಖ್ಯ ಆಯುಕ್ತರು ಮಾತನಾಡಿದರು.

ಶಾಸಕ ಹಂಪನಗೌಡ ಬಾದರ್ಲಿ ಮಾತನಾಡಿ, ಮರಾಠ ಸಮಾಜದ ಪ್ರತಿಯೊಬ್ಬ ವ್ಯಕ್ತಿಗಳು ಸಮಾಜದ ಏಕತೆಗೆ, ಸಂಘಟನೆಗಾಗಿ ಯುವಜನರ ಪಾತ್ರದ ಮಹತ್ವವನ್ನು ತಿಳಿಸಿ ಹಾಗೂ ಛತ್ರಪತಿ ಶಿವಾಜಿ ಮಹಾರಾಜರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿಗೆ ಭಾಜನರಾಗಿದಕ್ಕೆ ಸನ್ಮಾನ್ಯ ಡಾ.ಪಿ.ಜಿ.ಆರ್ ಸಿಂಧ್ಯ ರಾಜ್ಯ ಮಾಜಿ ಸಚಿವರು ಕರ್ನಾಟಕ ಸರ್ಕಾರ ಹಾಗೂ ರಾಜ್ಯ ಮುಖ್ಯ ಆಯುಕ್ತರು ರವರಿಗೆ ಅಭಿನಂದನಾ ಸಮಾರಂಭವನ್ನು ಆಯೋಜನೆ ಮಾಡಲಾಯಿತು. ಸದರಿ ಈ ಕಾರ್ಯಕ್ರಮಕ್ಕೆ ಭಾರತ್ ಸೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ವತಿಯಿಂದ ಸಿಂಧ್ಯಾ ರವರನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಡೊಳ್ಳು ಕುಣಿತದೊಂದಿಗೆ ಬಹಳ ವಿಜೃಂಭಣೆಯಿಂದ ಸ್ವಾಗತಿಸಿ ಸನ್ಮಾನ ಮಾಡಿದರು.

ಮಂಜುನಾಥ ಭಾರತಿ ಸ್ವಾಮೀಜಿ ಗೋಸಾಯಿ ಮಠ ಬೆಂಗಳೂರು, ಧ್ಯಾನಶ್ರೀ ದಾದ ಮಹಾರಾಜ್ ನರ್ಗರ್, ಪುಣೆ ವಿಧಾನ ಪರಿಷತ್ತಿನ ಸದಸ್ಯ ಎಂ.ಜಿ.ಮೂಳೆ, ಮಸ್ಕಿ ವಿಧಾನಸಭಾ ಕ್ಷೇತ್ರದ ಶಾಸಕ ಆರ್. ಬಸನಗೌಡ ತುರವಿಹಾಳ, ಕ್ಷತ್ರಿಯ ಮರಾಠ ಪರಿಷತ್ತಿನ ಸದಸ್ಯರು, ನಾಗೋಜಿ ರಾವ್ ಮರಾಠ ಉಪಾಧ್ಯಕ್ಷರು ರಾಯಚೂರು, ಬೀರಪ್ಪ ಶಂಭೋಜಿ ಕಾರ್ಯದರ್ಶಿ, ಶಿವಪ್ಪ ಹಸಮಕಲ್ ಕಾರ್ಯದರ್ಶಿಗಳು ಮಸ್ಕಿ,ಅಂಬಣ್ಣ ನಾಯಕ ಎಸ್‌ಜಿವಿ, ಮೋಹಿದ್ದುನ್ ಶರೀಫ್ ಸಾಬ್, ಶ್ರೀನಿವಾಸ ಸುಗಂಧಿ ಜಂಟಿ ಕಾರ್ಯದರ್ಶಿ ಮಸ್ಕಿ, ಸೌಟ್ ಮಾಸ್ಟರ್ ಗಂಗಾಧರ, ಆದಪ್ಪ, ಗೈಡ್ ಕ್ಯಾಪ್ಟನ್ ಆರತಿ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಇತರರಿದ್ದರು.



ಆತ್ಮವಿಶ್ವಾಸ, ಶ್ರಮವೇ ಸಾಧನೆಯ ಮಾರ್ಗ: ಹೇಮಾ

◆**ಕಲಬುರಗಿ:** ಆತ್ಮವಿಶ್ವಾಸ, ಶ್ರದ್ಧೆ, ಶ್ರಮ ಹಾಗೂ ನಗುಮುಖ ನಮ್ಮ ಸಾಧನೆಯ ಪ್ರಮುಖ ಅಸ್ತ್ರಗಳು. ಸಾಧನೆ ಮಾಡಲು ವಿಶೇಷ ಸ್ಥಳ ಅಥವಾ ವ್ಯಕ್ತಿಗಳ ಅವಶ್ಯಕತೆ ಇಲ್ಲ, ದೃಢವಾದ ಮನೋಬಲ ಮತ್ತು ಸ್ಪಷ್ಟ ಗುರಿ ಇದ್ದರೆ ಸಾಕು ಎಂದು ರಾಜ್ಯ ಉಚ್ಚ ನ್ಯಾಯಾಲಯದ ಕೇಂದ್ರ ಸರ್ಕಾರದ ಹಿರಿಯ ಪ್ಯಾನೆಲ್ ಕೌನ್ಸಿಲ್ ಹೇಮಾ ಕುಲಕರ್ಣಿ ತಿಳಿಸಿದರು.

ನಗರದ ಪಿಡಿಎ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಸಾಧನೆಗೆ ಯಾವುದೇ ರೀತಿಯ ಅಡ್ಡಿ ಆತಂಕಗಳು ಇರುವುದಿಲ್ಲ.ಒಂದು ವೇಳೆ ಇದ್ದರೂ ಅವುಗಳನ್ನು ಎದುರಿಸುವ ಮೂಲಕ ನಮ್ಮ ಗುರಿಯನ್ನು ಮುಟ್ಟಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯರಾದ ಡಾ.ಎಸ್.ಆರ್.ಪಾಟೀಲ ಮಾತನಾಡಿ, ತಾಂತ್ರಿಕ ಕ್ಷೇತ್ರದಲ್ಲಿ ಮಹಿಳೆಯರು ಮೇಲುಗೈ ಸಾಧಿಸುತ್ತಿರುವುದು ಸಂತಸದ ವಿಷಯವಾಗಿದೆ. ಕಾಲೇಜಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿನಿಯರು ವಿದ್ಯಾಭ್ಯಾಸ ಮಾಡುತ್ತಿರುವುದನ್ನೂ ತಿಳಿಸಿದರು.

ಭಾರತೀಯ ಆಡಳಿತ ಸೇವೆಯಲ್ಲಿ ಸಾಧನೆಗೈದ ಡಾ.ನಿವೇದಿತಾ ಸಿ. ಭಾವಿಮಣಿ ಹಾಗೂ ಹತ್ತುನೇ ತರಗತಿಯಲ್ಲಿ ಉತ್ತಮ ಅಂಕಗಳನ್ನು ಪಡೆದ ಕುಮಾರಿ ಪೂಜಾ ವಾಡಿ ಅವರನ್ನು ಸನ್ಮಾನಿಸಲಾಯಿತು.



ಮುಖ್ಯ ಕಾರ್ಯನಿರ್ವಾಹಕರಾಗಿ ಉಪಪ್ರಾಚಾರ್ಯರಾದ (ಶೈಕ್ಷಣಿಕ) ಡಾ.ಎಸ್.ಆರ್.ಹೊಟ್ಟಿ ಹಾಗೂ (ಆಡಳಿತ) ಡಾ.ಭಾರತಿ ಹರಸೂರ ಕಾರ್ಯ ನಿರ್ವಹಿಸಿದರು. ಮಹಿಳಾ ದೌರ್ಜನ್ಯ ನಿವಾರಣೆ ಘಟಕದ ಸಂಚಾಲಕಿಯಾಗಿ ಡಾ.ಇಂದುಮತಿ ಬಿ.ದೇಶಮಾನ್ಯ ಮತ್ತು ಪ್ರೊ.ವೀಣಾ ಸರಾಫ್ ಕಾರ್ಯಕ್ರಮವನ್ನು ಸಂಚಾಲಿಸಿದರು. ಡಾ.ಶಿಲ್ಪಾ ಮಂಗಶೆಟ್ಟಿ ಹಾಗೂ ಡಾ.ಕಾವೇರಿ ಕೋರಿ ಸಮನ್ವಯಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದರು. ಮಹಾವಿದ್ಯಾಲಯದ ಪರೀಕ್ಷಾ ನಿಯಂತ್ರಕರಾದ ಡಾ.ಶ್ರೀದೇವಿ ಸೋಮಾ, ಆಂತರಿಕ ಗುಣಮಟ್ಟ ಭರವಸೆ ಘಟಕದ ನಿರ್ದೇಶಕರಾದ ಡಾ.ಸುನಂದಾ ನಂದಾಳ, ವಿಭಾಗ ಮುಖ್ಯಸ್ಥರು, ಶಿಕ್ಷಕರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಡಾ.ಶಿವಬಸಪ್ಪ ಹೆಸರೂರಗೆ ಸನ್ಮಾನ

◆**ಹಟ್ಟಿಚಿನ್ನದಗಣಿ:** ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ಹಟ್ಟಿ ಪಟ್ಟಣ ಘಟಕದ ವತಿಯಿಂದ, ರಾಷ್ಟ್ರೀಯ ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ಡಾ.ಶಿವಬಸಪ್ಪ ಹೆಸರೂರ ಅವರಿಗೆ ಹಟ್ಟಿಚಿನ್ನದಗಣಿಯ ಬಣಜಿಗ ಸಮಾಜದ ವತಿಯಿಂದ ಹಟ್ಟಿ ಕ್ಯಾಂಪ್‌ನ ಬಸವ ಸೇವಾ ಸಮಿತಿಯಲ್ಲಿ ಸನ್ಮಾನ ನೆರವೇರಿಸಲಾಯಿತು. ಡಾ.ಶಿವಬಸಪ್ಪ ಅವರು ಸಮಾಜದ ಅಭಿವೃದ್ಧಿ ಕುರಿತು ಮಾತನಾಡಿ, ಸಮಾಜದ ಹಿರಿಯರು ಕಿರಿಯರಿಗೆ ಬಣಜಿಗ ಸಮಾಜದ ಇತಿಹಾಸ, ಸಂಸ್ಕೃತಿ ಮತ್ತು ಮೌಲ್ಯಗಳನ್ನು ತಿಳಿಸುವುದರ ಜೊತೆಗೆ, ಅವರಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನು ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ಹಟ್ಟಿ ಘಟಕದ ಪದಾಧಿಕಾರಿಗಳನ್ನು ಇದೆ ವೇಳೆ ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಚಂದ್ರಕಾಂತ ಶೆಟ್ಟಿ ಅರಕೇರಾ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಅಮಿತಕುಮಾರ ರವಿ ಅಂಗಡಿ ಮತ್ತು ಇನ್ನುಳಿದಂತೆ ಸಲಹೆಗಾರರಾಗಿ ವಿಜಯ ಸಾಹುಕಾರ್, ಲೋಕೇಶ್ ವಾಲೆ, ಗೌರವ ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಬುದ್ದಿನ್ನಿ, ಕಾರ್ಯಾಧ್ಯಕ್ಷರು ಪ್ರಭಾಕರ ಬಂಟನೂರ, ಉಪಾಧ್ಯಕ್ಷರಾಗಿ ಸಂಗಪ್ಪ ಬೆಂಡೋಣಿ, ಅಮರೇಶ ಕಸನದೊಡ್ಡಿ, ಸಹ ಕಾರ್ಯದರ್ಶಿಗಳಾಗಿ ಮಲ್ಲಿಕಾರ್ಜುನ ಅಂಗಡಿ, ಮಹಾಂತೇಶ, ಖಜಾಂಚಿಯಾಗಿ ಆದಪ್ಪ ದೇವಾಪುರ ಹಾಗೂ ಸದಸ್ಯರುಗಳಾಗಿ ಶರಣಬಸವ ಮರೆಡೆಪ್ಪ, ನಾಗರಾಜ ರಟಗಲ್, ರುದ್ರಗೌಡ ವಂದಲಿ, ಸೂಗಪ್ಪ, ಅಂಕುಸದೊಡ್ಡಿ, ಉದಯ ಕುಮಾರ ಇಟಗಿ, ಗುರುರಾಜ್ ಇವರನ್ನು ನೇಮಕ ಮಾಡಲಾಯಿತು.



ಬಿಜೆಪಿ ಸ್ಥಾಪನಾ ದಿನ ಆಚರಣೆ



◆**ಮಾನ್ವಿ:** ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ಸ್ಥಾಪನಾ ದಿನದ ಅಂಗವಾಗಿ ಪಂಡಿತ ದಿನದಾಯಳ್ ಉಪಾಧ್ಯಯ, ಡಾ.ಶ್ಯಾಮಪ್ರಸಾದ್ ಮುಖರ್ಜಿ, ಭಾರತ ಮಾತೆಯ ಭಾವಚಿತ್ರಗಳಿಗೆ ಪುಷ್ಪ ಸಮರ್ಪಿಸಿ ಬಿಜೆಪಿ ಪಕ್ಷದ ಧ್ವಜರೋಹಣವನ್ನು ನೆರವೇರಿಸಿದರು. ಬಿಜೆಪಿ ಮಾನ್ವಿ ಮಂಡಲ ಅಧ್ಯಕ್ಷರಾದ ವೀರಭದ್ರಗೌಡ ಭೋಗವತಿ ಮಾತನಾಡಿ, ಇಂದು ಭಾರತ ದೇಶವು ವಿಶ್ವದಲ್ಲಿ ಗುರುವಾಗುವುದಕ್ಕೆ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಉತ್ತಮ ನಾಯಕತ್ವವೇ ಕಾರಣವಾಗಿದೆ ಇಂದು ವಿಶ್ವದಲ್ಲಿ ಯುದ್ಧದ ವಾತಾವರಣ ಸಮಯದಲ್ಲಿಯು ಕೂಡ ಭಾರತವು ಸುಭದ್ರವಾಗಿರುವುದಕ್ಕೆ ಬಿಜೆಪಿ ನೇತೃತ್ವದ ಸರಕಾರವೇ ಕಾರಣ ಎಂದು ತಿಳಿಸಿದರು. ಜಿಲ್ಲಾ ರೈತ ಮೋರ್ಚದ ಅಧ್ಯಕ್ಷರಾದ ದೊರಬಾಬು, ಬಿಜೆಪಿ ಮಾನ್ವಿ ಮಂಡಲ ಪ್ರ.ಕಾರ್ಯದರ್ಶಿ ಗುರುಸಿದ್ದಪ್ಪ ಕಣ್ಣೂರು, ಹನುಮೇಶನಾಯಕ ಜಿನೂರ್, ಜೆ.ಸುಧಾಕರ್, ಶಿವಲಿಂಗಯ್ಯಸ್ವಾಮಿ, ಜಗದೀಶ ಓತ್ತೂರ್, ಗುರುರಾಜ ನಾಗಲಾಪುರ್, ರವಿಕುಮಾರ ಸಾಹುಕರ್, ದುರ್ಗಪ್ಪ, ಆಂಜನೇಯ್ಯನಾಯಕ ,ಸದ್ದಾಂ ಹುಸೇನ್, ಈರಣ್ಣನಾಯಕ, ಚಂದ್ರಶೇಖರ ನಾಯಕ, ವೆಂಕಟೇಶ ಸೇರಿದಂತೆ ಇನ್ನಿತರರು ಇದ್ದರು.

ಹಡಪದ ಅಪ್ಪಣ್ಣ ಪುತ್ಥಳಿ ಪ್ರತಿಷ್ಠಾಪನೆಗೆ ಒತ್ತಾಯ

◆ **ಕೊಪ್ಪಳ:** ಬಸವಕಲ್ಯಾಣದ ಅನುಭವ ಮಂಟಪದತ್ತಿರವಿರುವ ಶಿವಶರಣ ಹಡಪದ ಅಪ್ಪಣ್ಣನವರ ಅರಿವಿನ ಗವಿಯ ಸ್ಥಳದಲ್ಲಿ ಬಸವೇಶ್ವರ ದೇವಸ್ಥಾನದ ಕಮಿಟಿಯವರು ಅಕ್ರಮವಾಗಿ ಬೇರೆ ಶರಣರ ಮೂರ್ತಿ ಪ್ರತಿಷ್ಠಾಪನೆ ಮಾಡಿದರುವದನ್ನು ಖಂಡಿಸಿ ತಾಲೂಕು ಹಡಪದ ಅಪ್ಪಣ್ಣ ಸುಮಾಜದವರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ನಗರದ ಬನ್ನಿಕಟಿಯಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನೆ ನಡೆಸಿ ಬಳಿಕ ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಬೀದರ್ ಜಿಲ್ಲೆ ಬಸವಕಲ್ಯಾಣದ ಅನುಭವ ಮಂಟಪದ ತ್ರಿಪುರಾಂತಕ ಕೆರೆ ಬಳಿ 12ನೇ ಶತಮಾನದ ಅನೇಕ ಬಸವಾದಿ ಶರಣರ ಗವಿಗಳು ಇವೆ. ಬಸವಣ್ಣನವರ ಆಪ್ತಕಾರ್ಯದರ್ಶಿಯಾಗಿದ್ದ ಶಿವಶರಣ ಹಡಪದ ಅಪ್ಪಣ್ಣನವರ ಅರಿವಿನ ಗವಿ ಇಲ್ಲಿವರೆಗೆ ಅಸ್ತಿತ್ವದಲ್ಲಿತ್ತು. ಆದರೆ ಇತ್ತೀಚಿಗೆ ಬಸವೇಶ್ವರ ದೇವಸ್ಥಾನದ ಪಂಚಕಮಿಟಿಯವರು ಅಕ್ರಮವಾಗಿ ಹಸ್ತಕ್ಷೇಪ ಮಾಡಿ ಆ ಸ್ಥಳದಲ್ಲಿ ಅನ್ಯ ಶರಣರ ಮೂರ್ತಿ ಪ್ರತಿಷ್ಠಾಪನೆ ಮಾಡಿರುವುದು ಖಂಡನಿಯವಾಗಿದೆ. ಇದು ಶರಣರಾದ ಹಡಪದ ಅಪ್ಪಣ್ಣನವರ ಗೌರವ ಘನತೆಗೆ ಧಕ್ಕೆಯನ್ನುಂಟು ಮಾಡಿದೆ.

ಈ ಘಟನೆಗೆ ಸಂಬಂಧಿಸಿದಂತೆ ಸಮಾಜದ ಮುಖಂಡರು ಮತ್ತು ಭಕ್ತರು ಸೇರಿ ಪ್ರತಿಭಟನೆಗಳನ್ನು ನಡೆಸಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ, ವಿವಿಧ ಮಠಾಧೀಶರು ಮತ್ತು ನಾಯಕರು ಸಹ ಹಡಪದ ಅಪ್ಪಣ್ಣನವರ ಪರವಾಗಿ ಹೋರಾಟ ನಡೆಸಿದರೂ ನ್ಯಾಯ ಸಿಕ್ಕಿಲ್ಲ.



ಇಂತಹ ಅಕ್ರಮ ಕೃತ್ಯಗಳಲ್ಲಿ ಭಾಗಿಯಾದ ಪಂಚಕಮಿಟಿ ಹಾಗೂ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕು. ಅಕ್ರಮ ಮಾಡಿದ ಸ್ಥಳವನ್ನು ಯಥಾಸ್ಥಿತಿಗೆ ತರಬೇಕು. ಹಡಪದ ಅಪ್ಪಣ್ಣನವರ ಗವಿಯಲ್ಲಿ ಅವರ ಮೂರ್ತಿಯನ್ನು ಪುನಃ ಪ್ರತಿಷ್ಠಾಪನೆ ಮಾಡಬೇಕು. ಶಿವ ಶರಣ ಅಪ್ಪಣ್ಣನವರ ಸ್ಥಳವನ್ನು ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿಸಬೇಕೆಂದು ಒತ್ತಾಯಿಸಿದರು.

ತಾಲೂಕು ಹಡಪದ ಅಪ್ಪಣ್ಣ ಸಮಾಜ ಸೇವಾ ಸಂಘದ ಗೌರವಾಧ್ಯಕ್ಷ ಮಂಜುನಾಥ್ ಹಂದ್ರಾಳ, ಜಿಲ್ಲಾಧ್ಯಕ್ಷ ಶಿವಕುಮಾರ ಹಡಪದ, ಬಸವರಾಜ ಇಟಗಿ, ಮೌನೇಶ್ ಹಡಪದ, ಫಕೀರೇಶ, ಶರಣಪ್ಪ ಇಟಗಿ, ನಿಂಗಪ್ಪ ಹಂದ್ರಾಳ, ದ್ಯಾಮಣ್ಣ ಮಾದಿನೂರ ಸೇರಿದಂತೆ ಇತರರಿದ್ದರು.

ಡಿಜಿಪೇ ಸೌಲಭ್ಯ ಸದುಪಯೋಗಕ್ಕೆ ಸಲಹೆ

◆**ಯಲಬುರ್ಗಾ:** ಯಾವುದೇ ಬ್ಯಾಂಕಿನ ಡೆಬಿಟ್ ಕಾರ್ಡ್ ಬಳಸಿ ಇಲ್ಲಿ ಹಣ ಪಡೆಯಬಹುದು ಮತ್ತು ಒಂದುಬಾರಿಗೆ ಕನಿಷ್ಠ 10 ಸಾವಿರ ದವರೆಗೆ ಹಣ ಪಡೆಯುವ ಸೌಲಭ್ಯವಿದೆ ಎಂದು ಯೋಜನಾಧಿಕಾರಿ ಗಣೇಶ ನಾಯಕ ಹೇಳಿದರು.

ಪಟ್ಟಣದ ಸಿಎಸ್‌ಸಿ ಕೇಂದ್ರದಲ್ಲಿ ಡಿಜಿಪೇ-ಎಟಿಎಂ ಬಗ್ಗೆ ಪ್ರಸ್ತಾವಿಕವಾಗಿ ಅವರು ಮಾತನಾಡಿ,

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಜನಪರವಾದ ಯೋಜನೆಗಳ ಬಗ್ಗೆ ಜನರಿಗೆ ಮಾಹಿತಿಯನ್ನು ನೀಡುವ ಮೂಲಕ ಉತ್ತಮ ಕಾರ್ಯನಿರ್ವಹಿಸುತ್ತಾ ಅದರ ಜೊತೆಗೆ ಡಿಜಿಪೇ- ಎಟಿಎಂ ಬಗ್ಗೆ ಮಾಹಿತಿಯನ್ನು ನೀಡುತ್ತಿದೆ, ಶುಲ್ಕ ರಹಿತ ಸೇವೆ, ಈ ಕೇಂದ್ರದಲ್ಲಿ ಹಣ ಪಡೆಯಲು ಗ್ರಾಹಕರಿಂದ ಯಾವುದೇ ರೀತಿಯ ಕಮಿಷನ್ ಅಥವಾ ಹೆಚ್ಚುವರಿ ಶುಲ್ಕವನ್ನು ಪಡೆಯಲಾಗುವುದಿಲ್ಲ ಆದ್ದರಿಂದ ಇದು ಗ್ರಾಹಕರಿಗೆ ಉತ್ತಮ ಯೋಜನೆ ಇದಾಗಿದೆ ಇದರ ಸದುಯೋಗವನ್ನು ಪಡೆಸುಕೊಳ್ಳಬೇಕು ಎಂದು ಅಖಿಲ ಕರ್ನಾಟಕ ಕೊಪ್ಪಳ ಜಿಲ್ಲಾ ಜನಜಾಗೃತಿ ಸಮಿತಿ ಸದಸ್ಯ ಶರಣಬಸಪ್ಪ ದಾನಕೈ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಡಿಜಿಪೇ-ಎಟಿಎಂಮೂಲಕ ಗ್ರಾಹಕರಿಗೆ ಹಣ ವಿತರಿಸಿಸಿ ಮಾತನಾಡಿದರು.

ಮೇಲ್ವಿಚಾರಕಿ ಕಾವ್ಯಶ್ರೀ, ನೋಡಲ್ ಅಧಿಕಾರಿ ವಿಶಾಲ, ಕೃಷಿ ಅಧಿಕಾರಿ ಪ್ರಸನ್ನಕುಮಾರ, ಪ್ರಬಂಧಕ ಗೀರೀಶ ಹಾಗೂ ಸಿಎಸ್ಸಿ ಕೇಂದ್ರದ ನಾಗಪ್ಪ ವಿಎಲ್‌ಇ, ಪ್ರೇಮಾ ವಿಎಲ್‌ಇ ಗ್ರಾಹಕರಾದ ಶಕುಂತಲಾ ನಲಗಿ, ವಿದ್ಯಾ ಬಂಡಿಹಾಳ ಹಾಗು ಸೇವಾ ಪ್ರತಿನಿಧಿಗಳಾದ ಮಲ್ಲಮ್ಮ, ಶೈಯಾನ್ ಇದ್ದರು.



ಕಿರುಸುದ್ದಿ

ಎನ್‌ಸಿಸಿ ಅಧಿಕಾರಿಯಾಗಿ ನೇಮಕ

ಕೊಟ್ಟೂರು: ಕೊಟ್ಟೂರಿನ ಜ್ಞಾನಸಿರಿ ಎಂದೇ ಹೆಸರು ಪಡೆದ ಶ್ರೀಗುರು ಕೊಟ್ಟೂರೇಶ್ವರ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಬಣಕಾರ ಬಸವರಾಜ ಅವರು ರಾಷ್ಟ್ರೀಯ ಕೆಡೆಟ್ ಕಾರ್ಪ್ಸ್ ಅಧಿಕಾರಿಗಳ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, ಎನ್‌ಸಿಸಿ ಅಧಿಕಾರಿಯಾಗಿ ನೇಮಕಗೊಂಡಿದ್ದಾರೆ.



ಜ.5ರಿಂದ ಏ.4ರವರೆಗೆ ನಡೆದ ಎನ್‌ಸಿಸಿ ಅಧಿಕಾರಿಗಳ ತರಬೇತಿ ಕೋರ್ಸ್ ಅನ್ನು ಅವರು ಸಮರ್ಥವಾಗಿ ಪೂರ್ಣಗೊಳಿಸಿದ್ದಾರೆ. ಈ ಕಠಿಣ ಮತ್ತು ಶಿಸ್ತಿನ ತರಬೇತಿಯ ನಂತರ, ರಾಷ್ಟ್ರೀಯ ಕೆಡೆಟ್ ಕಾರ್ಪ್ಸ್ ಮಹಾನಿರ್ದೇಶನಾಲಯ ವತಿಯಿಂದ ಅವರಿಗೆ ಲೆಫ್ಟಿನೆಂಟ್ ಹುದ್ದೆಯನ್ನು ನೀಡಲಾಗಿದೆ.

ಈ ಪಿಆರ್‌ಸಿಎನ್ ತರಬೇತಿ ಕೋರ್ಸ್ ಅಧಿಕಾರಿಗಳಿಗೆ ನಾಯಕತ್ವ, ಶಿಸ್ತು ಹಾಗೂ ಸಂಘಟನಾ ಕೌಶಲ್ಯಗಳನ್ನು ಬೆಳೆಸುವ ಉದ್ದೇಶವನ್ನು ಹೊಂದಿದ್ದು, ಎನ್‌ಸಿಸಿ ಕೆಡೆಟ್‌ಗಳಿಗೆ ತರಬೇತಿ ನೀಡಲು ಅಗತ್ಯವಾದ ಸಾಮರ್ಥ್ಯವನ್ನು ರೂಪಿಸುತ್ತದೆ. ಬಣಕಾರ ಬಸವರಾಜ ಅವರ ಈ ಸಾಧನೆಗೆ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷರು, ಸದಸ್ಯರು ಪ್ರಾಚಾರ್ಯರು ಹಾಗೂ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.

ಸಾಮಾನ್ಯ ಸಭೆ: ಅಧಿಕಾರಿಗಳ ತರಾಟೆ

ವಿಜಯನಗರ: 8ನೇ ವಾರ್ಡ್‌ನ ಕೊಂಡನಾಯಕನಹಳ್ಳಿಯಲ್ಲಿ ಸೊಳ್ಳೆಗಳ ಕಾಟ ವಿಪರೀತವಾಗಿದ್ದು, ಫಾಗಿಂಗ್ ಮಾಡುವಂತೆ ಕೋರಿ 15 ದಿನಗಳಿಂದ ಪರಿಸರ ಅಧಿಕಾರಿಗಳಿಗೆ ಮನವಿ ಮಾಡಿದರೂ ಕ್ಯಾರೇ ಎನ್ನುತ್ತಿಲ್ಲ ಎಂಬ ಸದಸ್ಯ ಹುಲಗಪ್ಪ ಆರೋಪದಿಂದ ಇತರೆ ಸದಸ್ಯರೂ ಅಧಿಕಾರಿಗಳ ವಿರುದ್ಧ ಕಿಡಿಕಾರಿದರು. ನಗರಸಭೆ ಅಧ್ಯಕ್ಷ ಎನ್. ರೂಪೇಶ್‌ಕುಮಾರ್ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ನಗರಸಭೆ ಸಾಮಾನ್ಯ ಸಭೆಯಲ್ಲಿ ಅವರು ಮಾತನಾಡಿದರು. ಎಷ್ಟು ಫಾಗಿಂಗ್ ಮಷಿನ್ ಗಳಿವೆ? ದಿನಕ್ಕೆ ಎಷ್ಟು ವಾರ್ಡ್‌ಗಳಲ್ಲಿ ಫಾಗಿಂಗ್ ಮಾಡಲಾಗುತ್ತದೆ? ಕೇವಲ ನಾಮಕಾವಾಸ್ತೆ ಎಂಬಂತೆ ಜಿಪಿಎಸ್ ಫೋಟೋ ತೆಗೆದುಕೊಂಡು ಮರಳುತ್ತಾರೆ. ವಾಸ್ತವವಾಗಿ ಓಣಿಗಳಲ್ಲಿ ಫಾಗಿಂಗ್ ಮಾಡಲಾಗುತ್ತಿಲ್ಲ ಎಂದು ತರಾಟೆಗೆ ತೆಗೆದುಕೊಂಡರು. ಅದಕ್ಕೆ ಉತ್ತರಿಸಿದ ಪೌರಾಯುಕ್ತ ಶಿವಕುಮಾರ್, ಮತ್ತೆ ಈ ರೀತಿಯ ದೂರುಗಳು ಮರುಕಳಿಸಬಾರದು. ಫಾಗಿಂಗ್ ಮಾಡುವ ಮುನ್ನೇ ಸದಸ್ಯರಿಗೆ ಮಾಹಿತಿ ನೀಡುವಂತೆ ಪರಿಸರ ವಿಭಾಗದ ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಸೂಚಿಸಿದರು.

ತಾಯಿ, ಶಿಶು ಮರಣ ತಡೆಗೆ ಒತ್ತು ನೀಡಿ: ಡಿಎಚ್‌ಒ

ಬಳ್ಳಾರಿ: ಜಿಲ್ಲೆಯಲ್ಲಿ ತಾಯಿ, ಶಿಶು ಮರಣ ಹಾಗೂ ನಿರ್ಜೀವ ಜನನ ಪ್ರಮಾಣವನ್ನು ಗಣನೀಯವಾಗಿ ಕಡಿಮೆ ಮಾಡುವ ನಿಟ್ಟಿನಲ್ಲಿ ಅಧಿಕಾರಿಗಳು ಜಾಗರೂಕರಾಗಿ ಕಾರ್ಯನಿರ್ವಹಿಸಬೇಕು ಎಂದು ಡಿಎಚ್‌ಒ ಡಾ.ರಮೇಶ್ ಬಾಬು ಹೇಳಿದರು.ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿಶೇಷವಾಗಿ ಪ್ರಸ್ತುತ ನಡೆಯುತ್ತಿರುವ ಶಸ್ತ್ರಚಿಕಿತ್ಸಾ ಹೆರಿಗೆಗಳ ಪ್ರಮಾಣವನ್ನು ಶೇ.25ಕ್ಕೆ ಇಳಿಸುವ ಕುರಿತು ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿದ ಡಿಎಚ್‌ಒ ಅವರು, ನಿರ್ಜೀವ ಜನನಗಳನ್ನು ತಡೆಯುವ ಕುರಿತು ತಜ್ಞ ವೈದ್ಯರ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ವರದಿಯನ್ನು ಸಿದ್ಧಪಡಿಸಬೇಕು ಎಂದು ತಿಳಿಸಿದರು.ಪ್ರಾಣಾಪಾಯದಿಂದ ಪಾರಾದ 78 ತಾಯಂದಿರು



- 2025-26ನೇ ಸಾಲಿನಲ್ಲಿ ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದಿಂದ 54 ತಾಯಂದಿರನ್ನು ಹಾಗೂ ಜಿಲ್ಲಾ ಆಸ್ಪತ್ರೆಯಿಂದ 24 ತಾಯಂದಿರನ್ನು ಪ್ರಾಣಾಪಾಯದಿಂದ ಪಾರು ಮಾಡಲಾಗಿದೆ.

ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ.ಹನುಮಂತಪ್ಪ, ಬಿಎಂಸಿಆರ್‌ಸಿಯ ಎಂಎಂಆರ್‌ನ ನೋಡಲ್ ಅಧಿಕಾರಿ ಡಾ.ಎಚ್.ಇ.ರಾಮರಾಜು, ಜಿಲ್ಲಾ ಆಸ್ಪತ್ರೆಯ ಮಕ್ಕಳ ತಜ್ಞರ ವಿಭಾಗದ ಮುಖ್ಯಸ್ಥ ಡಾ.ವಿಶ್ವನಾಥ್ ಬಿ., ಬಿಎಂಸಿಆರ್‌ಸಿ ಎಸ್‌ಎನ್‌ಸಿಯು ಮುಖ್ಯಸ್ಥ ಡಾ.ರಿಜೇಶ್, ಪ್ರಸೂತಿ ತಜ್ಞ ಡಾ.ಪ್ರಶಾಂತ್, ಮಕ್ಕಳ ತಜ್ಞ ಡಾ.ಎಂ.ಬಾಲವೆಂಕಟೇಶ್ವರ ರಾವ್, ವಿವಿಧ ತಾಲೂಕುಗಳ ಆರೋಗ್ಯ ಅಧಿಕಾರಿಗಳಾದ ಡಾ.ಆರ್.ಅಬ್ದುಲ್ಲಾ, ಡಾ.ಸುನೀಲ್, ಡಾ.ಅರುಣ್, ಡಾ.ಮಂಜುನಾಥ್ ಜವಳಿ, ಡಾ.ಭರತ್, ಡಾ.ಸುರೇಶ್ ಸೇರಿದಂತೆ ಇಲಾಖೆಯ ಹಿರಿಯ ಅಧಿಕಾರಿಗಳು, ಎನ್.ಕ್ಯೂ.ಎ.ಎಸ್ ಸಿಬ್ಬಂದಿ ಉಪಸ್ಥಿತರಿದ್ದರು.



ಕುರುಗೋಡು: ತಾಲೂಕಿನ ಸೋಮಲಾಪುರ ಗ್ರಾಮದಲ್ಲಿ ಶ್ರೀ ಚಿದಾನಂದ ಅವಧೂತರ 34ನೇ ಪುಣ್ಯಾರಾಧನೆ ಅಂಗವಾಗಿ ರಥೋತ್ಸವ ಸಡಗರ ಸಂಭ್ರಮದಿಂದ ಜರಗಿತು.

ನಾಳೆ ಹುಣಸಗಿಯಲ್ಲಿ ಪ್ರಶಿಕ್ಷಣ ವರ್ಗ ಕಾರ್ಯಕ್ರಮ

ಹುಣಸಗಿ: ಭಾರತೀಯ ಜನತಾ ಪಾರ್ಟಿ, ಸುರಪುರ ವಿಧಾನಸಭಾ ವತಿಯಿಂದ ಪಂಡಿತ್ ದೀನದಯಾಳ್ ಉಪಾಧ್ಯಾಯರ ಜನ್ಮದಿನದ ನಿಮಿತ್ತ ಏ.9ರಂದು ನಾಳೆ ಹುಣಸಗಿ ಪಟ್ಟಣದ ನೀಲಕಂಠೇಶ್ವರ ಕಲ್ಯಾಣ ಮಂಟಪದಲ್ಲಿ (ಯುಕೆಪಿ ಕ್ಯಾಂಪ್) ಬೆಳಿಗ್ಗೆ 9ಗಂಟೆಗೆ ವಿಶೇಷ ಪ್ರಶಿಕ್ಷಣ ವರ್ಗ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಮಾಜಿ ಸಚಿವ ಹಾಗೂ ಬಿಜೆಪಿ ರಾಜ್ಯ ಉಪಾಧ್ಯಕ್ಷ ನರಸಿಂಹನಾಯಕ (ರಾಜುಗೌಡ) ಹೇಳಿದ್ದಾರೆ.



ಈ ಕುರಿತು ಪ್ರಕಟಣೆ ಮೂಲಕ ತಿಳಿಸಿದ ಅವರು ಅಂದು ಕ್ಷೇತ್ರದ ಕಕ್ಕೇರಾ ಪುರಸಭೆ ಸದಸ್ಯರು, ಕೊಡೇಕಲ್ ಜಿಪಂ, ರಾಜನಕೋಳೂರು ಜಿಪಂ, ಜಿಪಂ ಹಾಗೂ ಪಪಂ ಸದಸ್ಯರು, ಅರಕೇರಾ (ಜೆ) ಜಿಪಂ ವ್ಯಾಪ್ತಿಯಲ್ಲಿ ಬರುವ ಮಾಜಿ ಜಿಪಂ ಸದಸ್ಯರು, ಮಾಜಿ ತಾಪಂ ಸದಸ್ಯರು, ಮಾಜಿ ಪುರಸಭೆ ಸದಸ್ಯರು, ಮಾಜಿ ಗ್ರಾಪಂ ಅಧ್ಯಕ್ಷ, ಮತಗಟ್ಟೆಯ ಅಧ್ಯಕ್ಷರು ಹಾಗೂ ಮತಗಟ್ಟೆಯ ಬಿಎಲ್‌ಎಗಳು, ಪಕ್ಷದ ಜಿಲ್ಲಾ ಪದಾಧಿಕಾರಿಗಳು, ಜಿಲ್ಲಾ ಮೋರ್ಚಾ ಪದಾಧಿಕಾರಿಗಳು, ಮಂಡಲ್ ಪದಾಧಿಕಾರಿಗಳು ಮತ್ತು ಮಂಡಲ ಮೋರ್ಚ ಪದಾಧಿಕಾರಿಗಳು, ಪಕ್ಷದ ಮುಖಂಡರು ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ತಿಳಿಸಿದ್ದಾರೆ.



ಕೊಟ್ಟೂರು: ತಾಲೂಕಿನ ಪಂಚಪೀಠಗಳಲ್ಲಿ ಒಂದಾದ ಉಜ್ಜಯನಿಯಲ್ಲಿ ಏ.21ರಂದು ನಡೆಯಲಿರುವ ಉಜ್ಜಯಿನಿ ಜಗದ್ಗುರು ಶ್ರೀಮರುಳಸಿದ್ದೇಶ್ವರ ಸ್ವಾಮಿಯ ರಥೋತ್ಸವದ ಅಂಗವಾಗಿ ಮಂಗಳವಾರ ತೇರುಗಾಲಿಯನ್ನು ಹೊರ ಹಾಕಲಾಯಿತು. ಏ.21ರಂದು ಜಗದ್ಗುರು ಮರುಳ ಸಿದ್ದೇಶ್ವರ ಸ್ವಾಮಿಯ ರಥೋತ್ಸವವು ನಡೆಯಲಿದ್ದು, ಏ.22ರಂದು ಸ್ವಾಮಿಯ ಶಿಖರಕ್ಕೆ ತೈಲಾಭಿಷೇಕ ನೆರವೇರಲಿದೆ.

ಸಾಮಾನ್ಯ ಸಭೆ | ನಗರಸಭೆ ಅಧ್ಯಕ್ಷ ರೂಪೇಶ್ ಎಚ್ಚರಿಕೆ

ಬೇಕಾಬಿಟ್ಟಿ ಕಸ ಹಾಕಿದರೆ ಬೀಳುತ್ತೆ ದಂಡ!

ವಿಜಯನಗರ: ಹೊಸಪೇಟೆ ನಗರದಲ್ಲಿ ಬೇಕಾಬಿಟ್ಟಿಯಾಗಿ ಕಸ ಹಾಕುವವರಿಗೆ 200 ರಿಂದ 500 ರೂ. ದಂಡ ವಿಧಿಸಲು ನಗರಸಭೆ ಅಧ್ಯಕ್ಷ ಎನ್. ರೂಪೇಶ್‌ಕುಮಾರ್ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ನಗರಸಭೆ ಸಾಮಾನ್ಯ ಸಭೆ ನಿರ್ಧರಿಸಿತು. ಆದರೆ, ತೆರಿಗೆದಾರರ ಹಿತದೃಷ್ಟಿಯಿಂದ ಖಾತಾ ಬದಲಾವಣೆ ಶುಲ್ಕ, ನೀರಿನ ಕರ ಹೆಚ್ಚಿಸುವ ಪ್ರಸ್ತಾವನೆಯನ್ನು ಕೈಬಿಡುವ ಮೂಲಕ ಹೊಸಪೇಟೆ ಜನತೆಯನ್ನು ಪರಿಷ್ಕೃತ ತೆರಿಗೆ ಬರೆಯಿಂದ ಪಾರು ಮಾಡಿದೆ.



ಪೌರಾಡಳಿತ ನಿರ್ದೇಶನಾಯದ ಮಾರ್ಗಸೂಚಿಯಂತೆ 2026-27ನೇ ಸಾಲಿಗೆ ಆಸ್ತಿ ತೆರಿಗೆಯನ್ನು ಕನಿಷ್ಠ ಶೇ.3ರಿಂದ ಗರಿಷ್ಠ ಶೇ.5 ರಷ್ಟು, ಈಗಿರುವ 120 ರೂ. ನೀರಿನ ತೆರಿಗೆಯನ್ನು 150 ರೂ.ಗೆ ಹಾಗೂ ಮುಟೇಷನ್ ಶುಲ್ಕವನ್ನು ಶೇ.1ರಷ್ಟು ಹೆಚ್ಚಿಸಬೇಕು ಎಂಬ ಪ್ರಸ್ತಾವನೆಗೆ ನಗರಸಭೆ ಸದಸ್ಯರು ಪಕ್ಷಾತೀತವಾಗಿ ವಿರೋಧಿಸಿದರು.

ರಮೇಶ್ ಗುಪ್ತಾ, ಗುಜ್ಜಲ್ ರಾಘವೇಂದ್ರ, ತಾರಿಹಳ್ಳಿ ಜಂಬುನಾಥ, ಜಿ.ಹನುಮಂತಪ್ಪ, ಕಿರಣ್ ಶಂಕ್ರಿ, ಅಬ್ದುಲ್ ಖದೀರ್, ರೋಹಿಣಿ ವೆಂಕಟೇಶ್ ಮತ್ತಿತರರು ಮಾತನಾಡಿ, ಈಗಾಗಲೇ ಉಪನೋಂದಣಿ ಕಚೇರಿಯಲ್ಲಿ ನೋಂದಣಿ ಶುಲ್ಕ ಹೆಚ್ಚಳವಾಗಿದೆ. ನಗರಸಭೆಯಲ್ಲೂ ಆಸ್ತಿ ಮೌಲ್ಯ ಪರಿಷ್ಕರಣೆಯಾಗಿದ್ದರಿಂದ ತೆರಿಗೆ ಕಟ್ಟಲಾಗದೇ ಜನ ಹೈರಾಣಾಗಿದ್ದಾರೆ. ಈಗ ಮತ್ತೆ ತೆರಿಗೆ, ನೀರಿನ ಕರ ಹೆಚ್ಚಿಸುವುದರಿಂದ ಜನರಿಗೆ ಗಾಯದ ಮೇಲೆ ಬರೆ ಎಳೆದಂತಾಗುತ್ತದೆ ಎಂದು ಹೇಳಿದರು.

ಅದಕ್ಕೆ ನಗರಸಭೆ ಅಧ್ಯಕ್ಷ ರೂಪೇಶ್ ಕೂಡ ದ್ವನಿಗೂಡಿಸಿದ್ದರಿಂದ ತೆರಿಗೆ ಹೆಚ್ಚಳದ ಪ್ರಸ್ತಾವನೆಯನ್ನು ಕೈಬಿಡಲಾಯಿತು.

ಇನ್ನುಳಿದಂತೆ ವಿವಿಧ ರಸ್ತೆ, ವೃತ್ತಗಳಿಗೆ ಮಹನೀಯರ ಹೆಸರಿಡಲು ಸಭೆ ನಿರ್ಧರಿಸಿತು. ಜೊತೆಗೆ ಕುಡಿಯುವ ನೀರು, ಯುಜಿಡಿ ಸಮಸ್ಯೆ ಕುರಿತು ಚರ್ಚಿಸಲಾಯಿತು.

ರಸ್ತೆಯಲ್ಲಿ ಕಸ ಸುರಿದರೆ ಜೋಕೆ!: ವಾರ್ಡ್ ನಂ.34ರಲ್ಲಿ ಹಾದಿಬೀದಿಯಲ್ಲಿ ಜನರು ಬೇಕಾಬಿಟ್ಟಿಯಾಗಿ ಕಸ ಸುರಿಯುತ್ತಿದ್ದಾರೆ. ಜೊತೆಗೆ ಮಾಂಸ ಮಾರಾಟಗಾರರೂ ತ್ಯಾಜ್ಯ ಮಾಂಸವನ್ನು ಚರಂಡಿ, ರಸ್ತೆಗೆ ಸುರಿಯುತ್ತಿರುವುದು ವಾರ್ಡ್‌ನಲ್ಲಿ ಸಮಸ್ಯೆಯಾಗಿದೆ ಎಂದು ಸದಸ್ಯೆ ಲತಾ ಸಂತೋಷ್ ಸಭೆಗೆ ದೂರಿದರು.

ಈ ಸಮಸ್ಯೆ ಎಲ್ಲ ವಾರ್ಡ್‌ಗಳಲ್ಲಿದೆ. ಮುಖ್ಯರಸ್ತೆಗಳಲ್ಲದೇ, ಸಣ್ಣ ಸಣ್ಣ ಓಣಿಗಳಿಗೂ ನಗರಸಭೆ ಕಸದ ವಾಹನ ತೆರಳಿದರೂ, ಕೆಲವೆಡೆ ಜನರು ಸ್ವಚ್ಛತೆ ಕೈಜೋಡಿಸುತ್ತಿಲ್ಲ, ಅಂತಹವರಿಗೆ ಬಿಬಿಎಂಪಿ ಮಾದರಿಯಲ್ಲಿ ದಂಡ ವಿಧಿಸಿದರಷ್ಟೇ ಸಮಸ್ಯೆಗೆ ಪರಿಹಾರ ಎಂದು ಸರ್ವ ಸದಸ್ಯರು ದ್ವನಿಗೂಡಿಸಿದ್ದರಿಂದ ಮೊದಲ ಬಾರಿಗೆ 200 ರೂ., 2ನೇ ಬಾರಿಗೆ 500 ಹಾಗೂ ಆನಂತರವೂ ತಪ್ಪು ಮಾಡಿದರೆ, ದಂಡ ವಿಧಿಸಿ ಕೋರ್ಟ್ ಕಳುಹಿಸಲು ಸಭೆ ನಿರ್ಧರಿಸಿತು.

ನಗರಸಭೆ ಉಪಾಧ್ಯಕ್ಷ ಜೀವರತ್ನಂ, ಸ್ಥಾಯಿ ಸಮಿತಿ ಅಧ್ಯಕ್ಷ ಸರವಣ ಉಪಸ್ಥಿತರಿದ್ದರು.

ಸರ್ಕಾರ ಟಾಯ್ಲೆಟ್‌ಗೂ ಹಣ ಕೊಟ್ಟಿಲ್ಲ: ಈ ಅವಧಿಯಲ್ಲಿ ವಾರ್ಡ್ ಜನರಿಗೊಂದು ಮನೆ, ಶೌಚಾಲಯವನ್ನೂ ನೀಡಿಲ್ಲ, ಜನರ ಮುಂದೆ ತಲೆ ಎತ್ತಿಕೊಂಡು ಓಡಾಡುವುದು ಹೇಗೆ ? ಜನತೆಗೆ ನಾವೇನು ಕೊಟ್ಟಿದ್ದೇವೆ ಹೇಳಿ ಎಂಬ ಕೆ.ಗೌಸ್, ಅಬ್ದುಲ್ ಖದೀರ್ ಅವರ ಏರು ಧ್ವನಿಯ ಪ್ರಶ್ನೆಗೆ ಅಧ್ಯಕ್ಷ ರೂಪೇಶ್ ಗರಂ ಆದರು. ಕಳೆದ ಮೂರು ವರ್ಷದಲ್ಲಿ ಸರ್ಕಾರದಿಂದ ಒಂದೇ ಒಂದು ಮನೆ ಮಂಜೂರಾಗಿಲ್ಲ, ಶೌಚಾಲಯಕ್ಕೂ ಎಸ್‌ಎಫ್‌ಸಿ ಅನುದಾನ ಬಂದಿಲ್ಲ, ಆದರೂ, ಲಭ್ಯವಿರುವ ನಗರಸಭೆ ನಿಧಿಯಲ್ಲೇ ಸರಿದೂಗಿಸಲಾಗುತ್ತಿದೆ. ನೀವೂ ಪಟ್ಟಿಕೊಡಿ ಅರ್ಹ ಕುಟುಂಬಕ್ಕೆ ವೈಯಕ್ತಿಕ ಶೌಚಾಲಯ ಮಂಜೂರು ಮಾಡುವುದಾಗಿ ಸಮಾಧಾನ ಪಡಿಸಿದರು.

ಚಂದ್ರಲಾ ಪರಮೇಶ್ವರಿ ರಥೋತ್ಸವ

ಯಾದಗಿರಿ: ಕಲ್ಯಾಣ ಕರ್ನಾಟಕ ಭಾಗದ ಸುಪ್ರಸಿದ್ಧ ದೇವಸ್ಥಾನಗಳಲ್ಲಿ ಒಂದಾದ ಚಿತ್ತಾಪುರ ತಾಲೂಕಿನ ಸನ್ನತಿಯ ಶ್ರೀಚಂದ್ರಲಾಂಬಾ ದೇವಿಯ ರಥೋತ್ಸವ ಮಂಗಳವಾರ ಸಂಜೆ ಅಸಂಖ್ಯ ಭಕ್ತಗಣದ ಮಧ್ಯೆ ಸಾಂಘವಾಗಿ ನೆರವೇರಿತು.

ಭೀಮಾ ನದಿತಟದಲ್ಲಿ ನೆಲೆನಿಂತಿರುವ ತ್ರೀಶಕ್ತಿ ಪೀಠ ಹೊಂದಿರುವ ಸನ್ನತಿಯ ದೇವಸ್ಥಾನದಲ್ಲಿ ಮಹಾಲಕ್ಷ್ಮೀ, ಮಹಾಂಕಾಳಿ ಮತ್ತು ಮಹಾ ಸರಸ್ವತಿಯ ಮೂರ್ತಿಗಳಿವೆ. ಬಂದ ಭಕ್ತರ ಕಾಳಿಕೆ ಕಳೆಯುತ್ತಾ ಕೋಟ್ಯಂತರ ಭಕ್ತರ ಮನದಲ್ಲಿ ನೆಲೆಯೂರಿರುವ ಶ್ರೀಚಂದ್ರಲಾ ಪರಮೇಶ್ವರಿಯ ಜಾತ್ರೆ ಬಂತೆಂದರೆ ಈ ಭಾಗದ ಜನತೆಗೆ ಎಲ್ಲಿಲ್ಲದ ಹಿಗ್ಗು. ಆಗ ತಾನೆ ಮದುವೆಯಾದ ಹೆಣ್ಣು ತವರಿಗೆ ಬಂದಂತೆ, ಜನಿಸಿದ ಕರು ತಾಯಿಯನ್ನು ಹಂಬಲಿಸುವಂತೆ ಭಕ್ತರು ಸನ್ನತಿಯ ಚಂದಮ್ಮನ ಗುಡಿಗೆ ಬರಲು ಇನ್ನಿಲ್ಲದಂತೆ ಸಂಭ್ರಮಿಸುತ್ತಾರೆ.

ಪಂಚಮಿ ದಿನ ನಡೆದ ರಥೋತ್ಸವಕ್ಕೂ ಮುನ್ನ ಚಂದ್ರಲಾಂಬಾ ಮಾತಾಕೀ ಜೈ ಎಂಬ ಉದ್ಘೋಷಗಳು ಮೊಳಗಿದವು. ರಥೋತ್ಸವ ಆರಂಭದ ಕೆಲ ನಿಮಿಷದ ಹಿಂದೆ ಭ್ರಮರಗಳು ತಾಯಿಯ ದರ್ಶನ ಮಾಡಿದವು. ಹಿಂಗುಳೆ, ಚಂದ್ರಲೆ, ಭ್ರಮರಾಂಭ ಹೆಸರಿನ ಮೇಲೆ ಕರೆಸಿಕೊಳ್ಳುವ ತಾಯಿ, ಸೇತುರಾಜನ ಗರ್ವ ಮುರಿದು ಸನ್ನತಿಯ ಭೀಮಾ ತಟದಲ್ಲಿ ನೆಲೆಸಿದ್ದಾಳೆ ಎಂಬುದು ಇತಿಹಾಸದಿಂದ ತಿಳಿದು ಬರುತ್ತದೆ. 'ಸೇತುನ ಗರ್ವ ಮುರಿದಿಹಳೋ ಸನ್ನತಿ ಕ್ಷೇತ್ರದಿ ನಿಂತಿಹಳೋ' ಎಂಬ ಹಾಡಿಗೆ ಸಾವಿರಾರು ಭಕ್ತರು ಹೆಜ್ಜೆ ಹಾಕಿದರು.

ಕಳೆದ 5 ದಿನಗಳಿಂದ ದೇವಸ್ಥಾನದಲ್ಲಿ ಉತ್ಸವದ ಕಳೆಗಟ್ಟಿತ್ತು. ಕರ್ನಾಟಕ ಸೇರಿ ನೆರೆಯ ತೆಲಂಗಾಣ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಿಂದಲೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.

ಇಂದು ಗೋಪಾಳ ಕಾವಲಿ

ಬುಧವಾರ ಬೆಳಗ್ಗೆ ದೇವಸ್ಥಾನದಲ್ಲಿ ಗೋಪಾಳ ಕಾವಲಿ ಕಾರ್ಯಕ್ರಮ ಅತ್ಯಂತ ಸಡಗರದಿಂದ ಜರುಗಲಿದೆ. ನಂತರ ದೇವಿಗೆ ವಿಶೇಷ ಅಲಂಕಾರ, ಸರ್ವ ಸೇವೆ, ಕುಂಕುಮಾರ್ಚನೆ ಮಹಾ ಮಂಗಳಾರುತಿ ಮತ್ತು ಮಹಾ ನೈವೇದ್ಯದ ನಂತರ ಭಕ್ತಾಧಿಗಳಿಗೆ ಅನ್ನ ಸಂತರ್ಪಣೆ ಜರುಗಲಿದೆ.



ಜಿಲ್ಲಾ ಮಟ್ಟದ ಜಾನಪದ ಸಂಭ್ರಮ

ಬೀದರ್: ಕಲಾವಿದರ ಪ್ರತಿಭೆಯನ್ನು ಗುರುತಿಸಿ ಅವರಿಗೆ ಯೋಗ್ಯ ಗೌರವ ನೀಡಿದಾಗ ಮಾತ್ರ ಅವರು ಉನ್ನತ ಮಟ್ಟಕ್ಕೆ ಬೆಳೆಯಲು ಸಾಧ್ಯವೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಿದ್ರಾಮ ಸಿಂಧೆ ಅಭಿಪ್ರಾಯಪಟ್ಟರು.

ಅವರು ರಂಗ ತರಂಗ ಸಾಮಾಜಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಆಯೋಜಿಸಲಾದ ಜಿಲ್ಲಾ ಮಟ್ಟದ ಜಾನಪದ ಸಂಭ್ರಮ ಹಾಗೂ ಗಡಿ ಜಿಲ್ಲೆಗಳ ಸರ್ಕಾರಿ ಶಾಲೆಗಳ ಸ್ಥಿತಿಗತಿ ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ಡಾ.ಸಂಜೀವಕುಮಾರ ಅತಿವಾಳೆ, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ವಿಜಯಕುಮಾರ ಸೋನಾರೆ, 'ಬೀದರ್ ಬಿಂದಾಸ್' ಪತ್ರಿಕೆಯ ಸಂಪಾದಕರಾದ ಸುನೀಲ್ ಭಾವಿಕಟ್ಟಿ ಹಾಗೂ ಜೀವನ ಪ್ರಕಾಶ ಕಲ್ಚರಲ್ ವೆಲ್‌ಫೇರ್ ಸೊಸೈಟಿಯ ಅಧ್ಯಕ್ಷರಾದ ದೀಲಿಪಕುಮಾರ ಕಾಡವಾದ ಉಪಸ್ಥಿತರಿದ್ದರು.

ರಂಗ ತರಂಗ ಸಾಮಾಜಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಅಧ್ಯಕ್ಷ ಎಂ.ಪಿ. ಮುದಾಳೆ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಪ್ರಸ್ತಾವಿಕ ನುಡಿ ಹೇಳಿದರು. ಸಂಬುದ್ಧ ಮುದಾಳೆ ಸ್ವಾಗತಿಸಿದರು. ಶಿವಕುಮಾರ ಭೋಸಲೆ ವಂದಿಸಿದರು.

ಸಂಗೀತ ಹಾಗೂ ಜಾನಪದ ವೈಭವ ಕಂಗೊಳಿಸಿತು. ಬೀದರಿನ ಹಿರಿಯ ಕಲಾವಿದರಾದ ದೀಲಿಪ ಕಾಡವಾದ, ಅರ್ಜುನ ಚಿಕ್ಲಿ, ಲಕ್ಷ್ಮೀ ಸಿಂಧೆ ತೋರಣ ಮತ್ತು ರತ್ನಮ್ಮ ಅವರು ಕಟ್ಟುವ ಮತ್ತು ಬೀಸುವ ಸಂಪ್ರದಾಯಿಕ ಹಾಡುಗಳನ್ನು ಹಾಡಿ ಪ್ರೇಕ್ಷಕರ ಮೆಚ್ಚುಗೆ ಪಡೆದರು. ನರಸಿಂಗ್ ಸಾಮ್ರಾಟ್ ಅವರ ತಂಡ ಕನ್ನಡ ಚಿತ್ರಗೀತೆಗಳು, ಅಂಬೇಡ್ಕರ್ ಹಾಡುಗಳು, ಕೋಲಾಟ ಹಾಗೂ ಬುಲಾಯಿ ಹಾಡುಗಳನ್ನು ಪ್ರಸ್ತುತಪಡಿಸಿ ಗಮನ ಸೆಳೆಯಿತು. ಇದಲ್ಲದೆ, ಸವಿತಾ ಮತ್ತು ತಂಡದಿಂದ ಸಂಪ್ರದಾಯಿಕ ಹಾಡುಗಳು, ಮಲ್ಲಪ್ಪ ಮತ್ತು ತಂಡದಿಂದ ಭಾವಗೀತೆಗಳು, ಸಂಬುದ್ಧ ಮತ್ತು ತಂಡದಿಂದ ಸುಗಮ ಸಂಗೀತ, ಅಕ್ಕ ಮಹಾದೇವಿ ಕೋಲಾಟ ತಂಡದಿಂದ ಮಹಿಳಾ ಕೋಲಾಟ ನೃತ್ಯ ಹಾಗೂ ರಮೇಶ್ ಅಮಲಾಪುರ ಅವರಿಂದ ಕನ್ನಡ ಚಿತ್ರಗೀತೆಗಳು ಪ್ರದರ್ಶನಗೊಂಡವು.

ಜಾನಪದ ಸಂಸ್ಕೃತಿಯ ವೈಭವನ್ನು ಹೊರಹೊಮ್ಮಿಸುವುದರ ಜೊತೆಗೆ ಅದರ ಮಹತ್ವವನ್ನು ಜನರಿಗೆ ಸಮೀಪಕ್ಕೆ ತಲುಪಿಸುವಲ್ಲಿ ಯಶಸ್ವಿಯಾಯಿತು.



ಹಂಪಾಪಟ್ಟಣ ಗ್ರಾಪಂಗೆ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ

ಹಗರಿಬೊಮ್ಮನಹಳ್ಳಿ: ತಾಲೂಕಿನ ಹಂಪಾಪಟ್ಟಣ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ಮಂಗಳವಾರ ನಡೆದ ಚುನಾವಣೆಯಲ್ಲಿ ನೂತನ ಅಧ್ಯಕ್ಷರಾಗಿ ಪತ್ರಿ ಗೀತಾ ಯಲ್ಲಪ್ಪ ಮತ್ತು ಉಪಾಧ್ಯಕ್ಷರಾಗಿ ತಿಪ್ಪೆಗುಂಡಿ ಮಂಜುನಾಥ ಅವರನ್ನು ಅವಿರೋಧವಾಗಿ ಆಯ್ಕೆ ಆಗಿದ್ದಾರೆ.

ಚುನಾವಣಾಧಿಕಾರಿ ತಹಶೀಲ್ದಾರ್ ಆರ್.ಕವಿತಾ ಮಾತನಾಡಿ, 18 ಜನ ಸದಸ್ಯ ಬಲವನ್ನು ಹೊಂದಿರುವ ಹಂಪಾಪಟ್ಟಣ ಗ್ರಾಪಂ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ರಾಜನಾಮೆಯಿಂದ ತೆರವಾಗಿದ್ದ ಸ್ಥಾನಗಳಿಗೆ

ತಲಾ ಒಬ್ಬರು ನಾಮಪತ್ರ ಸಲ್ಲಿಸಿದರು. ಬೇರೆ ಯಾರು ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಸರ್ವಸಮ್ಮತವಾಗಿ ಪತ್ರಿ ಗೀತಾ ಯಲ್ಲಪ್ಪ ಅವರನ್ನು ಅಧ್ಯಕ್ಷರಾಗಿ ತಿಪ್ಪೇಗುಂಡಿ ಮಂಜುನಾಥ ಅವರನ್ನು ಉಪಾಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು ಎಂದರು.



ಮುಖಂಡರಾದ ಬುಡ್ಡಿ ಬಸವರಾಜ್, ಕೆ.ನಜೀರ್ ಸಾಬ್, ಸಣ್ಣದುರುಗಪ್ಪ, ಸು.ಸಿ.ಮಹೇಶ್, ವಿಎಸ್‌ಎಸ್‌ಎನ್ ಅಧ್ಯಕ್ಷ ಗಾಳೆಮ್ಮನವರ ಹುಲುಗಪ್ಪ, ನಿರ್ದೇಶಕ ಯಮನೂರು, ಎಚ್.ಅಶೋಕ, ಹರಿಜನ ಪೂಜಾರ ಹುಲುಗಪ್ಪ, ವ್ಯಾಸಾಪುರ ತಾಂಡ ವಿರೇಶ್ ನಾಯ್ಕ, ಪರಮೇಶ್, ಸಿದ್ದರ ಗಂಟಿ ಮಾಯಾಪ್ಪ, ಸದಸ್ಯರಾದ ಬಿ.ನಾಗರಾಜ್, ಎನ್.ನಾಗರಾಜ್, ಸಿಎಲ್.ಕುಮಾರ್, ಸಿದ್ದರ ಗಾಳೆಪ್ಪ, ಮಂಜುಳ ಅಂಜಿನಪ್ಪ, ಉಪ್ಪಾರ ಹುಲಿಗೆಮ್ಮ ಕಾಳಪ್ಪ, ಬಿ.ರಮೇಶ್, ಪಿ.ಗಣೇಶ್, ಅಂಕಸಮುದ್ರ ವೆಂಕಟೇಶ್, ಅಂಜಿನಪ್ಪ, ಲೋಕೇಶ್ ನಾಯ್ಕ್, ಮುದ್ಲಳ್ಳಿ ಈಶಪ್ಪ ಎಚ್.ದೊಡ್ಡಹನುಮಕ್ಕ, ಸೆರೆಗಾರ ಮಲ್ಲಿಕಾರ್ಜುನ, ಎಸ್.ಎನ್.ಭಜಂತ್ರಿ, ತೀರ್ಥ ಪ್ರಸಾದ್, ಮಾಳ್ವಿ ಕೃಷ್ಣಪ್ಪ, ಬಂಟರ ಸೋಮನಾಥ, ಪಿಡಿಒ ಖಾಜಾಬನ್ನಿ, ಕಾರ್ಯದರ್ಶಿ ಡಿ.ಯಲ್ಲಪ್ಪ, ಹಾಗೂ ಸಿಬ್ಬಂದಿ ಇತರರು ಇದ್ದರು.

ಮಹಿಳೆಯರ ದೃಢಸಂಕಲ್ಪ, ಶಕ್ತಿಯೇ ಸಮಾಜದ ಬುನಾದಿ

ಬಳ್ಳಾರಿ: ಇತಿಹಾಸದುದ್ದಕ್ಕೂ ಮಹಿಳೆಯರು ತಮ್ಮ ಅಪ್ರತಿಮ ದೃಢಸಂಕಲ್ಪ, ತ್ಯಾಗ ಮತ್ತು ಶಕ್ತಿಯ ಮೂಲಕ ಸಮಾಜವನ್ನು ರೂಪಿಸುತ್ತಾ ಬಂದಿದ್ದಾರೆ ಎಂದು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯೆ ಜೆ.ಜಯಲಕ್ಷ್ಮೀ ಅಭಿಪ್ರಾಯಪಟ್ಟರು.

ಇಲ್ಲಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಜೀವ ವಿಜ್ಞಾನ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ 'ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಶಿಕ್ಷಣ, ವ್ಯಾಪಾರ, ವಿಜ್ಞಾನ, ಕಲೆ, ರಾಜಕೀಯ ಸೇರಿದಂತೆ ಪ್ರತಿಯೊಂದು ಕ್ಷೇತ್ರದಲ್ಲೂ ಮಹಿಳೆಯರು ಪುರುಷರಿಗೆ ಸರಿಸಮಾನವಾಗಿ, ಕೆಲಸಮಾಡುತ್ತಿದ್ದಾರೆ. ಮನೆಗೆ ಬೆಳಕಾಗುವ ಹೆಣ್ಣು, ದೇಶದ ಅಭಿವೃದ್ಧಿಗೂ ಅಷ್ಟೇ ಪ್ರಮುಖ ಕೊಡುಗೆ ನೀಡುತ್ತಿದ್ದಾಳೆ ಎಂದು ತಿಳಿಸಿದರು.



ಅಧ್ಯಕ್ಷತೆ ವಹಿಸಿದ್ದ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ. ಮುನಿರಾಜು ಮಾತನಾಡಿ, ಲಿಂಗ ಸಮಾನತೆಗಾಗಿ ಪ್ರತಿಪಾದಿಸುವುದರ ಜೊತೆಗೆ ಮಹಿಳೆಯರು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯವಾಗಿ ಸದೃಢವಾಗಬೇಕಾಗಿದೆ ಎಂದು ಕರೆ ನೀಡಿದರು.

ಪ್ರಸ್ತುತದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯವಾಗಬೇಕಾಗಿದೆ. ವಿವಿಯಲ್ಲಿ ವಿದ್ಯಾರ್ಥಿನಿಯರಿಗೆ ಶಿಕ್ಷಣದ ಜೊತೆಗೆ ಕೌಶಲ್ಯಾಧಾರಿತ ಶಿಕ್ಷಣಕ್ಕೆ ಉತ್ತೇಜನ ನೀಡುವುದರ ಜೊತೆಗೆ ಮೂಲಭೂತ ಸೌಕರ್ಯ ಒದಗಿಸಲಾಗುವುದು ಎಂದು ಹೇಳಿದರು.

ವಿಶ್ವವಿದ್ಯಾಲಯದ ನೂತನ ಹಣಕಾಸು ಅಧಿಕಾರಿ ಕೆ.ಜಿ.ಸ್ಫೂರ್ತಿ ವೇದಿಕೆ ಮೇಲೆ ಉಪಸ್ಥಿತರಿದ್ದರು. ಸಂಯೋಜಕರಾದ ಶ್ರೀದೇವಿ ಆಲೂರು ಅತಿಥಿಗಳನ್ನು ಸ್ವಾಗತಿಸಿದರು. ಮಹಿಳಾ ಅಧ್ಯಯನ ವಿಭಾಗದ ಅತಿಥಿ ಉಪನ್ಯಾಸಕ ಸಿದ್ಧರಾಮಪ್ಪ ಪೂಜಾರಿ ನಿರೂಪಿಸಿ, ವಂದಿಸಿದರು. ವಿವಿಧ ನಿಕಾಯಗಳ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು, ಸಂಯೋಜಕರು, ಸಂಶೋಧನಾ ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು ಇತರರು ಇದ್ದರು.

ಉಜ್ಜಯನಿ ಶ್ರೀಗಳ ಅಡ್ಡ ಪಲ್ಲಕ್ಕಿ ಮಹೋತ್ಸವ

ಹೂವಿನಹಡಗಲಿ: ಧರ್ಮದ ಬಗ್ಗೆ ಜನರಲ್ಲಿ ಅರಿವು ಜಾಗೃತಿ ಮೂಡಿಸುವುದು ಅಡ್ಡಪಲ್ಲಕ್ಕಿ ಉತ್ಸವವನ್ನು ಕೇವಲ ಸಂಪ್ರದಾಯವಾಗಿ ನೋಡದೆ, ಧಾರ್ಮಿಕ ಜಾಗೃತಿ, ಭಕ್ತರಲ್ಲಿ ಭಕ್ತಿಭಾವ ಮೂಡಿಸುವ ಮತ್ತು ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಪವಿತ್ರ ಕಾರ್ಯಕ್ರಮವಾಗಿದೆ ಎಂದು ಉಜ್ಜಯನಿ ಪೀಠದ ಶ್ರೀಗಳು ಶ್ರೀಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.



ತಾಲೂಕಿನ ಸೋಗಿ ಗ್ರಾಮದಲ್ಲಿ ಮಂಗಳವಾರ ಬೆಳಗ್ಗೆ ಜಗದ್ಗುರು ಸಿದ್ದಲಿಂಗರಾಜ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಅಡ್ಡಪಲ್ಲಕ್ಕಿ ಮೊಹೋತ್ಸವ ಹಾಗೂ ಜಗನ್ಮಾತೆ ದುರ್ಗಾಂಬಿಕಾ ದೇವಿಯ ದೇವಸ್ಥಾನದ ನೂತನ ಗೋಪುರ ಕಳಸಾರೋಹಣ, ಕುಂಭಮೇಳ ಹಾಗೂ ಧರ್ಮಸಭೆ ಕಾರ್ಯಕ್ರಮವನ್ನು ಕುರಿತು ಅವರು ಮಾತನಾಡಿದರು.

ಸೋಗಿ ಗ್ರಾಮದ ಜನರು ಕಳಸರೋಹಣ, ಕುಂಭಮೇಳ, ಧರ್ಮಸಭೆ ಇತರೇ ಯಾವುದೇ ದೈವಭಕ್ತಿ ಕಾರ್ಯಕ್ರಮಗಳನ್ನು ಇಲ್ಲಿನ ಭಕ್ತರು ತುಂಬಾ ಅತ್ಯದ್ಭುತವಾಗಿ ಕಾರ್ಯನಿರ್ವಹಿಸುತ್ತಾರೆ ಎಂದು ತಿಳಿಸಿದರು.

ಒಡೆಯರ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಸೋಗಿ ಪುರವರ್ಗ ಕಟ್ಟಿಮನಿ ಮಠ ಪುರ ಮತ್ತು ಹೊನ್ನಾಳಿ ಅವರ ಆಶೀರ್ವಾದಗಳೊಂದಿಗೆ ನಡೆಸಲಾಯಿತು. ಅಭಿನವ ಪಟ್ಟದ ಸಿದ್ದವೀರ ಶಿವಾಚಾರ್ಯ ಸ್ವಾಮೀಜಿ, ಸೋಗಿ ಪುರವರ್ಗ ಕಟ್ಟಿಮನಿ ಮಠ, ಪುರ ಅಧ್ಯಕ್ಷತೆ ವಹಿಸಿದ್ದರು.

ಧರ್ಮಸಭೆಯ ಅಧ್ಯಕ್ಷತೆಯನ್ನು ಡಾ.ಒಡೆಯರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಹಿರೆಕಲ್ಮಠ ಹೊನ್ನಾಳಿ, ಅಭಿನವ ಶಿವಲಿಂಗೇಶ್ವರ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ನವಲಿ ಹಂಪಸಾಗರ ಡಾ.ಮಹೇಶ್ವರ ಸ್ವಾಮಿಗಳು, ಪುಣ್ಯಕ್ಷೇತ್ರ ನಂದಿಪುರ, ಅಭಿನವ ಚನ್ನಬಸವ ಸ್ವಾಮಿಗಳು, ಹಿರೆಮಲ್ಲನಕೇರಿ, ಮುದೇನೂರು ಸದ್ಗುರು ಶಿವಯೋಗಿ ಅಭಿನವ ಹಾಲಸ್ವಾಮಿಗಳು, ಹಾಲಸ್ವಾಮೀಜಿ ಮಹಾಸಂಸ್ಥಾನಮಠ ಹಿರೇಹಡಗಲಿ, ಗ್ರಾಮದ ಮಠಸ್ಥರು ಹಾಗೂ ಗ್ರಾಮದ ಸಮಸ್ತ ದೈವದವರು ಹಾಗೂ ವೀರಭದ್ರೇಶ್ವರ ಜೀರ್ಣೋದ್ಧಾರ ಸಮಿತಿ ಸೋಗಿ, ನಿವೃತ್ತ ನೌಕರರ ಟ್ರಸ್ಟ್ ಸೋಗಿ, ಬೀರಲಿಂಗೇಶ್ವರ ಟ್ರಸ್ಟ್ ಸೋಗಿ, ಊರಿನ ಎಲ್ಲಾ ಮಹಿಳಾ ಸಂಘದವರು ಸೋಗಿ ಹಾಗೂ ಕಲಾವಿದರು. ಪೌರೋಹಿತ್ಯವನ್ನು ಎ.ಎಂ. ಹಾಲಯ್ಯಸ್ವಾಮಿಗಳು (ರಾಷ್ಟ್ರ ಪ್ರಶಸ್ತಿ ಹಾಗೂ ರಾಜ್ಯ ಪ್ರಶಸ್ತಿ ಪುರಸ್ಕೃತರು) ಹಾಗೂ ಕ್ರಿಯಾಮೂರ್ತಿ ಎಚ್.ಎಂ.ವೀರಯ್ಯ ಹಾಗೂ ವೃಷಭೇಂದ್ರಯ್ಯ ಹಾಗೂ ಮಠಸ್ಥರು ನಿರ್ವಹಿಸಿದರು.

ಹಿರೇಹೆಗ್ಡಾಳ್ ಕೋಡಿ ಬಸವೇಶ್ವರ ರಥೋತ್ಸವ

ಕೂಡ್ಲಿಗಿ: ತಾಲೂಕಿನ ಹಿರೇಹೆಗ್ಡಾಳ್ ಗ್ರಾಮದ ಶ್ರೀಕೋಡಿ ಬಸವೇಶ್ವರ ಸ್ವಾಮಿಯ ರಥೋತ್ಸವ ಮಂಗಳವಾರ ಸಂಜೆ ಸಂಭ್ರಮದಿಂದ ಆಚರಿಸಲಾಯಿತು.

ಶ್ರೀಕೊಡಿ ಬಸವೇಶ್ವರ ಹಾಗೂ ನೀಲಮ್ಮನ ವಿವಾಹ ಮಹೋತ್ಸವ ಕಾರ್ಯಕ್ರಮ ವಿಜೃಂಭಣೆಯಿಂದ ನೆರವೇರಿತು. ನಂತರ ಕೋಡಿ ಬಸವೇಶ್ವರ ಸ್ವಾಮೀಯ ಉತ್ಸವ ಮೂರ್ತಿಯನ್ನು ಸಕಲ ವಾದ್ಯಗಳೊಂದಿಗೆ ಪಲ್ಲಕ್ಕಿಯಲ್ಲಿ ರಥದ ಬಳಿ ಕರೆತಂದು ಮೂರು ಸುತ್ತು ಪ್ರದಕ್ಷಿಣ ಹಾಕಿ ರಥದಲ್ಲಿ ಪ್ರತಿಷ್ಠಾಪಿಸಲಾಯಿತು.

ಈ ವೇಳೆ ಕೋಡಿ ಬಸವೇಶ್ವರ ಸ್ವಾಮೀಯ ಪಟ ಹರಾಜಿನಲ್ಲಿ ಬಳ್ಳಾರಿ ಸಂತೋಷ್ ಗುತ್ತಿಗೆದಾರರು ಅವರಿಗೆ 1, ಲಕ್ಷದ 85 ಸಾವಿರ ರೂ.ಗಳಿಗೆ ಪಡೆದು ಕೊಂಡರು. ಸ್ವಾಮಿಯು ರಥವೇರುತ್ತಿದಂತೆ ನೆರದಿದ್ದ ಭಕ್ತರು ಜೈಪರಾಕ್ ಎಂದು ಜಯಘೋಷ ಹಾಕಿದರು.

ರಥಕ್ಕೆ ಉತ್ತತ್ತಿ, ಬಾಳೆ ಹಣ್ಣು ಎಸೆದು ಭಕ್ತಿ ಸಮರ್ಪಿಸಿದರು. ಗ್ರಾಮದ ಸುತ್ತಲ್ಲಿನ ಹಳ್ಳಿಯ ಸಾವಿರಾರು ಭಕ್ತರು ಭಾಗಿಯಾಗುವ ಮೂಲಕ ಭಕ್ತಿ ಸಮರ್ಪಿಸಿದರು.



ಎಸ್ಟಿ ಮೀಸಲಾತಿ 9ನೇ ಸೆಡ್ಯೂಲಗೆ ಸೇರಿಸಿ

ಸಿರುಗುಪ್ಪ: ರಾಜ್ಯ ಸರ್ಕಾರ ಪರಿಶಿಷ್ಟ ಪಂಗಡದ ನಾಯಕ ವಾಲ್ಮೀಕಿ ಸಮಾಜಕ್ಕೆ 7.5 ಮೀಸಲಾತಿಯನ್ನು 9 ಸೆಡ್ಯೂಲ್‌ಗೆ ಸೇರಿಸುವಂತೆ ಅಖಿಲಾಂಡ ಮಹರ್ಷಿ ವಾಲ್ಮೀಕಿ ನಾಯಕ ಸಮಿತಿಯ ಕಲ್ಯಾಣ ಕರ್ನಾಟಕ ವಿಭಾಗದ ರಾಜ್ಯಾಧ್ಯಕ್ಷ ಅಸ್ಕಿಹಾಳ ವೆಂಕಟೇಶ ನಾಯಕ ಒತ್ತಾಯಿಸಿದರು.

ನಗರದ ಪ್ರವಾಸ ಮಂದಿರದಲ್ಲಿ ಸೋಮವಾರ ಹಮ್ಮಿಕೊಂಡ ವಾಲ್ಮೀಕಿ ನಾಯಕ ಸಮಾಜದ ಸಮಾನ ಮನಸ್ಕರ ವೇದಿಕೆಯ ಚಿಂತನ ಮಂಥನ ಕಾರ್ಯಕ್ರಮದಲ್ಲಿ ಮಾತನಾಡಿದರು.

ರಾಜ್ಯ ಸರ್ಕಾರವು ಶೇ.56 ಮೀಸಲಾತಿಯ ಪ್ರಕಾರ ಹೊಸ ಹುದ್ದೆಗಳನ್ನು ನೇಮಕಾತಿ ಮಾಡಬೇಕು. ಸರ್ಕಾರವು ಸರ್ವಪಕ್ಷದ ಪ್ರತಿನಿಧಿಗಳ ಸಭೆಕರೆದು ಚರ್ಚಿಸಬೇಕು. ಕೇಂದ್ರ ಸರ್ಕಾರವು ನೀಡಿದಂತೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ನಿಗದಿಪಡಿಸಬೇಕು. ಲೋಕಸಭಾ ಭವನದ ಮುಂಭಾಗದಲ್ಲಿ ಆದಿಕವಿ ಭಗವನ ಮಹರ್ಷಿ ವಾಲ್ಮೀಕಿ ಪುತ್ಥಳಿಯನ್ನು ಸ್ಥಾಪಿಸಬೇಕು. ಶೇ.56ರಷ್ಟು ಮೀಸಲಾತಿಯನ್ನು ಜಾರಿಗೊಳಿಸದ್ದೆ ಇದ್ದರೆ ಮುಂದಿನ ದಿನಗಳಲ್ಲಿ ತೀವ್ರ ಹೋರಾಟವನ್ನು ಮಾಡಲಾಗುವುದು ಎಂದರು.

ಮುಂದುವರೆದ ಸಮಾಜದಿಂದ ವಾಲ್ಮೀಕಿ ನಾಯಕ ಸಮಾಜದ ರಾಜಕೀಯ ನಾಯಕರನ್ನು ರಾಜಕೀಯಿಂದ ತುಳಿಯು ಕಾರ್ಯವು ನಿತ್ಯ ನಡೆಯುತ್ತಿದೆ. ಸಮುದಾಯದ ನಾವೆಲ್ಲರು ಒಗ್ಗಟ್ಟಾಗಿ ಸಂಘಟಿತರಾಗುವಂತೆ ತಿಳಿಸಿದರು.



ವಾಲ್ಮೀಕಿ ವಿದ್ಯಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಬಿ.ಎಂ.ಸತೀಶ್ ಮಾತನಾಡಿ, ನಮ್ಮ ವಾಲ್ಮೀಕಿ ಸಮಾಜದ ಜನಪ್ರತಿನಿಧಿಗಳು ತಮ್ಮ ಪಕ್ಷದ ನಿಯಮಗಳ ಜವಾಬ್ದಾರಿಯನ್ನು ಅರಿತು ವಾಲ್ಮೀಕಿ ಸಮಾಜದ ಮೀಸಲಾತಿ ಹಾಗೂ ಸೌಲಭ್ಯಗಳನ್ನು ಪಡೆದುಕೊಳ್ಳುವ ಕೆಲಸ ಕಾರ್ಯಗಳು ಮಾಡಬೇಕೆಂದು ಹೇಳಿದರು.

ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾದ ತಾಲೂಕು ಅಧ್ಯಕ್ಷ ಟಿ.ನರಸಿಂಹ ನಾಯಕ, ಗುರುಮಹರ್ಷಿ ಪದವಿ ಕಾಲೇಜ್ ಪ್ರಾಂಶುಪಾಲ ಬಿ.ಬಸವರಾಜ, ಅತಿಥಿ ಉಪನ್ಯಾಸಕರ ಸಂಘದ ತಾಲೂಕು ಅಧ್ಯಕ್ಷ ಹಳೆಕೋಟೆ ರುದ್ರಪ್ಪ, ಕೆಆರ್‌ಎಸ್ ಪಕ್ಷದ ತಾಲೂಕು ಸಂಚಾಲಕ ಹಳೆಕೋಟೆ ಯಲ್ಲಪ್ಪ, ಮುಖಂಡರಾದ ನಾಡಂಗದ ವೆಂಕೊಬ, ಕುದುರದಹಾಳ ವೆಂಕಟೇಶ, ಬಾಗೇವಾಡಿ ಮುದುಕಪ್ಪ ಭಾಗವಹಿಸಿದ್ದರು.